| RIGHT TO INFORMATION | ANNEXURE "A"<br>(See rule 3)<br>Format of Application for obtaining information under<br>**The Right to Information Act 2005** |
|---|---|

To,
The State Public Information Officer /
The State Assistant Public Information Officer,
Karnataka Legislative Assembly Secretariat,
P.B. No, 5074, Vidhana Soudha,
Bangalore-560 001

1. **FULL NAME OF THE APPLICANT :** GEETIKA MISHRA
2. **ADDRESS** : 1886, 2nd floor, 5th main 8th cross,
   New Thippasandra, Bangalore 560075, Karnataka
   **Phone** : 8130758749
   **E-mail** : geetikamishra16@gmail.com
3. **SUBJECT OF INFORMATION REQUIRED**: Copies & documents of state assembly debates pertaining to the GOONDA Act, 1985
4. **PARTICULARS OF INFORMATION REQUIRED**

- All the copies of state assembly debates & discussions pertaining to the 'Karnataka Prevention of Dangerous Activities of Bootleggers, Drug-Offenders, Gamblers, Goondas, [Immoral Traffic Offenders, Slum-Grabbers and Video or Audio Pirates] Act', 1985.
- A copy of all debates and discussions related to the Amending Act 22 of 1987.
- All copy of debates and discussions related to the Amending Act 16 of 2001.

**Place :** Bangalore

**Date :** 20/05/2020

Geetika

**Signature of the applicant**

*Reply / information sent via Email to my mail ID - geetikamishra16@gmail.com would be appreciated. Immediate acknowledgement would be sent confirming the receipt of the information.

अधपन्ना COUNTERFOIL
इसे फाड़कर प्रेषक अपने पास रख ले।
To be detached and kept by the Sender.
पोस्टल आर्डर
₹ 10
POSTAL ORDER
किसे अदा करना
To whom payable bangalore
किस डाकघर में
At what Office
क्या इसे क्रास किया है
Whether crossed
भेजने की तारीख
Date sent 17/8/20
45F 452660

172
180 rs

भारतीय पोस्टल आर्डर
INDIAN POSTAL ORDER
महानिदेशक DIRECTOR GENERAL OF POSTS
TO
रुपए की रकम THE SUM OF RUPEES TEN ONLY
₹ 10
AT THE POST OFFICE AT
के डाकघर में अदा करें।
कमीशन COMMISSION रुपया 1 RUPEE
SENDER MAY FILL IN HIS NAME AND ADDRESS HERE.
geetika
bangalore
इस लाइन के नीचे मत लिखिए DO NOT WRITE BELOW THIS LINE
45F 452660

ಸೌಧ,
2020

5ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ,
ನ್ಯೂ ತಿಪ್ಪಸಂದ್ರ,
ಬೆಂಗಳೂರು-560075.

ಮಾನ್ಯರೆ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಮಾಹಿತಿ ಕೋರಿರುವ ಬಗ್ಗೆ.
ಉಲ್ಲೇಖ: ತಮ್ಮ ಅರ್ಜಿ ದಿನಾಂಕ 20.05.2020 (ಈ ಸಚಿವಾಲಯದಲ್ಲಿ ದಿನಾಂಕ 27.05.2020ರಂದು ಸ್ವೀಕೃತ)

- --

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರ್ಜಿಯಲ್ಲಿ ತಾವು ಕೋರಿರುವ ಮಾಹಿತಿಯನ್ನು ಕರ್ನಾಟಕ ವಿಧಾನಸಭೆಯ 1985, 1987 ಮತ್ತು 2000ನೇ ಇಸವಿಯ ವಿವಿಧ ದಿನಾಂಕಗಳ ನಡವಳಿಗಳಿಂದ ಸಂಗ್ರಹಿಸಲಾಗಿದ್ದು, ಸದರಿ ಮಾಹಿತಿಯು ಒಟ್ಟು 86 ಪುಟಗಳು ಇರುತ್ತದೆ.

ತಾವು ಮಾಹಿತಿ ಹಕ್ಕು ಅಧಿನಿಯಮದ ನಿಯಮ 4 (2) (ಎ)ರಂತೆ ಪ್ರತಿ ಪುಟಕ್ಕೆ ರೂ.2/- (ಎರಡು) ರಂತೆ 86 ಪುಟಗಳಿಗೆ ಒಟ್ಟು ರೂ.172/- (ಒಂದು ನೂರ ಎಪ್ಪತ್ತೆರಡು ರೂಪಾಯಿಗಳು) ಜೆರಾಕ್ಸ್ ಶುಲ್ಕವನ್ನು ಈ ಸಚಿವಾಲಯಕ್ಕೆ ಪಾವತಿಸಿದಲ್ಲಿ, ಸದರಿ ಮಾಹಿತಿಯನ್ನು ತಮಗೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲು ಕಾರ್ಯದರ್ಶಿಯವರಿಂದ ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
01/06/2020
(ಎಂ.ಶಶಿಕಾಂತ)
ಚರ್ಚಾ ಸಂಪಾದಕ ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ದೂರವಾಣಿ ಸಂಖ್ಯೆ : 080-22284548.

# ಕರ್ನಾಟಕ ವಿಧಾನಸಭೆ

ಕವಿಸಸ/ಚಸಂಶಾ/ಮಾಹಕ/06/2020

ವಿಧಾನಸಭೆ ಸಚಿವಾಲಯ
ಅಂಚೆ ಪೆಟ್ಟಿಗೆ ಸಂಖ್ಯೆ : 5074, ವಿಧಾನಸೌಧ,
ಬೆಂಗಳೂರು-560233, ದಿನಾಂಕ 01.06.2020

ಕಾರ್ಯದರ್ಶಿಯವರಿಂದ,
ಕರ್ನಾಟಕ ವಿಧಾನಸಭೆ.

ಇವರಿಗೆ :

ಶ್ರೀ/ಶ್ರೀಮತಿ ಗೀಟಿಕಾ ಮಿಶ್ರಾ
1885, 2ನೇ ಮಹಡಿ,
5ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ,
ನ್ಯೂ ತಿಪ್ಪಸಂದ್ರ,
ಬೆಂಗಳೂರು-560075.

ಮಾನ್ಯರೆ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಮಾಹಿತಿ ಕೋರಿರುವ ಬಗ್ಗೆ.
ಉಲ್ಲೇಖ: ತಮ್ಮ ಅರ್ಜಿ ದಿನಾಂಕ 20.05.2020 (ಈ ಸಚಿವಾಲಯದಲ್ಲಿ ದಿನಾಂಕ 27.05.2020ರಂದು ಸ್ವೀಕೃತ)

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರ್ಜಿಯಲ್ಲಿ ತಾವು ಕೋರಿರುವ ಮಾಹಿತಿಯನ್ನು ಕರ್ನಾಟಕ ವಿಧಾನಸಭೆಯ 1985, 1987 ಮತ್ತು 2000ನೇ ಇಸವಿಯ ವಿವಿಧ ದಿನಾಂಕಗಳ ನಡವಳಿಗಳಿಂದ ಸಂಗ್ರಹಿಸಲಾಗಿದ್ದು, ಸದರಿ ಮಾಹಿತಿಯು ಒಟ್ಟು 86 ಪುಟಗಳು ಇರುತ್ತದೆ.

ತಾವು ಮಾಹಿತಿ ಹಕ್ಕು ಅಧಿನಿಯಮದ ನಿಯಮ 4 (2) (ಎ)ರಂತೆ ಪ್ರತಿ ಪುಟಕ್ಕೆ ರೂ.2/- (ಎರಡು) ರಂತೆ 86 ಪುಟಗಳಿಗೆ ಒಟ್ಟು ರೂ.172/- (ಒಂದು ನೂರ ಎಪ್ಪತ್ತೆರಡು ರೂಪಾಯಿಗಳು) ಜೆರಾಕ್ಸ್ ಶುಲ್ಕವನ್ನು ಈ ಸಚಿವಾಲಯಕ್ಕೆ ಪಾವತಿಸಿದಲ್ಲಿ, ಸದರಿ ಮಾಹಿತಿಯನ್ನು ತಮಗೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲು ಕಾರ್ಯದರ್ಶಿಯವರಿಂದ ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

1/06/2020

(ಎಂ.ಶಶಿಕಾಂತ)
ಚರ್ಚಾ ಸಂಪಾದಕ ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ,
ಕರ್ನಾಟಕ ವಿಧಾನಸಭ ಸಚಿವಾಲಯ,
ದೂರವಾಣಿ ಸಂಖ್ಯೆ : 080-22284548.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ನಾನು ೧೯೮೫ ನೇ ಇಸವಿಯ ಕರ್ನಾಟಕ ವಿಧಾನಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೫ನೇ ಇಸವಿಯ ಕರ್ನಾಟಕ ವಿಧಾನಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

## THE KARNATAKA PREVENTION OF DANGEROUS ACTIVITIES OF BOOTLEGGERS, DRUG OFFENDERS, GAMBLERS, GOONDAS, IMMORAL TRAFFIC OFFENDERS AND SLUM GRABBERS BILL, 1985,

*Motion to Consider*

**Sri B. Rachaiah** (Minister for Home).—Sir, I beg to move.

"That the Karnataka prevention of Dangerous activities of bootleggers, drug-offenders, gamblers, Goondas, immoral traffic offenders and slumgrabbers Bill 1985 be taken into considerations."

*The question was proposed.*

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾವು ಅಧ್ಯಯನ ಮಾಡಿಕೊಂಡು ಬರಬೇಕಾಗಿರುವುದರಿಂದ ಇದಕ್ಕೆ ಸ್ವಲ್ಪ ಸಮಯ ಬೇಕಾಗಿದೆ. ಆದುದರಿಂದ ಇದರ ಬಗ್ಗೆ ಈಪೊತ್ತು ಚರ್ಚೆ ಬೇಡ ಇನ್ನೊಂದು ದಿವಸ ತೆಗೆದುಕೊಳ್ಳಿ.

ಅಧ್ಯಕ್ಷರು.—ಮೊದಲು ಇದರ ಬಗ್ಗೆ ಮಂತ್ರಿಗಳು ಏನು ಹೇಳಬೇಕೋ ಹೇಳಲಿ. ಈಗಾಗಲೇ ಸಮಯ ೪-೩೦ ಆಗಿದೆ. ಅವರು ಮಾತನಾಡುವವರೆಗೆ ಇನ್ನೂ ಸ್ವಲ್ಪ ಸಮಯ ಮುಂದೆ ಹೋಗುತ್ತದೆ ಈಗ ತಾವೆಲ್ಲಾ ೬ ಗಂಟೆಯವರೆಗೆ ಕೂರಬಹುದಲ್ಲ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಕೇಳೋಣ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ನಮಗೆ ಸ್ವಲ್ಪ ಅವಕಾಶ ಬೇಕು. ಸ್ವಲ್ಪ ಸಮಯ ಕೊಡಿ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುತ್ತೇನೆ ಸ್ವಲ್ಪ ಕೂಡಿರಿ.

೪. ೩೦ ಪಿ. ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಷ್ಟು ಗಾಬರಿಯಾಗಿ ಇವತ್ತೇ ಪಾಸ್ ಮಾಡತಕ್ಕದ್ದು ಕಷ್ಟವಾಗುತ್ತದೆ.

ಅಧ್ಯಕ್ಷರು.—ಈಗಲೇ ಪಾಸ್ ಮಾಡುವುದಕ್ಕೆ ಹೊರಟಿಲ್ಲ, ಪ್ರಾರಂಭವಾಗಲಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದನ್ನು ಸ್ವಲ್ಪ ಯೋಚನೆ ಮಾಡಿ ಮಾಡಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಇದು ಬಹಳ ಪ್ರಾಮುಖ್ಯವಾದಂಥ ಬಿಲ್ ಇವತ್ತೇ ಮುಗಿಸಲಿಕ್ಕೆ ಆಗುವುದಿಲ್ಲ.

ಎಂ. ಶಶಿಕಾಂತ
ಚರ್ಚಾ ಸಂ[illegible]
ಕರ್ನಾಟಕ ವಿಧಾನಸಭೆ [illegible]
ವಿಧಾನಸೌಧ, ಬೆಂ[illegible]

# ಕರ್ನಾಟಕ ವಿಧಾನಸಭೆ

ಕವಿಸಸ/ಚಸಂಶಾ/ಮಾಹಅ/06/2020
ಬಟವಾಡೆ : 86 ಪುಟ

ವಿಧಾನಸಭೆ ಸಚಿವಾಲಯ
ಅಂಚೆ ಪೆಟ್ಟಿಗೆ ಸಂಖ್ಯೆ : 5074, ವಿಧಾನಸೌಧ,
ಬೆಂಗಳೂರು-560233, ದಿನಾಂಕ 20.08.2020

ಕಾರ್ಯದರ್ಶಿಯವರಿಂದ,
ಕರ್ನಾಟಕ ವಿಧಾನಸಭೆ.

ಇವರಿಗೆ :

ಶ್ರೀ/ಶ್ರೀಮತಿ ಗೀಟಿಕಾ ಮಿಶ್ರಾ,
1886, 2ನೇ ಮಹಡಿ,
5ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ,
ನ್ಯೂ ತಿಪ್ಪಸಂದ್ರ,
ಬೆಂಗಳೂರು-560075.

ನೋಂದಾಯಿತ ಅಂಚೆ ಸ್ವೀಕೃತಿ ಬಾಕಿ ಸಹಿತ

ಮಾನ್ಯರೆ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಮಾಹಿತಿ ಕೋರಿರುವ ಬಗ್ಗೆ.
ಉಲ್ಲೇಖ: 1. ತಮ್ಮ ಅರ್ಜಿ ದಿನಾಂಕ 20.05.2020 (ಈ ಸಚಿವಾಲಯದಲ್ಲಿ ದಿನಾಂಕ 27.05.2020ರಂದು ಸ್ವೀಕೃತ)
2. ಸಚಿವಾಲಯದ ಸಮ ಸಂಖ್ಯೆಯ ಪತ್ರ ದಿನಾಂಕ 01.06.2020
3. ರೂ.180/- ಮೌಲ್ಯದ ಭಾರತೀಯ ಅಂಚೆ ಆದೇಶಗಳು (ಒಟ್ಟು 18)

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಅರ್ಜಿಯಲ್ಲಿ ತಾವು ಕೋರಿರುವ ಮಾಹಿತಿಯನ್ನು ಪಡೆಯಲು ಉಲ್ಲೇಖ (2)ರ ಸಚಿವಾಲಯದ ಪತ್ರದಲ್ಲಿ ಕೋರಿದಂತೆ, ಉಲ್ಲೇಖ (3)ರನ್ವಯ ತಾವು ತಲಾ ರೂ.10/- ಮೌಲ್ಯದ 18 ಭಾರತೀಯ ಅಂಚೆ ಆದೇಶಗಳನ್ನು (ಒಟ್ಟು ರೂ.180/- ಮೌಲ್ಯ) ಸಚಿವಾಲಯಕ್ಕೆ ಪಾವತಿಸಿದ ಮೇರೆಗೆ ಕರ್ನಾಟಕ ವಿಧಾನಸಭೆಯ 1985, 1987 ಮತ್ತು 2000ನೇ ಇಸವಿಯ ವಿವಿಧ ದಿನಾಂಕಗಳ ನಡವಳಿಗಳಿಂದ ಸಂಗ್ರಹಿಸಲಾದ್ದ ಒಟ್ಟು 86 ಪುಟಗಳ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
ಎಂ. ಶಶಿಕಾಂತ್ 20/08/2020
(ಎಂ.ಶಶಿಕಾಂತ)
ಚರ್ಚಾ ಸಂಪಾದಕ ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ದೂರವಾಣಿ ಸಂಖ್ಯೆ : 080-22284548.

ಅಧ್ಯಕ್ಷರು.—ಈ ತರಹ ತಾವು ಇಂಟರ್‌ಫಿಯರ್ ಮಾಡುವುದಂ ಸರಿಯಲ್ಲ.

ಶ್ರೀ ಪಟವರ್ಧನ್ ರತ್ನಾಕರ.—ಇದು ಬಹಳ ಗಂಭೀರವಾದ ವಿಚಾರ. ಆದ್ದರಿಂದ ಬಹಳ ದೀರ್ಘವಾಗಿ ಚರ್ಚೆಯಾಗಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ನಿಮಗೆ ಹೇಳಿದರೆ ಇಂಟರ್‌ಫಿಯರ್ ಮಾಡುವುದು ಏನು ಬಂತು ?

ಅಧ್ಯಕ್ಷರು.—ನೀವು ಬಹಳ ವರ್ಷ ಇಲ್ಲಿ ಕೆಲಸಮಾಡಿದಂಥ ಸದಸ್ಯರು. ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ, ಆಮೇಲೆ ನೀವು ಮಾತನಾಡಿರಿ.

ಶ್ರೀ ಪಟ್ಟಪುಕ್ಕಿ ರತ್ನಾಕರ್.—ಇದು ಬಹಳ ಗಂಭೀರವಾದಂಥ ವಿಚಾರ, ಈ ರೀತಿ ಎದ್ದೆದ್ದು ಮಾತನಾಡಿದರೆ ಏನು ಪ್ರಯೋಜನ ?

ಅಧ್ಯಕ್ಷರು.—ಹೊಸದಾಗಿ ಬಂದು ಮಂತ್ರಿಗಳು ಮಾತನಾಡುವುದನ್ನು ಸಮಾಧಾನವಾಗಿ ಕೇಳಿರಿ. ಹೊಸದಾಗಿ ಬಂದಂಥ ಸದಸ್ಯರು ಮಾನ್ಯ ಮಂತ್ರಿಗಳು ಮಾತನಾಡುವುದನ್ನು ಸಮಾಧಾನವಾಗಿ ಕೇಳಿರಿ. ನೀವು ದಯಮಾಡಿಟ್ಟು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ತಾವು ಇದಕ್ಕೆ ಹೆಚ್ಚಿಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಸಾಧ್ಯವಾದರೆ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಸಮಾಜದಲ್ಲಿ ನೆಮ್ಮದಿಯನ್ನು ಶಾಂತಿಯನ್ನು ತರಬೇಕು ಎನ್ನುವುದರ ಬಗ್ಗೆ ಅನೇಕ ಕಾನೂನುಗಳಿವೆ. ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಇದೆ. ಈ ದೇಶದ ಭದ್ರತೆಯನ್ನು, ಸಮಗ್ರತೆಯನ್ನು ಕಾಪಾಡಿಕೊಂಡು ಹೋಗತಕ್ಕ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಇದೆ. ಆಮೇಲೆ ಇಂಟರ್ನಲ್ ಸೆಕ್ಯೂರಿಟಿ ಆಕ್ಟ್ ಬೇರೆ ಇದೆ. ಈ ಕಾನೂನುಗಳಿಗೂ ಸಿಕ್ಕದೇ ಅದರಿಂದ ತಪ್ಪಿಸಿಕೊಂಡು ಹೋಗತಕ್ಕ ಕೆಲವು ಗುಂಪಿನ ಜನ ಯಾರಿದ್ದಾರೆ ಆ ೫-೬ ಗುಂಪಿನ ಜನರನ್ನು ಹತೋಟಿಯಲ್ಲಿ ತರತಕ್ಕ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಈ ಕಾನೂನು ಇಲ್ಲಿ ಇರಲಿಲ್ಲ. ಬಹುಶಃ ಇದು ಮದ್ರಾಸ್‌ನಲ್ಲಿದೆ, ಬಾಂಬೆಯಲ್ಲಿದೆ, ಡೆಲ್ಲಿಯಲ್ಲಿದೆ ಮತ್ತು ಮಧ್ಯಪ್ರದೇಶದಲ್ಲಿದೆ, ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಕೂಡ ಇದೆ. ಕರ್ನಾಟಕದಲ್ಲಿ ಇದು ಆಗಿರಲಿಲ್ಲ. ಈ ಕಾನೂನು ತರುವುದರಿಂದ ಸಮಾಜದಲ್ಲಿ ಏನು ವ್ಯವಸ್ಥೆ ಇದೆ, ಅದನ್ನು ಒಂದಲ್ಲ ಒಂದು ರೀತಿಯಲ್ಲಿ ಬದಲಾವಣೆ ಮಾಡತಕ್ಕಂಥ ಶಕ್ತಿಗಳು ಏನು ಹುಟ್ಟಿಕೊಂಡಿವೆ ಆ ಶಕ್ತಿಗಳನ್ನು ನಾವು ಒಂದು ಹತೋಟಿಗೆ ತರತಕ್ಕ ರೀತಿಯಲ್ಲಿ ಅವರ ಮೇಲೆ ಪ್ರಿವೆಂಟೀವ್ ಆಕ್ಷನ್ ತೆಗೆದುಕೊಳ್ಳುವುದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೇವೆ. ಈಗಾಗಲೇ ಈ ಮಸೂದೆಯನ್ನು ಸುಗ್ರೀವಾಜ್ಞೆ ಮುಖಾಂತರ ಡಿಸೆಂಬರ್ ೧೫, ೧೯೮೪ರಲ್ಲಿ ತಂದಿದ್ದೇವೆ. ಅದಕ್ಕೆ ೬ ತಿಂಗಳೊಳಗೆ ರಿಪ್ಲೇಸ್ ಮಾಡುವುದಕ್ಕೆ ತಂದಿರತಕ್ಕ ಮಸೂದೆ ಇದು, ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂಥಾದ್ದು, ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿರುವ ಹಾಗೆ ಸಮಾಜಘಾತುಕ ಶಕ್ತಿಗಳನ್ನು ಹತೋಟಿಗೆ ತರತಕ್ಕಂತಾದ್ದು. ಕಳ್ಳಭಟ್ಟಿ ಸಾರಾಯಿ ಕುಡಿದು ೩೦೦ ಜನ ಸತ್ತಿದ್ದು ಎಲ್ಲರಿಗೂ ಜ್ಞಾಪಕವಿದೆ. ಇದರ ಬಗ್ಗೆ ನ್ಯಾಯಾಧೀಶರನ್ನು ನೇಮಿಸಿ ಅವರ ವರದಿ ಕೂಡ ಬಂದಿದೆ.

ಶ್ರೀ ಆರ್. ಎನ್. ನಾಯಕ್.—ಕಳ್ಳಭಟ್ಟಿ ಕುಡಿಯುವುದಕ್ಕೆ ಅವಕಾಶಮಾಡಿಕೊಟ್ಟಿದ್ದು ನಮಗೆ ಗೊತ್ತಿದೆ.

ಶ್ರೀ ಬಿ. ರಾಚಯ್ಯ.—ಬಹುಶಃ ಅವರಿಗೆ ನಾನು ಹೇಳುವುದನ್ನು ಪೂರ್ತಿ ಕೇಳುವಷ್ಟು ಸಮಾಧಾನ ಇಲ್ಲ, ಏಳು ತಿಂಗಳಿಗೇ ಬಂದಿದ್ದಾರೆಂದು ಕಾಣುತ್ತಾರೆ. ತಾವು ಹೇಳುವುದನ್ನು ಸ್ವಲ್ಪವಟ್ಟಿಗೆ ಕೇಳಬೇಕು, ವಿಷಯಗಳನ್ನು ತಿಳಿದುಕೊಳ್ಳಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವೊತ್ತು ಇತ್ತೀಚೆಗೆ ಜನತೆಗೆ ಳಗ್ಗಿಯಿಂದ ಸಾಯಂಕಾಲದಲ್ಲಿ ಪಟ್ಟಣಗಳಲ್ಲಿ ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತಿವೆ. ಜನತೆಗೆ ನೆಮ್ಮದಿ ಇಲ್ಲದಂತಾಗಿದೆ ಸಮಾಜದ ವ್ಯವಸ್ಥೆ ಬದಲಾವಣೆಯಾಗುವ ರೀತಿಯಲ್ಲಿ ಇಂತಹ ಸಮಾಜ ಘಾತುಕ ಶಕ್ತಿಗಳು ಇದ್ದುಕೊಂಡು ಜನತೆಯ ನೆಮ್ಮದಿಯನ್ನು ಕದಡುತ್ತಿದ್ದಾರೆ. ಈ ವಿಷಯದಲ್ಲಿ ಮಾನ್ಯ ಸದಸ್ಯರಿಗೆಲ್ಲರಿಗೂ ನನ್ನಷ್ಟೇ ಉತ್ಸಾಹ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ದಿ



ವಿರ.
ಚಚ
ಕರ್ನಾಟಕ .
ವಿಧಾನಸೌಧ, ಬಂಗ

(3)

ಯಲ್ಲಿ ಇರತಕ್ಕ ಅವಕಾಶವನ್ನು ದುರುಪಯೋಗ
ಪಡಿಸಿಕೊಳ್ಳುವುದಕ್ಕೆ ಆಗದ ರೀತಿಯಲ್ಲಿ ಸದ್ವಿನಿಯೋಗ ಪಡಿಸಿಕೊಳ್ಳಬಾರದು. ಇದನ್ನು ದುರುಪಯೋ
ಯಾರಿದ್ದಾರೆ ಅವರನ್ನು ಕಂಡುಹಿಡಿದು ಅವರ ಮೇಲೆ ಪ್ರಿವೆಂಟೀವ್ ಆಕ್ಷನ್ ತೆಗೆದುಕೊಳ್ಳುವುದಕ್ಕೆ
ಇದು ಒಂದು ಸಾಧನವಾಗಿದೆ. ಇದನ್ನು ಎಷ್ಟರಮಟ್ಟಿಗೆ ನಾವು ಮತ್ತು ಅಧಿಕಾರಿಗಳು ಉಪಯೋಗಿ
ಸುತ್ತೇವೆ ಎನ್ನುವುದರ ಮೇಲೆ ಇದರ ಪರಿಣಾಮ ನಿಂತಿದೆ. ಇವೊತ್ತು ಬೆಂಗಳೂರು ನಗರದಲ್ಲೇ
ಅಲ್ಲದೆ ಎಲ್ಲೆಲ್ಲಿ ಕಾರ್ಪೊರೇಷನ್‌ಗಳಿವೆ ಅಲ್ಲೆಲ್ಲಾ ವಲಸೆ ಹೋಗತಕ್ಕ ಜನರು ಬಂದು ಸೇರುತ್ತಾ ಇದ್ದಾರೆ.
ಇದನ್ನೆಲ್ಲಾ ನೋಡಿದಾಗ ನಮ್ಮ ಸಮಸ್ಯೆಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಈ ಸಮಸ್ಯೆಗಳನ್ನು
ಈಗಿರತಕ್ಕಂಥ ಕಾನೂನು ಮುಖಾಂತರ ಪರಿಹಾರ ಮಾಡುವುದು ಕಷ್ಟವಾಗಿದೆ. ಪೋಲೀಸ್ ಆಕ್ಟ್
ಇದೆ ಅಥವಾ ಇರತಕ್ಕಂಥ ನಮ್ಮ ಕಾನೂನು ಪ್ರಕಾರ ಅವರನ್ನು ಅರೆಸ್ಟ್ ಮಾಡಿದರೂ ಕೂಡ ಅನೇಕ
ಸಂದರ್ಭಗಳಲ್ಲಿ ಅವರು ಬೇಲ್ ಮೇಲೆ ಬಿಡಿಸಿಕೊಂಡು ಹೋಗಿ ಮತ್ತೆ ನಾಳೆಯಿಂದ ಚೈನ್ ಸ್ನ್ಯಾಚಿಂಗ್
ಮಾಡುವುದಾಗಲಿ. ಕಳ್ಳಭಟ್ಟಿ ಸಾರಾಯಿ ಮಾಡುವುದಾಗಲಿ ಮತ್ತು ಔಷಧಿಗಳನ್ನು ಮಿಕ್ಸ್‌ಮಾಡಿ
ಮಾರಾಟ ಮಾಡುವುದಾಗಲಿ ಮಾಡುತ್ತಾರೆ ಮತ್ತು ನಮ್ಮ ಕೊಳಚೆ ಪ್ರದೇಶಗಳಲ್ಲಿ ಕೆಲವು ಜನ
ಹೆಚ್ಚು ಹಣವನ್ನು ಹಾಕಿ ಅವರೇ ಲೇಔಟ್ ಮಾಡಿಕೊಂಡು ಸೈಟುಗಳನ್ನು ಹಂಚತಕ್ಕ ಕೆಲಸ
ನಡೆಯುತ್ತಿದೆ. ಈ ರೀತಿ ಮಾಡತಕ್ಕ ಜನ ಯಾರಿದ್ದಾರೆ ಇವರನ್ನು ಯಾವರೀತಿ ಹತೋಟಿಯಲ್ಲಿಡ
ಬೇಕು ಎಂದು ನೋಡಿದಾಗ ಈಗಿರತಕ್ಕ ಕಾನೂನು ಪ್ರಕಾರ ಕಷ್ಟವಾಗುತ್ತಿದೆ ಎಂದು ಬಂದಿತು ಅದ
ಕ್ಕೋಸ್ಕರ ಪ್ರಿವೆಂಟೀವ್ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಇದನ್ನು ಮಾಡಿದ್ದೇವೆ. ಒಂದಿನಂತೆ
ಪ್ರಿವೆಂಟೀವ್ ಆಕ್ಷನ್ ತೆಗೆದುಕೊಳ್ಳತಕ್ಕ ಬಗ್ಗೆ ಕಾಫಿ-ಪೋಸಾ ಆಕ್ಟ್ ಇದೆ. ನ್ಯಾಷನಲ್ ಸೆಕ್ಯೂರಿಟಿ
ಆಕ್ಟ್ ಇದೆ. ಬೂಟ್‌ಲೆಗ್ಗರ್ಸ್ ಯಾರಿದ್ದಾರೆ, ಅನೈತಿಕ ವ್ಯವಹಾರ ಮಾಡತಕ್ಕವರು. ಕೊಳಚೆ
ಪ್ರದೇಶಗಳಲ್ಲಿ ಜಮೀನುಗಳನ್ನು ಹಿಡಿದುಕೊಂಡು ತಾವೇ ಗುತ್ತಿಗೆಗೆ ಕೊಡತಕ್ಕದ್ದು ಅಥವಾ ಮಾರಾಟ
ಮಾಡತಕ್ಕದ್ದು ಏನಿದೆ ಇವುಗಳನ್ನೆಲ್ಲಾ ನೋಡಿದಾಗ ಬಹುಶಃ ನಮ್ಮ ಸಮಾಜದ ವ್ಯವಸ್ಥೆ ಅಸ್ತವ್ಯಸ
ವಾಗತಕ್ಕ ಪರಿಸ್ಥಿತಿ ಇದೆ. ಪಕ್ಕದ ಮನೆಯಲ್ಲಿ ಕುಳಿತು ಸಿಡಿ ಮದ್ದು ಹಾಕುತ್ತಾರೆ. ಇದನ್ನೆಲ್ಲಾ
ನೋಡಿದಾಗ ಸ್ವಲ್ಪಮಟ್ಟಿಗೆ ಅಂಥವರನ್ನು ಹತೋಟಿಗೆ ತರುವುದಕ್ಕೆ ಮುಂಜಾಗ್ರತಾ ಕ್ರಮವನ್ನು
ತೆಗೆದುಕೊಳ್ಳುವುದಕ್ಕೆ. ಈ ಕಾನೂನುಗಳನ್ನು ತಂದಿದ್ದೇವೆ. ಇದರೊಳಗೆ ಯಾರು ಈ ರೀತಿಯ
ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ ಅವರನ್ನು ಪತ್ತೆಹಚ್ಚಿ, ಯಾವ ಕಾರಣಕ್ಕೋಸ್ಕರ ಅವರನ್ನು
ನಾವು ಬಂಧಿಸಬೇಕು ಎಂದು ಇದ್ದೇವೆ ಎನ್ನುವ ಮಾಹಿತಿಯನ್ನು ಅವನಿಗೆ ಕೊಡತಕ್ಕಂಥಾದ್ದು ಇದೆ
ಮತ್ತು ಬಂಧಿಸಿದ ಮೇಲೆ ಒಂದು ಬೋರ್ಡ್‌ಮಾಡಿಕೊಂಡು ಅದರಲ್ಲಿ ಹೈಕೋರ್ಟ್ ಜಡ್ಜ್ ಇದ್ದಾರೆ
ಮತ್ತು ಇನ್ನೊಬ್ಬರು ಅದೇಮಟ್ಟದ ಸದಸ್ಯರಿದ್ದಾರೆ. ಅವರ ಮುಂದೆ ಈ ಬಂಧಿತ ಅಪರಾಧಿ ಯಾರಿ
ದ್ದಾರೆ ಅವರ ಒಂದು ಪುರಾವೆ ಮತ್ತು ನಾವು ಇಟ್ಟಂಥ ಕಾಗದಗಳನ್ನು ನೋಡಿ ಅದನ್ನು ನೋಡಿ
ಅದನ್ನು ಕನ್‌ಫರ್ಮ್ ಮಾಡಬೇಕೋ, ಅಥವಾ ಬೇಡವೋ ಎನ್ನುವುದಕ್ಕೆ ಅವಕಾಶವಿದೆ. ಆ ದೃಷ್ಟಿ
ಯಿಂದ ಅಪರಾಧಿ ಯಾರು ಎಂದು ನಾವು ಇಟ್ಟುಕೊಂಡಿದ್ದೇವೆ ಅವರಿಗೆ ಯಾವ ಕಾರಣಕ್ಕೋಸ್ಕರ ನಾವು
ಅವರನ್ನು ಬಂಧಿಸಿದ್ದೇವೆ ಎನ್ನುವುದನ್ನು ಕೊಟ್ಟು ಅವರು ಅಭಿಪ್ರಾಯವನ್ನು ತೆಗೆದುಕೊಂಡು
ಬೋರ್ಡ್‌ಮುಂದೆ ಇಟ್ಟು ಅವನು ತಪ್ಪಿತಸ್ಥ ಅಲ್ಲ ಎಂದರೆ ಬಿಡುಗಡೆ ಮಾಡುವುದಕ್ಕೆ ಅವಕಾಶವಿದೆ.
ಡಿಟೆನ್ಯೂವನ್ನು ಕಂಟಿನ್ಯೂ ಮಾಡುವಾಗ ಅಂಡರ್ ಪ್ರಿಸನ್ಸ್‌ನಂತೆ ಟ್ರೀಟ್‌ಮಾಡಿ ಅವರಿಗೆ ಕೊಡುವ
ಸೌಲಭ್ಯಗಳನ್ನು ಇವರಿಗೆ ಕೊಡತಕ್ಕದ್ದಾಗಿದೆ. ಮತ್ತು ಜಿಲ್ಲಾಮಟ್ಟದಲ್ಲಿರತಕ್ಕ ಕಾರಾಗೃಹದಲ್ಲಿ
ಅವರನ್ನು ಇಡತಕ್ಕದ್ದು. ಹೀಗೆ ಅವರು ಬೇರೆ ಕಡೆ ಇರುವುದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ.
ಅವರನ್ನು ಬೇರೆ ಜೈಲಿಗೆ ಬದಲಾವಣೆ ಮಾಡುವುದು ಇದೆ. ಇದೆಲ್ಲಾ ಆರ್ಡಿನೆನ್ಸ್‌ನಲ್ಲಿತ್ತು. ಅದನ್ನು
ರಿಪ್ಲೇಸ್ ಮಾಡುವುದಕ್ಕೆ ಈ ಬಿಲ್ಲನ್ನು ತಂದಿದ್ದೇವೆ. ಇದನ್ನು ಹೊಸದಾಗಿ ಈ ಸರ್ಕಾರವೇ
ತಂದಿದ್ದೇನಲ್ಲ. ಕಾಂಗ್ರೆಸ್ ಸರ್ಕಾರಗಳು ಎಲ್ಲೆಲ್ಲಿವೆ ಅಲ್ಲೆಲ್ಲಾ ಇಂತಹ ಕಾನೂನುಗಳನ್ನು ತಂದು
ಸ್ವಲ್ಪಮಟ್ಟಿಗೆ ಈ ಚಲುವಟಿಕೆಗಳನ್ನು ತಡೆಯುವುದಕ್ಕೆ ಅವಕಾಶವಾಗಿದೆ ಆದುದರಿಂದ ಇದನ್ನು ಇಲ್ಲಿ
ತರುತ್ತಾ ಇದ್ದೇವೆ. ಇದನ್ನು ಏನೋ ಒಂದು ಹೊಸದಾಗಿ ತೆಗೆದುಕೊಂಡು ಬಂದಿದ್ದಾರೆ ಎಂದು ಹೊಸ
ಸದಸ್ಯರಿಗೆ ಅನುಮಾನ ಬರಬಾರದು. ಇವೊತ್ತಿನದಿವಸ ಸಮಾಜದಲ್ಲಿರತಕ್ಕ ನೆಮ್ಮದಿಯನ್ನು ಭಂಗ
ಮಾಡತಕ್ಕ ಇಂತಹ ಶಕ್ತಿಗಳೇನಿದ್ದಾರೆ ಆ ಶಕ್ತಿಗಳನ್ನು, ಅವರ ಕಾರ್ಯಚಟುವಟಿಕೆಗಳನ್ನು ತಡೆ
ಗಟ್ಟುವುದಕ್ಕೋಸ್ಕರ. ಪ್ರಿವೆಂಟೀವ್ ಮೆಷರ್ಸ್ ತೆಗೆದುಕೊಳ್ಳುವುದಕ್ಕೆ ಈ ಮಸೂದೆಯನ್ನು ತಂದಿ
ದ್ದೇವೆ. ಅದಕ್ಕೋಸ್ಕರ ಮಾನ್ಯ ಸದಸ್ಯರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕು ಎಂದು ನಾನು
ಕೇಳುತ್ತಾ ಇದ್ದೇನೆ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ನಮ್ಮ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿರತಕ್ಕದ್ದನ್ನು ನೋಡಿದರೆ ನಂಬರ್ ಆಫ್ ಪ್ರಾಸ್ಟಿಟ್ಯೂಟ್ಸ್ ೮೫೫, ಇದ್ದಾರೆಂದು ಕೇಳಿದ್ದೇನೆ. ಇನ್ನು ಪಿಂಪ್ಸ್ ೯೮, ಬ್ರಾತಲ್ ಹೌಸಸ್ ೨೨ ಬ್ರಾತಲ್ ಲಾಡ್ಜಸ್ ೧೪, ಗ್ಯಾಂಬ್ಲಿಂಗ್ ಡೆನ್ಸ್ ೧೨೧, ಬೂಟ್‌ಲೆಗರ್ಸ್ ೨೨೦. ರೌಡೀಸ್ ೭೫೦ ಇಷ್ಟು ಬೆಂಗಳೂರು ಸಿಟಿಯಲ್ಲಿದ್ದಾರೆ.

ಶ್ರೀ ಪಂಪಾಪತಿ.—ರೌಡಿಗಳು ಎಂದು ಹೇಳಿದ್ದೀರಲ್ಲಾ, ರೌಡಿಗಳು ಅಂದರೆ ಯಾರು ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಹಿಂದೆ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತ ದುರಂತದ ಬಗ್ಗೆ ಸರ್ಕಾರ ಎಸ್. ದೇಸಾಯಿ ಕಮಿಟಿಯನ್ನು ನೇಮಿಸಿತ್ತು. ಅವರು ಏನೊಂದು ರೆಕಮಂಡೇಷನ್ ಮಾಡಿದರು, ಅದರ ಪ್ರಕಾರ ಇದನ್ನು ತಂದಿದ್ದೇವೆ

(ಗೊಂದಲ)

ಒಬ್ಬ ಸದಸ್ಯರು.—ಅದರ ಬಗ್ಗೆ ನಾಯಕ್ ಅವರಿಗೆ ಕೇಳಿದರೆ ಗೊತ್ತಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಅವರು ಹೇಳುವ ರೀತಿ ನೋಡಿದರೆ ಯಾರಿಗೆ ಹೇಳುತ್ತಾರೆ ಗೊತ್ತಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಕೇಳಲಿಕ್ಕೆ ತಯಾರಾಗಬೇಕು.

ಶ್ರೀ ಬಿ. ರಾಚಯ್ಯ.—ದೇಸಾಯಿ ಕಮಿಷನ್‌ನವರು ಕೆಲವು ಶಿಫಾರಸ್ಸುಗಳನ್ನು ಮಾಡಿದರು. ಅದರಲ್ಲಿ provision should be made for the deteution of natorioushootch kinds and boot leggers ಎಂದು ಮಾಡಿದರು. ಇದನ್ನು ಕೂಡ ನಾವು ದೇಸಾಯಿ ಕಮಿಷನ್ ವರದಿಯನ್ನು ಅನುಸರಿಸಿ ತಂದಿದ್ದೇವೆ. ಈ ದೃಷ್ಟಿಯಿಂದ ರಾಜ್ಯದಲ್ಲಿ ಶಾಂತಿಯನ್ನು ಭಂಗ ಮಾಡತಕ್ಕ ಕಾನೂನಿಗೆ ಸಿಕ್ಕದೇ ಇರತಕ್ಕ ಕೆಲವು ವ್ಯಕ್ತಿಗಳು ಏನಿದ್ದಾರೆ, ಇವರು ಇನ್ನು ಮುಂದೆ ಈ ರೀತಿ ಮಾಡದೇ ಇರಲಿ ಎನ್ನುವ ರೀತಿಯಲ್ಲಿ ಇದು ಎಚ್ಚರಿಕೆ ರೂಪದಲ್ಲಿದೆ. ಇದನ್ನು ಉಪಯೋಗಿಸುವಾಗ ಬಹಳ ಸ್ಪೇರಿಂಗ್ ಆಗಿ ಉಪಯೋಗಿಸುತ್ತೇವೆ. ಈ ಅಧಿಕಾರವನ್ನು ಯಾರಿಗೆ ಕೊಡುತ್ತಿದ್ದೇವೆಂದರೆ, ಜಿಲ್ಲಾ ಮಟ್ಟದ ಡೆಪ್ಯುಟಿ ಕಮಿಷನರ್, ಅಥವಾ ಬೆಂಗಳೂರಿನ ಕಮಿಷನರ್ ಈ ಮಟ್ಟದಲ್ಲಿ ಅವರಿಗೆ ಅಧಿಕಾರ ಕೊಡತಕ್ಕದ್ದನ್ನು ಈ ಪ್ರಾವಿಜನ್‌ನಲ್ಲಿ ಇಟ್ಟುಕೊಂಡಿದ್ದೇವೆ. ಕೆಳಗಿನ ಅಧಿಕಾರಿಗಳಿಗೆ ಇದನ್ನು ಕೊಡುವುದಿಲ್ಲ. ಡಿಟೆನ್ಯೂ ಮಾಡತಕ್ಕವರನ್ನು ಇಟ್ಟುಕೊಳ್ಳಬೇಕೇ ಬಿಟ್ಟುಬಿಡಬೇಕೇ ಎನ್ನುವ ವಿಚಾರದಬಗ್ಗೆ ಉನ್ನತ ಅಧಿಕಾರಿಗಳ ಮಟ್ಟಕ್ಕೆ ಸರ್ಕಾರಕ್ಕೆ ಅದು ಬರುತ್ತದೆ. ದುರುಪಯೋಗ ಮಾಡತಕ್ಕದ್ದು ಇಲ್ಲದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳುತ್ತದೆಂದು ಭರವಸೆ ಕೊಡುತ್ತೇನೆ. ಇನ್ನು ೧೯೮೨, ೮೩, ೮೪, ೮೫ನೇ ಇಸವಿಯಲ್ಲಿ ನಡೆದಿರತಕ್ಕ ಗ್ಯಾಂಬ್ಲಿಂಗ್ ಮತ್ತಿತರ ಚಟುವಟಿಕೆಗಳ ಬಗ್ಗೆ ಅಂಕಿಅಂಶಗಳು ಈ ರೀತಿ ಇವೆ.

upto 28-2-85.

| | 1982 | 1988 | 1984 | 1985 |
|---|---|---|---|---|
| 1) Gambling cases | 790 | 331 | 248 | 22 |
| 2) Offences under SITA (Suppression/Immoral Traffic Act) | 223 | 370 | 302 | 36 |
| 3) Number of bootleggars, and LD liquor manfrs. arrested, | 852 | 838 | 901 | 87 |
| 4) Drug offenders | 15 | 26 | 20 | 1 |
| 5) Assault cases | 2,150 | 2,168 | 1,908 | 405 |

ಈ ರೀತಿ ಫಿರ್ಯಾದಿಗಳು ದಾಖಲಾಗಿವೆ.
ಹಾಲಿ ಇರತಕ್ಕ ಆಕ್ಟ್ ಮುಖಾಂತರ ಅನೇಕರನ್ನು ಬಂಧಿಸುವುದು ಕಷ್ಟವಾಗಿರುವುದರಿಂದ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಈಗ ಪ್ರಿವೆಂಟೀವ್ ಡಿಟೆನ್‌ಷನ್ ಆಕ್ಟ್ ತಂದಿದ್ದೇವೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಮೊಯಿಲಿಯವರು ಇದರ ಬಗ್ಗೆ ಚರ್ಚೆ ಪ್ರಾರಂಭಿಸಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಪ್ರಾರಂಭ ಮಾಡಿದ ಮೇಲೆ ಚರ್ಚೆಯನ್ನು ಮುಗಿಸಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಂದ ವಿವರಣೆಯನ್ನು ಕೇಳುವುದು ಇದೆ. ಮೊದಲೇ ಎಲ್ಲವನ್ನೂ ಕೇಳಿಕೊಂಡರೆ ನಮ್ಮ ಭಾಷಣ ಹೊಂದಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಒಂದು ವಿಚಾರವನ್ನು ಮಾನ್ಯ ಮಂತ್ರಿಗಳು ಈ ಸದನಕ್ಕೆ ಮನದಟ್ಟು ಮಾಡಿಕೊಡಬೇಕು. ಈಗ ಇರತಕ್ಕ ಕಾನೂನು ಯಾವುದು? ಆ ಕಾನೂನು ಬಳಕೆಯಿಂದ ಇವುಗಳನ್ನೆಲ್ಲಾ ನಿಯಂತ್ರಿಸಲಿಕ್ಕೆ ಸಾಧ್ಯವಿಲ್ಲವೇ?

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಭಾಷಣ ಮಾಡುವಾಗ ಎಲ್ಲಾ ವಿಚಾರಗಳನ್ನು ತಿಳಿಸಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇರುವ ಕಾನೂನು ಯಾವ ರೀತಿ ಪ್ರಯೋಗ ಮಾಡಿದರು ಪರಿಣಾಮ ಏನಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ. ಚರ್ಚೆಗೆ ಇದು ಬಹಳ ಗಹನವಾದ ವಿಚಾರ ಇದೆ. ತಮಗೆ ಗೊತ್ತಿರುವ ಹಾಗೆ ಈಗಾಗಲೇ ನಾವು ಓವರ್ ಟೈಮ್ ಮಾಡಿದ್ದೇವೆ. ಇವೊತ್ತು ೧೦ ನಿಮಿಷ ವಿರಾಮ ಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಇನ್ನೂ ೫ ಗಂಟೆಯಾಗಿಲ್ಲ ಇವೊತ್ತು ಇದು ಪ್ರಾರಂಭವಾಗಲಿ.

ಶ್ರೀ ಪತವಂಕ್ಕೆ ರತ್ನಾಕರ್.—ಈಗ ಸಂಬಂಧಪಟ್ಟ ಮಂತ್ರಿಗಳು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಈ ವಿಚಾರ ಬಹಳ ಗಂಭೀರವಾಗಿದೆ ಗ್ರಾಮೀಣ ಜನರ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ತಾವು ಅಧ್ಯಯನ ಮಾಡಬೇಕು.

ಅಧ್ಯಕ್ಷರು.—ಈಗ ಪ್ರಾರಂಭ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಪ್ರಾರಂಭ ಮಾಡಿದರೆ ಕನ್‌ಕ್ಲೂಡ್ ಮಾಡಬೇಕಾಗುತ್ತದೆ. ಈಗ ೧೦ ನಿಮಿಷ ಮಾತ್ರ ಸಮಯ ಇದೆ.

ಅಧ್ಯಕ್ಷರು.—೧೦ ನಿಮಿಷ ಮಾತನಾಡತಕ್ಕ ಸದಸ್ಯರು ಇವೊತ್ತು ಮಾತನಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಬಹಳ ಮಹತ್ವವಾದ ಬಿಲ್ಲು. ಇದರ ಬಗ್ಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ. ಇದನ್ನು ಬೇಡ ಎಂದು ವಿರೋಧ ಮಾಡುವುದು ಪ್ರಶ್ನೆ ಅಲ್ಲ. ಇದೊಂದು ಮಿನಿ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಆಗುತ್ತದೆ ಎನ್ನುವ ಬಗ್ಗೆ ಅನುಮಾನ ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದರ ಬಗ್ಗೆ ಅನುಮಾನ ಏನೂ ಇಲ್ಲ. ಹಾಗಿರುವಾಗ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್, ಡೆಕೋನಿಯನ್ ಲಾ ಎಂದು ಸಾಕಷ್ಟು ಪ್ರಚಾರ ಮಾಡಿದ್ದೀರಿ.

ಅಧ್ಯಕ್ಷರು.—ಇನ್ನು ಹತ್ತು ನಿಮಿಷ ಇದೆ, ತಾವು ಮೊದಲು ಪ್ರಾರಂಭ ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ನಾನು ಏನು ಹೇಳುತ್ತೇನೆ ಎನ್ನುವುದನ್ನು ಮೊದಲು ತಾವು ಕೇಳಿ.

ಅಧ್ಯಕ್ಷರು.—ನೀವು ಮಾತನಾಡಿ, ಇಲ್ಲದೇ ಇದ್ದರೆ ತುಂಗಳ್ ಅವರು ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದು ಮಹತ್ವದ ಮಸೂದೆಯಾಗಿರುವಾಗ ಜಂಟಿ ಸಲಹಾ ಸಮಿತಿಗೆ ಕಳುಹಿಸತಕ್ಕ ವಿಚಾರ ಮಾಡಿದರೆ ಇಲ್ಲಿ ವಿಸ್ತಾರವಾಗಿ ಚರ್ಚೆ ಮಾಡಬೇಕಾಗಿಲ್ಲ. ಯಾವುದೇ ಕಾನೂನನ್ನು ಮಾಡಿದರೂ ಅದರಿಂದ ನುಸುಳಿಕೊಳ್ಳತಕ್ಕ ಜನರು ಸಮಾಜದಲ್ಲಿ ಇದ್ದೇ ಇರುತ್ತಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ಮಂಡಿಸಿದ ನಂತರ ಚರ್ಚೆ ಪ್ರಾರಂಭ ಮಾಡಬೇಕು. ಅವಕಾಶ ಬೇಕು ಟೈಂ ಬೇಕೆಂದು ಹೇಳಿ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಮಾತನಾಡತಕ್ಕ ವಿಚಾರ ಬೇರೆ. ಈ ಸದನದಲ್ಲಿ ಕೆಲಸ ಮಾಡಿದಂಥ ಹಿರಿಯ ಸದಸ್ಯರುಗಳು ಇದ್ದಾರೆ. ಇಂಥ ಒಂದು ಮಹತ್ವದ ಮಸೂದೆ ಬಂದಾಗ ಪ್ರಸ್ತಾವಿಕವಾಗಿ ವಿರೋಧ ಪಕ್ಷವಾಗಲೀ, ಆಡಳಿತ ಪಕ್ಷವಾಗಲಿ ಜನರ ಮನ್ನಣೆ ಪಡೆದದ್ದು ಇದೆ. ಇದು ಮಹತ್ವದ ಮಸೂದೆಯಾಗಿರುವುದರಿಂದ ಜಂಟೀ ಸಲಹಾ ಸಮಿತಿಗೆ ಕಳುಹಿಸಿ ಸಾಕಷ್ಟು ವಿಚಾರ ಮಾಡುವುದು ಒಳ್ಳೆಯದು. ಯೋಗ್ಯವಾದ ಮತ್ತು ಮಹತ್ವದ ಮಸೂದೆಯೆಂದು ತಾವೇ ಹೇಳಿದ್ದೀರಿ. ನಾವು ಬರೀ ವಿರೋಧ ಮಾಡುತ್ತೇವೆಂದು ಅಭಿಪ್ರಾಯವನ್ನು ತಾವು ಇಟ್ಟುಕೊಳ್ಳಬಾರದು. ಇಂದಿನ ಪರಿಸ್ಥಿತಿಯಲ್ಲಿ ಈ ಕಾನೂನನ್ನು ಬಲಪಡಿಸುವ ಅವಶ್ಯಕತೆ ಇದೆ. ಜಂಟೀ ಸಲಹಾ ಸಮಿತಿಗೆ ಕಳುಹಿಸಿ ಒಂದೆರಡು ತಿಂಗಳಲ್ಲಿ ಅಲ್ಲಿ ದೀರ್ಘವಾಗಿ ಚರ್ಚೆ ನಡೆಸಿ ಸಮಿತಿಯ ಅಭಿಪ್ರಾಯ ಪಡೆದು, ಬೇರೆ ಬೇರೆ ರಾಜ್ಯಗಳಲ್ಲಿ ಈ ಒಂದು ಮಸೂದೆ ಇರುವುದರಿಂದ ಅಲ್ಲಿಯ ವಿದ್ಯಮಾನಗಳನ್ನು ಪರಾಮರ್ಶೆ ಮಾಡಿ, ಈ ಮಸೂದೆಯ ಬಗ್ಗೆ ಅನೇಕ ರಾಜ್ಯಗಳ ಹೈಕೋರ್ಟು ಜಡ್ಜ್‌ಮೆಂಟುಗಳು ಇವೆ. ಮಹಾರಾಷ್ಟ್ರ ಮತ್ತು ಡೆಲ್ಲಿ ರಾಜ್ಯಗಳ ಹೈಕೋರ್ಟು ಇದರ ಬಗ್ಗೆ ಜಡ್ಜ್‌ಮೆಂಟ್ ಕೊಟ್ಟಿದೆ. ಕಾನೂನಿನಲ್ಲಿರತಕ್ಕ ಲೋಪದೋಷಗಳನ್ನು ಹೋಗಲಾಡಿಸಿಕೊಂಡು ಇಡೀ ದೇಶಕ್ಕೆ ಮಾದರಿಯಾದಂಥ ಕಾನೂನು ತಂದರೆ ರಾಜ್ಯಕ್ಕೆ ಹಿತವಾಗುತ್ತದೆ. ತಾವು ಯಾವ ಉದ್ದೇಶದಿಂದ ಈ ಕಾನೂನು ತರುತ್ತಿದ್ದೀರಿ ಅದನ್ನು ನೂರಕ್ಕೆ ನೂರು ಪಾಲು ನಾವು ಒಪ್ಪುತ್ತೇವೆ. ಆ ಉದ್ದೇಶ ಸಫಲವಾಗಬೇಕಾದರೆ ಇದರ ಬಗ್ಗೆ ಆಳವಾಗಿ ಪರಾಮರ್ಶೆ ಮಾಡುವುದು ಯುಕ್ತವೆಂದು ನಾನು ಹೇಳುತ್ತೇನೆ. ಈ ಕಾನೂನನ್ನು ತಾವು ರಾಜಕೀಯ ಮಟ್ಟದಲ್ಲಿ ಉಪಯೋಗ ಮಾಡುತ್ತೀರೆಂದು ನಾನು ಹೇಳುವುದಿಲ್ಲ, ಅಧಿಕಾರಿಗಳ ಮಟ್ಟದಲ್ಲಿ ಅದಕ್ಕೆ ತಡೆ ಹಾಕತಕ್ಕಂಥ ಕಾನೂನು ಸಲಹಾ ಸಮಿತಿಯಲ್ಲಿ ಬರುವುದಕ್ಕಿಂತ ಮೊದಲು ಏನು ಅನಾಹುತವಾಗಿರುತ್ತದೆ, ಅದನ್ನು ತಪ್ಪಿಸಬೇಕಾಗುತ್ತದೆ. ಈ ಕಾನೂನಿನಿಂದ ಟಾಪ್ ಲಾಯರ್ಸ್ ಗೂಂಡಾಗಳ ಸಮೂಹವನ್ನು ಸಿದ್ಧ ಮಾಡತಕ್ಕ ಅಸ್ತ್ರ ಆಗಬಾರದು, ಗೂಂಡಾಗಳು ಎಲ್ಲಾ ಕಡೆ ಇದ್ದಾರೆ, ಅವರು ಯಾವ ಕಡೆಯಲ್ಲಿಯೇ ಇರಲಿ, ಪರಿಣಾಮಕಾರಿಯಾಗಿ ಅವರನ್ನು ನಿಗ್ರಹಿಸತಕ್ಕ ಕಾನೂನು ಮಾಡಿದರೆ ಮಾತ್ರ ತಮ್ಮ ಉದ್ದೇಶ ಸಫಲವಾಗುತ್ತದೆ, ಸಮಾಜದಲ್ಲಿ ನೆಮ್ಮದಿ ತರತಕ್ಕಂಥ ಪ್ರಯತ್ನ ಕೂಡ ಸಾರ್ಥಕವಾಗುತ್ತದೆ. ನಾವು ಈ ಮಸೂದೆಯನ್ನು ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ ಈ ಸದನದ ಸಮಯ ಬಹಳ ಅಮೂಲ್ಯವಾದದ್ದು. ಇಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಮೊದಲು ಸಲಹಾ ಸಮಿತಿಗೆ ಕಳುಹಿಸುವುದು ಬಹಳ ಸೂಕ್ತವಾದುದೆಂದು ನಾನು ಗಂಭೀರವಾಗಿ ಹೇಳುತ್ತೇನೆ. ಮಾನ್ಯ ಗೃಹಮಂತ್ರಿಗಳು ತಮ್ಮ ಅನುಭವವನ್ನು ಬಿಟ್ಟು ಇಳಿಸಿ ತಂದಿದ್ದಾರೆ ಆ ಬಗ್ಗೆ ಶಂಕೆ ಇಲ್ಲ. ಇಡೀ ಸದನದ ಪರಿಣತರ ಸಾಮೂಹಿಕ ಅಭಿಪ್ರಾಯವನ್ನು ಪಡೆದುಕೊಂಡು ಕಾನೂನು ಮಾಡಿ. ಡಿ.ಐ.ಆರ್. ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲಿ ಯಾರನ್ನು ಹಿಡಿಯುವುದಕ್ಕೆ ಆಗಲಿಲ್ಲ? ಹೆಸರಿಗೆ ಗೂಂಡಾ ಆಕ್ಟ್ ತಂದು ಯಾರನ್ನು ಹಿಡಿಯದಿದ್ದರೆ, ಬಲೆ ಬೀಸಿ ಏನು ಪ್ರಯೋಜನ? ಬಲೆಯೊಳಗೆ ಮೀನು ಕೂಡ ಬೀಳುವುದಿಲ್ಲ ಎಲ್ಲಾ ದೃಷ್ಟಿಯಿಂದಲೂ ಇದರಲ್ಲಿ ಚೆಕ್ಸ್ ಬ್ಯಾಲೆನ್ಸ್ ಇಡಬೇಕು. ಗೂಂಡಾ ಆಗಿರಲಿ, ಗ್ಯಾಂಬ್ಲರ್ ಆಗಿರಲಿ, ಬೂಟ್‌ಲೆಗರ್ಸ್ ಆಗಿರಲಿ, ಸಮಾಜ ಘಾತುಕ ಶಕ್ತಿಗಳನ್ನು, ಸಮಾಜ ದ್ರೋಹಿಗಳನ್ನು ಹಿಡಿಯತಕ್ಕ ಒಬ್ಬ ಕಾನ್ಸ್‌ಟೇಬಲ್ ಇರಬಹುದು, ಹೆಡ್ ಕಾನ್ಸ್‌ಟೇಬಲ್ ಇರಬಹುದು, ಸಬ್ ಇನ್ಸ್‌ಪೆಕ್ಟರ್ ಇರಬಹುದು, ಪ್ರಿಜ್ಯುಡೀಸ್ ಆಗಿ ಚೆಕ್ ಮಾಡುವುದಕ್ಕೆ ಸಾಧ್ಯ ಇದೆ, ನಿಯಂತ್ರಣ ಮಾಡುವುದಕ್ಕೆ ಸಾಧ್ಯ ಇದೆ. ನಿಜವಾದಂಥ ಅಪರಾಧಿಯನ್ನು ಹಿಡಿಯುವುದಕ್ಕೆ ಈ ಕಾನೂನು ಮಾಡಿದ್ದೀರಿ. ಇದರ ಉಪಯೋಗ ಮಾಡುವಾಗ ದುರುಪಯೋಗ ಕೂಡ ಆಗಬಹುದು, ಶಾಸನ ಸಭೆಯಲ್ಲಿ ಗಂಟೆಗಳ ಕಾಲ ಚರ್ಚೆ ಮಾಡಿದರೂ ಮೂಲಭೂತವಾಗಿ ಫಲಶ್ರುತಿ ಆಗುವುದಿಲ್ಲ. ಜಂಟೀ ಸಲಹಾ ಸಮಿತಿಯಲ್ಲಿ ಕೆಲಸ ಮಾಡಿದ ಅನುಭವ ತಮಗೂ ಇದೆ. ಪಕ್ಷದ ವಿಚಾರವನ್ನು ಮರೆತು ಮಾನ್ಯ ಸದಸ್ಯರುಗಳು ಅಲ್ಲಿ ಕೆಲಸ ಮಾಡುತ್ತಾರೆ,

—೨೨ ಪಿ.ಎಂ.

ಈ ಮಸೂದೆಯನ್ನು ಜಂಟೀ ಸಲಹಾ ಸಮಿತಿಗೆ ಕಳುಹಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ನಾನು ಅನ್ಯಥಾ ಹೇಳುತ್ತಿಲ್ಲ. ಮಾನ್ಯ ಗೃಹಸಚಿವರು ಇದರ ಬಗ್ಗೆ ಆಲೋಚನೆ ಮಾಡಿಕೊಂಡು ಬರಲಿ. ಈಗ ಈ ಮಸೂದೆಯನ್ನು ಸದನದಲ್ಲಿ ಚರ್ಚೆಗೆ ಬಿಟ್ಟಿದ್ದೀರಿ. ನಾನು ಹೇಳುವುದೇನೆಂದರೆ ತಾವು ಪುನಃ ಇದರ ಬಗ್ಗೆ ಆಲೋಚನೆ ಮಾಡಿಕೊಂಡು ಬನ್ನಿ, ಇದು ಎಲ್ಲಾ

ಸದಸ್ಯರ ಅಭಿಪ್ರಾಯ, ವಿರೋಧಪಕ್ಷಗಳ ಸದಸ್ಯರ ಅಭಿಪ್ರಾಯವೂ ಹೌದು. ಆದರೆ ಆಡಳಿತ ಪಕ್ಷದ ಸದಸ್ಯರ ಅಭಿಪ್ರಾಯ ಗೌಣವಾಗಿರಬಹುದು, ಒಟ್ಟಿನಲ್ಲಿ ಇದು ಎಲ್ಲಾ ಸದಸ್ಯರ ಅಭಿಪ್ರಾಯ. ಬಹಳ ಉಪಯುಕ್ತವಾದ ಕಾನೂನು ಪರಿಣಾಮಕಾರಿಯಾಗಿ, ಸರಿಯಾಗಿ ನ್ಯಾಯವಾಗಿ ಜಾರಿಗೆ ಬರುವ ರೀತಿಯಲ್ಲಿಯಾಗಬೇಕು. ಈ ಕಾನೂನನ್ನು ವ್ಯಾಪಕವಾಗಿ ಹೇಗೆ ತರಬಹುದು ಆ ಬಗ್ಗೆ ಜಂಟೀಸಲಹಾ ಸಮಿತಿಯಲ್ಲಿ ಇದಕ್ಕೆ ಒಂದು ರೂಪುರೇಷೆ ಬರುತ್ತದೆಂದು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ತಾವು ಕೂಡ ವಕೀಲರಿದ್ದೀರಿ, ಪರಿಣತರಿದ್ದೀರಿ, ಸದನದಲ್ಲಿ ಎಲ್ಲಾ ಮಸೂದೆಗಳನ್ನು ವಿರೂಪಿಸಿದ್ದೀರಿ, ತಮಗೆ ಸಾಕಷ್ಟು ಅನುಭವವಿದೆ ಇದು ಜಂಟೀಸಲಹಾ ಸಮಿತಿಗೆ ಕಳುಹಿಸಲಿಕ್ಕೆ ಬಹಳ ಯುಕ್ತವಾದ ಮಸೂದೆ ಯೆಂದು ಹೇಳಿ ನನ್ನ ವಾದವನ್ನು ಮಂಡನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪಮೊಯಿಲಿಯವರು ವಿರೋಧಪಕ್ಷದ ನಾಯಕರಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅನುಭವಿ ರಾಜಕಾರಣಿ ಜೊತೆಗೆ ವಕೀಲ ರಾಗಿ ಕೆಲಸ ಮಾಡಿದ್ದಾರೆ. ಈ ಮಸೂದೆಯನ್ನು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಮಾತ್ರ ತರಲಾಗಿದೆ. ೧೯೮೮ರಲ್ಲಿ ಈ ಕಾಯಿದೆಗೆ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ಈ ಸುಗ್ರೀವಾಜ್ಞೆ ಯನ್ನು ಹೊರಡಿಸಲು ರಾಜ್ಯಪಾಲರ ಅನುಮತಿಯನ್ನು ಪಡೆದು ಈಗಾಗಲೇ ಕಾನೂನನ್ನು ಜಾರಿಗೆ ತಂದಿದ್ದೇವೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಬೋರ್ಡನ್ನು ಅಪಾಯಿಂಟ್ ಮಾಡಿ ದ್ದೇವೆ. ಆರ್ಡಿನೆನ್ಸನ್ನು ಆರು ತಿಂಗಳೊಳಗೆ ರಿಪ್ಲೇಸ್ ಮಾಡಬೇಕು. ಈ ಕಾನೂನು ಬಾಂಬೆ ಹೈಕೋರ್ಟ್ ಮತ್ತಿತರ ಕಡೆಗಳಲ್ಲಿ ಚಾಲೆಂಜ್ ಆಗಿ ಈ ಪ್ರಾವಿಜನ್ ಇರತಕ್ಕದ್ದು ಸರಿಯೆಂದು ಎತ್ತಿಹಿಡಿಯಲಾಗಿದೆ. ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳುವ ಉದ್ದೇಶದಿಂದ ಇದನ್ನು ತಂದಿದ್ದೇವೆ, ಬೇರೆ ಯಾವುದೇ ಉದ್ದೇಶದಿಂದ ತಂದಿಲ್ಲ. ಬೆಂಗಳೂರಿನಲ್ಲಿ ರಸ್ತೆಗಳಲ್ಲಿ ಹೆಣ್ಣುಮಕ್ಕಳು ತಿರುಗುವ ಹಾಗೆ ಇಲ್ಲ. ಇದನ್ನೆಲ್ಲಾ ನಿಲ್ಲುವಂತೆ ಮಾಡಲು ಈ ಕಾನೂನನ್ನು ತರುತ್ತಿದ್ದೇವೆ. ದಯಮಾಡಿ ತಾವೆಲ್ಲರೂ ಇದನ್ನು ಒಪ್ಪಿಕೊಂಡು ಕಾನೂನು ಜಾರಿಗೆ ಬರುವಂತೆ ಮಾಡಿದರೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ಕಾನೂನನ್ನು ದುರುಪಯೋಗ ಮಾಡುವುದಿಲ್ಲವೆಂದು ಆಶ್ವಾಸನೆಯನ್ನು ಕೊಡಬಲ್ಲೆ. ಸುಗ್ರೀವಾಜ್ಞೆ ಜಾರಿಯಲ್ಲಿದ್ದರೂ ಕಳೆದ ಎರಡು ಮೂರು ತಿಂಗಳುಗಳಿಂದ ಇದನ್ನು ಉಪಯೋಗ ಮಾಡಿಲ್ಲ. ಅದಕ್ಕೆ ನೀವು ನಮ್ಮನ್ನು ಅಪ್ರಿಶಿಯೇಟ್ ಮಾಡಬೇಕು. ಸಮಾಜಘಾತುಕ ಶಕ್ತಿಗಳನ್ನು ನ್ಯಾಷನಲ್ ಸೆಕ್ಯುರಿಟಿ ಆಕ್ಟ್ ಪ್ರಕಾರ ಬಂಧಿಸುವುದಕ್ಕೆ ಆಗಿಲ್ಲ. ಮುಂದೆ ಯಾವುದೇ ರೀತಿಯ ಅನಾಹುತಗಳು ನಡೆಯಬಾರದೆನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ. ಬೇರೆ ಯಾವುದೇ ಉದ್ದೇಶದಿಂದ ಇದನ್ನು ತಂದಿಲ್ಲ. ದಯಮಾಡಿ ಎಲ್ಲರೂ ಒಪ್ಪಿಕೊಳ್ಳಬೇಕು. ಈ ಮಸೂದೆಯನ್ನು ಜಂಟೀಸಲಹಾ ಸಮಿತಿಗೆ ಕಳುಹಿಸುವ ಅಗತ್ಯವಿಲ್ಲ. ಈ ಮಸೂದೆಯ ಬಗ್ಗೆ ಇವತ್ತು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಇವೊತ್ತು ರಾತ್ರಿಯೆಲ್ಲಾ ಓದಿಕೊಳ್ಳಿ, ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು.—ಈ ಮಸೂದೆ ಬಗ್ಗೆ ಚರ್ಚೆಯನ್ನು ನಾಳೆ ಮಾಡೋಣ. ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೧೦. ಗಂಟೆಗೆ ಮುಂದೂಡಲಾಗಿದೆ.

(ಸಭೆಯು ೫ ಗಂಟೆ ೫ ನಿಮಿಷಕ್ಕೆ ಮುಕ್ತಾಯವಾಗಿ, ಪುನ: ದಿನಾಂಕ ೩ನೇ ಮಾರ್ಚ್ ೧೯೮೫ರ ಶುಕ್ರವಾರದಂದು ಬೆಳಿಗ್ಗೆ ೧೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು).

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ವಿಧಾನಸಭೆಯ ದಿ: 29/3/1985 ರ ನಡವಳಿ (8)



ಶ್ರೀ ಪಂಪಾಪತಿ.—ಎಲ್ಲರಿಗೂ ಸಂಬಂಧಪಟ್ಟ ವಿಷಯ. ಆದ್ದರಿಂದ ಎಲ್ಲರಿಗೂ ಗೊತ್ತಾಗಬೇಕು ತಾವು ಅದನ್ನು ಓದಿದರೆ ಒಳ್ಳೆಯದು.

ಶ್ರೀ ಲಕ್ಷ್ಮೀಸಾಗರ್.—ರೂಲ್ಸ್‌ನಲ್ಲಿ ಎಲ್ಲರಿಗೂ ತಿಳಿಸಬೇಕೆಂದು ಇಲ್ಲ.

ಶ್ರೀ ಪಂಪಾಪತಿ.—ಇದು ಇಡೀ ಜನತೆಗೆ, ರಾಜ್ಯಕ್ಕೆ ಸೇರಿದ ಸಮಸ್ಯೆ ಆಗಿದ್ದರಿಂದ ಎಲ್ಲರಿಗೂ ತಿಳಿದುಕೊಳ್ಳುವ ಹಕ್ಕಿದೆ. ಅಧ್ಯಕ್ಷರೇ ಅದನ್ನು ಎಲ್ಲರಿಗೂ ಹೇಳಬಹುದು.

## ಶಾಸನ ರಚನಾ ಕಾರ್ಯಕಲಾಪಗಳು

೧೯೮೫ನೇ ಇಸವಿಯ ಕರ್ನಾಟಕ ಅಕ್ರಮ ಮದ್ಯ ಸಾಗಾಣಿಕೆದಾರರ, ಔಷದ ನಿಯಮ ಉಲ್ಲಂಘನೆ ಕಾರರ, ಜೂಜಾಟಗಾರರ, ಗೂಂಡಾಗಳ, ಅನೈತಿಕ ವ್ಯವಹಾರದಲ್ಲಿ ತೊಡಗಿರುವವರ ಹಾಗೂ ಕೊಳಚೆ ಪ್ರದೇಶಗಳನ್ನು ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳುವಂತಹ ವಿಧ್ವಂಸಕ ಚಟುವಟಿಕೆಗಳನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದ ವಿಧೇಯಕ.

## ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಮಂಡನೆ ಮಾಡಿದಂತಹ ಮಸೂದೆ ಬಹಳ ವಿಶೇಷವೂ ಮಹತ್ವವಾದಂಥ ಮಸೂದೆಯಾಗಿದೆ. ಬೂಟ್‌ಲೆಗ್ಗರ್ಸ್, ಸ್ಮಗ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಮತ್ತು ಸ್ಲಂ ಗ್ರಾಬರ್ಸ್ ಇವರನ್ನು ಪ್ರತಿಬಂಧಕಾಜ್ಞೆ ಮುಖಾಂತರ ಪ್ರಾಥಮಿಕವಾಗಿ ಮೂರು ತಿಂಗಳಕಾಲ ಆಮೇಲೆ ಅಗತ್ಯಬಿದ್ದರೆ ೧೨ ತಿಂಗಳ ಕಾಲ ಬಂಧನದಲ್ಲಿಡತಕ್ಕಂಥ ಒಂದು ಅಧಿಕಾರವನ್ನು ಈ ಮಸೂದೆ ತಂದುಕೊಡುತ್ತದೆ. ಇಲ್ಲಿಯವರೆಗೆ ಆಲೋಚನೆ ಮಾಡದೇ ಇರತಕ್ಕಂಥ ಈ ಹೊಸ ಆಲೋಚನೆ ಸರ್ಕಾರಕ್ಕೆ ಏಕೆಬಂತು ಎಂದು ನಮಗಂತೂ ಅರ್ಥವಾಗಲಿಲ್ಲ. ಸಮಾಜದಲ್ಲಿ ನೆಮ್ಮದಿ ಕಾಪಾಡಬೇಕು ಸಮಾಜ ವಿಧ್ವಂಸಕ ಶಕ್ತಿಗಳನ್ನು ನಿಗ್ರಹಿಸಬೇಕು. ಅದೂ ಕಠಿಣವಾಗಿಯೂ ಪರಿಣಾಮಕಾರಕವಾಗಿಯೂ ನಿಗ್ರಹಿಸಬೇಕಾದಂಥ ಒಂದು ಅಗತ್ಯವಿದೆ. ಅದಕ್ಕೆ ಬೇರೆ ಬೇರೆ ಕಾಯಿದೆಗಳೂ ಕೂಡ ಇವೆ. ಕರ್ನಾಟಕ ಪೋಲೀಸ್ ಆಕ್ಟ್ ಕೂಡ ಇದೆ. ಇಂಡಿಯನ್ ಪೀನಲ್ ಕೋಡ್ ಇದೆ, ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಷನ್ ೧೧೦ರ ಪ್ರಕಾರ ಸೆಕ್ಯುರಿಟಿ ಪ್ರೊಸಿಡಿಂಗ್ಸ್ ಎಲ್ಲಾ ಇದೆ. ಆದರೂ ಎಲ್ಲಾ ಕಾನೂನುಗಳ ಮತ್ತು ಅನೇಕ ಸ್ಪೆಷಲ್ ಇನಾಕ್ಟ್‌ಮೆಂಟ್ ಕೂಡ ಇದ್ದರೂ ಇಂತಹ ವಿಶೇಷವಾದ ಸಮಗ್ರವಾದ ಕಾಯಿದೆಯ ಅಗತ್ಯ ಏನೆಂದು ಇನ್ನೂ ಸರ್ಕಾರ ಕೂಡ ಸ್ಪಷ್ಟಪಡಿಸಿಲ್ಲ. ಯಾವ ಕಾರಣದಿಂದ ಅದನ್ನು ಮಾಡಬೇಕಾಯಿತೆಂದು ಅದನ್ನು ಈ ಪೀಠಿಕೆಯಲ್ಲೂ ಕೂಡ ಕಾಣಿಸಲಿಲ್ಲ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್‌ನಲ್ಲಿ ಏನು ಕಾಣಿಸಿದ್ದಾರೆಂದರೆ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಇಂತಹ ಕಾನೂನುಗಳಿವೆ ಆ ಪ್ರಕಾರ ನಮ್ಮ ರಾಜ್ಯದಲ್ಲೂ ಕೂಡ ಇಂತಹ ಕಾನೂನನ್ನು ಮಾಡಬಹುದೆಂದು ಹೇಳಿ ಆ ವಿಚಾರ ಮತ್ತೊಮ್ಮೆ ಇಲ್ಲಿ ನಮೂದಿಸಿದ್ದಾರೆ. ಅಧ್ಯಕ್ಷರೇ ಒಂದು ವಿಚಾರ ಏನೆಂದರೆ ನಮ್ಮ ವಿರೋಧ ಪಕ್ಷದ ಪತಿಯಿಂದ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಸಮಾಜ ವಿರೋಧಿ ಕೆಲಸ ಮಾಡತಕ್ಕಂಥ ಶಕ್ತಿಗಳ ಮೇಲೆ, ವ್ಯಕ್ತಿಗಳ ಮೇಲೆ ತಾವು ಕಠಿಣವಾದ ಕ್ರಮವನ್ನು ಪ್ರಯೋಗ ಮಾಡುವುದಾದರೆ ಸರ್ಕಾರದ ಜೊತೆಯಲ್ಲಿ ನಾವು ಕೂಡ ಇರುತ್ತೇವೆ. ಅದು ಪರಿಣಾಮಕಾರಿಯಾಗಿರಬೇಕು.

(ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಮಸೂದೆಯನ್ನು ಮಾಡತಕ್ಕಂಥ ಉದ್ದೇಶ, ಸರಿಯಾಗಿ ಕಾನೂನು ಪಾಲನೆ ಮಾಡಲಾಗುತ್ತದೆಯೋ, ಪರಿಸ್ಥಿತಿಯನ್ನು ನಿಗ್ರಹಿಸಲು ಇದು ಸಮರ್ಥವಾಗುತ್ತದೆಯೋ ಎಂಬ ವಿಚಾರವನ್ನು ಆಲೋಚನೆ ಮಾಡಬೇಕಾಗುತ್ತದೆ. ಯಾವುದೇ ಒಂದು ಕಾನೂನನ್ನು ನಾವು ಮಾಡಿದಾಗ ಅದು ಪರಿಣಾಮಕಾರಿಯಾಗಿರಬೇಕು. ಎರಡನೆಯದು ಆ ಕಾನೂನಿನ ದುರುಪಯೋಗವಾಗಬಾರದು. ಈ ಎರಡೂ ದೃಷ್ಟಿಯಲ್ಲಿ ಕಾನೂನನ್ನು ನೋಡಬೇಕು. ಈ ಕಾನೂನಿನ ಪ್ರತಿಬಂಧಕಾಜ್ಞೆಗಳ ವಿಚಾರದಲ್ಲಿ ಬಹುಶಃ ನಮ್ಮ ಕಾನೂನು ಸಚಿವರು ನೋಡಿರಬಹುದು. ಸಮಾಜದ ಕೊನೆಯ ಹಂತದಲ್ಲಿರತಕ್ಕ

ಎಂ. ಶ್ರೀಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಸಾಮಾನ್ಯ ಮನುಷ್ಯನ ಮೇಲೆ ಇಂಥ ಪ್ರತಿಬಂಧಕಾಜ್ಞೆಗಳು ಕಾನೂನುಗಳು ಜಾರಿಗೆ ಕೊಡಲ್ಪಟ್ಟಾಗ ಯಾವ ರೀತಿ ದುರುಪಯೋಗವಾಗಿವೆ ಎಂಬುದರ ಬಗ್ಗೆ ಶ್ರೀ ವಿ. ಆರ್. ಕೃಷ್ಣಯ್ಯರ್ ಅವರು ಕೊಟ್ಟಿರುವ ತೀರ್ಪನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

AIR 1981 SC 674 -- Justice V. R. Krishna Iyer and R. S. Pathak ರವರು ಕೊಟ್ಟಿರತಕ್ಕ ತೀರ್ಪಿನ ೬ನೇ ಪ್ಯಾರಾಗ್ರಾಫನ್ನು ನಾನು ಈ ಸಂದರ್ಭದಲ್ಲಿ ಓದಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

"Art 21 institutes that no man shall be deprived of his life or personal liberty except according to the procedure established by law.

The Principle of reasonableness, which legally as well as philosophically, is an essential element of equality or non-arbitrariness pervades Art. 14 like brooding omnipresence and the procedure contemplanted by art. 21 must answer the test of reasonableness in order to be in conformity with Art. 14. It must be right and just fair and not arbitrary, fanciful or appressive; otherwise, it would he no procedure at all and the requirement of Art. 21 would not be satisfied.

ಈ ಒಂದು ತತ್ವವನ್ನು ನಾವು ಇಲ್ಲಿ ಮರೆತು ಈ ಕಾನೂನನ್ನು ಪಾಸ್ ಮಾಡಬಾರದು ಎಂಬ ಉದ್ದೇಶದಿಂದಲೇ ನಾನು ಇದನ್ನು ಓದಿ ಹೇಳುತ್ತಾ ಇದ್ದೇನೆ ಮುಂದೆ ಅವರು ಏನು ಹೇಳುತ್ತಾರೆಂದು.

"The poor are picked up or brought up, habitual witnesses swear away their freedom and courts ritualistically commit them to prison and Art. 21 is for them as freedom under total eclipse in practice. The courts are guardians of human rights. The common man looks upon the Trial Court as the protector. The poor and the illiterate, who have held the capacity of defending themselves, are nevertheless not "non-persons". the trial court must remember this.

Preventive Sections privantive of freedom, if in cautiously proved by indolant judicial processes, may do deeper injury. They will have effect of detention of one who has not been held guilty of a crime carry with it the judicial imprimatur to boot. To call a man dengerous is itself a dangerous. To call a man desparate is to affix the desperate adjective to stigmatise the person as hazardous to the community is itself a judicial hazard unless compulsive testimony carrying credence is abundantly available."

ಒಬ್ಬನನ್ನು ಅಪಾಯಕಾರಿ ಎಂದು ಹೇಳತಕ್ಕಂಥಾದ್ದೇ ಅಪಾಯಕಾರಿಯಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಒಂದು ಸುಪ್ರೀಂಕೋರ್ಟಿನ ತೀರ್ಮಾನ ಕ್ರಿಮಿನಲ್ ಪ್ರೊಸೀಜರ್‌ನ ಸೆಕ್ಯೂರಿಟಿ ಪ್ರೊಸೀಡಿಂಗ್ಸ್‌ಗೆ ಸಂಬಂಧಪಟ್ಟದ್ದು. ಅನುಮಾನಾಸ್ಪದವಾಗಿ ಓಡಾಡತಕ್ಕ ಜನಗಳನ್ನು ಹಿಡಿದು ಪೋಲೀಸರು ಪ್ರಶ್ನೆ ಮಾಡಿದಾಗ ಸರಿಯಾದಂಥ ಉತ್ತರ ಕೊಡದೆ ಇರುವ ಒಂದೇ

ಒಂದು ಕಾರಣಕ್ಕೋಸ್ಕರ ಅವರನ್ನು ಹಿಡಿದುಕೊಂಡು ಜೈಲಿಗೆ ಹಾಕುತ್ತಾರೆ. ಆ ಸಂದರ್ಭದಲ್ಲಿ ಹೇಳಿದಂಥ ಸನ್ಮಾನ್ಯ ಕೃಷ್ಣಯ್ಯರ್‌ರವರ ನ್ಯಾಯ ತೀರ್ಮಾನ ಅದು. ಆದರೆ ಇಲ್ಲಿ ಮುಂಜಾಗರೂಕತಾ ಕ್ರಮ ವಾಗಿ ವಿಚಾರಣೆಯಿಲ್ಲದೆ ಅಕ್ರಮ ಕೆಲಸದಲ್ಲಿ ತೊಡಗಿದವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಕಾನೂನು ಸಭೆಯ ಮುಂದಿದೆ. ಆದ್ದರಿಂದ ಆ ತೀರ್ಪು ಇದಕ್ಕೆ ಸರಿ ಹೊಂದುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕೆ ಸಂಬಂಧಪಟ್ಟ ತೀರ್ಪು ಅಲ್ಲದೆ ಇರಬಹುದು. ಆದರೆ ಪ್ರತಿಬಂಧಕವಾಗಿ ತೆಗೆದುಕೊಳ್ಳತಕ್ಕ ಕ್ರಮವಿದೆ, ಒಬ್ಬ ಮನುಷ್ಯನನ್ನು ಕೇಡಿ, ಸಂಶಯಾಸ್ಪದ ಎಂದು ಒಳಗೆ ಹಾಕತಕ್ಕ ದೃಷ್ಟಿಕೋನ ಇದೆ. ಆದ್ದರಿಂದ ಈ ಕಾನೂನು ಉಪಯೋಗ ಮಾಡುತ್ತಾರೆ. ಯಾವರೀತಿಯ ಅಪಾಯ ಇದರಲ್ಲಿದೆ ಎನ್ನುವುದಕ್ಕೋಸ್ಕರ ಹೇಳುತ್ತಿದ್ದೇನೆಯೋ ಹೊರತು ಅನ್ಯಥಾ ಅಲ್ಲ. ಅದಕ್ಕೆ ಸೀಮಿತವಾಗಿದೆ ಎಂದು ಹೇಳುತ್ತಾ ಇಲ್ಲ.

ಏಕೆಂದರೆ, ಈ ಕಾನೂನು ಪ್ರಕಾರ ಯಾರು ಇದಕ್ಕೆಲ್ಲಾ ಮೂಲಭೂತವಾಗಿ ಕಾರಣೀಭೂತ ರಾಗಿರುತ್ತಾರೋ ಅವರನ್ನು ಜೈಲಿಗೆ ಹಾಕುವುದಿಲ್ಲ. ಯಾರನ್ನು ಉಪಯೋಗ ಮಾಡಿಕೊಳ್ಳುತ್ತಾರೆ ಅವನನ್ನು ಮಾತ್ರ ಜೈಲಿಗೆ ಹಾಕತಕ್ಕ ಅವಸರ ಈ ಕಾನೂನುಗಳಿಂದ ಬರುತ್ತದೆ ಎನ್ನುವುದಕ್ಕೆ ಮಾತ್ರ ಇದನ್ನು ನಾನು ಹೇಳುತ್ತಾ ಇದ್ದೇನೆ. ಇಂತಹ ಜನರನ್ನು ಉತ್ಪತ್ತಿ ಮಾಡತಕ್ಕ ಶಕ್ತಿಗಳು ಯಾವುವು ಇವೆ ಅವನ್ನು ಹಿಡಿಯುವುದಕ್ಕೆ ಈ ಮಸೂದೆ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತದೆ? ಇವನು ಜೈಲಿಗೆ ಹೋದರೆ ಇಂತಹವರನ್ನು ಅಲ್ಲಿ ತಯಾರು ಮಾಡುತ್ತಾರೆ. ಏಕೆಂದರೆ ಬಡತನ ನಮ್ಮ ಸಮಾಜದಲ್ಲಿದೆ. ಅಂತಹವರನ್ನು ತಯಾರು ಮಾಡುವಂಥ, ಕೇಡಿಗಳನ್ನು ಉತ್ಪತ್ತಿ ಮಾಡುವಂಥ ವರ್ಕ್‌ಷಾಪ್ ಎಲ್ಲಿಯವರೆಗೆ ಇದೆ, ಅಲ್ಲಿಯವರೆಗೆ ನಿಮ್ಮ ಕಾನೂನಿನ ಕೈನ್ನು ಅವಲಂಬಿಸಲಿಕ್ಕೆ ಈ ಕಾನೂನಿನ ಪ್ರಕಾರ ನಿಮ್ಮ ತಯಾರಿ ಇದೆಯೆ? ಅದಕ್ಕೆ ಬದಲಾಗಿ ಬರೀಬಡವನನ್ನು ಸತಾಯಿಸಲಿಕ್ಕೆ, ಬಡವನನ್ನು ಒಳಗೆ ಹಾಕತಕ್ಕ ಪ್ರಯತ್ನ ಮಾತ್ರ ಮಾಡದಿರಿ. ಆದುದರಿಂದ ಈ ಕಾನೂನು ಬರೀ ಬಡವನ ಮೇಲೆ ಉಪಯೋಗ ಮಾಡತಕ್ಕ ಅಸ್ತ್ರವಾಗಬಹುದೇನೋ ಎಂಬ ಭಯ ಮತ್ತು ಶಂಕೆಯಿಂದ ಇವೊತ್ತು ಈ ಪ್ರಶ್ನೆಯನ್ನು ನಾನು ಎತ್ತುತ್ತಾ ಇದ್ದೇನೆ. ಟ್ರಾಜಡಿ ಆಫ್ ಇಲ್ಲಿಸಿಟ್ ಲಿಕ್ಕರ್—ಇದನ್ನೆಲ್ಲಾ ನಿಗ್ರಹ ಮಾಡಬಹುದು ಎಂದು ಹೇಳುವುದಕ್ಕೆ ಸೂಚನೆ ಕೊಟ್ಟಿದ್ದಾರೆ. It has been suggested in the Desai Commission of Inquiry report that provision should be made for the dentention of notorious hooch kings and bootleggers. ಬೂಟ್ ಲೆಗ್ಗರ್ಸ್‌ನ್ನು ಹಿಡಿಯಲಿಕ್ಕೆ ಈ ಕಾನೂನಿನಲ್ಲಿ ಅನುವು ಮಾಡಿಕೊಟ್ಟಿರಬಹುದು. ಆದರೆ ಬೂಟ್–ಕಿಂಗ್ಸ್ ಯಾರಿದ್ದಾರೆ ಅವರನ್ನು ಹಿಡಿಯುವುದಕ್ಕೆ ಪ್ರಥಮ ಪ್ರಾಶಸ್ತ್ಯ ಈ ಕಾನೂನಿನಲ್ಲಿ ಕೊಟ್ಟಿಲ್ಲ ಆದನ್ನು ಮಾಡಿ ಎಂದು ನಾನು ಕೇಳುತ್ತಾ ಇದ್ದೇನೆ. ಈ ಕಾನೂನಿನ ದೃಷ್ಟಿಯಿಂದ ಲಕ್ಷಾಂತರ ಬೂಟ್ ಲೆಗ್ಗರ್‌ನ್ನು ತಯಾರು ಮಾಡತಕ್ಕಂಥ ಮತ್ತು ಅವರು ಸಮಾಜದಲ್ಲಿ ಬೀಳತಕ್ಕಂಥ ಪ್ರಯತ್ನ ಈ ಕಾನೂನಿನಿಂದ ಆಗಬಾರದು. ಈಗ ಬೂಟ್ ಲೆಗ್ಗರ್‌ನ್ನು ಒಳಗೆ ಹಾಕಿದ ಕೂಡಲೇ ಮತ್ತೆ ೧೦ ಜನರನ್ನು ಅವನು ತಯಾರು ಮಾಡುತ್ತಾನೆ. ಆ ೧೦ ಜನರನ್ನು ೩ ತಿಂಗಳು ಒಳಗೆ ಕಳಿಸಿದರೆ ಮತ್ತೊಮ್ಮೆ ೧೦ ಜನ ತಯಾರಾಗುತ್ತಾರೆ. In a cycle, it will go on increasing. ಅವರನ್ನು ಮೂಲಭೂತವಾಗಿ ಹಿಡಿದು ಹಾಕತಕ್ಕ ಪ್ರಾಮಾಣಿಕವಾದಂಥ ಪ್ರಯತ್ನ, ಆ ಒಂದು ಕ್ರಿಯೆ ಈ ಮಸೂದೆಯನ್ನು ಮಂಡಿಸುವುದರಿಂದ ಆಗಲಿಲ್ಲ ಎಂಬ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ತಾವು ಇದರಲ್ಲಿ ಬೇರೆ ಸೂಚನೆ ಕೊಟ್ಟಿದ್ದೀರಿ. ಅದನ್ನೊಂದೂ ಅನುಷ್ಠಾನ ಮಾಡಲಿಲ್ಲ. ತಾವು ಕಾನೂನನ್ನು ಮಾಡುವಾಗ ಬೂಟ್‌ಲೆಗ್ಗರ್ಸ್‌ಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದೀರಿ. ಆದರೆ ಬೂಟ್ ಲೆಗ್ಗರ್‌ನ್ನು ತಯಾರು ಮಾಡತಕ್ಕಂಥ ಹೂಚ್ ಕಿಂಗ್ಸ್ ಏನಿದ್ದಾರೆ ಅಂತಹವರನ್ನು ನಿಗ್ರಹ ಮಾಡಲಿಕ್ಕೆ ಸಾಕಷ್ಟು ಪ್ರಯತ್ನ ಇದರಲ್ಲಿ ಮಾಡಲಿಲ್ಲ ಎಂದು ನಾನು ಹೇಳಲಿಕ್ಕೆ ಇಷ್ಟ ಪಡುತ್ತಾ ಇದ್ದೇನೆ. ಈ ಕಾನೂನನ್ನು ನಾನು ಸೂಕ್ಷ್ಮವಾಗಿ ನೋಡತಕ್ಕ ಸಂದರ್ಭದಲ್ಲಿ ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಇಂತಹ ಕಾನೂನುಗಳನ್ನು ಮಾಡಿದ್ದಾರೆ ಅದರ ಪ್ರಕಾರ ನಾವು ಮಾಡಿದ್ದೇವೆ ಎಂದು ಹೇಳಿದ್ದಾರೆ. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಯಾವರೀತಿ ಮಾಡಿದ್ದೇವೆ ಎಂದು ನೋಡಲು ಪ್ರಯತ್ನಿಸಿದೆ, ಪುಸ್ತಕ ಸಿಕ್ಕಲಿಲ್ಲ. ನಮ್ಮ ಸರ್ಕಾರದವರು ಅದನ್ನು ಇಂಪ್ರೂವ್‌ಮೆಂಟ್ ಮಾಡಿ ಮಾಡಿದ್ದಾರೋ ಏನೋ ಎಂದು ಮಾನ್ಯ ಗೃಹಸಚಿವರನ್ನು ಕೇಳಲಿಕ್ಕೆ ಪ್ರಯತ್ನ

ವಾಗಿದೆ, ಅದಕ್ಕೆ ಸಮರ್ಪಕವಾದಂಥ ಉತ್ತರವನ್ನೂ ಅವರು ಕೊಡಲಿಲ್ಲ. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಯಾವ ರೀತಿ ಕಾನೂನು ಮಾಡಿದ್ದಾರೆ ಎಂದು ನೋಡಲು ಪ್ರಯತ್ನ ಮಾಡಿದೆ ಅದು ಸಿಕ್ಕಿಲ್ಲ ತಾವು ಅದನ್ನು ಪರಿಶೀಲನೆಮಾಡಿ ಈ ಮಸೂದೆಯನ್ನು ಮಂಡನೆ ಮಾಡಿದ್ದೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಅದಕ್ಕೆ ಅನುಗುಣವಾಗಿ ತಾವು ಮಾಡಿದ್ದೀರೋ, ಅದಕ್ಕೆ ಸಂಪೂರ್ಣವಾಗಿ ಹೊಂದಾಣಿಕೆ ಮಾಡಿದ್ದೀರೋ, ಸ್ಥಳೀಯವಾಗಿ ಬದಲಾವಣೆ ಮಾಡಿಕೊಂಡು ಮಾಡಿದ್ದೀರೋ ಎನ್ನುವುದು ನಮಗೆ ಬೇಕಾಗಿದೆ.

ಈಗ ತಾವು ನಮೂದಿಸಿರುವುದು ಏನಿದೆ ಇದಕ್ಕೂ ನ್ಯಾಷನಲ್ ಸೆಕ್ಯೂರಿಟಿ ಆಕ್ಟಿಗೂ ಏನೂ ಬದಲಾವಣೆ ಇಲ್ಲ. ಬದಲಾವಣೆ ಎಷ್ಟು ಎಂದರೆ you have extended the scope of holding the people. ಹೆಚ್ಚು ಜನರು ಇದೇ ವ್ಯಾಪ್ತಿಯಲ್ಲಿ ಬರುವ ಹಾಗೆ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಆಯಿತು. ಇದು ರಾಜ್ಯಕ್ಕೆ ಅಡಾಪ್ಟ್ ಮಾಡಿದ್ದೀರಿ. ಅದು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಬಳಕೆ ಮಾಡಿಕೊಂಡಿದ್ದೀರಿ. ಈ ಸಂಬಂಧಪಟ್ಟ ಆಕ್ಟ್ ಆಯಿತು. ಶಬ್ದಗಳಲ್ಲಿ ಅದೇ ಶಬ್ದಗಳನ್ನು ಇಷ್ಟಪಡುತ್ತೇನೆ. ನ್ಯಾಷನಲ್ ಸದನದ ಗಮನಕ್ಕೆ ಒಂದು ವಿಚಾರವನ್ನು ನಾನು ಓದಿ ಹೇಳಲಿಕ್ಕೆ ಉಪಯೋಗ ಮಾಡಿಕೊಂಡಿದ್ದೀರಿ. ಸೆಕ್ಯೂರಿಟಿ ಆಕ್ಟ್‌ನಲ್ಲಿರತಕ್ಕ ಅದೇ ಶಬ್ದವನ್ನು ಪರಿಭಾಷೆಯಾಗಿ ಉಪಯೋಗ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸು ಹೊಸದಾಗಿ ಇಲ್ಲಿ ಯಾವುದೇ ಕಾನೂನು ತಾವು ಮಾಡಿಲ್ಲ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಈಗ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲಿ ಇರತಕ್ಕದ್ದನ್ನು ಓದಿ ಹೇಳುತ್ತೇನೆ.

"Power to make orders detaining certain persons.—The Central Government or the State Government may, (a) if satisfied with respect to any person acting in any manner with a view prejudicial to the Defence of India, Commissions of India etc. etc."

You have mentioned here.

"Power to make orders detaining certain persons:

The State Government may, if satisfied with respect to any bootlegger or drug offender or gambler etc."

There is not much difference between NSA & This Bill.

Clause-3 sub-class-2ನಲ್ಲಿ ಈ ರೀತಿ ಹೇಳಿದ್ದೀರಿ.

"If, having regard to the circumstances prevailing or likely to prevail in any area with the local limits of the jurisdiction."

Here also you have repeated the same thin- except the application of jurisdiction. ಕ್ಲಾಸ್ ೬ನ್ನು ನೋಡಿ, ಯಾವುದನ್ನು ನೋಡಿದರೂ ನ್ಯಾಷನಲ್ ಸೆಕ್ಯೂರಿಟಿ ಆಕ್ಟಿಗೂ ಇದಕ್ಕೂ ಏನೂ ವ್ಯತ್ಯಾಸ ಕಾಣುವುದಿಲ್ಲ. ಮ್ಯಾಕ್ಸಿಮಂ ಪಿರಿಯಡ್ ಆಫ್ ಡಿಟೆನ್ಷನ್‌ನಲ್ಲಿ ೧೦ ತಿಂಗಳು ಅವರಲ್ಲಿ ಇದೆ. ಇದರಲ್ಲಿ ೧೨ ತಿಂಗಳು ಇದೆ ಮ್ಯಾಕ್ಸಿಮಂ ಇದೆ ಅಷ್ಟೆ. ಬೇರೆ ವ್ಯತ್ಯಾಸ ಏನೂ ಕಾಣುವುದಿಲ್ಲ, ಮತ್ತೊಂದು after 5 days ಎಂದು ಇದೆ. Not latter than 10 days ಎಂದು ಇದೆ. ಇದರ ಪ್ರಕಾರ ಈ ರಿಪೋರ್ಟ್ ಕೊಡತಕ್ಕದ್ದು ೫ ಡೇಸ್, ಮ್ಯಾಕ್ಸಿಮಂ ೧೨ ಡೇಸ್ ಎಂದು ಇದೆ. ಬೇರೆ ಯಾವುದೂ ವ್ಯತ್ಯಾಸ ಇಲ್ಲ. ಅದ್ದರಿಂದ ಇದು ಮಿನಿ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈಗ ರಾಜ್ಯ ಸರ್ಕಾರದವರು ಇಂತಹ ಮಿನಿ ಸೆಕ್ಯೂರಿಟಿ ಆಕ್ಟ್ ತಗೆದುಕೊಂಡು ಬಂದು ದುರುಪಯೋಗವಾಗದಂತೆ ಅದನ್ನು ಜಾರಿ ಮಾಡುತ್ತೇವೆಂದು ವಚನ ಕೊಡಬೇಕಾಗಿದೆ. ಇಲ್ಲದೇ ಹೋದರೆ ಅದರಿಂದಾಗತಕ್ಕ ಅನಾಹುತಗಳಿಗೆ ತಾವು ಜವಾಬ್ದಾರಿಯಾಗುತ್ತೀರಾ? ಇದರಿಂದ ತಾವು ದೊಡ್ಡ ಜವಾಬ್ದಾರಿ ವಹಿಸಿಕೊಳ್ಳುತ್ತೀರಿ. ಇದನ್ನು ಯಾವ ರೀತಿ

ನಿರ್ವಹಿಸುತ್ತೀರಿ ಅದರ ಮೇಲೆ ನಿಮ್ಮ ಪ್ರಾಮಾಣಿಕತನಕ್ಕೆ ಇದು ಹೊಂದಿಕೊಂಡಿರುತ್ತದೆ. ಹಿಂದೆ ನ್ಯಾಷನಲ್ ಸೆಕ್ಯೂರಿಟಿ ಆ್ಯಕ್ಟ್ ಬಗ್ಗೆ ಸಾಕಷ್ಟು ಟೀಕೆ ಮಾಡಿದ ಜನ ಅಂದರೆ ತಮ್ಮ ಪಕ್ಷದ ಜನ ಅನೇಕ ಜನರು ಕಾಂಗ್ರೆಸ್‌ನಲ್ಲಿ ಇದ್ದವರು ಆ ಕಡೆ ಇದ್ದೀರಿ. It is a draconian law. ಇದರಿಂದ ಸಾಕಷ್ಟು ಅನಾನುಕೂಲವಾಗುತ್ತದೆ. ರಾಜಕೀಯ ದುರುಪಯೋಗವಾಗುತ್ತದೆ ಎಂದು ಟೀಕೆ ಮಾಡಿದ್ದೀರಿ. ಪಾಟೀಲ್‌ರವರು ಟೀಕೆ ಮಾಡಿದ್ದಾರೆ. ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ನಾಯಕರು ಟೀಕೆ ಮಾಡಿದ್ದಾರೆ. ಅಂದರೆ ಮಿನಿ ನ್ಯಾಷನಲ್ ಸೆಕ್ಯೂರಿಟಿ ಆ್ಯಕ್ಟ್ ತಾವು ಈಗ ಜಾರಿ ಮಾಡಲಿಕ್ಕೆ ಹೊರಟಿದ್ದೀರಿ. ನಾನು ಈಗ ಇದನ್ನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ತಾವು ಈ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ. ಸಮಾಜದಲ್ಲಿ ನೆಮ್ಮದಿಯ ರಕ್ಷಣೆ ಜವಾಬ್ದಾರಿ ಸರ್ಕಾರದ ಜವಾಬ್ದಾರಿಯೇ ಅಲ್ಲ. ನಮ್ಮ ಜವಾಬ್ದಾರಿಯೂ ಕೂಡ ಇದೆ. ಈ ಕಾನೂನನ್ನು ಜಾರಿ ಮಾಡಬೇಕು. ಅದಕ್ಕೆ ನಮಗೆ ಶಕ್ತಿ ಇಲ್ಲ ಎನ್ನುವ ಒಂದು ಗ್ರಹಿಕೆಯಿಂದ ಇದನ್ನು ತಂದರೆ ಅದಕ್ಕೆ ನಾವು ಅಡ್ಡ ಬರುವುದಿಲ್ಲ. ಆದರೆ ಇದನ್ನು ಜಾರಿ ಮಾಡಿದಾಗ ಆಗತಕ್ಕ ತೊಂದರೆ ಏನಿದೆ ಅದರ ಸಂಪೂರ್ಣ ಜವಾಬ್ದಾರಿಯನ್ನು ತಾವು ಹೊರಬೇಕಾಗುತ್ತದೆ. ಆ ಎಚ್ಚರಿಕೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಇದರಲ್ಲಿ ಸೇರಿಸಿರತಕ್ಕ ಕೆಲವು ಡೆಫನಿಷನ್ ಮತ್ತು ಪ್ರಾವಿಜನ್ ನೋಡಿದರೆ ಇದನ್ನು ದುರುಪಯೋಗ ಮಾಡತಕ್ಕ ಅನೇಕ ಪರಿಸ್ಥಿತಿ ಉದ್ಭವವಾಗಬಹುದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

In Definitions, 2 (a) (i), you have said thus:

"In the case of a bootlegger, when he is engaged, or is making preparation for engaging..."

ಯಾವುದೇ ಒಂದು ಕಾನೂನಿನಲ್ಲಿ ಶಬ್ದಗಳನ್ನು ಹಾಕಿದಾಗ, ಅದಕ್ಕೆ ಹೆಚ್ಚು ವಿಸ್ತಾರ ಕೊಟ್ಟಾಗ ಅದರಿಂದ ಹೆಚ್ಚು ತೊಂದರೆಯಾಗುತ್ತದೆಯೇ ಹೊರತು ಅನುಕೂಲವಾಗುವುದಿಲ್ಲ. ಅದನ್ನು ಈಗ ವಿಸ್ತರಿಸಬಿಟ್ಟಿದ್ದೀರಿ. ವಿಸ್ತರಿಸಿದಾಗ ವ್ಯಾಪಕ ಅರ್ಥ ಬರುತ್ತದೆ. ಅದರಿಂದ ತೊಂದರೆ ಬರುತ್ತದೆ. ಆದ್ದರಿಂದ, ಇದನ್ನು ತೆಗೆದುಹಾಕಬೇಕು. "or is making preparation for engaging..." ಇದನ್ನು ತೆಗೆದು ಹಾಕಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಇಲ್ಲದೇ ಇದ್ದರೆ ಈ ಕಾನೂನು ಅತಿರೇಕವಾಗಿ ಇದರಿಂದ ತೊಂದರೆ ಬರುತ್ತದೆ. You have a very very big net and in that net, you are going to drag the innocent people. ನಿರಪರಾಧಿ ಜನರನ್ನು ಈ ವ್ಯಾಪ್ತಿಯಲ್ಲಿ ಸೇರಿಸತಕ್ಕ ಪ್ರಯತ್ನ ನಡಿಯಬಹುದು. ಇನ್ನೊಂದು ವಿಚಾರ ಎಂದರೆ, ಇದರಲ್ಲಿ ಆ ಹೂಚ್ ಕಿಂಗ್‌ನ್ನು ಡಿಫನಿಷನ್‌ನಲ್ಲಿ ಬಿಟ್ಟಿದ್ದೀರಿ. ಹಾಗೆ ಮುಂದೆ ಬರತಕ್ಕದ್ದರಲ್ಲಿ ಎರಡೆರಡು ಸಾರಿ ಡಿಫನಿಷನ್ ಏತಕ್ಕೆ ಕೊಟ್ಟಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ಕಾನೂನನ್ನು ಮಾಡುವಾಗ ಎರಡೆರಡು ಸಾರಿ ಡಿಫನಿಷನ್ ಕೊಡತಕ್ಕ ಅಗತ್ಯ ಇಲ್ಲ. ಇನ್ನು ಸಬ್ ಕ್ಲಾಸ್ 2(ಎ) ನಲ್ಲಿ ಒಂದು ಡಿಫನಿಷನ್ ಇದೆ. ಇನ್ನೊಂದು ಅದೇ ರೀತಿ ಇದೆ. ಒಂದೇ ಡಿಫನಿಷನ್ ಕೊಟ್ಟು ಕಾನೂನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತಾ ಇರಲಿಲ್ಲವೇ ? ಆ ಪ್ರಶ್ನೆಯನ್ನು ಆಲೋಚನೆ ಮಾಡಬೇಕಾಗುತ್ತದೆ. ಇನ್ನು ಕ್ಲಾಸ್ 2 ಸಬ್ ಕ್ಲಾಸ್ (ಬಿ) ಇದರಲ್ಲಿ "bootlegger" means a person, who distils, manufactures, stores, transports, imports, exports, sells or distributes any liquor, ಎರಡು ಸಾರಿ ಕೊಟ್ಟಿದ್ದಾರೆ. or in contravention of any other law for the time being in force, or who knowingly expends or supplies any animal, vehicle, vessel or other conveyance or any other material whatsoever in furtherance or support of the doing of any of the above mentioned things by or through any other person, or who abets, in any other manner the doing of any such things ; ಇದರಿಂದ ಯಾರೋ ಹಣ ಕೊಟ್ಟರೆ, ಅವನು ನೇರವಾಗಿ ಹಣ ಕೊಡುವುದಕ್ಕೆ ಹೋಗುವುದಿಲ್ಲ, ಅವನನ್ನು ಹಿಡಿಯುವುದಕ್ಕೆ ಕ್ಲಾಸ್ (ಬಿ) ಪ್ರಕಾರ ಕೂಡ ಆಗುವುದಿಲ್ಲ. In the case of a drug-offender, when he is engaged, or is making

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ವೆಹಿಕಲ್ ಉಪಯೋಗಿಸುವುದಿಲ್ಲ, ನೀವೂ ಎರಡನೂ ಕೂಡ
preparations for engaging. ಡೆಫನೀಷನ್ ಪ್ರಕಾರ ಹೈಜಾಕಿಂಗ್ ಮಾಡಿದವರನ್ನು
ಡಿಫನಿಷನ್ನಲ್ಲಿ ತೆಗೆದುಕೊಂಡರೂ ಕೂಡ ಈ ಡೆಫನೀಷನ್ ಮಾಡಬೇಕಾಗುತ್ತದೆ. ಇದನ್ನು ಒಂದೇ
ಹಿಡಿಯುವುದಕ್ಕಾಗುವುದಿಲ್ಲ. ಇದನ್ನು ಕೂಡ ತಿದ್ದು ಪಡಿ ಮಾಡಬೇಕಾಗುತ್ತದೆ. ತರುವುದಕ್ಕೆ ಅನುಕೂಲ
ಡೆಫನೀಷನ್ನಲ್ಲಿ ತಾವು ಕೊಟ್ಟರೆ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ preparations for
ಆಗುತ್ತದೆಂದು ಸೂಚನೆ ಕೊಡುತ್ತೇನೆ. Again, making preparations ಇದರ
engaging. All slum people can be removed on this ground. ಕೆಲಸವಾಗುತ್ತಿದ್ದರೆ ಆ
ಪ್ರಕಾರ ಒಂದು ವರ್ಷದಲ್ಲಿ ಎಲ್ಲರನ್ನು ಹಿಡಿಯಬಹುದು; ಸ್ಲಂನಲ್ಲಿ ಇಂಥ ಕೆಲಸವಾಗುತ್ತಿದ್ದರೆ ಹೋಗಬೇಡಿ,
ಸ್ಲಂನಲ್ಲಿರತಕ್ಕ ಎಲ್ಲರನ್ನು ಹಿಡಿದು ಜೈಲಿಗೆ ಹಾಕಬಹುದು. ಇದನ್ನು ಮಾಡಲಿಕ್ಕೆ ಉದ್ಭವ
ಆದರಿಂದ ಬಹಳ ಅನ್ಯಾಯವಾಗುತ್ತದೆ. ಇದರ ಬಗ್ಗೆ ಒಂದು ಅರಾಜಕತೆಯನ್ನು ಎಂದು
ಮಾಡಿದಂತಾಗುತ್ತದೆ. ತಾವು ಇದು ಡೆಫನೀಷನ್ ಇಲ್ಲ, ಎಕ್ಸ್‌ಪ್ಲನೇಟರಿ ನೋಟ್ ಉಪಯೋಗಿಸ
ಹೇಳಬಹುದು. ಒಂದೇ ಡೆಫನೀಷನ್‌ನಗೆ ಕೆಲವೇ ಶಬ್ದಗಳನ್ನು ಪರಿಣಾಮಕಾರಿಯಾಗಿ ಬರುತ್ತದೆ. ಕೊನೆಗೆ
ಬಹುದು. ಹೆಚ್ಚು ಶಬ್ದಗಳನ್ನು ಕಾನೂನಿನಲ್ಲಿ ಹೇಳಿದರೆ, ಹೆಚ್ಚು ಅರ್ಥ ಅನುಕೂಲವಾಗುತ್ತದೆ.
ಕಾನೂನನ್ನು ಅರ್ಥೈಸುವಾಗ ನಿಜವಾದಂಥ ಅಪರಾಧಿತರು ತಪ್ಪಿಸಿಕೊಳ್ಳುವುದಕ್ಕೆ principle or without
Whether you have understood the substance of ಕತ್ತಲಿನಲ್ಲಿ ತಾವು ಏನೋ
understanding you are harping in the dark. ಹೇಳಬೇಕಾಗುತ್ತದೆ. ಇದರ
ಹುಡುಕಾಡಲಿಕ್ಕೆ ಪ್ರಯತ್ನ ಮಾಡಿದ್ದೀರಿ ಎಂದು ಬಹಳ ವಿಷಾದದಿಂದ ಅಸ್ಪಷ್ಟವಾದ ವಾಕ್ಯಗಳಿಂದ
ಬಗ್ಗೆ ಸ್ಪಷ್ಟವಾಗಿ ಹೇಳಬೇಕು; ಅಸ್ಪಷ್ಟವಾದ ಶಬ್ದಗಳಿಂದ, ನನಗೆ ಅರ್ಥವಾಗುತ್ತಿಲ್ಲ. ಕ್ಲಾಸ್
ಕಾನೂನನ್ನು ಎತ್ತಿಕೊಂಡು ಹೋಗುತ್ತೀರಿ ಎನ್ನುವುದು when he is engaged, or
(2) ಸಬ್ ಕ್ಲಾಸ್ (3) ರಲ್ಲಿ In the case of a Gambler ಗ್ಯಾಂಬ್ಲರ್ ಶಬ್ದ ಎಲ್ಲಿದೆ ?
is making preparations for engaging.

12-30 P.M.

"Gambler" means a person, who commits or abets the commission of any offence punishable under chapter VII of the Karnataka Police Act, 1962."

ಕರ್ನಾಟಕ ಪೊಲೀಸ್ ಆಕ್ಟ್ ನಲ್ಲಿ ಹೇಳಿದೆ. ಇದನ್ನು ಅಮೆಂಡ್‌ಮೆಂಟ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಗ್ಯಾಂಬ್ಲಿಂಗ್ ಶಬ್ದ ಇಲ್ಲ.
ಚಾಪ್ಟರ್ (2) ರಲ್ಲಿ ಗೇಮಿಂಗ್ ಶಬ್ದ ಇದೆ. ಗಮನ ಕೊಡಬೇಕೆಂದು ಹೇಳುತ್ತೇನೆ. Opening of
ಇದರ ಕಡೆ ಸರ್ಕಾರದವರು common gaming house
certain forms of gaming game-keeping, ಸಾಮಾನ್ಯವಾಗಿ ಆಡು ಭಾಷೆಯಲ್ಲಿ
ಬಂದಿದೆ. ಆದುದರಿಂದ ಇದರ ಅರ್ಥ ಬರುವುದಿಲ್ಲ. ಕಾನೂನಿನ ಪರಿಭಾಷೆಯಲ್ಲಿ ಅದು ಇಲ್ಲ.
ಗ್ಯಾಂಬ್ಲರ್ ಎನ್ನುವ ಪದವನ್ನು ಬಳಸುತ್ತೇವೆ. with what is defined in
Technical definition should be inconsonance ಆದ್ದರಿಂದ ಸ್ವಲ್ಪ ತೊಂದರೆ
a substantive Act, Karnataka Police Act. who is a gambler and what is
ಬರಬಹುದು. Again it is explained as to ಅರ್ಥ ಒದಗಿಸುವ ಸಂದರ್ಭ ಬರಬಹುದು.
gambling. ನಾಳೆ ಹೈಕೋರ್ಟಿನಲ್ಲಿ ಪ್ರತಿ ಶಬ್ದಕ್ಕೂ ಹೈಕೋರ್ಟಿನ ಕಟಕಟೆಗೆ ಹೋಗುವುದು
ನಾವು ಕಾನೂನು ಮಾಡತಕ್ಕ ಜನ. ಎಲ್ಲ ಪರಿಭಾಷೆಗಳೂ ಬಗ್ಗೆ ಹೇಳಿದ್ದೀರಿ. ಇದು ಕೂಡ
ಬೇರೆ. ಮತ್ತೆ ಡ್ರಗ್ ಅಫೆಂಡರ್ ಮತ್ತು ಡ್ರಗ್ ರಾಕೆಟೀರಿಂಗ್
ಸಬ್ ಕ್ಲಾಸಿನಲ್ಲಿ ಬರುವುದಿಲ್ಲ.

"Gambler" means a person, who commits or abets the commission of any offence punishable under Chapter VII of the Karnataka Police Act, 1962 (Karnataka Act 4 of 1984) including an offence of gambling reletable to "matka" and punishable under the said Chapter."

ಇದು ಬರೀ ಮಟ್ಟಕ್ಕೆ ಸೀಮಿತವಾಗಿಲ್ಲ.
ಹಾಕಿದರೆ ಅವರನ್ನು ಹಿಡಿಯಬಹುದು. ಬೇರೆ ಬೇರೆ ಹೆಸರುಗಳು ಇವೆ.
house may not be there in the place of gamling. A person who is maintaining a Gamling ಎಲ್ಲಾ ಹೆಸರುಗಳನ್ನು
operating from some other place. He may be
ಮಟ್ಕ ಶಬ್ದ ಬಿಟ್ಟು ಅವರು ಬೇರೆ ಶಬ್ದಗಳನ್ನು ಹಾಕುತ್ತಾರೆ. ಅಂಥವರನ್ನು ಈ ಪರಿಭಾಷೆಯಲ್ಲಿ ಅಗು ಬೇರೆ ಪರಿಭಾಷೆಯಲ್ಲಿರತಕ್ಕ ಶಬ್ದಗಳನ್ನು ಸೇರಿಸಿ
ವುದಿಲ್ಲ. The word 'Gambling' is not used in the Karnataka Police Act.
Even in Indian Penal Code the word 'gambling' has not been used.
ತಾವು ಹೇಳಿದ್ದುದನ್ನು ಯಾವ ಪರಿಭಾಷೆಯಲ್ಲಿ ಉಪಯೋಗ ಮಾಡಿದ್ದೀರಿ.
ಉಪಯೋಗ ಮಾಡಿದರೆ ಅನುಕೂಲವಾಗುತ್ತದೆ. ಇಂಡಿಯನ್ ಪೀನಲ್ ಕೋಡಿನಲ್ಲಿಯೂ ಕೂಡ ಅದನ್ನೇ ಕಾನೂನಿನಲ್ಲಿ
ಗ್ಯಾಂಬ್ಲಿಂಗ್ ಎನ್ನುವ ಪದವನ್ನು ಉಪಯೋಗ ಮಾಡಿಲ್ಲ...

ಶ್ರೀ ಎ. ಲಕ್ಷ್ಮೀಸಾಗರ್ .— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ವೀರಪ್ಪ ಮೊಯ್ಲಿಯವರು ವಕೀಲರು. ಕಾನೂನಿನ ಭಾಷೆಯನ್ನು ವಿಮರ್ಶೆ ಮಾಡುವಾಗ ಯಾವರೀತಿಯಲ್ಲಿ ವಿಮರ್ಶೆ ಮಾಡ ಬೇಕೆಂಬ ಬಗ್ಗೆ ಶಬ್ದಕೋಶಕ್ಕೆ, ಶಬ್ದಗಳಿಗೆ ಯಾವರೀತಿ ಅರ್ಥೈಸಬೇಕೆಂಬ ಬಗ್ಗೆ ಬೇರೆ ಬೇರೆ ಕಾನೂನುಗಳು ಇವೆ. ಇದಕ್ಕಾಗಿಯೇ ಇಂಟರ್ ಪ್ರಿಟೇಶನ್ ಆಫ್ ಸ್ಟ್ಯಾಟ್ಯೂಸ್ ಇದೆ

ಶ್ರೀ ಎಂ ವೀರಪ್ಪಮೊಯ್ಲಿ .— ಅದು ನನಗೂ ಗೊತ್ತಿದೆ ...

ಶ್ರೀ ಎ. ಲಕ್ಷ್ಮೀಸಾಗರ್ .— ತಾವು ನಾನು ಹೇಳುವುದನ್ನು ಲಾಲಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ವಾದವನ್ನು ತಾವು ಲಾಲಿಸಿದರೆ, ತಮ್ಮ ವಾದಕ್ಕೆ ಸ್ಫೂರ್ತಿ ಮತ್ತು ವಿಶೇಷತೆ ಬರುತ್ತದೆ. ಸಪ್ರೆಷನ್ ಆಫ್ ಇಮ್ಮಾರಲ್ ಟ್ರಾಫಿಕ್ ಇನ್ ವುಮೆನ್ ಅಂಡ್ ಗರ್ಲ್ಸ್ ಆಕ್ಟ್ ಇದೆ ಸಪ್ರೆಷನ್ ಆಫ್ ಕರಪ್ಷನ್ ಆಕ್ಟ್ ಇದೆ ಅದನ್ನು ನೋಡಿದರೆ ಕೆಲವು ಶಬ್ದಗಳ ಬಗ್ಗೆ ಡೆಫನೇಷನ್ ಕೊಟ್ಟಿದ್ದಾರೆ. ಹಿಂದೆಲ್ಲಾ ಬೇರೆಬೇರೆ ಕೇಸುಗಳಿಗೆ ರೆಫರೆನ್ಸ್ ಕೊಟ್ಟಿದ್ದಾರೆ. ಆ ರೀತಿ ಏತಕ್ಕೆ ಮಾಡಿದರು ಅಂದರೆ ಕೆಲವು ಶಬ್ದಗಳು ಬಳಕೆಯಲ್ಲಿ ಬಂದು ಕೋರ್ಟುಗಳಿಗೆ ಕೇಸುಗಳು ಹೋಗಿ, ಅದರ ಅರ್ಥವ್ಯಾಪ್ತಿಯನ್ನು ಎಲ್ಲಿಯವರೆಗೆ ತೆಗದುಕೊಂಡು ಹೋಗಬಹುದು. ಹೇಗೆ ತೆಗೆದುಕೊಂಡು ಹೋಗಬಹುದು ಕಾನೂನಿನ ಮೂಲ ಅಭಿಪ್ರಾಯ ಏನು? ಇಲ್ಲಿ ನಡೆದಿರತಕ್ಕ ಕೃತ್ಯದ ವಿಚಾರ ಏನು ? ಸಮಗ್ರವಾಗಿ ಯೋಚನೆಮಾಡಿ ತೀರ್ಮಾನ ಕೊಡುತ್ತಾರೆ. ನಾವು ಇದನ್ನು ಬಹಳ ಎಚ್ಚರಿಕೆಯಿಂದ ಮಾಡಿ ದ್ದೇವೆಂದು ಮಾನ್ಯ ವೀರಪ್ಪಮೊಯ್ಲಿಯವರಿಗೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇದನ್ನು ಜಾರಿಗೆ ತರಬೇಕೆಂದು ಇಚ್ಛೆಪಟ್ಟಾಗ, ಸಾಕಷ್ಟು ಲೇಖನಗಳು ಇದರ ಪರವಾಗಿ ವಿರುದ್ಧವಾಗಿ ಬಂದವು. ಇದರ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಕೂಡಾ ಏರ್ಪಾಡು ಮಾಡಲಾಗಿತ್ತು. ಅಂದಿನ ಸಭೆಗೆ ಮಾನ್ಯ ವಿದ್ಯಾಮಂತ್ರಿಗಳಾಗಿದ್ದ ರಾಚಯ್ಯನವರನ್ನು ಕರೆದಿದ್ದೆವು, ಅವರು ಬಂದಿದ್ದರೋ ಇಲ್ಲವೋ ಗೊತ್ತಿಲ್ಲ. ನಾನು ಮಾತ್ರ ಇದ್ದೆ. ಸಾರ್ವಜನಿಕರ ನಂಬಿಕೆಯನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಅದನ್ನು ಮಾಡಲಾಗಿತ್ತು. ಮಾಡಿದ ಕಾನೂನುಗಳೆಲ್ಲಾ ದೋಷರಹಿತವಾಗಿದೆ ಎಂದು ನಾನು ಹೇಳುವುದಿಲ್ಲ. ಮನುಷ್ಯ ಅಪೂರ್ಣವಾಗಿರುವಾಗ ಆ ಮನುಷ್ಯ ಮಾಡತಕ್ಕ ಕೆಲಸ ಅಪೂರ್ಣವಾಗುತ್ತದೆ ಎನ್ನತಕ್ಕ ವಾದವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅನುಭವದ ಹಿನ್ನೆಲೆಯಲ್ಲಿ ತಿಳುವಳಿಕೆಯ ಹಿನ್ನೆಲೆಯಲ್ಲಿ ಎಷ್ಟು ಪೂರ್ಣತೆಯನ್ನು ಕಡಿಮೆ ಮಾಡಬಹುದೋ ಅಷ್ಟನ್ನು ಮಾಡಲು ಪ್ರಯತ್ನಮಾಡಿರತಕ್ಕ ಒಂದು ವಿಧೇಯಕ ಇದು. ಅದರ ಮೇಲೆ ತೀರ್ಮಾನ ಕೊಡುವವರು ಅಲ್ಲಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ .— ಸನ್ಮಾನ್ಯ ಕಾನೂನು ಸಚಿವರು ಎಲ್ಲವನ್ನು ಹೈಕೋರ್ಟಿಗೆ ಬಿಟ್ಟು ಬಿಡಿ ಎಂದರೆ, ನಾವು ಕಾನೂನು ಮಾಡತಕ್ಕ ಜನ ಎನ್ನುವುದನ್ನು ಅವರು ಮರೆಯಬಾರದು ಎಲ್ಲವನ್ನು ಬಿಡೋಣವೇ ? High Court will have to assume the role of law makers also...ನಾವು ಕಾನೂನನ್ನು ಮಾಡತಕ್ಕಜನ. ಕಾನೂನನ್ನು ಮಾಡತಕ್ಕ ಜವಾಬ್ದಾರಿ ನಮ್ಮ ಮೇಲೆ ಇದೆ ಹೈಕೋರ್ಟ್ ಇಂಟರ್‌ಪ್ರಿಟೇಶನ್ ಕೊಡುತ್ತದೆಂದು ನಾವು ಈರೀತಿ ಮಾಡಿದರೆ ನಮ್ಮ ಕರ್ತವ್ಯ ವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಸ್ಪಷ್ಟವಾಗಿ ಕಾನೂನನ್ನು ನಿರೂಪಿಸಬೇಕು. ಹೈಕೋರ್ಟಿನಲ್ಲಿ ಇಂಟರ್‌ಪ್ರಿಟೇಷನ್ ಆಗುತ್ತದೆಂದು ಅಸ್ಪಷ್ಟವಾದ ಕಾನೂನನ್ನು ಕೊಟ್ಟರೆ ನಮ್ಮ ವಿಷಯದಲ್ಲಿ ಜನ ಪ್ರಶ್ನೆ ಮಾಡುತ್ತಾರೆ. ಸಾರ್ವಜನಿಕರು ಯಾವ ಕಾನೂನು ಮಾಡಿದ್ದೀರಿಯೆಂದು

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ನಾವು ಎಲ್ಲವನ್ನೂ ತಿಳಿದಿದ್ದೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಈ ದಿಸೆಯಲ್ಲಿ ಮಾಡಿದರೆ, ಲೋಪದೋಷಗಳು ಇರಲಿಕ್ಕೆ ಸಾಧ್ಯವಿಲ್ಲ. ನಾವು ಈ ಆಕ್ಟನ್ನು ಮಾಡುವಾಗ ಹೈಕೋರ್ಟ್ ಜಡ್ಜ್‌ಮೆಂಟ್‌ಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ನೋಡಿ ಕೊಂಡು ಮಾಡಿದ್ದೇವೆಂದು ನಮ್ಮ ಕಾನೂನು ಸಚಿವರು ನಮ್ಮನ್ನು ಬಾಯಿಮುಚ್ಚಿ ಕೂರಿಸುವಂತಹ ಕೆಲಸವನ್ನು ಮಾಡಲಿಕ್ಕೆ ಪ್ರಯತ್ನ ಪಡಬಾರದು. ಅದು ಸಾಧ್ಯವಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. — ಬಾಯಿಮುಚ್ಚಿಸುವಂತಹ ಪ್ರಯತ್ನವನ್ನು ಮಾಡಲಿಕ್ಕೆ ನಾನು ಪ್ರಯತ್ನ ಮಾಡಲಿಲ್ಲ. ಇದು ವಿಧಾನಸಭೆ, ನಿಮಗೆ ಸಹಾಯಕವಾಗಲಿ ಎಂದು ನಾನು ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. — ನೀವು ಕಿವಿಯನ್ನು ಮುಚ್ಚಿಕೊಂಡರೆ ನಾವು ಬಾಯಿಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್. — ಹಿಂದೆ ನ್ಯಾಷನಲ್ ಸೆಕ್ಯುರಿಟಿ ಆಕ್ಟನ್ನು ನಾವು ಟೀಕೆ ಮಾಡಿದ್ದೇವೆ ಅದು ನಿಜ. ಯಾವುದೇ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಬರಬಾರದು. ನೀವು ನ್ಯಾಷನಲ್ ಸೆಕ್ಯುರಿಟಿ ಆಕ್ಟನ್ನು ಒಪ್ಪಿದ ಮೇಲೆ ಈ ಕಾನೂನನ್ನು ಒಪ್ಪಬೇಕಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ. — ನಾವು ಈ ಕಾನೂನನ್ನು ಒಪ್ಪಿ ಮಾತನಾಡುತ್ತಿದ್ದೇವೆ. ನೀವು ಈ ಕಾನೂನನ್ನು ನಾವು ಒಪ್ಪಲಿಲ್ಲವೆಂದು ತಿಳಿದುಕೊಳ್ಳಬಾರದು. ಉದ್ದೇಶ ತತ್ವ ಒಳ್ಳೆಯದಿರಬಹುದು. ಈ ಕಾನೂನಿನ ವ್ಯಾಪ್ತಿ ಯಾವರೀತಿ ಹೋಗುತ್ತಿದೆ ಎನ್ನುವುದನ್ನು ಮಾತ್ರ ಹೇಳುತ್ತಿದ್ದೇನೆ. ಸಮಾಜದಲ್ಲಿ ಮುಗ್ಧರನ್ನು ಬಡ ನಿರಪರಾಧಿಗಳನ್ನು ಯಾವರೀತಿ ಈ ವ್ಯಾಪ್ತಿಯಲ್ಲಿ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಹೇಳುತ್ತಿದ್ದೇನೆ. ಈ ಕಾನೂನಿನ ಉದ್ದೇಶ ಒಳ್ಳೆಯದಲ್ಲವೆಂದು ನಾನು ಹೇಳುತ್ತಿಲ್ಲ. ಸಮಾಜದಲ್ಲಿ ನೆಮ್ಮದಿಯನ್ನು ಕಾಪಾಡುವುದಕ್ಕೆ ಇಂತಹ ಕಾನೂನನ್ನು ತರಬೇಕು. ಇದರ ಬಗ್ಗೆ ಹೊಸ ಆಲೋಚನೆಯನ್ನು ಹುಟ್ಟಿಸಬೇಕಾಗಿತ್ತು. ಈ ಕಾನೂನಿನಲ್ಲಿ ಸಾಕಷ್ಟು ಲೋಪದೋಷಗಳಿವೆ. ನಾವು ಏನೇನು ಸೂಚನೆ, ಸಲಹೆಗಳನ್ನು ಕೊಡುತ್ತಿದ್ದೇವೆ ದಯಮಾಡಿ. ಅದರ ಬಗ್ಗೆ ಆಲೋಚನೆ ಮಾಡಿ. ಇದು ಆಲೋಚನೆ ಮಾಡತಕ್ಕ ವಿಚಾರ, ಗೂಂಡಾ ಪ್ರಸಂಗ ಬಂದಾಗ.

> "Goonda means a person who either by himself or as a member of or leader of a gang, habitually commits or attempts to commit or abets the commission of offences punishable under Chapter XVI..."

ಇದರ ವ್ಯಾಪ್ತಿ ಬಹಳ ಕಷ್ಟವಾಗಬಹುದು. ಎಲ್ಲರನ್ನೂ ಗೂಂಡಾ ಎಂದು ಪೋಲೀಸರು ವರದಿ ಕೊಟ್ಟಾಗ ಕಷ್ಟವಾಗುತ್ತದೆ. He must have been punished. He must have been bond over under the CRPC ಅದನ್ನು ಇದರಲ್ಲಿ ಸ್ಪಷ್ಟೀಕರಣಗೊಳಿಸಿಲ್ಲ. ಯಾರನ್ನಾದರೂ ಕೂಡ ಪೋಲೀಸ್ ಅಧಿಕಾರಿಗಳು ಗೂಂಡಾಯೆಂದು ಮಾಡಬಹುದು. ಗೂಂಡಾ ಅಲ್ಲದೆ ಇರತಕ್ಕವರನ್ನು ಕೂಡ ಈ ಕಾನೂನಿನಿಂದ ಗೂಂಡಾ ಎಂದು ಹೇಳಬಹುದು. ಅಂತಹ ಒಂದು ದೊಡ್ಡ ವ್ಯಾಪ್ತಿಯನ್ನು ಇದರಲ್ಲಿ ಇಟ್ಟಿದ್ದೀರಿ. ಐ.ಪಿ.ಸಿ. ಆಕ್ಟ್ ಪ್ರಕಾರ ಗೂಂಡಾಗಳು ಯಾರೆಂಬುದನ್ನು ಕಂಡುಕೊಳ್ಳಬಹುದು. What ever is punishable under IPC. Whoever has been punished under the various chapters IPC and if he continues to commit such offences ಇಂತಹವನನ್ನು ಇವರು ಗೂಂಡಾಯೆಂದು ಮಾಡಿದರೆ ಆ ಪ್ರಶ್ನೆ ಪ್ರತ್ಯೇಕ. When he becomes eligible to be punished under the various chapters of IPC then he becomes eligible to be datained. ಎಂದು ಹೇಳತಕ್ಕ ಯಾವ ಮಾತು ಇದೆ ಆದರಿಂದ ಸಾಕಷ್ಟು ಅನಾನುಕೂಲಗಳು ಆಗುತ್ತವೆ. ಅದನ್ನು ತಾವು ಸ್ಪಷ್ಟೀಕರಣಗೊಳಿಸಬೇಕು. Already once or twice he must have been convicted..

ಶ್ರೀ ಬಿ. ರಾಚಯ್ಯ. — Habitueally ಎನ್ನುವ ಪದವನ್ನು ಹಾಕಿದ್ದೇವೆ.

SRI M. VEERAPPA MOILY. — 'Habitual' ಎಂದು ಹೇಳಿದರೆ Again we come back to the decision of Justice V. R. Krishna Iyer. Even a man

ಎಂ. ಶಶಿಕಾಂತ
ಪ್ರಧಾನ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

who has not been convicted can also be drawn under Section 116 of CRPC. Even a person who has not been convicted will be bound over under security proceedings to the Cr.P.C. 119, 'habitual' ಎನ್ನುವ ಪದವನ್ನು you have imported here for this purpose ಆದರಿಂದ ಸಾಕಷ್ಟು ತೊಂದರೆ ಯಾಗುತ್ತದೆ, ಸಾಕಷ್ಟು ದುರುಪಯೋಗವಾಗುತ್ತದೆ ಎನ್ನುವ ನನ್ನ ಶಂಕೆಗೆ ಸಾಕಷ್ಟು ಆಧಾರಗಳಿವೆ, ಅದನ್ನು ತಾವು ಸ್ಪಷ್ಟಗೊಳಿಸಬೇಕು. Atleast he must have been punished under the various Sections of the IPC once or twice, then he becomes 'habitual' ಅದನ್ನೇ ತಾವು ಸ್ಪಷ್ಟೀಕರಣಗೊಳಿಸಬೇಕಾಗುತ್ತದೆ. "Immoral traffic offender means a person who commits or abets the commission of any offence under the Suppression of Immoral Traffic in Women and Girls Act, 1956," ಶಿಕ್ಷೆ ಆದವರನ್ನು ಪುನಃ If they continue to commit such offence ಹಿಡಿಯತಕ್ಕದ್ದನ್ನು ತಾವು ಮಾಡಬೇಕು. ಇದರಲ್ಲಿ ಏನಾಗುತ್ತದೆಂದರೆ 'ಅಬೆಟಿಂಗ್' ತಮಗೆ ಗೊತ್ತಿದೆ. ಇದರ ಬಗ್ಗೆ ಕಾನೂನು ಸಚಿವರು ಹೇಳಬೇಕಾಗುತ್ತದೆ. an abettor always becomes a subsidiary. He is not that important as a person who actually commits trafficking. ಪ್ರಾಸ್ಟಿಟ್ಯೂಟ್ ಡೆನ್‌ರನ್ ಅಂಥವರನ್ನು ಹಿಡಿಯತಕ್ಕದ್ದಕ್ಕೆ ನೀವು ಇಲ್ಲಿ ಯಾವರೆಗೆ ಹೋಗಿಲ್ಲ some person who is not the main person i.e., the secondary man will be help ಸನ್ಮಾನ್ಯ ಜೆ. ಎಚ್. ಪಟೇಲರು ವಕೀಲರೋ ಏನೋ ನನಗೆ ಗೊತ್ತಿಲ್ಲ. a man who abets will not become principal offender. As a criminal lawyer I may tell you that a man who abets will not be a principal offerder. Many time abetment punishment. ಅದು ಆಗುವುದು ಯಾವಾಗಲೂ ಕಡಿಮೆ. Section 340 holds good. In Practice, man who abets will always get a lesser punishment. This is the practice. Mr. Lakshmisagar will join with me in this behalf ನಾನು ಹೇಳುವುದು, ಯಾರು ಕೃತ್ಯಗಳ ಹಿಂದೆ ಇದ್ದಾರೆ ಅವರು Under this Act, they are the principle offenders. Many times the offenders become victims of the circumstances. ಇದರ ಹಿಂದೆ ಇರತಕ್ಕವರು ಯಾರು ಇದನ್ನು ಯಾರು ಮಾಡುತ್ತಾರೆ, ಅಂತಹ ಪ್ರಮುಖ ವ್ಯಕ್ತಿಗಳನ್ನು ಹಿಡಿಯುತಕ್ಕ ಪ್ರಯತ್ನವನ್ನು ತಾವು ಏನಾದರೂ ಮಾಡಿದ್ದರೆ You must add it in the definition. ಅದನ್ನು ಯಾರು ಮಾಡುತ್ತಿದ್ದಾರೆಂದು ಕಂಡುಹಿಡಿಯುತ್ತೀರೋ ! You have to handle them first. Otherwise, those who are engaged should be held.

ಶ್ರೀ ಜೆ. ಹೆಚ್. ಪಟೇಲ್.—ನೀವು ಹೇಳುತ್ತಿರುವುದು, ಈ ಸಣ್ಣ ಪುಟ್ಟ ಅಪರಾಧಗಳನ್ನು ಮಾಡತಕ್ಕವರ ಹಿಂದೆ ಒಂದು ಶಕ್ತಿ ಇದೆ, ಕಾಣದ ಶಕ್ತಿ ಇದೆ. ಅಂಥವರನ್ನು ಅಪರಾಧಿಗಳಾಗಿ ಮಾಡಬೇಕೆಂದು ಹೇಳುತ್ತಿದ್ದೀರಾ ಅಥವಾ ಹೇಗೆ ? ಯಾವುದನ್ನೂ ಸರಿಯಾಗಿ ಹೇಳಿ ?

SRI M. VEERAPPA MOILY.—"Man who is on the spot committing or abetting crime" ಅದನ್ನು ಪತ್ತೆ ಮಾಡಬೇಕಾದರೆ ಈ ಕಾನೂನು ಬೇಕಾಗಿಲ್ಲ. ಸನ್ಮಾನ್ಯ ಜೆ. ಹೆಚ್. ಪಟೇಲ್‌ರವರೇ, ನಿಮ್ಮ ಉದ್ದೇಶ ಏನೆಂದರೆ, ಇದರ ಹಿಂದೆ ಯಾವ ಶಕ್ತಿ ಇದೆ Who are principal culprits? ಅವರನ್ನು ಹಿಡಿಯಲಿಕ್ಕೆ ನಿಮ್ಮಲ್ಲಿ ಇರತಕ್ಕ ಕಾನೂನಿನಿಂದ ಸಾಧ್ಯವಿಲ್ಲ. ನೀವು ಆ ಉದ್ದೇಶದಿಂದ ಕಾನೂನನ್ನು ತಂದಿದ್ದೀರಿ. ಸ್ಮಗ್ಲರ್ಸ್‌ಗಳನ್ನು ಹಿಡಿಯಲಿಕ್ಕೆ ತಾವು ಕಾನೂನನ್ನು ತಂದಿಲ್ಲ. Persons who are engaged in gambling ; persons who are committing offence. ಅವರನ್ನು ಹಿಡಿಯಲಿಕ್ಕೆ ಶಿಕ್ಷಿಸಲಿಕ್ಕೆ ಸಾಕಷ್ಟು ಕಾನೂನು ಇದೆ. ಅದಕ್ಕೆ ತಾವು ವಿಶೇಷವಾದ ಸ್ಪೆಷಲ್ ಕಾನೂನನ್ನು ತರಬೇಕಾಗಿಲ್ಲ. I think I have made myself clear on the point. ನಾನು ಅದಕ್ಕೆ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿದರೆ ಅದರಿಂದ ಸ್ಪಷ್ಟವಾದ ಸ್ವರೂಪ ಬರುತ್ತದೆಂದು ಹೇಳುತ್ತಿದ್ದೇನೆ. ಹಾಗೆ ನೀವು ಮಾಡದೇ ಹೋದರೆ ಏನೂ ಸಾರ್ಥಕವಾಗುವುದಿಲ್ಲ. ನೀವು ಯಾರಿಗೆ ಕಾನೂನನ್ನು ತರುತ್ತಿದ್ದೀರಿ ? It is only a repetitive

law, a duplicate law; it is already there to punish all these offenders. ಅದಕ್ಕಿಂತ ಹೆಚ್ಚಿನ ಬಲವಾದ ಒಂದು ಕ್ರಮ ಇದೆ. ಅದನ್ನು ಹಿಡಿಯುವುದಕ್ಕೆ ಈ ಕಾನೂನಿನಲ್ಲಿ ಬರುವುದಿಲ್ಲ. I am making it very clear. ಇದರಿಂದ ಹೆಚ್ಚು ಅನಾನುಕೂಲತೆ ಬಡವರಿಗೆ ಬರುತ್ತದೆಯೇ ಹೊರತು ಅನುಕೂಲ ಆಗುವುದಿಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ ಒಮ್ಮೆಲೇ ಇದನ್ನು ಪಾಸ್ ಮಾಡಿದ್ದೀವೆಂದು ಹೇಳಿದ ಮೇಲೆ ಜನಸಾಮಾನ್ಯರು ತಪ್ಪು ತಿಳಿದುಕೊಳ್ಳುತ್ತಾರೆ. ನಿಮ್ಮ ಉದ್ದೇಶವನ್ನು Having understood your objective we have now understood how you are going to implement ! You are going to fail miserbaly ಇದರ ಭವಿಷ್ಯ ಇದು ಎಂದು ತಿಳಿದುಕೊಳ್ಳಿ. ಇದರಿಂದ ಯಾರಿಗೂ ಪರಿಣಾಮಕಾರಿಯಾದ ಪ್ರಯೋಜನ ಆಗುವುದಿಲ್ಲ. ಸಾಕಷ್ಟು ಬಡವರಿಗೆ ಅನಾನುಕೂಲತೆ ತೊಂದರೆ ಇದರಿಂದ ಆಗುತ್ತದೆ. ಗೂಂಡಾಗಳು ಜನರನ್ನು ಶಿಕ್ಷಿಸುವಂತಹ ಪಾಪದ ಕೆಲಸವನ್ನು ಈ ಕಾನೂನಿನಲ್ಲಿ ಉಪಯೋಗ ಮಾಡಿದ್ದೀರಿ. Please ತಾವು understand and appreciate this. ಇದನ್ನು ನೀವು ಆಲೋಚನೆ ಮಾಡಿಕೊಳ್ಳಿ. ಕೊಳಚೆ ಪ್ರದೇಶದ ಬಗ್ಗೆ ಒಂದು ಕ್ಲಾಸನ್ನು ತಂದಿದ್ದೀರಿ. You should go for slum lords. ಕೊಳಚೆ ಪ್ರದೇಶದಲ್ಲೆಲ್ಲಾ ಆ ಕೊಳಚೆ ಪ್ರದೇಶದಲ್ಲಿ ಯಾರು ಇರುತ್ತಾರೆ ಹೆಚ್ಚಾಗಿ ಬಡವರೇ ಇರುತ್ತಾರೆ. ಗ್ರಾಮಾಂತರ ಪ್ರದೇಶ ಸಮಾಜಘಾತುಕ ಶಕ್ತಿಗಳು ಇವೆಯೆಂದು ಈ ರೀತಿ ಮಾಡತಕ್ಕದ್ದು ಸರಿಯಲ್ಲ. ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಯಾರು ಬಡವರು ಸರ್ಕಾರದ ಜಮೀನನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ ಅಂಥವರ ಮೇಲೆ ಈ ಕ್ರಮವನ್ನು ತಂದಿದ್ದೀರಿ. ಅದನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಪ್ರಾಬ್ಲಂಸ್‌ಗಳು ಕ್ರಿಯೇಟ್ ಆಗುತ್ತವೆ. "Slum Grabber" means a person who illegally takes possession of any land (whether belonging to Government, local authority or any other person). ಅಂಥಾದ್ದನ್ನು ತಾವು ಏನು ಮಾಡುತ್ತೀರಿ? ಖಾಸಗೀ ಜಮೀನಿನಲ್ಲಿ ಬೆಂಗಳೂರಿನಂಥ ದೊಡ್ಡ ದೊಡ್ಡ ಪೇಟೆ ಪಟ್ಟಣಗಳಲ್ಲಿ ಸಾಕಷ್ಟು ಸ್ಲಮ್‌ಗಳಿವೆ. ಖಾಸಗೀ ವ್ಯಕ್ತಿಗೆ ಕೂಡ ಈ ಕಾನೂನನ್ನು ಉಂಟು ಮಾಡುತ್ತೀರಾ ? so that he could easily evict these people. ಅನೇಕ ವರ್ಷಗಳಿಂದ ಅವರು ಇರುತ್ತಾರೆ, or enters into, or creates illegal tenancies. ಯಾರು ಅತಿಕ್ರಮಣ ಪ್ರವೇಶ ಮಾಡುತ್ತಾರೋ ಅಂಥಹವರ ಮೇಲೆ ಕ್ರಮ ತೆಗೆದುಕೊಳ್ಳಿ. We agree with this. You handle him properly. ಈ ಜಾಲದಲ್ಲಿ ಯಾರು ಸಿಕ್ಕುತ್ತಾರೆ ಈ ಜಾಲಪ್ಪನವರ ಜಾಲದಲ್ಲಿ. ಅವರ ಜಾಲವೇ ಬೇರೆ, ಅವರದು ಕೋ-ಆಪರೇಟಿವ್ ಜಾಲ. ಆದರೆ ಇಲ್ಲಿ ನಿಮ್ಮ ಜಾಲ ಏನಾಗಿದೆ, ಈ ಜಾಲದಲ್ಲಿ ಯಾರು ಸಿಕ್ಕಿಹಾಕಿಕೊಳ್ಳುತ್ತಾರೆ. ಯಾರು ಬಿಡುತ್ತಾರೋ ಆ ಪರಮಾತ್ಮನಿಗೆ ಗೊತ್ತು. He is a slum lord. Catch him; we don't mind. "or who constructs unauthorised structures thereon for sale or hire, or given such lands to any person on rental or leave and licence basis for construction or use and occupation, of unauthorised structures".

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರ ಜಾಲ ಏನು ಎನ್ನುವುದನ್ನು ಹೇಳಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಅದ್ಭುತವು ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ನಮಗಂತೂ ಅರ್ಥವಾಗುತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ With all the experience at my command, I do not understand this law at all. ನೀವು ಯಾರನ್ನು ಹಿಡಿಯುತ್ತೀರಿ, ಯಾರನ್ನು ಬಿಡುತ್ತೀರಿ, ಇಂಥಹ ಪರಿಸ್ಥಿತಿಯನ್ನು ಉದ್ಭವ ಮಾಡಬೇಡಿ.

ಶ್ರೀ ಜೆ. ಹೆಚ್. ಪಟೇಲ್.—ಕಾನೂನು ವ್ಯವಸ್ಥೆ ಬಗ್ಗೆ ಒಂದು ಮಾತು. "Law is a cobweb, small ones sneak through, the big ones break through and middle are caught."

SRI M. VEERAPPA MOILY.—Yes it is a cobweb, if it is possible to understand. ಇಂಥಾ ಕಾನೂನನ್ನು ಸಾರ್ವಜನಿಕರಿಗೆ ಕಷ್ಟವಾಗುವ ರೀತಿಯಲ್ಲಿ ಮಾಡಬಾರದು.

ಇದು ಪರಿಣಾಮಕಾರಿಯಾಗುವ ರೀತಿಯಲ್ಲಿ ಇರಬೇಕು. ಆದ್ದರಿಂದ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇದನ್ನು ಕಳುಹಿಸಿದರೆ ಒಳ್ಳೆಯದು. ಸದನದಲ್ಲಿ ಪಾಸು ಮಾಡತಕ್ಕ ವಿಚಾರ ಏನು ಇದು ಇದು ಒಂದು ರೂಪದಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗುವ ರೀತಿಯಲ್ಲಿ ಆಗಬಾರದು. Heaven will not come down if you wait for one or two months. ಇಂತಹ ಒಂದು ಕಾನೂನನ್ನು ಮಾಡಿಕೊಂಡು ಒಂದು ರೀತಿಯ ಗೊಂದಲಮಯ ವಾತಾವರಣವನ್ನು ಸೃಷ್ಟಿಮಾಡತಕ್ಕ ಪ್ರಯತ್ನ ವನ್ನು ತಾವು ಮಾಡಬಾರದು ಎಂಬುದೇ ನನ್ನ ಒಂದು ಪ್ರಾಮಾಣಿಕ ಅನಿಸಿಕೆ. ಇನ್ನೊಂದು,

1-00 P.M.

"Unauthorised structure means any structure constructed without express permission in writing of the appropriate authority under, and in accordance with any law for the time being in force in the area concerned."

ಇದು ಏನು ಇದು ಎಲ್ಲಿಯವರೆವಿಗೆ ಹೋಗಬಹುದು ಎಂಬುದನ್ನು ತಾವು ಆಲೋಚನೆ ಮಾಡಿ. ಇಂತಹ ತಪ್ಪಿತಸ್ಥರನ್ನು ನಿಗ್ರಹಿಸುವುದಕ್ಕೆ ಈಗಾಗಲೇ ಸಾಕಷ್ಟು ಕಾನೂನುಗಳು ಇವೆ. ಪ್ಲಾನಿಂಗ್ ಅಥಾರಿಟಿಯ ಕಾನೂನು ಇದೆ. ಸಿ.ಐ.ಟಿ.ಬಿ.ಯ ಕಾನೂನುಗಳು ಇವೆ. ಮತ್ತೆ ಕಾರ್ಪೊರೇಷನ್ ಹಾಗೂ ಪುರಸಭೆಗಳಲ್ಲಿ ಈ ಬಗ್ಗೆ ಸಾಕಷ್ಟು ಕಾನೂನುಗಳು ಇವೆ. ಇದನ್ನು ಯಾರು ವಯಲೇಟ್ ಮಾಡಿದ್ದಾರೆ ? ಯಾರೂ ವಯಲೇಟ್ ಮಾಡಿಲ್ಲ. It is a question. Even that man who violates municipal law, planning law or corporation law may also become a grabber. He can be detained for 3 or 12 months. A man become the victim. ವಿಕ್ಟಿಂ ಸರಿ. ಆದರೆ ಎಲ್ಲಿಯವರೆಗೆ ಹೋಗಬಹುದು. ಏಕೆಂದರೆ ಪರ್ಮಿಷನ್ ತೆಗೆದುಕೊಳ್ಳಲಿಲ್ಲ. ಪರ್ಮಿಷನ್ ತೆಗೆದುಕೊಳ್ಳುವ ದೃಷ್ಟಿಯಿಂದ ಹೆಚ್ಚು ಕಡಿಮೆಯಾಗುತ್ತದೆ. ಕೆಲವು ಸಾರಿ ಸಮಯಕ್ಕೆ ಸರಿಯಾಗಿ ಪರ್ಮಿಷನ್‌ಗೆ ಅಪ್ಲೈ ಮಾಡುವುದಿಲ್ಲ. ಕಾನೂನಿನ ವ್ಯಾಪ್ತಿಗೆ ಒಳಪಡದೇ ಅಪ್ಲೈ ಮಾಡುವುದಿಲ್ಲ. ಅಂತಹ ವಿಚಾರದಲ್ಲೂ ಇದರ ವ್ಯಾಪ್ತಿ ಬಹಳಷ್ಟು ಇದೆ. ಪಾಸಗಿ ಬಿಲ್ಡಿಂಗ್‌ನವರು ಪ್ಲಾನ್ ಸರಿಯಾಗಿಲ್ಲ ಹೆಚ್ಚು ಕಡಿಮೆಯಾಗಿದೆ ಎಂದರೆ, ೩ ತಿಂಗಳ ಕಾಲ ಅವರನ್ನು ಒಳಗೆ ಹಾಕಬಹುದು. ಅನೇಕ ವರ್ಷಗಳ ಕಾಲ ಒಳಗೆ ಹಾಕುತ್ತೀರಾ ? ಈ ರೀತಿಯ ಕಾನೂನನ್ನು ಮಾಡತಕ್ಕಂಥ ಅವಶ್ಯಕತೆ ಏನು ? ತಾವು ಆಲೋಚನೆ ಮಾಡಿ.

ಶ್ರೀ ಬಿ. ರಾಚಯ್ಯ.— ಈ ತರಹ ಕಾನೂನನ್ನು ಮಾಡತಕ್ಕಂತಹ ಅವಶ್ಯಕತೆ ಏನು ಎಂಬುದಾಗಿ ಮಾನ್ಯ ವೀರಪ್ಪಮೊಯ್ಲಿಯವರು ಹೇಳುತ್ತಿದ್ದಾರೆ. ಇದನ್ನು ಶ್ರೀಮಾನ್ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೇ ತರಬೇಕೆಂದು ಇದ್ದ ಅವರೇ ಸಹಿ ಹಾಕಿರತಕ್ಕ ಬಿಲ್ಲು ಇದು. ನಾವು ಈಗ ಅದನ್ನು ತಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್ — ಸನ್ಮಾನ್ಯ ವೀರಪ್ಪಮೊಯ್ಲಿಯವರು ಇದನ್ನು ವಿರೋಧ ಮಾಡುತ್ತಿಲ್ಲ. ಆದರೆ ಯಾವ ಉದ್ದೇಶಕ್ಕಾಗಿ ಈ ರೀತಿಯ ಕಾನೂನನ್ನು ಮಾಡುವುದಕ್ಕೆ ಹೊರಟಿದ್ದೀರೋ, ಅದರ ಸಫಲತೆಯಾಗುವುದಿಲ್ಲ, ಬಲೆ ಹಾಕಿದ್ದರೆ. ಅದಕ್ಕಿಂತ ಅದರ ತೂತುಗಳೇ ಜಾಸ್ತಿಯಾಗಿವೆ, ಅವುಗಳನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತಿದ್ದಾರೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರ ಉದ್ದೇಶ ಇದರ ತತ್ವ, ಈ ಕಾನೂನಿನ ಅಗತ್ಯತೆ ಏನಿದೆ ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ನಾನು ಹೇಳತಕ್ಕಂತಹ ಮಾತನ್ನು ತಾವು ಸ್ವಲ್ಪ ಗಮನಕ್ಕೆ ತೆಗೆದುಕೊಂಡರೆ ನೀವು ಮತ್ತೆ ಈ ರೀತಿ ಹೇಳುವುದಿಲ್ಲ. ಇಂತಹ ಕಾನೂನನ್ನು ಮಾಡಬೇಕು ಎಂದು ಹೇಳಿ ನಮ್ಮ ಸರ್ಕಾರ ಇರುವಾಗಲೇ ನಿರ್ಣಯಣವನ್ನು ತೆಗೆದುಕೊಂಡಿದ್ದೇವೆ, ಹಾಗೆಂದ ಮಾತ್ರಕ್ಕೆ ದೋಷಪೂರ್ಣವಾದ ಕಾನೂನನ್ನು ಮಾಡುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ. ನಮಗೆ ತಿದ್ದುಪಡಿಗಳನ್ನು ಯಾರೂ ಡ್ರಾಫ್ಟಿಂಗ್ ಮಾಡುತ್ತಿದ್ದರೋ ಅವರೇ ಇವೊತ್ತು ನಿಮಗೂ ತಿದ್ದುಪಡಿಗಳನ್ನು ಡ್ರಾಫ್ಟಿಂಗ್ ಮಾಡಿಕೊಡುತ್ತಿದ್ದಾರೆ. ಆ ಪ್ರಶ್ನೆಯಲ್ಲ ಆದರೆ ಇಲ್ಲಿ ಸದನಕ್ಕೆ ಬಂದಾಗ ಸೂಕ್ಷ್ಮವಾಗಿ, ಕೂಲಂಕುಷವಾಗಿ ಪರಿಶೀಲನೆ ಮಾಡಿಕೊಂಡು ಸೂಕ್ತ ಉತ್ಪಾದನೆ ಮಾಡತಕ್ಕ ಕಾನೂನು ಸಮಾಜಕ್ಕೆ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಬೇರೆಯವರಿಗೆ ಅನ್ಯಾಯವಾ
ಪರಿಪೂರ್ಣವಾದ ನ್ಯಾಯವನ್ನು ಕೊಡತಕ್ಕ ಕಾನೂನು ಆಗಬೇಕು. ಜನರಿಗೆ ಅನುಕೂಲವಾಗ
ಬಾರದು. ಈ ಮನೆಯಲ್ಲಿ ಪಾಸು ಮಾಡುವಂತಹ ಯಾವುದೇ ಕಾನೂನು ಇದನ್ನು ಬಹಳ ವಿವೇಚನ
ಬೇಕೇ ವಿನಹ ಅದನ್ನು ಅನಾನುಕೂಲವಾಗುವ ರೀತಿಯಲ್ಲಿ ಮಾಡಬಾರದು. ವಿರೋಧ ಮಾಡುತ್ತಿಲ್ಲ.
ಯಿಂದ ಮಾಡಬೇಕಾಗುತ್ತದೆ. ಉದ್ದೇಶದಿಂದ ಈ ಕಾನೂನನ್ನು ನಾನು ಅದನ್ನು ಒಪ್ಪತಕ್ಕ ಜನ
ಅದಕ್ಕಾಗಿ ನಾನು ಈ ಸ್ಥಾನದಲ್ಲಿ ನಿಂತಿಲ್ಲ ಕಾನೂನಿನ ಉದ್ದೇಶ, ಅದರ ತತ್ವ ವಿಚಾರಗಳನ್ನು ನಾನು
ನಾವಾಗಿದ್ದೇವೆ. ಇದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ಕೆಲವು ಒತ್ತಾಯ ಏನೆಂದರೆ
ಸದನದ ಮುಂದೆ ಇಟ್ಟಿದ್ದೇನೆ. ಆದ್ದರಿಂದ ಈ ತಿದ್ದುಪಡಿಯ ಬಗ್ಗೆ ಪುನಃ ನನ ಮಹಾರಾಷ್ಟ್ರ,
ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ ಅಲ್ಲಿ ವಿಚಾರ ಮಾಡೋಣ. ಈ ಬಗ್ಗೆ ತಿಳಿದುಕೊಂಡು
ಕೇರಳ ಹಾಗೂ ತಮಿಳುನಾಡಿನಲ್ಲಿ ಯಾವ ರೀತಿಯ ಕಾನೂನನ್ನು ಮಾಡಿದ್ದಾರೆ ಅದನ್ನು Act may
ಅವರಂತೆಯೇ ನಾವೂ ಮಾಡೋಣ Reptition of the National Security ಹೇಳಿ ಅವ
not be suitable or condusive for the circumstances. ಇಷ್ಟನ್ನು ಒತ್ತಾಯ
ಕಾಶ ಮಾಡಿಕೊಟ್ಟಂತಹ ಅಧ್ಯಕ್ಷಣಿಯವರಿಗೆ ವಂದಿಸುತ್ತಾ ನಾನು ಪುನ. ಈ ಸರ್ಕಾರಕ್ಕೆ ತರಬೇಕೆಂದು
ಮಾಡುತ್ತೇನೆ ಈ ಕಾನೂನನ್ನು ಪರಿಷ್ಕರಿಸಬೇಕು. ಪರಿಷ್ಕರಿಸಿದ ನಂತರವೇ ಸದನಕ್ಕೆ
ಮತ್ತೊಮ್ಮೆ ಒತ್ತಾಯ ಪಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಗಲಿಕನೇ

† ಶ್ರೀ ಜಿ. ರಾಜುಗೌಡ (ಹಾನೂರು ಕ್ಷೇತ್ರ).—ಸನ್ಮಾನ್ಯ ಅಧ್ಯಕ್ಷಣೀಯವರೇ, ಜೂಜಾಟಗಾರರ
ಇಸವಿಯ ಕರ್ನಾಟಕ ಅಕ್ರಮ ಮಧ್ಯಸಾಗಾಣಿಕೆದಾರರ ಔಷಧನಿಯಮ ಉಲ್ಲಂಘನೆಕಾರರ ಬಲವಂತದಿಂದ
ಗೂಂಡಾಗಳ ಅನೈತಿಕ ವ್ಯವಹಾರದಲ್ಲಿ ತೊಡಗಿರುವವರ ಹಾಗೂ ಕೊಳಚೆ ಪ್ರದೇಶಗಳನ್ನು ವಿಧೇಯಕ
ಸ್ವಾಧೀನಪಡಿಸಿಕೊಳ್ಳುವಂತಹ ವಿಧ್ವಂಸಕ ಚಟುವಟಿಕೆಗಳನ್ನು ತಡೆಗಟ್ಟುವಕ್ಕೆ ಸಂಬಂಧಪಟ್ಟ ನಾನರಿ
ವನ್ನು ನಾನು ಪೂರ್ಣವಾಗಿ ಸ್ವಾಗತಿಸುತ್ತೇನೆ. ಇದರ ಹಿನ್ನಲೆಯಲ್ಲಿರತಕ್ಕಂತಹ ಉದ್ದೇಶವನ್ನು ಈ ಸದನ
ಅರ್ಥಮಾಡಿಕೊಂಡು ಇದಕ್ಕೆ ಬೆಂಬಲವನ್ನು ಕೊಡುತ್ತಿದ್ದೇನೆ. ಆದರೆ ಈ ವಿಧೇಯಕವನ್ನು ಮಾನ್ಯ
ದಲ್ಲಿ ಒಮ್ಮೆಗೆ ಒಪ್ಪಿದರೆ ಇದು ನಿಜವಾಗಿಯೂ ಕೂಡ ಕರಾಳ ಶಾಸನವಾಗುತ್ತದೆ ಎಂಬುದನ್ನು ಮಾನ್ಯ
ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಕೆಲವು ಜನಗಳು ಅಕ್ರಮ ಚಟುವಟಿ
ಕೆಗಳಲ್ಲಿ ತೊಡಗುವುದರಿಂದ ಸಾರ್ವಜನಿಕರ ಆಸ್ತಿ-ಪಾಸ್ತಿಗಳನ್ನು ಆಗಾಗ್ಗೆ ತೊಂದರೆಗಳಾಗುತ್ತವೆ ಎನ್ನ
ತಕ್ಕಂತಹದ್ದನ್ನು ತಾವು ಹೇಳಿದ್ದೀರಿ, ನಿಮ್ಮ ವಿಧೇಯಕದ ಪುಟ ಒಂದರಲ್ಲಿ ಡೇಂಜರ್‌ಸ್ ಆಕ್ಟಿವಿಟೀಸ್
ಆಫ್ ಬೂಟ್‌ಲೆಗ್ಗರ್ಸ್, ಡ್ರಗ್-ಅಫೆಂಡರ್ಸ್, ಇತ್ಯಾದಿ ನಮೂದಿಸಿದ್ದೀರಿ ಅಂತಹ ಜನ ಯಾರು ಎನ್ನ
ತಕ್ಕಂಥದ್ದು ಬಹುಶಃ ಕೆಲವರ ಮೇಲೆ ಕೆಲವು ಆರೋಪಗಳನ್ನು ಹೊರಿಸಿ ಅಂತಹ ಇಂತಹ ದುಷ್ಕೃತ್ಯಗಳನ್ನು
ಮಾಡತಕ್ಕಂತಹ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂಬ ಆರೋಪವನ್ನು ಅವರ ಮೇಲೆ ಹೊರಿಸಿ ತಾವು
ಅವರಿಗೆ ಶಿಕ್ಷೆಯನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿದ್ದೀರಿ. ಮಂತ್ರಿಗಳ ಗಮನಕ್ಕೆ ಹೇಳಬೇಕಾದು
ದೆಂದರೆ ಅಪಾದಿತ ಎನ್ನುವುದರ ಬಗ್ಗೆ ಮೊದಲು ನಿಶ್ಚಯ ಮಾಡಬೇಕು. ಕೆಲವು ಆರೋಪಗಳನ್ನು
ಹೊರಿಸತಕ್ಕಂಥಹದ್ದು ಸುಲಭವಾದರೂ ಅವರು ಹೊರಿಸಿರತಕ್ಕ ಆರೋಪ ನ್ಯಾಯಾಲಯದಲ್ಲಿ ವಿಚಾ
ರಣೆ ಮಾಡಿದಾಗ ಅಪಾದಿತ ಎಂಬುದಾಗಿ ಸ್ಥಿರಪಟ್ಟರೆ ಆಗ ಮಾತ್ರ, ಅವರನ್ನು ಆಪಾದಿತ ಎಂದು
ಹೇಳುತ್ತಾರೆ, ಆದರೆ ನೀವು ಮಾಡಿರುವಂತಹ ತಿದ್ದುಪಡಿಯಿಂದ ಮನುಷ್ಯನ ಮೂಲಭೂತ ಸ್ವಾತಂ
ತ್ರ್ಯಕ್ಕೆ ಧಕ್ಕೆ ತರುವಂತಾಗಿದೆ. ಕೆಲವು ಆರೋಪಗಳನ್ನು ಹೊರಿಸಬಹುದು ಯಾವುದೇ ಶಿಕ್ಷೆಯನ್ನೂ
ಕೊಡಬಹುದು ಆದರೆ ಆರೋಪವನ್ನು ಹೊರಿಸಿದರೆ ಸಾಲದು. ಹೊರಿಸಿರತಕ್ಕ ಆರೋಪ ಸ್ಥಿರಪಟ್ಟರೆ
ವಿಚಾರಣೆಯ ಮೂಲಕ ಶಿಕ್ಷೆಯನ್ನು ಕೊಡಬಹುದು. ಆದ್ದರಿಂದ ನನಗನ್ನಿಸುತ್ತದೆ. ಆ ಪದಗಳನ್ನು
ತೆಗೆದು ಬಿಟ್ಟರೆ ಬಹಳ ಅನುಕೂಲವಾಗಬಹುದು. ಅದರ ಬದಲು "Activities of certain
criminal offenders who are known as bootleggers" ಎಂದು ಹಾಕಬಹುದು
ಬಹುಶ. ಈ ಪದ ಸಮಂಜಸವಾಗಬಹುದು ಅನುಕೂಲವಾಗಬಹುದು ಎಂದು ನನ್ನ ಒಂದು ವಾದವನ್ನು
ತಮ್ಮ ಮುಂದಿಡುತ್ತಿದ್ದೇನೆ. ಸಾರ್ವಜನಿಕವಾಗಿ ಮುಗ್ಧ ಜನಗಳ ಮೇಲೆ ವಿಚಾರಣೆಗೆ ಮುನ್ನ ಅವರ
ವಿರುದ್ಧ ಆರೋಪವನ್ನು ಹೊರಿಸುವುದು ಕ್ರಮ ಅಲ್ಲ. ಆದರೆ ಇದನ್ನು ಇಲ್ಲಿ ಅಳವಡಿಸಿದ್ದೀರಿ. ಇಂತಹ
ಕಾನೂನು ಮಾಡುವುದರಿಂದ ಇದರ ದೊಡ್ಡ ದುಷ್ಪರಿಣಾಮ ಜನರ ಮೇಲೆ ಆಗುತ್ತದೆ. ಯಾವುದೋ

---

† ಈ ಚಿಹ್ನೆಯುಳ್ಳ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(20)

ಮುಂಗ್ಡ ಜನಗಳ ಮೇಲೆ ಕೆಲವು ಆರೋಪಗಳನ್ನು ಹೊರಿಸಿ ಅವರಿಗೂ ಶಿಕ್ಷೆಯನ್ನು ಕೊಡುವಂತಹ ಅಂಶ ಇದರಲ್ಲಿ ಅಡಕವಾಗಿದೆ. ಇದು ಸರಿಯಲ್ಲ. ಮತ್ತೆ ಎರಡನೆಯದಾಗಿ ಪೇಜ್ ೪೮ (ಐ)ರಲ್ಲಿ " Slum-grabber means a person, who illegally takes possession of any land (whether belonging to Government, local authority or any other person)" ಎಂಬುದಾಗಿ ನಮೂದು ಮಾಡಿದ್ದೀರಿ. ಇರುವಂತಹ ಜಮೀನು ಸರ್ಕಾರದ್ದು ಆಗಿದ್ದು ಆ ಮುಂಗ್ಡ ಜನರು ಅದನ್ನು ಸಾಗುವಳಿ ಮಾಡತಕ್ಕಂತಹ ಉದ್ದೇಶದಿಂದ ತೆಗೆದುಕೊಂಡಾಗಲೂ ಈ ವಿಧೇಯಕವನ್ನು ಅವನ ಮೇಲೆ ಅಪ್ಲೈ ಮಾಡಬಹುದು ಎಂಬ ಅರ್ಥ ಬರುತ್ತದೆ. ಯಾರು ಕೊಳಚೆ ಪ್ರದೇಶದಲ್ಲಿರತಕ್ಕವರು ಅಕ್ರಮವಾಗಿ ಬೇರೆಯವರ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಾಗ ಅದನ್ನು ತಪ್ಪಿಸುವುದಕ್ಕೆ ಇಂತಹ ಕಾನೂನನ್ನು ತರಬೇಕು. Any land means what ? ಸಾಗುವಳಿಗೂ ಜಮೀನನ್ನು ತೆಗೆದು ಕೊಂಡಾಗ ಅಂತಹವರಿಗೂ ಈ ಕಾನೂನಿನ ಮುಖಾಂತರವಾಗಿ ಶಿಕ್ಷೆಯಾಗುತ್ತದೆ. ಆದ್ದರಿಂದ Any land ಎನ್ನುವುದರ ಬದಲು " Any land situated within slum area " ಎಂದು ಅರ್ಥ ಬರುವ ರೀತಿಯಲ್ಲಿ ಮಾಡುವುದಾದರೆ ಒಳ್ಳೆಯದು ಆಗಬಹುದು ಎಂದು ನನಗನ್ನಿಸುತ್ತದೆ. ನ್ಯಾಯಾಂಗ, ಶಾಸಕಾಂಗ ಹಾಗೂ ಕಾರ್ಯಾಂಗ ಈ ಮೂರು ಅಂಗಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕೆಲಸ ಮಾಡಿದರೆ ಒಳ್ಳೆಯದು ಎಂಬುದಾಗಿ ನನಗನ್ನಿಸುತ್ತದೆ. ಆದರೆ ಕಾರ್ಯಾಂಗದವರು ನ್ಯಾಯಾಂಗದವರು ಏನು ಮಾಡಬೇಕಾಗಿತ್ತು, ಆ ಕೆಲಸವನ್ನು ಮಾಡುವುದಕ್ಕೆ ಇವರೇ ಕೈ ಹಾಕಿದ್ದಾರೆ ಎಂದು ನನಗೆ ಅನ್ನಿಸುತ್ತಿದೆ. ಪ್ರಜಾಪ್ರಭುತ್ವದಲ್ಲಿ ಇದು ಒಳ್ಳೆಯ ಲಕ್ಷಣವಲ್ಲ ಯಾರು ರಾಜ್ಯದ ಸೂತ್ರವನ್ನು ಹಿಡಿದುಕೊಂಡು ಆಡಳಿತ ನಡೆಸುತ್ತಾರೋ ಅಂಥವರಿಗೆ ಧಕ್ಕೆ ತರತಕ್ಕ ಕೆಲಸವನ್ನು ತಾವು ಮಾಡಿದ್ದೀರಿ, ಇದನ್ನು ಪರಿಶೀಲನೆ ಮಾಡಿ ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ ಹಾಗೆ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸುವುದು ಒಳ್ಳೆಯದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಪುಟ ೮ ರಲ್ಲಿ ಬಂಧಿತ ಅಪರಾಧಿಗೆ ಅವನು ಯಾವ ಕಾರಣಕ್ಕಾಗಿ ಬಂಧಿಸಲ್ಪಟ್ಟಿದ್ದಾನೆ ಎಂಬುದನ್ನು ೩ ದಿನಗಳ ನಂತರ ತಿಳಿಸಬೇಕೆಂದು ಹೇಳಿದ್ದೀರಿ. ಬಂಧಿಸಿದ ದಿನವೇ ಏತಕ್ಕೆ ಈ ಕಾರಣವನ್ನು ಕೊಡಬಾರದು ? ಯಾರೋ ಒಬ್ಬರಿಗೆ ವೈಯಕ್ತಿಕವಾಗಿ ಆಗುವುದಿಲ್ಲವೆಂದು ಅಕ್ರಮವಾಗಿ ಬಂಧಿಸಿ ೬ ತಿಂಗಳ ನಂತರ ಬಿಡುಗಡೆ ಮಾಡಬಹುದು ಆದ್ದರಿಂದ ಒಬ್ಬ ವ್ಯಕ್ತಿಯನ್ನು ಅಪರಾಧಿ ಎಂದು ಬಂಧಿಸಿದ ೩ ದಿನಗಳ ನಂತರ ಕಾರಣವನ್ನು ತಿಳಿಸುವುದು ಸಮಂಜಸವಲ್ಲ. ಇದು ಮಾನವನ ಹಕ್ಕನ್ನು ಕಳೆದುಕೊಂಡಂತಾಗಿದೆ. ಯಾವ ಕಾರಣದಿಂದ ಬಂಧಿಸುತ್ತಾರೋ ಆ ಕಾರಣವನ್ನು ಬಂಧಿಸಿದ ದಿನವೇ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಡೆ ರಾಜ್ಯ ಸರ್ಕಾರ ಇಷ್ಟಪಟ್ಟರೆ ಅಡ್ವೈಸರಿ ಕಮಿಟಿಯನ್ನು ಮಾಡಬಹುದೆಂದು ಹೇಳಿದ್ದಾರೆ. ಮತ್ತೊಂದು ಕಡೆ ಯಾವ ಮನುಷ್ಯನನ್ನು ಬಂಧಿಸಲಾಗುತ್ತದೋ ಆ ಮನುಷ್ಯ ತನ್ನ ಬೇಡಿಕೆಯ ಬಗ್ಗೆ ರೆಪ್ರಸಂಟೇಷನ್ ಕೊಡಬಹುದೆಂದು ಹೇಳಿದ್ದಾರೆ. ಅಡ್ವೈಸರಿ ಕಮಿಟಿಯನ್ನು ಸರ್ಕಾರ ಇಷ್ಟಪಟ್ಟರೆ ಮಾಡಬಹುದೆಂದು ಹೇಳುವುದು ಸೂಕ್ತವಲ್ಲ, ಆರೋಪ ಸರಿಯೋ ತಪ್ಪೋ ಎಂಬುದನ್ನು ಪರಿಶೀಲನೆ ಮಾಡಬೇಕಾದರೆ ಅಡ್ವೈಸರಿ ಕಮಿಟಿಯನ್ನು ಮಾಡಬೇಕಾಗುತ್ತದೆ. ಅಂಥ ಕಮಿಟಿ ಇಲ್ಲದಿದ್ದರೆ ತನ್ನ ಅಹವಾಲನ್ನು ಅವನು ಎಲ್ಲಿ ಹೇಳಬೇಕು ? ಆದುದರಿಂದ ಆ ಕಮಿಟಿಯನ್ನು ಮಾಡಲೇಬೇಕೆಂದು ಹೇಳುತ್ತೇನೆ. ಏನೇ ಕಾರಣ ಇದ್ದು ಯಾವ ಅಪರಾಧಿಯನ್ನು ಬಂಧಿಸಿದರೂ ಕೂಡಲೇ ಅಡ್ವೈಸರಿ ಕಮಿಟಿಯಲ್ಲಿ ವಿಚಾರಣೆ ಆಗುವುದಕ್ಕೆ ಅವಕಾಶವಾಗಬೇಕು ಅದನ್ನು ಬಿಟ್ಟು ಬಂಧಿಸಿದ ಮೂರು ದಿನಗಳ ನಂತರ ರೆಪ್ರಸಂಟೇಷನ್ ಕೊಡಬಹುದೆಂದು ಹೇಳುವುದು ಸಮಂಜಸವಲ್ಲ, ಬಂಧಿಸಿದ ಕೂಡಲೇ ಅವನು ತಪ್ಪಿತಸ್ಥನೇ ಅಲ್ಲವೇ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ಅಡ್ವೈಸರಿ ಕಮಿಟಿಯನ್ನು ನೇಮಕ ಮಾಡಬೇಕು ಮತ್ತು ಆ ಸಮಿತಿಯಲ್ಲಿ ಅದನ್ನು ಜಾಗ್ರತೆ ವಿಚಾರಣೆ ಮಾಡಿ ವ್ಯಕ್ತಿ ನಿಜವಾಗಿ ಅಂಥ ಚಟುವಟಿಕೆಗಳಲ್ಲಿ ತೊಡಗಿದ್ದರೆ ಆತನನ್ನು ಬಂಧಿಸುವುದು ಸರಿ ಇಲ್ಲದಿದ್ದರೆ ಕೂಡಲೇ ಬಿಡುಗಡೆ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವೊತ್ತು ನೀವು ಮಾನವನ ಮೂಲಭೂತವಾದ ಹಕ್ಕನ್ನು ಕಸಿದುಕೊಳ್ಳುವ ಕಾನೂನನ್ನು ಮಾಡಿದ್ದೀರಿ. ಇದನ್ನು ಸರಿಪಡಿಸಬೇಕು. ಪುಟ ೧೧ ರಲ್ಲಿ ರಾಜ್ಯ ಸರ್ಕಾರದಿಂದ ಬಂದಂತಹ ಆಜ್ಞೆಯನ್ನು ಉಲ್ಲಂಘಿಸುವ ಯಾವ ಅಧಿಕಾರಿಯಾಗಲಿ ಯಾರೇ ಆಗಲಿ ಯಾರು ಕೂಡ ಕ್ರಿಮಿನಲ್ ಪ್ರೊಸೀಜರ್ ಅನ್ನು ವಿರೋಧ ಮಾಡಬಾರದೆಂದು ಹೇಳುವುದು ಸರಿಯಲ್ಲ ಇದು ಏಕಪಕ್ಷೀಯ ನ್ಯಾಯ ಅನ್ನಿಸುತ್ತದೆ. ಅಧಿಕಾರಿಗಳಾಗಲಿ, ಆರೋಪಿಗಳಾಗಲಿ ತಪ್ಪು ಮಾಡಿದಾಗ ಮತ್ತೆ ವಿಮರ್ಶೆ ಮಾಡುವುದಕ್ಕೆ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಅವಕಾಶ ಕಲ್ಪಿಸಿಕೊಡುವುದು ಬಿಟ್ಟು ಮಾಡಿರುವುದೇ ಸರಿ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಮಾಡಿರುವುದು ಬ್ರಿಟಿಷರ ಕಾಲದಲ್ಲಿ ಕೂಡ ಇಂಥ ವಿಧೇಯಕ ಬಂದಿರಲಿಲ್ಲ ಎಂದು ಅನ್ನಿಸುತ್ತದೆ, ಒಟ್ಟಿನಲ್ಲಿ ಈ ಮಸೂದೆಯ ಹಿನ್ನೆಲೆ ಏನಿದೆ ಅದನ್ನು ನಾನು ಸ್ವಾಗತಿಸುತ್ತೇನೆ; ಆದರೆ ಇದರಲ್ಲಿ ಅನೇಕ ಲೋಪದೋಷಗಳು ಇರುವುದರಿಂದ ದಯವಿಟ್ಟು ಈ ವಿಧೇಯಕವನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ ಹೆಚ್ಚಿಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು ಅನಂತರ ಇಲ್ಲಿ ತಂದು ಅಂಗೀಕಾರ ಮಾಡುವುದು ಎಲ್ಲರಿಗೂ ಕ್ಷೇಮವೆಂದು ಹೇಳಿ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ತಂಗಳ್ (ಬಿಳಗಿ).—ಮಾನ್ಯ ಅಧ್ಯಕ್ಷಿಣಿಯವರೆ, ಸರ್ಕಾರ ತಂದಿರುವಂಥ ವಿಧೇಯಕ ಸಧ್ಯದ ಮಟ್ಟಿಗೆ ಬಹಳ ಕಟ್ಟು ಕ್ರಮವಾದರೂ. ಕಳವಳಕಾರಿ ಕ್ರಮವಾದರೂ ಇದು ಅತ್ಯಂತ ಸಕಾಲಿಕವಾದ ಕ್ರಮವೆಂದು ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಏಕೆಂದರೆ ಸದನದ ಈ ಕಡೆಯ ಅನೇಕ ಹಿರಿಯ ಸದಸ್ಯರು ಹೇಳಿರುವಂತೆ ಸಮಾಜ ವಿರೋಧಿ ಶಕ್ತಿಯನ್ನು ಬಗ್ಗು ಬಡಿಯಲಿಕ್ಕೆ ಈಗಾಗಲೇ ಬೇಕಾದಷ್ಟು ಕಾನೂನುಗಳು ಇದ್ದರೂ ಕೂಡ ಯಶಸ್ವಿಯಾಗಿ ಇವರನ್ನು ಬಗ್ಗು ಬಡಿದು ನಿಯಂತ್ರಿಸಿ ಸಮಾಜಕ್ಕೆ ಒಳ್ಳೆಯದನ್ನು ತಂದುಕೊಡುವುದಕ್ಕೆ ಈವರೆಗೂ ಆಗಿಲ್ಲ. ಅದರಲ್ಲೂ ವಿಶೇಷವಾಗಿ ಕರ್ನಾಟಕದ ಎಲ್ಲಾ ಪತ್ರಿಕೆಗಳಲ್ಲಿ ಬೆಂಗಳೂರಿನ ದಿನನಿತ್ಯದ ವಾರ್ತೆಗಳು ಏನು ಬರುತ್ತದೆ ಅವು ಜನರನ್ನು ಚಕಿತಗೊಳಿಸತಕ್ಕವಾಗಿದೆ. ಹಾಡುಹಗಲಲ್ಲೇ ಕೊಲೆಗಳು, ಬೀದಿಯಲ್ಲಿ ಮಹಿಳೆಯರ ಮಾನಭಂಗ, ಆಟೋದಲ್ಲಿ ಹೋಗುವಾಗ ಗಂಡನನ್ನು ಒಂದು ಕಡೆ ಕಟ್ಟಿ ಹಾಕಿ ಹೆಂಡತಿಯ ಮೇಲೆ ನಡೆಯುವ ಅತ್ಯಾಚಾರ. ಶಾಂತಿನಗರ ಎಂದು ಹೆಸರು ಪಡೆದಿರತಕ್ಕ ಬೆಂಗಳೂರು ನಗರದಲ್ಲಿ ಕಳೆದ ೪-೫ ವರ್ಷಗಳಿಂದ ಬಂದಿರತಕ್ಕ ಚಾಕುಚೂರಿ ಸಂಸ್ಕೃತಿಯನ್ನು ತಡೆಯುವುದಕ್ಕೆ ಈ ಕಟ್ಟುನಿಟ್ಟಿನ ಕಾನೂನು ಕ್ರಮ ಅವಶ್ಯಕವೆಂದು ಭಾವಿಸುತ್ತೇನೆ. ಏಕೆಂದರೆ ದಿನಬೆಳಗಾದರೆ ಕಳವಳಕಾರಕ ವರದಿಗಳನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಇವತ್ತು ಬೆಂಗಳೂರು ನಗರದಲ್ಲಿ ಒಬ್ಬ ಮಹಿಳೆ ಹಗಲು ಹೊತ್ತು ಸಿನಿಮಾಕ್ಕೆ ಅಥವಾ ಅಂಗಡಿಗೆ ಹೋಗುತ್ತಿರಬೇಕಾದರೆ ಕುತ್ತಿಗೆಗೆ ಕೈಹಾಕಿ ಆಭರಣವನ್ನು ದೋಚುವಂಥ ಪ್ರಕರಣಗಳು ವರದಿಯಾಗುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ವಿಶೇಷವಾಗಿ ಬೆಂಗಳೂರು ಮತ್ತಿತರ ಪಟ್ಟಣಗಳಲ್ಲಿ ಬೆಳೆದುಕೊಂಡು ಬಂದಿರತಕ್ಕ ಗೂಂಡಾಗಿರಿ ಮತ್ತು ಸ್ವಚ್ಛಂದ ಪ್ರವೃತ್ತಿಗೆ ನಿಯಂತ್ರಣ ಹಾಕಲೇಬೇಕಾಗಿದೆ. ಇಲ್ಲದಿದ್ದರೆ ಇದು ನಮ್ಮ ಸಮಾಜಕ್ಕೆ ನೆಮ್ಮದಿ ತರುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಎಷ್ಟು ಗೂಂಡಾಗಿರಿ ಬೆಳೆದಿದೆ ಎಂದರೆ ನಮ್ಮಂಥವರು ಹೊರಗಿನ ಊರುಗಳಿಂದ ಬಂದರೆ ಬೆಂಗಳೂರಿನಲ್ಲಿ ಇರಬೇಕೇ ಬೇಡವೇ ಎಂದು ವಿಚಾರ ಮಾಡುವಂಥ ಪರಿಸ್ಥಿತಿ ಬಂದಿದೆ. ವೈಯಾಲಿ ಕಾವಲಿನಲ್ಲಿ ನಡೆದ ಘಟನೆ ಪತ್ರಿಕೆಗಳನ್ನು ನೋಡಿದವರಿಗೆ ಗೊತ್ತಿರಬೇಕು. ಒಬ್ಬ ಸೈನ್ಯಾಧಿಕಾರಿಯ ಪತ್ನಿಯ ಮೇಲೆ ಆತನ ಎದುರಿಗೆ ಹಾಡುಹಗಲಲ್ಲೇ ಅತ್ಯಾಚಾರ ಮಾಡಿದ್ದನ್ನು ನೋಡಿದರೆ ಈ ಕಾನೂನನ್ನು ಅಂಥ ಸಮಾಜ ವಿರೋಧಿ ಶಕ್ತಿಗಳ ಮೇಲೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಇದರ ಜೊತೆಗೆ ಮಾನ್ಯ ಸಚಿವರಿಗೆ ಒಂದು ಮಾತು ಹೇಳಬಯಸುತ್ತೇನೆ. ಈ ಕಾನೂನನ್ನು ಜಾರಿಯಲ್ಲಿ ತರುವಾಗ ಅಧಿಕಾರಿಗಳಿಗೆ ಮಾತ್ರ ಸ್ವಚ್ಛಂದ ರೀತಿಯಲ್ಲಿ ವ್ಯವಹರಿಸುವುದಕ್ಕೆ ಅವಕಾಶ ಕೊಡಬಾರದು. ಏಕೆಂದರೆ ನಾನು ಕಾರ್ಮಿಕ ಕ್ಷೇತ್ರದಿಂದ ಮತ್ತು ಪತ್ರಿಕಾ ಕ್ಷೇತ್ರದಿಂದ ಬಂದವನು. ಬೆಂಗಳೂರು ನಗರ ವಿಶೇಷವಾಗಿ ಕಾರ್ಮಿಕರ ಚಳುವಳಿಯ ನಗರವಾಗಿರುವುದರಿಂದ ಪ್ರತಿನಿತ್ಯ ಕಾರ್ಮಿಕರ ಚಳುವಳಿಗಳು ನಡೆಯುತ್ತಿರುತ್ತವೆ. ಸ್ಥಳೀಯ ಅಧಿಕಾರಿಗಳು ಕಾರ್ಮಿಕರ ಮೇಲೆ ಅಥವಾ ಕಾರ್ಮಿಕ ನಾಯಕರ ಮೇಲೆ ಸೇಡಿನ ಉದ್ದೇಶ ಇಟ್ಟುಕೊಂಡು ಈ ಕಾನೂನನ್ನು ಅವರ ವಿರುದ್ಧ ಬಳಸುವ ಸಂಭವ ಇದೆ. ಅದೇ ರೀತಿ ಪತ್ರಿಕಾಕರ್ತರ ವಿರುದ್ಧ ಬಳಸುವ ಸಂಭವ ಇದೆ. ಹಿಂದೆ ನನ್ನ ಮೇಲೆ ಒಂದು ಕಾನೂನನ್ನು ಬಳಸಿದಾಗ ನಾನು ಜೈಲಿನಲ್ಲಿ ಇರಬೇಕಾದ ಪ್ರಸಂಗ ಬಂತು. ಬೀದರ್‌ನಲ್ಲಿ 'ಉತ್ತರ ಕರ್ನಾಟಕ' ಎಂಬ ಪತ್ರಿಕೆಯನ್ನು ಅಧಿಕಾರಿಗಳು ಪ್ರತಿಬಂಧಿಸಿದ್ದನ್ನು ನೋಡಿದರೆ ಅಧಿಕಾರಿಗಳಿಗೆ ಅತಿಯಾಗಿ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಕೆಲವು ತಿದ್ದುಪಡಿಗಳನ್ನು ಇದರಲ್ಲಿ ಮಾಡಬೇಕು. ಇದು ನಿಜವಾಗಿಯೂ ಸಮಾಜ ವಿರೋಧಿ ಶಕ್ತಿಗಳನ್ನು, ಯಾರು ಹಾಡುಹಗಲಲ್ಲೇ ಮಚ್ಚು ಹಿಡಿದುಕೊಂಡು ತಾಂಡವ ನೃತ್ಯ ಮಾಡುತ್ತಾರೋ ಅಂಥವರನ್ನು ಹದ್ದುಬಸ್ತಿನಲ್ಲಿ ತರುವುದಕ್ಕೆ ಅವಶ್ಯ ಇದೆ. ಇದು ಸಕಾಲಿಕ ಕಾನೂನು. ಆ ದೃಷ್ಟಿಯಿಂದ ಕೆಲವು ತಿದ್ದುಪಡಿಗಳನ್ನು ಈ ಕಾನೂನಿನಲ್ಲಿ ತಂದು ಕಾರ್ಮಿಕ ನಾಯಕರಿಗೆ, ಪತ್ರಿಕಾಕರ್ತರಿಗೆ ತೊಂದರೆಯಾಗದಂತೆ

ಮಾಡಬೇಕೆಂದು ಹೇಳುತ್ತೇನೆ. ಆಗಲೇ ಮಾತನಾಡುವಾಗ ಮಾನ್ಯ ಮೊಯಿಲಿಯವರು ಅನೇಕ ಸಂದೇಶಗಳನ್ನು ವ್ಯಕ್ತ ಮಾಡಿದರು. ಅದು ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಅಂದ ಹಾಗೆ ಆಗಿದೆ. ಇವೊತ್ತಿನ ದಿವಸ ಇಡೀ ರಾಜ್ಯದ ತುಂಬಾ ಬೆಳೆಯುತ್ತಿರುವ ಗೂಂಡಾಗಿರಿಯನ್ನು ಯಶಸ್ವಿಯಾಗಿ ತಡೆಗಟ್ಟಲಿಕ್ಕೆ ಸಮಾಜದಲ್ಲಿ ಒಳ್ಳೆಯತನವನ್ನು ಉಳಿಸಿಕೊಂಡು ಬರುವುದಕ್ಕೆ ಈ ಕಾನೂನು ಬಹಳ ನೆರವಾಗುತ್ತದೆಂದು ಹೇಳುತ್ತೇನೆ. ಇದರಲ್ಲಿ ಕೆಲವೊಂದು ವಿಷಯಗಳಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಸ್ವಚ್ಛಂಧ ರೀತಿಯಲ್ಲಿ ವರ್ತಿಸುವುದಕ್ಕೆ ಅವಕಾಶ ಇರಬಾರದು. ಸಾಧ್ಯವಾದರೆ ಈ ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಬೇಕೆಂದು ಹೇಳಿ ಈ ವಿಧೇಯಕವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

† ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಮಾನ್ಯ ಅಧ್ಯಕ್ಷರೆ, ಈ ಒಂದು ಬಿಲ್ ನಮ್ಮೆದುರಿನಲ್ಲಿ ಇವತ್ತು ಇದೆ. ಆದರೆ ಈ ಬಿಲ್ಲಿನಿಂದ ಹೊರಡುವ ಬಾಣ ಯಾವ ಗುರಿಯನ್ನು ತಲುಪುತ್ತದೆ ಎಂಬುದನ್ನು ವಿಚಾರ ಮಾಡಿದಾಗ ಮನಸ್ಸಿನಲ್ಲಿ ಉದ್ಭವಾಗುವಂಥ ಸಂಶಯಗಳಿಂದಾಗಿ ಇಂಥ ಒಂದು ಕಾನೂನು ಅಥವಾ ವಿಧೇಯಕವನ್ನು ಸಂಪೂರ್ಣವಾಗಿ ಒಪ್ಪಲಿಕ್ಕೆ ನನ್ನಂಥವನ ಮನಸ್ಸು ಕೇಳುವುದಿಲ್ಲ. ಅನೇಕ ಒಳ್ಳೆಯ ಉದ್ದೇಶಗಳಿಗಾಗಿ ದೇಶದಲ್ಲಿ ಕ್ರಾಂತಿ, ಚಳುವಳಿಗಳು ನಡೆದಿವೆ. ಕರ್ನಾಟಕದ ಇತಿಹಾಸದಲ್ಲೂ ನಡೆದಿವೆ. ಚಳುವಳಿಯನ್ನು ಪ್ರಾರಂಭ ಮಾಡುವಂಥ ವ್ಯಕ್ತಿ ಪ್ರಾರಂಭದಲ್ಲಿ ಒಳ್ಳೆಯ ಉದ್ದೇಶಗಳನ್ನೇ ಇಟ್ಟುಕೊಂಡಿರುತ್ತಾನೆ. ಆದರೆ ಬರಬರುತ್ತಾ ಆ ಉದ್ದೇಶ ಬೇರೆ ದಾರಿಗೆ ನಡೆದುಕೊಂಡು ಹೋಗಿ ಉದ್ದೇಶಕ್ಕೆ ವಿರುದ್ಧವಾದ ಪರಿಣಾಮಗಳು ಆದಂಥದ್ದನ್ನು ನಾವು ನೋಡಿದ್ದೇವೆ, ಅನುಭವಿಸಿದ್ದೇವೆ. ಸಾಮಾಜಿಕ ಪರಿವರ್ತನೆಯಲ್ಲಿ ಕೂಡ ಇದಾಗಿದೆ. ಸಾಮಾಜಿಕ ಪರಿವರ್ತನೆ ಆಗಬೇಕು, ಜಾತಿಯ ನಿರ್ಮೂಲನ ಆಗಬೇಕು ಎಂದು ಒಂದು ದೊಡ್ಡ ಕ್ರಾಂತಿಯೇ ನಡೆಯಿತು. ಆದರೆ ಈಗ ಅದರ ಪರಿಣಾಮ ಏನಾಗಿದೆ ? ಜಾತೀಯತೆ ಇನ್ನೂ ಜಾಸ್ತಿಯಾಗಿದೆ ಹೀಗಿರುವಾಗ ಸಾಮಾನ್ಯ ಕಾನೂನು ಕೂಡ ಅದೇ ರೀತಿ ಆಗಬಹುದೇನೋ ಎಂಬ ಶಂಕೆ ಉಂಟಾಗುತ್ತದೆ. ಹಿಂದೆ ಆಗಿದ್ದರಿಂದ ಅದೇ ಜಾಡಿನಲ್ಲಿ ಇದೂ ಸಿಗಬಹುದು, ಅಪರಾಧಿಗಿಂತ ಹೆಚ್ಚಾಗಿ ನಿರಪರಾಧಿಗಳು ಸಿಕ್ಕಿ ಬಳಲುವಪರಿಸ್ಥಿತಿ ಬರಬಹುದು ಎಂಬ ಸಂಶಯ ಇಲ್ಲಿ ಇದೆ. ದೇಶದ ಚರಿತ್ರೆಯಲ್ಲಿ ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯ ಮುಂತಾದ ಘೋಷಣೆಗಳನ್ನು ಹಿಡಿದುಕೊಂಡು ಹೋರಾಟ ಮಾಡಿದಂಥ ವ್ಯಕ್ತಿಗಳೇನಿದ್ದಾರೆ ಅವರೇ ಅಧಿಕಾರವನ್ನು ವಹಿಸಿಕೊಂಡ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯಗಳನ್ನು ಮರೆತು ಒಬ್ಬ ವ್ಯಕ್ತಿಯನ್ನು ಗೂಂಡಾ, ಬೂಟ್-ಲೆಗ್ಗರ್ ಎಂದು ಬ್ರಾಂಡ್ ಮಾಡಿ ಯಾವುದೇ ವಿಚಾರಣೆ ಇಲ್ಲದೆ ಮೂರು ತಿಂಗಳಿಂದ ಪ್ರಾರಂಭವಾಗಿ ೧೨ ತಿಂಗಳವರೆಗೂ ಜೈಲಿನಲ್ಲಿ ಇರಿಸುವಂಥ ಒಂದು ಪ್ರಯತ್ನಕ್ಕೆ ಇವರು ಕೈಹಾಕಿದ್ದಾರೆ ಎಂಬುದು ನನ್ನ ವಿಷಾದಕ್ಕೆ ಕಾರಣವಾಗಿದೆ. ಆದ್ದರಿಂದ ಇದರಲ್ಲಿ ಪರಿಷ್ಕರಣ ಆಗಲೇಕಾಗುತ್ತದೆ. ಮಾನ್ಯ ವೀರಪ್ಪ ಮೊಯಿಲಿ ಅವರು ಪುನರ್‌ಪರಿಶೀಲನೆ ಆಗಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಕೆಟ್ಟದ್ದಾಗಬಹುದು ಎಂಬ ಶಂಕೆ ಇರುವುದರಿಂದ ನಾವು ಈ ಬಿಲ್ಲನ್ನು ವಿರೋಧ ಮಾಡಬೇಕಾಗಿದೆ. ನಾನು ಕಾರ್ಮಿಕ ಕ್ಷೇತ್ರದಲ್ಲಿ ದುಡಿಯುವ ವ್ಯಕ್ತಿ. ಕಾರ್ಮಿಕ ಸಂಘಟನೆ ಆಗಿರುವುದು ಒಳ್ಳೆಯ ಉದ್ದೇಶಕ್ಕೋಸ್ಕರ. ನನ್ನ ಕಿರು ಅನುಭವದಲ್ಲಿ ಹೇಳುವುದಾದರೆ ಎಷ್ಟೋ ಸಾರಿ ನಮ್ಮ ಹೋರಾಟ ಹಣದ ಶಕ್ತಿ ವಿರುದ್ಧ ನಡೆಯುತ್ತದೆ. ಅಧ್ಯಕ್ಷರೇ, ಇನ್ನೊಂದು ಅನುಭವವನ್ನು ನಾನು ಹೇಳುತ್ತೇನೆ. ಈ ಅನುಭವ ತಮಗೂ ಆಗಿರಬಹುದು ಎಂದು ಭಾವಿಸಿದ್ದೇನೆ. ಹಣದ ಶಕ್ತಿ ಯಾವುದೇ ಶಕ್ತಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ತನ್ನ ಭಾವನೆಗಳು ವಿಚಾರಗಳ ಕಡೆ ಒಲೈಸಿಕೊಳ್ಳುವ ಪ್ರಯತ್ನ ಮಾಡುತ್ತದೆ. ಕಾರ್ಮಿಕರ ಕೆಲವಾರು ಉದ್ದೇಶಗಳನ್ನು ಮುಂದಿಟ್ಟು ಕೊಂಡು ಬೆಂಗಳೂರು ನಗರದಲ್ಲಿ ಹೋರಾಟ ನಡೆಸಿದ ಸಂದರ್ಭದಲ್ಲಿ ನನ್ನೊಡನೆ ಭುಜಕ್ಕೆ ಭುಜ ಕೊಟ್ಟು ಕೆಲಸ ಮಾಡಿದ ವ್ಯಕ್ತಿಗಳನ್ನು ದುರುದ್ದೇಶದಿಂದ ಅಪಾದನೆ ಹೊರಿಸಿ ಜೈಲಿಗೆ ಹಾಕಿರುವಂಥದ್ದು ಮತ್ತು ಅವರ ಚಟುವಟಿಕೆಗಳನ್ನು ಸದೆಬಡಿಯುವಂಥದ್ದು ನಡೆದಿದೆ. ಕೆಲವು ಸಮಯದ ಹಿಂದೆ ಎಸ್ಕಾರ್ಟ್ಸ್ ಸಂಸ್ಥೆಯಲ್ಲಿ ಕಾರ್ಮಿಕರಿಗೆ ತಮ್ಮ ಬೆವರಿನ ಫಲ ಸಿಗುತ್ತಿಲ್ಲ ಎಂಬ ಕಾರಣದಿಂದ ಹೋರಾಟ ಪ್ರಾರಂಭವಾಯಿತು. ಹೋರಾಟ ನಡೆದು ಒಂದು ಜನರಲ್ ಬಾಡಿ ಮಾಡುತ್ತಿದ್ದ ಸಂದರ್ಭದಲ್ಲಿ ಯಾವುದೇ ಕಾರಣ ಇಲ್ಲದೆ ಒಂದು ಕಡೆಯಿಂದ ಗೂಂಡಾಗಿರಿ ಮಾಡಿಸುವ ಪ್ರಯತ್ನ, ಲಾಠಿ ಚಾರ್ಜ್, ಅಶ್ರುವಾಯು

ಎಂ ...ಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಪ್ರಯೋಗ ನಡೆದಿದೆ. ಪೋಲೀಸ್ ರೆಕಾರ್ಡ್‌ನಲ್ಲಿ ಯಾರು ಅಪರಾಧ ಮಾಡಿದ್ದಾರೋ ಅವರು ಅಪರಾಧಿ
ಗಳಾಗಲಿಲ್ಲ. ನಿರಪರಾಧಿಗಳು ಅಪರಾಧಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ. ಗೃಹಸಚಿವರಾದ ರಾಚಯ್ಯ
ನವರಿಗೆ ನಾನು ಈ ವಿಚಾರವನ್ನು ತಿಳಿಸಿದೆ. ವಿನಾಕಾರಣವಾಗಿ ಸದೆಬಡಿಯುವ ಪ್ರಯತ್ನ ಮಾಡಿದಾಗ
ಅವರಿಗೆ ವಿಚಾರವನ್ನು ತಿಳಿಸಿದಾಗ ಕಾರ್ಮಿಕ ಸಚಿವರು ಗೃಹ ಸಚಿವರು ಆಶ್ವಾಸನೆಗಳನ್ನು ಕೊಟ್ಟರು.
ನನ್ನ ಅನುಮಾನ ಏನೆಂದರೆ ಸಾಮಾಜಿಕ ಪರಿಸ್ಥಿತಿಯಲ್ಲಿ ಅಪರಾಧಿಯನ್ನು ಗುರುತಿಸುವ ಸಂದರ್ಭದಲ್ಲಿ
ಬಹಳಷ್ಟು ಸಾರಿ ಅಪರಾಧಿಗಳು ನಿರಪರಾಧಿಗಳಾಗುತ್ತಾರೆ, ನಿರಪರಾಧಿಗಳು ಅಪರಾಧಿಗಳಾಗುತ್ತಾರೆ.
ಆದ್ದರಿಂದ ಇಂಥ ಕಠಿಣವಾದ ಕಾನೂನನ್ನು ತಂದಾಗ ನಮ್ಮಂಥವರಿಗೆ ಭಯ ಮೂಡುವಂಥದ್ದು
ಸಹಜ. ಈ ಕಾನೂನನ್ನು ಉಪಯೋಗ ಮಾಡುವ ವ್ಯಕ್ತಿ ಯಾರು ಎಂಬುದನ್ನು ಯೋಚನೆ ಮಾಡ
ಬೇಕು, ಯಾರು ಈ ಕಾನೂನನ್ನು ತಂದಿದ್ದಾರೋ ಆ ವ್ಯಕ್ತಿಗಳು ನೇರವಾಗಿ ಇದರಲ್ಲಿ ಸಂಪರ್ಕ
ಹೊಂದಿರುವುದಿಲ್ಲ. ಪೋಲೀಸ್ ಅಧಿಕಾರಿಗಳು ನಿರ್ಧಾರ ಮಾಡುತ್ತಾರೆ ಯಾರು ಸಾಮಾಜಿಕ ಶಾಂತಿ
ಯನ್ನು ಕೆಡಿಸುತ್ತಾರೆ, ಯಾರು ತಪ್ಪಿತಸ್ಥರು ಎಂಬುದನ್ನು ಪೋಲೀಸರು ತೀರ್ಮಾನ ಮಾಡುತ್ತಾರೆ
ಅದರ ಆಧಾರದ ಮೇಲೆ ಈ ಕಾನೂನಿನ ಮೂಲಕ ವಿಚಾರಣೆಯಿಲ್ಲದೆ, ಜಾಮೀನಿಗೆ ಅವಕಾಶವಿಲ್ಲದ
ಬಂಧನದಲ್ಲಿ ಇಡತಕ್ಕ ಪರಿಸ್ಥಿತಿ ಬರುತ್ತದೆ. ೧೯೭೫, ೭೬, ಮತ್ತು ೭೭ನೇ ಇಸವಿಯಲ್ಲಿರಬಹುದು, ಆಗ
ದೇಶದಲ್ಲಿ ಒಂದು ದೊಡ್ಡ ಹೋರಾಟ ನಡೆಯಿತು. ಆಗ ಯಾವ ವರ್ಗ ನಿರಪರಾಧಿ ಜನರನ್ನು ಜೈಲಿನಲ್ಲಿ
ಹಾಕಿತ್ತೋ ಅದೇ ವರ್ಗದ ಅಧಿಕಾರಿಗಳು ಈಗಲೂ ಇದ್ದಾರೆ, ಸ್ಥಾನಗಳು ಬದಲಾವಣೆಯಾಗಿರಬಹುದು
ಇಲ್ಲಿ ಕುಳಿತಿರುವ ವ್ಯಕ್ತಿಗಳು ಅಲ್ಲಿ ಕುಳಿತಿರಬಹುದು. ಅಲ್ಲಿ ಕುಳಿತಿರುವವರು ಇಲ್ಲಿ ಕುಳಿತಿರಬಹುದು.
ಅಂದರೆ ಒಟ್ಟಿನಲ್ಲಿ ಅಧಿಕಾರಿಗಳು ಕೂತಲ್ಲೇ ಕೂತಿದ್ದಾರೆ. ಅವರಲ್ಲಿ ಮಾನಸಿಕ ಪರಿವರ್ತನೆ ಆಗಿರುವು
ದನ್ನು ನಾವು ಕಂಡಿಲ್ಲ. ಅಂಥವರಿಗೆ ಈ ಕಾನೂನು ಮಾಡಿ ಹೊಸ ಆಯುಧವನ್ನು ಕೊಡುತ್ತಿರುವುದ
ರಿಂದ ನಮಗೆ ಭಯವಾಗುತ್ತಿದೆ. ಮಾರಕ ಅಸ್ತ್ರ ಶಾಂತಿಯ ಉದ್ದೇಶಕ್ಕೋಸ್ಕರ ಎಂದು ಅನೇಕ
ಸಾರಿ ಪ್ರಾರಂಭವಾಗುತ್ತದೆ. ಆದರೆ ಅದರ ಪರಿಣಾಮ ಅತ್ಯಂತ ಘೋರವಾಗಿ ಈ ಜಗತ್ತಿನ ಇತಿ
ಹಾಸದಲ್ಲಿ ಆಗಿರುವುದನ್ನು ನೋಡಿದ್ದೇವೆ. ಆಯುಧಗಳನ್ನು ಮಾಡುವಾಗ ಅದರ ಹರಿತ ಹೆಚ್ಚು
ಮಾಡುವುದು ಸರಿಯಲ್ಲ. ಎಷ್ಟು ಹರಿತವಾಗಿ ಆಯುಧ ಮಾಡುತ್ತೇವೆಯೋ ಅಷ್ಟೇ ಹೆಚ್ಚು ಅಪಾಯ
ವಾಗುವ ಸಂಭವ ಬರಬಹುದು. ಈ ನೆಲೆಯಲ್ಲಿ ನೀವು ಈ ವಿಚಾರವನ್ನು ಪರ್ಯಾಲೋಚಿಸಬೇಕೆಂದು
ವಿನಯಪೂರ್ವಕವಾಗಿ ಕೋರಿಕೊಳ್ಳುತ್ತೇನೆ. ಈ ಕಾನೂನಿನಲ್ಲಿ ಸೇರಿರುವಂಥ ಕೆಲವು ವರ್ಗದ ಬಗ್ಗೆ
ನಾವು ಗಮನ ಹರಿಸಬೇಕಾಗಿದೆ. ಮಟ್ಕಾ ಆಡುವವರನ್ನು ಇದರಲ್ಲಿ ಸೇರಿಸಿದ್ದಾರೆ. ಯಾವ ಸಮಾಜ
ದಲ್ಲಿ ನಾವು ಈ ಕಾನೂನನ್ನು ತರುತ್ತಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕು. ಅಧಿಕೃತವಾಗಿ
ಜೂಜಾಟ ಆಡಿಸುವ ಜನ ನಾವು, ಗಲ್ಲಿಗಲ್ಲಿಯಲ್ಲಿ ಲಾಟರಿ ಟಿಕೆಟ್ ಮಾರಾಟ ಮಾಡುವುದಕ್ಕೆ ಅವಕಾಶ
ಕೊಟ್ಟಿರುವ ನಾವು, ನಾಲ್ಕಾಣೆ ಕಟ್ಟುವ ಮೂಲಕ ನಾಲ್ಕು ಸಾವಿರ ರೂಪಾಯಿಗಳನ್ನು ಸಂಪಾದನೆ
ಮಾಡಬಹುದು ಎಂದು ಮಟ್ಕಾ ಆಡುವ ಬಡತನದ ಬೇಗೆಯಲ್ಲಿರುವ ಮನುಷ್ಯನನ್ನು ಗ್ಯಾಂಬ್ಲರ್
ಎಂದು ಹೇಳಿ ಮೂರು ತಿಂಗಳು, ಆರು ತಿಂಗಳು, ೧೨ ತಿಂಗಳು ಜೈಲಿನಲ್ಲಿ ಕೂರಿಸುತ್ತಿದ್ದೇವೆ. ಹಣ
ಇರುವವರಿಗೆ ಗ್ಯಾಂಬ್ಲಿಂಗ್ ಮಾಡುವುದಕ್ಕೆ ಬೇಕಾದಷ್ಟು ಸವಲತ್ತುಗಳಿವೆ. ಅನೇಕ ಕ್ಲಬ್‌ಗಳಿವೆ.
ಗ್ಯಾಂಬ್ಲಿಂಗ್ ಮಾಡುತ್ತಿರುವವರು ಯಾರು ? ನಾವು ನೀವು. ನಮ್ಮ ಜೊತೆ ನಮ್ಮ ಪತ್ನಿಯರನ್ನು
ಕರೆದುಕೊಂಡು ಕ್ಲಬ್‌ಗಳಿಗೆ ಹೋಗುತ್ತೇವೆ. ಅಲ್ಲಿ ಮನರಂಜನೆ ಪಡೆಯುತ್ತೇವೆ. ಆದರೆ ನಾಲ್ಕಾಣೆ
ಕಟ್ಟಿ ಮಟ್ಕಾ ಆಡುವುದು ಇವೊತ್ತಿನ ದಿವಸ ಗ್ಯಾಂಬ್ಲಿಂಗ್ ಆಗಿದೆ. ಲೋಹಿಯಾ ಅವರ ಚಿಂತನೆಯಲ್ಲಿ
ಬರುವವರು ಜೆ. ಎಚ್. ಪಟೇಲರು ಇರಬಹುದು, ಎಂ. ಪಿ. ಪ್ರಕಾಶ್ ಅವರು ಇರಬಹುದು, ಮತ್ತೊಬ್ಬರಿರ
ಬಹುದು. ಲೋಹಿಯಾ ಅವರ ಪುಸ್ತಕಗಳನ್ನು ಅಮೂಲಾಗ್ರವಾಗಿ ಓದಿದ್ದೇನೆಂದು ವೇದಿಕೆಯಲ್ಲಿ
ಭಾಷಣ ಮಾಡುವ ಜನ ಮೂಲಭೂತವಾದ ಚಿಂತನೆಯನ್ನು ಏತಕ್ಕೆ ಮಾಡುತ್ತಿಲ್ಲ ? ಇದನ್ನೆಲ್ಲಾ
ತಪ್ಪಿಸಬೇಕಾದರೆ ಸಾಮಾಜಿಕ ಪರಿವರ್ತನೆ ಮತ್ತು ಮಾನಸಿಕ ಪರಿವರ್ತನೆಯಾಗಬೇಕೇ ವಿನಹ ಕಾನೂನಿ
ನಿಂದ ತಪ್ಪಿಸುವುದಕ್ಕಾಗುವುದಿಲ್ಲ. ನಾಲ್ಕಾಣೆ ಕಟ್ಟಿ ಮಟ್ಕಾ ಆಡುವವನನ್ನು ಶಿಕ್ಷಿಸುವುದಕ್ಕೆ ಪ್ರಯತ್ನ
ಮಾಡುವ ಮೊದಲು ಏತಕ್ಕಾಗಿ ಅವನು ಅದನ್ನು ಆಡುತ್ತಿದ್ದಾನೆ ಎಂಬ ಯೋಚನೆ ಏಕೆ ಮಾಡುತ್ತಿಲ್ಲ ?
ಅವನ ಆರ್ಥಿಕ ಪರಿಸ್ಥಿತಿ ಬಗ್ಗೆ ಏಕೆ ಯೋಚದೆ ಮಾಡುತ್ತಿಲ್ಲ? ಅವನ ಭದ್ರತೆ ಇಲ್ಲದಂಥ ವ್ಯವಸ್ಥೆ
ಬಗ್ಗೆ ಏತಕ್ಕೆ ತಾವು ಯೋಚನೆ ಮಾಡುತ್ತಿಲ್ಲ ? ಗೂಂಡಾಗಳನ್ನು, ಬೂಟ್ ಲೆಗ್ಗರ್‌ಗಳನ್ನು ನೀವು
ಜೈಲಿಗೆ ತಳ್ಳಬಹುದು, ಆದರೆ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ನಿಮ್ಮ ಕೈಯಲ್ಲಾಗು
ತ್ತಿಲ್ಲ.

ಸಂಪಾದಕ ... ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು

ಆದ್ದರಿಂದ ಕಾನೂನು ಇರುವಂಥ ಸಂದರ್ಭದಲ್ಲಿ ಒಂದು ಆಜ್ಞೆಯನ್ನು ಕೈಗೆ ತೆಗೆದುಕೊಳ್ಳುವುದರ ಮೂಲಕ ಈ ವರ್ಗದ ಮೇಲೆ ಬಳಸುವಂಥಾದ್ದಲ್ಲ. ತಮಗೆ ಆಗದಿರುವಂಥ ವಿರೋಧಿಗಳು ಎನಿಸಿಕೊಂಡವರು ಯಾರಿದ್ದಾರೆ ಅವರ ಮೇಲೂ ಕೂಡ ಇದನ್ನು ಬಳಸುವಂಥ ಪ್ರಯತ್ನವನ್ನು ತಾವು ಮಾಡುತ್ತೀರಿ ಎನ್ನುವಂಥ ಅನುಮಾನ ನನಗೆ ಇದೆ. ಆದರೆ ಹಾಗೆ ಬಳಸುವುದಿಲ್ಲ ಎಂದು ತಾವು ಹೇಳುವುದಾದರೆ ಇದನ್ನು ವರ್ಗೀಕರಿಸಿ ಹೇಳಬೇಕು. ರಾಜಕೀಯ ಕ್ಷೇತ್ರದಲ್ಲಿ ಹೋರಾಟ ಮಾಡತಕ್ಕ ವ್ಯಕ್ತಿಗಳ ಮೈಮುಟ್ಟಲಿಕ್ಕೆ ನಾವು ಈ ಕಾನೂನನ್ನು ಬಳಸಲು ಹೋಗುವುದಿಲ್ಲ ಕಾರ್ಮಿಕ ಕ್ಷೇತ್ರದಲ್ಲಿ ಹೋರಾಟ ಮಾಡತಕ್ಕಂಥ ಕಾರ್ಮಿಕವರ್ಗ ಯಾವುದು ಇದೆ ಇದನ್ನು ಮುಟ್ಟಲಿಕ್ಕೆ ಈ ಕಾನೂನು ಉಪಯೋಗ ಮಾಡುವುದಿಲ್ಲ, ಈ ವರ್ಗಗಳನ್ನು ಹೊರತುಪಡಿಸಿ ಉಳಿದವರ ಮೇಲೆ ಮಾತ್ರ ಇದನ್ನು ಚಲಾಯಿಸುತ್ತೇವೆ ಎನ್ನುವಂತಹ ಮಾತನ್ನು ಈ ಕಾನೂನಿನಲ್ಲಿ ತಾವು ಎಲ್ಲೂ ಉಲ್ಲೇಖ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ನನ್ನ ಪಕ್ಷದ ಕಾರ್ಯಕರ್ತರು ಇರುತ್ತಾರೆ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಮಾನ್ವಿ ಪ್ರದೇಶದಲ್ಲಿ ಏನೋ ಗಲಾಟೆ ಆಯಿತು ಎಂದು ನಾನು ಹೋಗಿ ನೋಡಿದರೆ, ನಾನು ಹೋಗುವುದಕ್ಕೆ ಮುಂಚಿತವಾಗಿಯೇ ೧೮ ಜನರ ಮೇಲೆ ಚಾರ್ಜ್‌ಷೀಟ್ ಹಾಕಿದ್ದಾರೆ. ನಾನು ಆ ಪೋಲೀಸ್ ಇನ್‌ಸ್ಪೆಕ್ಟರನ್ನು ಕೇಳಿದೆ, ಸ್ವಾಮಿ ಚಪ್ಪಾಳೆ ಶಬ್ದ ಆಯಿತೆಂದು ತಮ್ಮ ಕಿವಿಗೆ ಕೇಳಿರಬಹುದು. ಆದರೆ ಎರಡೂ ಕೈ ಸೇರದೆ ಚಪ್ಪಾಳೆ ಆಗುವುದಕ್ಕೆ ಸಾಧ್ಯವೆ ? ಎಂದು ಅವರನ್ನು ಕೇಳಿದಾಗ ಅದಕ್ಕೆ ಅವರಿಂದ ಉತ್ತರವೇ ಇಲ್ಲ. ಯಾರೋ ಗಾಡಿಯಲ್ಲಿ ಸ್ವಲ್ಪ ಸೌದೆ ಸಾಗಿಸಿದರು ಎನ್ನುವ ಕಾರಣಕ್ಕೆ ಮಾನ್ವಿ ಎನ್ನುವ ಪ್ರದೇಶದಲ್ಲಿ ಚಂದ್ರಹಾಸ ಎನ್ನುವ ಒಬ್ಬ ನನ್ನ ಪಕ್ಷದ ಕಾರ್ಯಕರ್ತನನ್ನು ಚೆನ್ನಾಗಿ ಹೊಡೆದು, ಬಡಿದು ಎಳೆದುಕೊಂಡು ಹೋಗಿದ್ದಾರೆ. ತನ್ನನ್ನು ಏತಕ್ಕೆ ಕರೆದುಕೊಂಡು ಹೋದರು ಎಂದು ಆತನಿಗೆ ಗೊತ್ತಿಲ್ಲ. He has been linked with some other thing. ನೀವು ಯಾರಿಗಾದರೂ ತೊಂದರೆ ಕೊಡಬೇಕೆಂದು ಮನಸ್ಸು ಬಂದಾಗ ಈ ರೀತಿ ಮಾಡುತ್ತೀರಿ: ಪ್ರತಿಯೊಂದಕ್ಕೂ ಕಾನೂನು, ಈ ಕಾನೂನಿನಿಂದ ಹೊಟ್ಟೆ ತುಂಬಿಸುವುದು, ಕಾನೂನಿನಿಂದ ಸಾಮಾಜಿಕ ಶಾಂತಿಯನ್ನು ತರುವುದು ಇಂಥ ವಿಚಾರಗಳು ನಿಮ್ಮ ತಲೆಯಲ್ಲಿ ಏತಕ್ಕೆ ಹೊಳೆಯುತ್ತಿವೆಯೋ ಎಂದು ನಾನು ಕೇಳಬೇಕಾಗಿದೆ. ಆರ್ಥಿಕ ಪರಿವರ್ತನೆ ಮಾಡುವುದು, ಸಾಮಾಜಿಕ ಅಪರಾಧಗಳನ್ನು ದೂರ ಮಾಡುವುದಕ್ಕೆ ನಾವೂ, ನೀವೂ ಒಟ್ಟಿಗೆ ಕುಳಿತು ಆಲೋಚನೆ ಮಾಡೋಣ. ಈ ಸದನದಲ್ಲಿ ನಾವಿಬ್ಬರೂ ಕೂಡಿ ಆಲೋಚನೆ ಮಾಡುವುದಕ್ಕೆ ಒಳ್ಳೆಯ ಅವಕಾಶ ಸಿಕ್ಕಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಒಂದು ಮಾತನ್ನು ಹೇಳಿದರು, ಹೆಂಡತಿ ಮಕ್ಕಳು. ಸಂಸಾರ ಇರತಕ್ಕವರನ್ನು ಈ ಕಾನೂನು ಪ್ರಕಾರ ಜೈಲಿನಲ್ಲಿ ಕೂಡಿಸಿದರೆ ನಿಮಗೆ ಸಂತೋಷವೇ ? ಇವೊತ್ತು ತಾವು ಹೇಳಬಹುದು ನಿಮ್ಮ ಪಕ್ಷದವರು ಮಾಡಲಿಲ್ಲವೇ ಎಂದು ? ಹೌದು ದುಶ್ಯಾಸನ ದ್ರೌಪದಿ ವಸ್ತ್ರವನ್ನು ಅಪಹರಣ ಮಾಡಿದ್ದಾನೆ ನಿಜ. ಹಾಗಾದರೆ ಆ ವಸ್ತ್ರಾಪಹರಣವನ್ನು ಕಂಡು ಹಲ್ಲು ಕಡಿದು ರಕ್ತವನ್ನು ಕುದಿಸಿಕೊಂಡ ಭೀಮ ಇನ್ನೊಬ್ಬಳ ವಸ್ತ್ರಾಪಹರಣವನ್ನು ಮಾಡುವುದಕ್ಕೆ ಪ್ರಯತ್ನ ಮಾಡುವುದೇ ? ಎನ್ನುವ ಪ್ರಶ್ನೆಯನ್ನು ನಾನು ತಮಗೆ ಕೇಳುತ್ತಿದ್ದೇನೆ. ನೀವು ಮಾಡಿದಿರಿ, ಆದ್ದರಿಂದ ನಾವೂ ಮಾಡುತ್ತಿದ್ದೇವೆ ಎಂದು ತಾವು ಹೇಳುವುದಾದರೆ, ನಾವು ಮಾಡಿದ್ದನ್ನೇ ನೀವೂ ಮಾಡುವುದಾದರೆ ಅದು ಸರಿಹೋಗುತ್ತದೆಯೋ ? ನೀವು ಈ ರೀತಿ ಮಾಡಿದ್ದರಿಂದ ಅದರ ನೋವನ್ನು ಬಹಳ ಜನರು ಅನುಭವಿಸಿದ್ದಾರೆ, ನೀವು ಮಾಡಿದ ಅಪರಾಧದಿಂದ ಇಂಥ ಕೆಟ್ಟ ಪರಿಸ್ಥಿತಿ ಉಂಟಾಯಿತು ಎಂದು ತಾವೇ ಬಾಯಿಬಿಟ್ಟು ಹೇಳಿದ್ದೀರಿ ಕಾನೂನು ದುರುಪಯೋಗ ಆಗಿದೆಯೆಂದು ತಾವೇ ಹೇಳಿದ್ದೀರಿ. ಆದರೆ ನಮ್ಮಂತೆ ನೀವೂ ಈಗ ಮಾಡುವುದಾದರೆ ಮತ್ತೆ ಬಹಳ ಜನರು ನೋವು, ಸಂಕಟಗಳನ್ನು ಅನುಭವಿಸಬೇಕಾಗುತ್ತದೆಂದು ನಾವು ಹೇಳುವುದರಲ್ಲಿ ತಪ್ಪೇನಿದೆ ? ನಾವು ಇವೊತ್ತು ಈ ಕಾನೂನನ್ನು ಜಾರಿಗೆ ತರುತ್ತೇವೆಂದು ಹೇಳುವುದಾದರೆ ನಮಗೂ, ನಿಮಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದನ್ನು ತಾವು ದಯವಿಟ್ಟು ಒಪ್ಪಿಕೊಳ್ಳಬೇಕು. ನೀವು ಪತಿವ್ರತೆಯರಾಗಿ ಇನ್ನೊಬ್ಬರ ಪಾತಿವ್ರತ್ಯದ ಬಗ್ಗೆ ಪ್ರಶ್ನೆ ಮಾಡತಕ್ಕ ಜನರು ನೀವು ಆಗಬಾರದು. ನೀವು ಯಾವ ಭಾವನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವನ್ನು ಕಾರ್ಯಗತ ಮಾಡುತ್ತೀರಿ ? ೧೯೭೭ ರಲ್ಲಿ ನೀವು ಅಧಿಕಾರಕ್ಕೆ ಬರುವವರೆಗೆ ನನ್ನಲ್ಲಿ ಕೂಡ ಮನಸ್ಸಿನಲ್ಲಿ ಒಂದು ಭಾವನೆ ಇತ್ತು, ಲೋಕನಾಯಕ ಜಯಪ್ರಕಾಶ್ ಜಿಂದಾಬಾದ್ ಎಂದು ಹೇಳಿಕೊಂಡು ಅಧಿಕಾರದ ಕುರ್ಚಿಯಲ್ಲಿ ಕುಳಿತಂಥ ಜನರು ತಮ್ಮ ಪಕ್ಷದಲ್ಲಿ ಗಲಾಟೆ ಆಯಿತು ಎಂದು ಒಂದು ಠರಾವು ತಂದಾಗ ನೀವು ಯಾರೀ

ಹೇಳುವುದಕ್ಕೆ you are an outsider' ಎಂದು ಹೇಳಿದಂಥ ಜನ ನೀವು. ಆದೇ ರೀತಿ ಕಾವೇರಿ ಮಸೂದೆಯನ್ನು ತಂದಂಥ ಜನರು ನೀವು ಇವೊತ್ತು ಕೇಂದ್ರ ಸರ್ಕಾರದಿಂದ ತಳ್ಳಲ್ಪಟ್ಟ ನೀವು ಈಗ ರಾಜ್ಯದಲ್ಲಿ ಆಡಳಿತಕ್ಕೆ ಬಂದಿದ್ದೀರಿ...

ಅಧ್ಯಕ್ಷರು.— ತಾವು ಸಭೆಯ ಮುಂದಿರತಕ್ಕ ಮಸೂದೆಯ ಬಗ್ಗೆ ದಯವಿಟ್ಟು ಮಾತನಾಡಿ.

ಶ್ರೀ ಬಿ.ಎ. ಉಮರಬ್ಬ.—ಸ್ವಾಮಿ, ನಾನು ಮಾತನಾಡುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಏಕೆಂದರೆ ನಾನು ಹೊಸ ಸದಸ್ಯ. ಇವೊತ್ತು ಗಂಡ ಹೆಂಡತಿಯರ ಸಂಬಂಧ ಕೂಡ ಈ ಸಮಾಜದಲ್ಲಿ ಒಂದು ರಾಜಕೀಯ ಎಂದು ಹೇಳಬೇಕಾಗಿದೆ. ಹೇಗೆಂದರೆ, ರಾತ್ರಿ ಹೊತ್ತು ಮನೆಗೆ ಹೊತ್ತಾಗಿ ಹೋದಾಗ ಅವಳು ಬೈಯುತ್ತಾಳೆಂದು ಏನೋ ಒಂದು ಕಾರಣವನ್ನು ಹುಡುಕಿಕೊಂಡು ಹೋಗಿ ಹೇಳಬೇಕಾಗುತ್ತದೆ. ಇದೂ ಒಂದು ರಾಜಕೀಯ. ಅಲ್ಲದಿದ್ದರೆ ಅವಳು ಕೇಳಿದ್ದನ್ನು ಕೊಡಿಸುವುದಕ್ಕೆ ಆಗದಿದ್ದರೆ ಆಗ ಇನ್ನೊಂದು ಕಾರಣವನ್ನು ಹುಡುಕಿ ಹೇಳಬೇಕಾಗುತ್ತದೆ. ಇದೂ ಕೂಡ ಒಂದು ರೀತಿಯ ರಾಜಕೀಯ......

ಮಾನ್ಯ ಸದಸ್ಯರು.—ನೀವು ಏನೋ ಹೇಳುತ್ತಿದ್ದೀರೆಂದು ನಾವು ಸುಮ್ಮನೆ ಕುಳಿತಿದ್ದೇವೆ. ಆದರೆ. ಇಲ್ಲಿ ರಾಜಕೀಯ ಪ್ರಚಾರ ಭಾಷಣ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಮಾನ್ಯ ಉಮರಬ್ಬನವರೇ ದಯವಿಟ್ಟು ಬಿಲ್‌ನ ಬಗ್ಗೆ ಮಾತನಾಡಿ.

ಶ್ರೀ ಬಿ.ಎ. ಉಮರಬ್ಬ.—ಯಾವುದೇ ರಾಜಕೀಯ ಪ್ರಚಾರ ಭಾಷಣವನ್ನು ಮಾಡುವಂಥ ಉದ್ದೇಶ ನನಗಿಲ್ಲ. ಏಕೆಂದರೆ ಚುನಾವಣೆಗೆ ನಿಂತಿದ್ದೂ ಆಗಿದೆ, ಮತ್ತು ಅದರಲ್ಲಿ ಗೆದ್ದಿದ್ದೂ ಆಗಿದೆ. ಇನ್ನು ೪-೫ ವರ್ಷ ಇಲ್ಲಿರುತ್ತೇವೆ. ಆದರೆ ಈಗ ನಾನು ನಿಮ್ಮನ್ನು ಓಟು ಕೊಡಿ ಎಂದು ಕೇಳುತ್ತಿಲ್ಲ. ಅಂಥ ಉದ್ದೇಶ ನನ್ನ ಹತ್ತಿರ ಇಲ್ಲ. ಆದರೆ ಒಂದೊಂದೇ ಇತಿಹಾಸವನ್ನು ನಾನು ತಮ್ಮ ಮುಂದೆ ಬಿಚ್ಚುತ್ತಿದ್ದೇನೆ. ಈ ಇತಿಹಾಸದಲ್ಲಿ ಇಂಥ ಕಾನೂನು ಮುಖಾಂತರ ಆದಂಥ ಅಕ್ರಮಗಳು ಏನು? ಎಷ್ಟು ಜನರು ನೋವು ಅನುಭವಿಸಿದ್ದಾರೆ, ಕಷ್ಟವನ್ನು ಅನುಭವಿಸಿದ್ದಾರೆ, ಎಂಬುದನ್ನು ನೀವು ಮರೆತಿದ್ದೀರಿ. ಆದ್ದರಿಂದ ಅದನ್ನೆಲ್ಲಾ ಮತ್ತೆ ನಿಮಗೆ ನೆನಪು ಮಾಡಿಕೊಡುತ್ತಿದ್ದೇನೆ. ನೀವು ಏನು ಒಳ್ಳೆಯದನ್ನು ಮಾಡಬೇಕೆಂದು ಹೊರಟಿದ್ದೀರಿ ಅದಕ್ಕಿಂತಲೂ ಹೆಚ್ಚು ಕೆಟ್ಟದ್ದು ಈ ಮಸೂದೆಯಿಂದ ಆಗುತ್ತದೆ. ಸ್ವಾಮಿ ನಾನು ಒಬ್ಬ ಮುಸಲ್ಮಾನ. ಈ ಮಸೂದೆಯನ್ನು ಮಂಡಿಸಿದಂಥ ವ್ಯಕ್ತಿ ಒಂದು ಹರಿಜನ ಕುಟುಂಬದಲ್ಲಿ ಹುಟ್ಟಿದವರು. ಕಾನೂನು ಇತ್ಯಾದಿಯನ್ನು ಮರೆತು, ಅಥವಾ ತಿಳಿಯದೆ ತಪ್ಪುಗಳನ್ನು ಮಾಡುವವರು ಎಂದರೆ ನನ್ನ ಜಾತಿಯವರು ಅಥವಾ ಇದನ್ನು ಮಂಡಿಸಿದಂಥ ಸಚಿವರ ಜಾತಿಯವರು. ಇವರು ಎಂದರೆ ಈ ಜಾತಿಯ ಜನರು ನೋವನ್ನು ಅನುಭವಿಸುವ ಪರಿಸ್ಥಿತಿ ಬರಬಹುದು ಎನ್ನುವಂಥ ಭಾವನೆ ನನ್ನ ಮನಸ್ಸಿನಲ್ಲಿದೆ. ಉದಾಹರಣೆಗೆ ಹೇಳುವುದಾದರೆ, ಈ ವರ್ಗದ ಜನರು ಒಂದು ಮನೆಯನ್ನು ಕಟ್ಟಿಕೊಳ್ಳಬೇಕಾದರೆ ಎಲ್ಲಿ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಗೊತ್ತಿರುವುದಿಲ್ಲ. ಯಾವಾಗ ನಮಗೆ ನ್ಯಾಯ ಸಿಕ್ಕುವುದಿಲ್ಲ ಅಂಥ ಸಂದರ್ಭದಲ್ಲಿ ಆ ನ್ಯಾಯವನ್ನು ಕಸಿಯಬೇಕೆಂಬ ಉದ್ದೇಶದಿಂದ ಅಲ್ಲವೆ ನಾವು ಝಂಡಾ ಹಿಡಿದುಕೊಂಡು ಚಳುವಳಿಯನ್ನು ಮಾಡುವುದು. ಇದು ತಮಗೆಲ್ಲಾ ಗೊತ್ತಿದೆ. ನಾಳೆಯ ದಿವಸ ನಾವು ಭೂ ಅಕ್ರಮಣ ಚಳುವಳಿಯನ್ನು ಮಾಡಲು ಸಾಧ್ಯವೆ? ಅದನ್ನು ಮಾಡಿದರೆ ಈಗಿನ ಕಾನೂನು ಪ್ರಕಾರ ೩ ತಿಂಗಳಿಂದ ೧೨ ತಿಂಗಳವರೆಗೆ ಜೈಲಿನಲ್ಲಿ ಇಡುತ್ತೀರಿ. ಸಮಾಜದಲ್ಲಿ ಈ ಸಾಮಾಜಿಕ ನ್ಯಾಯದಿಂದ ವಂಚಿತರಾದಂಥ ಜನರು ಯಾರು ಎಂದರೆ ನನ್ನ ವರ್ಗದವರು ಮತ್ತು ಶ್ರೀಮಾನ್ ರಾಚಯ್ಯನವರ ವರ್ಗದವರು. ಈ ವರ್ಗಕ್ಕೆ ಅನ್ಯಾಯವಾಗುತ್ತದೆಂದು ತಮ್ಮ ಮನಸ್ಸಿಗೆ ಹೊಳೆಯಲೇ ಇಲ್ಲವೆ? ಇರಲಿಕ್ಕೆ ಒಂದು ಸೂರು ಬೇಕು, ಮಳೆ ಗಾಳಿ, ಚಳಿ, ಬಿಸಿಲಿನಿಂದ ರಕ್ಷಣೆ ಬೇಕು ಎನ್ನತಕ್ಕ ನನ್ನ ಅಥವಾ ಮಾನ್ಯ ರಾಚಯ್ಯನವರ ವರ್ಗದವರು ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಇಂಥವರನ್ನು ಜೈಲಿನಲ್ಲಿ ಕೂಡಿಸಬೇಕೆಂದು ತಾವು ಹೇಳುವುದಾದರೆ ಈ ಕಾನೂನು, ಈ ಕಾಯಿದೆ ಏನಿದೆ ಇದು ಒಂದಲ್ಲೊಂದು ರೀತಿಯಲ್ಲಿ ಭಸ್ಮಾಸುರನಿಗೆ ಕೊಟ್ಟಂಥ ವರದ ಪ್ರಕಾರ ನಿಮ್ಮ ಅಥವಾ ನನ್ನ ವರ್ಗದವರ ತಲೆಯಮೇಲೆ ಬರುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಗೃಹ ಸಚಿವರು ತಂದಿರತಕ್ಕ ಈ ತಿದ್ದುಪಡಿ ಮಸೂದೆ ಕೆಲವು ವಿಚಾರಗಳಲ್ಲಿ ಬಹಳ ಮಾನವೀಯತೆಯಿಂದಿದ್ದರೂ ಕೂಡ

ಅನೇಕ ತೊಡಕುಗಳು ಇರುವುದರಿಂದ ಅದರ ನಿವಾರಣೆಗಾಗಿ ಕೆಲವು ವಿಷಯಗಳನ್ನು ನಾನು ಹೇಳಬೇಕಾಗುತ್ತದೆ.

ಇವೊತ್ತು ಸದನದ ಮುಂದೆ ತಂದಿರತಕ್ಕ ಈ ಮಸೂದೆ ಅನೇಕ ವಿಚಾರಗಳಲ್ಲಿ ಒಳ್ಳೆಯ ಅಭಿಪ್ರಾಯವನ್ನು ಒಳ್ಳೆಯ ಉದ್ದೇಶವನ್ನು ಹೊಂದಿದ್ದರೂ ಅದರಿಂದ ಆಗತಕ್ಕ ಹಲವಾರು ಅನಾಹುತಗಳನ್ನು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಬಹಳ ಪುರಾತನ ಕಾಲದಿಂದ ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ ಎನ್ನುವ ಮಾತನ್ನು ಕೇಳುತ್ತಲೇ ಬಂದಿದ್ದೇವೆ. ಪ್ರವಾದಿಗಳ ಕಾಲದಿಂದ, ಎಷ್ಟೋ ರಾಜಮಹಾರಾಜರುಗಳ ಕಾಲದಿಂದ ಮಹಾಭಾರತ. ರಾಮಾಯಣದ ಕಾಲದಿಂದ ಕಂಡು ಬಂದಿರುವಂಥ ಚಿತ್ರ ಇದು. ದುಷ್ಟತನವನ್ನು ನೀಗಿಸಬೇಕು, ಶಿಷ್ಟತನವನ್ನು ಪರಿಪಾಲನೆ ಮಾಡಬೇಕು. ಇದಕ್ಕೆ ಏನೆಲ್ಲಾ ಆಗಬೇಕಾಗಿದೆ ಅದನ್ನೆಲ್ಲಾ ಮಾಡುತ್ತಲೇ ಬಂದಿದ್ದೇವೆ. ಆದರೆ ಇಂದಿನವರೆಗೂ ದುಷ್ಟತನ ನೀಗಲಿಲ್ಲ, ಶಿಷ್ಟತನ ಪರಿಪಾಲನೆ ಆಗಲಿಲ್ಲ. ಈ ದಿಸೆಯಲ್ಲಿ ಎಷ್ಟೋ ಸಾವಿರಾರು ವರ್ಷಗಳು ಮುಗಿದುಹೋದುವು. ಇದು ವಿಜ್ಞಾನದ ಕಾಲ, ಬುದ್ಧಿವಂತಿಕೆಯ ಕಾಲ. ಇಂಥ ಕಾಲದಲ್ಲಿ ದುಷ್ಟತನದ ಪರ್ಯವಸಾನ ಆಗಬೇಕಾಗಿದೆ ಆದುದರಿಂದಲೇ ನಾವು ಇಂಥ ಕಾನೂನುಗಳನ್ನು ಮಾಡುತ್ತಿದ್ದೇವೆ. ನಮಗೆ ಈಗಿರತಕ್ಕ ಅನೇಕ ಕಾನೂನುಗಳು ಸಾಲವೆ? ಇನ್ನೂ ಹೊಸದಾಗಿ ಕಾನೂನುಗಳನ್ನು ಮಾಡ ಬೇಕೇ? ಕಾನೂನನ್ನು ಮುರಿದಾಗ ಇನ್ನೊಂದು ಕಾನೂನು, ಆ ಕಾನೂನನ್ನು ಮುರಿದಾಗ ಮತ್ತೊಂದು ಕಾನೂನು, ಆ ಕಾನೂನೂ ಮುರಿದಾಗ ಇನ್ನೂ ಒಂದು ಕಾನೂನು ಹೀಗೆ ಕಾನೂನು ಮಾಡುವುದು, ಮುರಿಯುವುದು, ಕಾನೂನು ಮಾಡುವುದು, ಮುರಿಯುವುದು ಕಾನೂನಿಗೆ ಕಾನೂನು. ಕಾನೂನಿಗೆ ಕಾನೂನು, ಈ ರೀತಿ ಕಾನೂನುಗಳ ಸರಮಾಲೆಯೇ ಹೆಚ್ಚಿದರೆ ಆಗ ನಾವು ಕೆಲಸ ಮಾಡುವುದು ಕಷ್ಟ ವಾಗುತ್ತದೆ. ಬಡವರಿಗೆ, ದುರ್ಬಲವರ್ಗದವರಿಗೆ, ಹಿಂದುಳಿದವರ್ಗದವರಿಗೆ ತೊಂದರೆಯಾಗು ತ್ತದೆಂಬುದನ್ನೂ ಕೂಡ ನಾವು ಈ ಸಂದರ್ಭದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಏಕೆಂದರೆ ಇಂಥ ಕಾನೂನುಗಳನ್ನು ಮಾಡುವುದರಿಂದ ಯಾವುದಾದರೊಂದು ಪ್ರಕರಣವನ್ನು ಇತ್ಯರ್ಥ ಮಾಡಲು ವಿಳಂಬವಾಗುತ್ತದೆ. ೩ ತಿಂಗಳಿಂದ ೧೨ ತಿಂಗಳವರೆಗೆ ಸ್ಥಾನಬದ್ಧತೆಯಲ್ಲಿಡುವುದು, ಅನಂತರ ಅವನನ್ನು ವಿಚಾರಣೆ ಮಾಡುವುದರಲ್ಲಿ ತಡವಾಗಿ ಕಾಲಹರಣವಾಗುತ್ತದೆ ಅಷ್ಟು ಮಾತ್ರ ಅಲ್ಲ, ಈ ಕಾನೂನನ್ನು ತಂದಾಗ ಅದನ್ನು ಮನ್ನಣೆ ಮಾಡತಕ್ಕ ನಾವು ಒಳ್ಳೆಯ ರೀತಿಯಲ್ಲಿ ಇರಬೇಕು. ಆದರೆ ಅದನ್ನು ಚಲಾಯಿಸುವವರು ಯಾರು ಎಂದರೆ ಸರ್ಕಾರೀ ಅಧಿಕಾರಿಗಳು ಅವರ ಮನೋಭಾವನೆ ಒಂದೇ ರೀತಿ ಇರುವುದಿಲ್ಲ. ಅವರಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಇಂಥ ಎಷ್ಟೋ ಚಿತ್ರ ಗಳನ್ನು ನಾವು ನೋಡಿದ್ದೇವೆ. ಎಷ್ಟೋ ಘರ್ಷಣೆಗಳ ಫಲಿತಾಂಶವನ್ನು ನಾವು ನೋಡಿದ್ದೇವೆ. ಕಾನೂನನ್ನು ಕೈಗೆ ತೆಗೆದುಕೊಂಡ ಅಧಿಕಾರಿಗಳು ಸತ್ಯವನ್ನು ಅಸತ್ಯವನ್ನಾಗಿ, ಅಸತ್ಯವನ್ನು ಸತ್ಯವನ್ನಾಗಿ ಮಾಡಿರುವುದನ್ನು ನಾವು ನೋಡಿದ್ದೇವೆ. ಒಬ್ಬ ವ್ಯಕ್ತಿ ಕೊಲೆ ಮಾಡಿರುವುದನ್ನು ನಾವು ಕಣ್ಣಾರೆ ಕಂಡಿದ್ದರೂ ಕೂಡ ಅಂಥ ಪ್ರಕರಣದಲ್ಲಿ ಆ ವ್ಯಕ್ತಿ ಕೊಲೆಯನ್ನೇ ಮಾಡಲಿಲ್ಲ ಎಂದು ಹೇಳಿ ಅವನನ್ನು ನಿರಪರಾಧಿ ಎಂದು ಮಾಡಿರುವುದನ್ನು ನೋಡಿದ್ದೇವೆ. ಅದೇರೀತಿ ಒಬ್ಬ ನಿರಪರಾಧಿಯನ್ನು ಅಪರಾಧಿ ಎಂದು ಕೂಡ ಅಧಿಕಾರಿಗಳು ಮಾಡಿರುವುದನ್ನು ನೋಡಿದ್ದೇವೆ. ಇಂಥ ನೂರಾರು ದೃಷ್ಟಾಂತಗಳನ್ನು ನಾವೂ, ನೀವೂ ನೋಡಿರುವುದರಿಂದ ಇಂಥ ಕಾನೂನುಗಳನ್ನು ತರುವಾಗ ಬಹಳ ಆಳವಾಗಿ ಆಲೋಚನೆ ಮಾಡಿ, ಚರ್ಚೆ ಮಾಡಿ ಕಲಮುಗಳನ್ನು ಅಳವಡಿಸಬೇಕಾಗುತ್ತದೆ. ಇವೊತ್ತು ಕೇಡಿಗಳು ಯಾರು? ಬೂಟ್ ಲೆಗ್ಗರ್ಸ್ ಯಾರು? ಅನ್ಯಾಯ ಮಾಡುವವರು ಯಾರು ಎಂಬುದನ್ನು ಕಂಡುಹಿಡಿಯುವುದೇ ಕಷ್ಟವಾಗಿದೆ. ಏಕೆಂದರೆ ಇದರಲ್ಲಿ ಕೆಲವರು ಹೊಟ್ಟೆಪಾಡಿಗಾಗಿ ಮಾಡುವವರು ಇರುತ್ತಾರೆ. ಇವರನ್ನು ನಿರ್ಮಾಣ ಮಾಡುವವರು ಯಾರು? ಯಾರಲ್ಲಿ ಹೆಚ್ಚು ಹಣ ಇರುತ್ತದೆ. ಅವರು ಏನು ಬೇಕಾದರೂ ಮಾಡುತ್ತಾರೆ. ಪ್ರತಿಯೊಂದು ಕೆಲಸವೂ ಹಣದಮೇಲೆ ಅವಲಂಭಿತವಾಗಿದೆ. ಯಾರ ಹತ್ತಿರ ಸಂಪತ್ತು, ಹಣ, ಬುದ್ಧಿವಂತಿಕೆ ಇದೆ. ಅಂಥವರು ಎಂಥ ಪ್ರಕರಣದಲ್ಲಿ ಬೇಕಾದರೂ ಬಚಾವ್ ಆಗುತ್ತಾರೆ. ಆದರೆ ಇದು ಯಾವುದೂ ಇಲ್ಲದವರು ಕಷ್ಟನಷ್ಟಗಳಿಗೆ ಒಳಗಾಗುತ್ತಾರೆ. ಈ ಕೇಡಿಗಳನ್ನು ಬೂಟ್ ಲೆಗ್ಗರ್ಸ್‌ನ್ನು ತಯಾರು ಮಾಡತಕ್ಕ ಜನರನ್ನು ಮೊದಲು ಜೈಲಿಗೆ ಹಾಕಲು ಒಂದು ಸೂಕ್ತ ಕಾಲಂನ್ನು ಈ ಮಸೂದೆಯಲ್ಲಿ ಅಳವಡಿಸಬೇಕು. ಇವತ್ತು ಹತ್ತು ಜನ ಗೂಂಡಾಗಳನ್ನು ನಾವು ಜೈಲಿಗೆ ಹಾಕಿದರೆ, ಇವರನ್ನು ತಯಾರು ಮಾಡಿದಂಥ ವ್ಯಕ್ತಿಯೇ ಮತ್ತೆ ಹತ್ತು ಜನರನ್ನು ತಯಾರು ಮಾಡುತ್ತಾನೆ. ಅವರನ್ನೂ ಜೈಲಿಗೆ ಹಾಕಿದರೆ ಮತ್ತೆ ಹತ್ತು ಜನರನ್ನು ಅದೇ ವ್ಯಕ್ತಿ ತಯಾರು

ಅವನು ಮನೆಯೊಳಗೇ ಕುಳಿತು ಇಂಥ ದಿನಬೆಳಗಾದರೆ ನಾವು ಮಾಡುತ್ತಾನೆ. ಏಕೆಂದರೆ ಅವನ ಹತ್ತಿರ ಹಣ ಇರುತ್ತದೆ. ಇಂಥಾದ್ದನ್ನು ಮಾಡಿಸುತ್ತಾನೆ. ನನ್ನ ಮಾನ್ಯ ಮಿತ್ರರಾದ ಶ್ರೀ ಉಮರಬ್ಬ ಗೂಂಡಾಗಳನ್ನು ಬಿಟ್ಟು ಅಕೃತ್ಯಗಳನ್ನು ಪತ್ರಿಕೆಗಳಲ್ಲಿ ಓದುತ್ತೇವೆ. ಜನರ ಮೇಲೂ ಈ ರೀತಿಯ ಆಪಾದನೆಗಳು ನೋಡುತ್ತೇವೆ, ಕೇಳುತ್ತೇವೆ, ಕೊಳಚೆ ಪ್ರದೇಶಗಳಲ್ಲಿರತಕ್ಕ ಹೇಳಿದರು. ಅವರು ಹೇಳಿದ್ದರಲ್ಲಿ ನವರು ಹೇಳಿದಹಾಗೆ ಈಗ ಮಾರ್ಮಿಕವಾಗಿ ಈ ವಿಚಾರವನ್ನು ಹರಿಜನರು, ಗಿರಿಜನರು, ಆರ್ಥಿಕ ಬರುತ್ತವೆ. ಅವರು ಬಹಳ ಚೂರುಚೂರಾಗುತ್ತದೆ. ಇದರಲ್ಲಿ ಅಲ್ಪಸಂಖ್ಯಾತರು ಇಂಥವರೇ ಜೈಲಿಗೆ ಎಂಥವರ ಹೃದಯವೂ ಕೂಡ ಪ್ರದೇಶದಲ್ಲಿರುವವರು. ಆದ್ದರಿಂದ ಅವರ ಬಗ್ಗೆ ಕನಿಕರ ಇಟ್ಟು ವಾಗಿ ದುರ್ಬಲರಾದವರು, ಕೊಳಚೆ ಬಂಧನಕ್ಕೊಳಗಾಗುವವರು. ತಾವು ತಂದಿರತಕ್ಕ ಉದ್ದೇಶ ಹೋಗತಕ್ಕವರು. ಅವರೇ ತಿದ್ದುಪಡಿಯನ್ನು ತರಬೇಕು. ಲಾಭವಾಗುವುದಿಲ್ಲವೆ? ಕೇಡಿಗಳನ್ನು ಅವರಿಗೆ ಅನುಕೂಲವಾಗುವಂತೆ ಈ ಪೆಟ್ಟಾಗಿ ಶ್ರೀಮಂತರಿಗೆ ಬೇಯಿಸಿಕೊಳ್ಳುವುದಕ್ಕೆ ಮಾಡ ಸಫಲವಾಗುತ್ತದೆಯೇ, ಎಂದರೆ ಬಡವರಿಗೆ ಅವರ ಬೇಳೆ ಕ್ಲಬ್‌ಗಳಲ್ಲಿ ಇವರು ತಯಾರು ಮಾಡುವವರು ಮಾಡುತ್ತಲೇ ಇರುತ್ತಾರೆ. ಹೋಟೆಲ್‌ಗಳಲ್ಲಿ, ಇಟ್ಟುಕೊಂಡಿರುತ್ತಾರೆ. ಬಾರದನ್ನು ಮಾಡುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ, ಮುಖ್ಯ ಗುರಿಯಾಗಿ ವ್ಯವಸ್ಥೆಯೂ ಮಾಡಿದ್ದೇ ಕಾನೂನು, ದುಡ್ಡು ಮಾಡುವುದನ್ನೇ ಇವರ ನೀಗಿಸುವಂಥ ಯಾವುದೇ ಕಾನೂನು ಇವರು ಆಡುವ ಆಟಕ್ಕೆ ಅಡೆತಡೆಯೇ ಇಲ್ಲ. ಇದನ್ನು ಅಡಿಯಲ್ಲಿ ಬರಬೇಕು. ಮಾಡಬಹುದು, ಇದರಲ್ಲಿ ಆಗಿಲ್ಲ. ಇಂಥ ಭ್ರಷ್ಟ ಜನರೂ ಕೂಡ ಈ ಕಾನೂನಿನ ಒಳ್ಳೆಯದನ್ನೂ ಸಾಯುದೇ ಎಂದರೆ ಒಂದು ಚಿನ್ನದ ಕತ್ತಿ ಇದ್ದಹಾಗೆ. ಈ ಚಿನ್ನದ ಕತ್ತಿಯಿಂದ ಹಾಕಿದರೆ ಅದರಿಂದ ಕೆಟ್ಟದ್ದನ್ನೂ ಮಾಡಬಹುದು. ಚಿನ್ನದ ಕತ್ತಿ ಎಂದು ಹೊಟ್ಟೆಗೆ ಯಾವ ರೀತಿಯಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಆದರಿಂದ ಜೀವ ಹೋಗುತ್ತದೆ. ಈ ಕಾನೂನನ್ನು ಇಂಥ ಕಾನೂನು ಬೇಕಾದರೂ ಬಳಸಿಕೊಂಡು ಹೋಗಬಹುದು. ನಾನು ಹೇಳುವುದು ಏನೆಂದರೆ ಪ್ರೇರಕ ಬಂದಾಗ ಶ್ರೀಮಂತರು, ಹಣವಂತರು ಈ ಕೇಡಿಗಳನ್ನು ತಯಾರು ಮಾಡತಕ್ಕವರು, ಇದಕ್ಕೆ ಅಳವಡಿಸಿದರೆ ವಾಗಿ ಇರುವಂಥ ಜನರನ್ನು ಬಗ್ಗು ಬಡಿಯತಕ್ಕಂಥ ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ಮಸೂದೆ ಮಾತ್ರ ಇದರಿಂದ ಒಳ್ಳೆಯದಾಗುತ್ತದೆ. ಇಲ್ಲಿ ಮಾನ್ಯ ಗೃಹ ಮಂತ್ರಿಗಳು ತಂದಿರತಕ್ಕ ಬಹಳ ಒಳ್ಳೆಯದು. ಏಕೆಂದರೆ ಇವೊತ್ತು ಬಡವರಿಗೆ, ಹರಿಜನರಿಗೆ, ದುರ್ಬಲವರ್ಗದವರಿಗೆ ಆಗುವಂಥ ಅನ್ಯಾಯಗಳು ಬಹಳವಾಗಿ ಆಗುತ್ತಿವೆ. ಇಂಥ ಅನ್ಯಾಯಗಳನ್ನು ಹತ್ತಿಕ್ಕಬೇಕಾದರೆ ಬಹಳ ಪ್ರಬಲವಾದ ಕಾನೂನು ಇರಬೇಕು. ಆದ್ದರಿಂದ ನಾನು ಈಗ ಹೇಳುವಂಥಾದ್ದು ಹೊಸ ಕಾನೂನನ್ನು ತಾವು ಮಾಡುವಾಗ ಕಾನೂನಿಗೆ ಕಾನೂನು, ಕಾನೂನಿಗೆ ಕಾನೂನು ಎಂದು ಮಾಡುತ್ತಾ ಹೋಗುವುದರಿಂದ ಬಹಳ ಕಾಲ ವಿಳಂಬ ಆಗುತ್ತದೆ. ಅಧಿಕಾರಿಗಳನ್ನು ನೀವು ಹೇಗೆ ಒಳ್ಳೆಯ ರೀತಿಯಲ್ಲಿ ತರುತ್ತೀರಿ? ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಏನು ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ಅಳವಡಿಸಿದ್ದೀರಿ? ಇವೊತ್ತು ಎಷ್ಟೋ ಅಧಿಕಾರಿಗಳು ಒಳ್ಳೆಯ ಕೇಸುಗಳನ್ನೇ ಹಾಳು ಮಾಡಿರುವುದುಂಟು. ಅದೇರೀತಿ ಕೆಲವು ಅಧಿಕಾರಿಗಳು ಒಳ್ಳೆಯದನ್ನು ಮಾಡಿರುವುದನ್ನೂ ನಾವು ಕಂಡಿದ್ದೇವೆ. ಐದು ಬೆರಳೂ ಒಂದೇ ರೀತಿಯಲ್ಲಿರುವುದಿಲ್ಲ. ಆದುದರಿಂದ ಎಲ್ಲರೂ ಒಳ್ಳೆಯವರೆಂದಾಗಲಿ, ಅಥವಾ ಕೆಟ್ಟವರೆಂದಾಗಲಿ ಹೇಳುವುದಕ್ಕಾಗುವುದಿಲ್ಲ. ಕೆಟ್ಟವರು ಬಹಳ ಜನರಿದ್ದಾರೆ. ಬಡವರಿಗೆ, ದುರ್ಬಲ ವರ್ಗದವರಿಗೆ, ಕಷ್ಟದಲ್ಲಿರತಕ್ಕವರಿಗೆ ಅನ್ಯಾಯ ಮಾಡುವುದಕ್ಕೆ ಅವರು ಮುಂದಾಗುತ್ತಾರೆ. ಏಕೆಂದರೆ ಶ್ರೀಮಂತರ ಹಣಕ್ಕಾಗಿ, ದೊಡ್ಡಸ್ತಿಕೆಗೆ ಬಲಿಯಾಗಿ ಈ ರೀತಿ ಬಡವರಿಗೆ ಅನ್ಯಾಯ ಮಾಡುತ್ತಾರೆ. ಆದುದರಿಂದ ಇಂಥ ಒಂದು ಮಸೂದೆ ಬಂದಾಗ ದುರ್ಬಲ ವರ್ಗದವರಿಗೆ, ಬಡವರಿಗೆ, ಅಲ್ಪಸಂಖ್ಯಾತರಿಗೆ ಅನ್ಯಾಯ ಆಗಬಹುದೆಂಬ ಭಯ ನನಗೆ ಇರುವುದರಿಂದ ಇದನ್ನು ತಾವು ಜಂಟಿ ಸಲಹಾ ಸಮಿತಿಗೆ ಕಳುಹಿಸಿ ಅಲ್ಲಿ ಕೂಲಂಕಷವಾಗಿ ಚರ್ವಿತಚರ್ವಣ ಮಾಡಿ ಕೆಟ್ಟದ್ದಾಗುವಂಥ ಕಲಂಗಳನ್ನು ಬಿಟ್ಟು ಒಳ್ಳೆಯದಾಗುವಂಥ ಕಲಂಗಳನ್ನು ತಾವು ಈ ಮಸೂದೆಯಲ್ಲಿ ಅಳವಡಿಸಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಗೃಹ ಸಚಿವರು ತಂದಿರತಕ್ಕಂಥ ಈ ವಿಧೇಯಕವನ್ನು ಅನಿವಾರ್ಯವಾಗಿ ವಿರೋಧಿಸುವಂಥ ಸಂದರ್ಭ ಬಂದಿದೆ. ಈ ವಿಧೇಯಕವನ್ನು ತಂದಿರುವಂಥ ಉದ್ದೇಶ ಬಹಳ ಒಳ್ಳೆಯದಾಗಿದೆ. ಆದರೆ ಈ ಒಂದು ಕಾನೂನನ್ನು ತರಬೇಕಾದರೆ ಇದರ ಅವಶ್ಯಕತೆ ಇತ್ತೇ ಎಂಬ ವಿಚಾರ ತಮ್ಮೆಲ್ಲರ ಮುಂದೆ ಬಂದಿರಬಹುದು. ಈ

(28)

ಕಾನೂನನ್ನು ತರದೆ ಯಾವ ರೀತಿ ಸಮಾಜದಲ್ಲಿ ನಾವು ಇದುವರೆಗೂ ಬಾಳ್ವೆ ನಡೆಸಿದ್ದೇವೆ ಎಂಬ ಪ್ರಶ್ನೆಯನ್ನು ತಮ್ಮ ಮುಂದಿಟ್ಟಾಗ ಈ ಬಗ್ಗೆ ಇಂಥ ಸಮಾಜ ಘಾತುಕ ಶಕ್ತಿಗಳನ್ನು ನಾವು ಹತ್ತಿಕ್ಕುವ ಕೆಲಸ ಮಾಡಿದ್ದೇವೆಯೋ ಎಂಬುದನ್ನು ಗಮನಿಸಬೇಕಾಗಿದೆ. ನಾವು ಹೇಳುವಂಥ ಸಮಾಜ ವಿರೋಧೀ ಶಕ್ತಿಗಳನ್ನು ಒಂದಲ್ಲೊಂದು ರೀತಿಯಲ್ಲಿ ಸಾಕಿದವರು ಎಂದರೆ ಒಂದು ವರ್ಗ ಇದೆ. ಯಾವ ವರ್ಗಕ್ಕೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಆ ವರ್ಗ ಈ ಸಮಾಜ ವಿರೋಧೀ ಶಕ್ತಿ ವಾಗಿ ಬೆಳೆಸಲು ಕಾರಣವಾಗಿದೆ ಎಂಬುದನ್ನು ಹೇಳಬೇಕಾಗಿದೆ. ಯಾವ ವರ್ಗಕ್ಕೆ ಯನ್ನಾಗಲಿ ನಿಯಂತ್ರಿಸುವ ಶಕ್ತಿ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಇದೆ. ಏಕೆಂದರೆ ಯಾವುದೇ ಒಬ್ಬ ವ್ಯಕ್ತಿ ಬಾರದೆ ಯಾವುದೇ ಸಮಾಜ ಘಾತುಕ ಕೆಲಸ ನಡೆಯುವುದಕ್ಕೆ ಸಾಧ್ಯವಿಲ್ಲ. ಅವನು ತಿಳುವಳಿಕೆಗೆ ಏವಂಶ್ಚೆ ಮಾಡಿದರೆ ಯಾರೋ ಒಬ್ಬ ಅಧಿಕಾರಿಯು ತಿಳುವಳಿಕೆಗೆ ಬಾರದೆ ಒಂದು ತಪ್ಪು ಕೆಲಸ ಒಂದು ಸಾರಿ ನಡೆಯಬಹುದು. ಆದರೆ ಪ್ರತಿಸಾರಿಯೂ ಇಂಥ ಕೆಲಸಗಳು ನಡೆಯುತ್ತಲೇ ಇರುತ್ತವೆ ಎಂದರೆ ಆಗ ಅದು ಆ ಅಧಿಕಾರಿಯು ತಪ್ಪಾಗುತ್ತದೆ ಎನ್ನುವ ನನ್ನ ಅಭಿಪ್ರಾಯವನ್ನು ಈ ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ತಾವು ಈ ಕಾನೂನನ್ನು ತಂದರೂ ಕೂಡ ಸಮಾಜ ಘಾತುಕ ಶಕ್ತಿಗಳಿಗೆ ಇದರಲ್ಲೂ ಸಹ ರಕ್ಷಣೆ ಸಿಕ್ಕಬಹುದೆಂಬ ಅಭಿಪ್ರಾಯ ವನ್ನು ನಾನು ವ್ಯಕ್ತ ಪಡಿಸುತ್ತೇನೆ. ಏಕೆಂದರೆ ಈ ವಿಧೇಯಕವನ್ನು ತಂದಾಗ ರಾಜಕೀಯವಾಗಿ ಒಂದಲ್ಲೊಂದು ರೀತಿಯಲ್ಲಿ ಭಯದ ವಾತಾವರಣ, ಸಂಶಯದ ವಾತಾವರಣ ಕಂಡು ಬರುತ್ತದೆ. ಇದೇ ಅಲ್ಲದೆ ಚಿಕ್ಕ ವಯಸ್ಸಿನಲ್ಲಿರತಕ್ಕ ಕಾಲೇಜು ವಿದ್ಯಾರ್ಥಿಗಳಿಗೆ ಗೂಂಡಾಗಳು ಎನ್ನುವ ಹೆಸರಿಟ್ಟು ಅವರನ್ನು ಬಂಧಿಸುವ ರಾಜಕೀಯ ತಂತ್ರ ಕೂಡ ಇದರಲ್ಲಿ ಬರಬಹುದು. ಅದೂ ಅಲ್ಲದೆ ಕೆಲವು ಸಂದರ್ಭದಲ್ಲಿ ರಾಜಕೀಯ ದೃಷ್ಟಿಯಿಂದ ಯಾವುದೇ ರಾಜಕೀಯ ಲಾಭಕ್ಕಾಗಿ ಅಧಿಕಾರಿಗಳು ರಾಜಕೀಯ ಪಕ್ಷದ ಮುಖಂಡರ ಹತ್ತಿರ ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ಬೇರೆ ರಾಜಕೀಯ ಮುಖಂಡರು ತಮ್ಮ ವಿರೋಧಿಗಳನ್ನು ಸದೆಬಡಿಯುವ ದೃಷ್ಟಿಯಿಂದ ಇವರು ಗೂಂಡಾಗಳು ಎಂಬ ಹೆಸರಿಟ್ಟು ರಿಂದ ೧೨ ತಿಂಗಳವರೆಗೂ ಬಂಧನದಲ್ಲಿಡುವಂಥ ಸಂದರ್ಭ ಬರುತ್ತದೆ.

ಈ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬೇಕಾದ ಅಂಶ ಏನೆಂದರೆ ಈ ಒಂದು ಸಮಾಜಘಾತುಕ ಶಕ್ತಿಗಳನ್ನು ಬೆಳೆಯಲು ಯಾರು ಸಹಕಾರ ಮಾಡುತ್ತಾರೋ ಅವರನ್ನು ನಿಯಂತ್ರಿಸಲು ಇವರು ವಿಫಲ ರಾಗಿದ್ದರೆ ಅವರ ಮೇಲೆ ಏನಾದರೂ ಒಂದು ಮಸೂದೆಯನ್ನು ತಂದು ಅವರನ್ನು ನಿಯಂತ್ರಿಸಬೇಕು. ಇದರಿಂದ ಗೂಂಡಾಗಳನ್ನು ನಿಯಂತ್ರಿಸುವುದರಲ್ಲಿ ಏನೂ ಪ್ರಯೋಜನವಾಗುವುದಿಲ್ಲವೆಂಬ ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರ ಬಯಸುತ್ತೇನೆ. ಈಗ ಮಟಕ ನಡೆಯುತ್ತಿರತಕ್ಕಂಥದ್ದು ನಮ್ಮ ರಾಜ್ಯದಲ್ಲಿ ಎಲ್ಲಿ ನಡೆಯುತ್ತಿಲ್ಲ. ಇದನ್ನು ನೋಡಿಕೊಂಡು ನಾವು ಕಣ್ಣು ಮುಚ್ಚಿಕೊಂಡು ಕುಳಿತಿರುವು ದಕ್ಕೆ ಸಾಧ್ಯವಿಲ್ಲ, ಅಧಿಕಾರಿವರ್ಗದವರು ಈ ಒಂದು ಕಾನೂನಿನಿಂದ ಎಷ್ಟು ಬಲಿಷ್ಠರಾಗಿ ಕೆಲಸ ಮಾಡಲು ಸಾಧ್ಯವಿರುತ್ತದೆ, ಎನ್ನುವುದು ನನ್ನ ಪ್ರಶ್ನೆ. ಯಾವ ತಾಲ್ಲೂಕುಗಳಲ್ಲಿ ನೋಡಲಿ ಕ್ಲಬ್‌ಗಳು ಯಾವ ಹಳ್ಳಿಗಳಲ್ಲಿ ನೋಡಲಿ ಕ್ಲಬ್‌ಗಳು. ಈ ಕ್ಲಬ್‌ಗಳನ್ನು ಮಟಕಗಳನ್ನು ಕಾನೂನು ಬದ್ಧವಾಗಿ ನಿಯಂತ್ರಿಸಲು ಸಾಧ್ಯವಿಲ್ಲವೆಂದರೆ ಏನು ಅರ್ಥಬರುತ್ತದೆ, ರಾಜಕೀಯವಾಗಿ ನಿಯಂತ್ರಿಸಬೇಕೆಂಬ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದೀರಿ ಎಂದು ನನಗೆ ಅರ್ಥವಾಗುತ್ತದೆ. ಈ ಒಂದು ವರ್ಗ ದವರನ್ನು ಪ್ರಾಮಾಣಿಕವಾಗಿ ನಿಯಂತ್ರಿಸಲು ಪ್ರಯತ್ನ ಮಾಡಿದ್ದರೆ ಈ ವಿಧೇಯಕವನ್ನು ತರಬೇಕಾದ ಅವಶ್ಯಕತೆ ಇರಲಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈ ಮಸೂದೆಯ ಬಗ್ಗೆ ಇನ್ನು ಹೆಚ್ಚಿನ ವಿವರಗಳನ್ನು ತಿಳಿಯತಕ್ಕಂಥದ್ದು ಅವಶ್ಯಕ ಎಂದು ತಿಳಿದು ಈ ವಿಧೇಯಕವನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ ನಮ್ಮ ಗೃಹ ಸಚಿವರು ತಂದಿರತಕ್ಕಂಥ ವಿಧೇಯಕವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾನು ಕೆಲವು ವಿಚಾರಗಳನ್ನು ಇವತ್ತು ಸಭೆಯ ಮುಂದೆ ಇಡಬಯಸುತ್ತೇನೆ. ಇವತ್ತು ಈ ವಿಧೇಯಕವನ್ನು ತರಲಿಕ್ಕೆ ಮುಖ್ಯ ಕಾರಣವೇನೆಂದರೆ ಸಮಾಜದಲ್ಲಿ ಯಾವ ದುಷ್ಟ ಶಕ್ತಿಗಳು ಇದೆಯೋ ಅವುಗಳನ್ನು ಮಟ್ಟಹಾಕಲು ಇಂಥ ಒಂದು ವಿಧೇಯಕವನ್ನು ತರುತ್ತಿರುವುದು ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಮೂವತ್ತೈದು ವರ್ಷಗಳ ಕಾಲ ನಮ್ಮ ಬಲಗಡೆ ಕುಳಿತಿರ ತಕ್ಕಂಥ ಪಕ್ಷದ ಸರ್ಕಾರ ಸರಿಯಾದ ಕ್ರಮದಲ್ಲಿ, ಸರಿಯಾದ ರೀತಿಯಲ್ಲಿ ಇಂಥ ದುಷ್ಟ ಶಕ್ತಿಗಳನ್ನು

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಮಂಡಿಸತಕ್ಕಂಥ. ಆಗ್ಯತ್ಯ.
ತಡೆಹಿಡಿದ್ದರೆ ಬಹುಶ: ಇಂಥ ಒಂದು ವಿಧೇಯಕವನ್ನು ನಾವು ಹಾಕಲಿಕ್ಕಾಗಿ ಇಂಥ ಒಂದು ಉನ್ನತ
ಇರಲಿಲ್ಲ, ಅವರು ಮಾಡಿರತಕ್ಕಥ ಪಾಪಕೃತ್ಯಗಳನ್ನು ತೊಡೆದು ವರ್ಷಗಳಾದನಂತರ ಕರ್ನಾಟಕದ
ವಾದ ವಿಧೇಯಕವನ್ನು ತರಲಿಕ್ಕೆ ಸಾಧ್ಯವಾಯಿತು. ಮೂವತ್ತೈದು
ಜನತೆಜನತಾಪಕ್ಷವನ್ನು.................. ಎಂದು ಹೇಳಬಾರದು:

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೇ ನೀವು ಮಾತನಾಡುವಾಗ ಅವರು ಇವರು ಎಂದು
ನೇರವಾಗಿ ಮಸೂದೆಯ ಬಗ್ಗೆ ಮಾತನಾಡಬೇಕು.

ಶ್ರೀ ಡಿ.ಟಿ. ಜಯಕುಮಾರ್.—ಜನತಾ ಪಕ್ಷ ಬಂದ ಮೇಲೆ ಚಾಕು ಚೂರಿ ಸಂಸ್ಕೃತಿ.........

(ಗೊಂದಲ)

ಶ್ರೀ ಧರ್ಮಸಿಂಗ್.—ಚಾಕುಚೂರಿ ಸಂಸ್ಕೃತಿ ಅವರು ಅಧಿಕಾರಕ್ಕೆ ಬಂದ ಮೇಲೂ ನಡೆದಿದ್ದು
ನಡೆದಿರುತ್ತದೆ. ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಈ ರೀತಿ ಮಾತನಾಡಬಾರದೆಂದು ನಾನು
ನೇರವಾಗಿ ಬಿಲ್‌ನ ಮೇಲೆ ಮಾತನಾಡಿ. ಮತ್ತೊಬ್ಬರನ್ನು ಕೆಣಕಿ ಮಾತನಾಡಬಾರದು.

ಶ್ರೀ ಡಿ.ಟಿ. ಜಯಕುಮಾರ್.—ಸುಸಂಸ್ಕೃತರಾಗಿರತಕ್ಕಂಥ ಜನರಿಗೆ ಸ್ವಚ್ಛ ಆಡಳಿತವನ್ನು
ಕೊಡುತ್ತೇವೆ, ಜನರು ನಿರ್ಭಯವಾಗಿರುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುತ್ತೇವೆಂದು ಭರವಸೆ
ಯನ್ನು ಕೊಟ್ಟಿದ್ದೇವೆ. ಆ ಭರವಸೆಯನ್ನು ಈಡೇರಿಸಲಿಕ್ಕೆ ಇಂಥ ಒಂದು ವಿಧೇಯಕದ ಆಗತ್ಯ
ಬಹಳವಾಗಿರುತ್ತದೆ. ಇಂಥ ಉದ್ದೇಶದಿಂದ ಕೂಡಿದ ವಿಧೇಯಕವಾಗಿರುವುದರಿಂದ
ಇದನ್ನು ಸ್ವಾಗತಿಸುತ್ತೇನೆ, ಆದರೆ ಎಕ್ಸಿಕ್ಯುಟೀವ್ ಕೆಲಸ ಎಂದು ಏನು ಇರುತ್ತದೆ, ಉದಾ
ಹರಣೆಗೆ ಪೋಲೀಸ್ ಅಧಿಕಾರಿಗಳ ಕೆಲಸವನ್ನು ತೆಗೆದುಕೊಂಡರೆ ಅವರು ತಮ್ಮ ಕರ್ತವ್ಯವನ್ನು
ನಿಷ್ಠೆಯಿಂದ ಬದ್ಧವಾಗಿ ನಿರ್ವಹಿಸಬೇಕೆಂದರೆ ಅನೇಕ ಅಡೆತಡೆಗಳು ಬರುತ್ತವೆ.

ಅಧ್ಯಕ್ಷರು.—ಮಾನ್ಯ ಜಯಕುಮಾರ್‌ರವರೇ ನೀವು ಪೋಲೀಸ್ ಅಧಿಕಾರಿಗಳೇ ಇದ್ದೀರಿ, ತನೇ
ಆಗಿದ್ದರೂ ಅದನ್ನೆಲ್ಲ ಇಲ್ಲಿ ಹೇಳಬೇಕಾಗಿಲ್ಲ. ನೀವು ಈ ಮನೆಯ ಮಾನ್ಯ ಸದಸ್ಯರಾಗಿ ಆರಿಸಿ ಬಂದಿರು
ತ್ತೀರಿ, ಆದ್ದರಿಂದ ಈ ಮಸೂದೆಯ ಬಗ್ಗೆ ಚರ್ಚೆ ನಡೆಯುತ್ತಿರಬೇಕಾದರೆ ತಾವು ಏನು ಹೇಳಬೇಕೆಂದು
ಇರುತ್ತೀರೋ ಅದನ್ನು ಈ ಮಸೂದೆಗೆ ಸೀಮಿತವಾಗಿ ಹೇಳಿ.

ಶ್ರೀ ಡಿ.ಟಿ. ಜಯಕುಮಾರ್.—ಈ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಎಕ್ಸಿಕ್ಯುಟೀವ್ ಕೆಲಸ
ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ಒತ್ತಡಗಳು ಬರುತ್ತವೆ. ಈ ರಾಜಕೀಯ ಒತ್ತಡಗಳಿಂದ ಬಡವರ
ಮೇಲೆ ಒತ್ತಡಗಳು ಬೀಳುತ್ತವೆ. ಹಣವಂತರ ರಕ್ಷಣೆಯನ್ನು ಮಾಡಲು ಈ ಇಲಾಖೆಯ ಮೇಲೆ ತರ
ತಕ್ಕಂಥ ರಾಜಕೀಯ ಒತ್ತಡಗಳಿಂದಾಗಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವೇ ಆಗುವುದಿಲ್ಲ
ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಚ್ಛೆಪಡುತ್ತೇನೆ. ಎಚ್.ಟಿ. ಸಾಂಗ್ಲಿ
ಯಾನ ಅವರು ಪ್ರಾಮಾಣಿಕ ಡಿ.ಐ.ಜಿ. ಅಂತಹ ಪ್ರಾಮಾಣಿಕ ವ್ಯಕ್ತಿ ಯಾವ ಕಾನೂನಿನ ಮೇಲೆ
ಅವಲಂಬಿತರಾಗಿರುತ್ತಾರೋ ಅವರಿಗೆ ಈ ವಿಧೇಯಕ ಇರುವುದರಿಂದ ಶಕ್ತಿ ಬರುತ್ತದೆ.

ಇನ್ನು ಈ ಕೊಳಚೆ ಪ್ರದೇಶಗಳನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳತಕ್ಕಂಥ ವಿಷಯದ
ಬಗ್ಗೆ ಹೇಳುತ್ತಾ ಯಾರು ತೀರಾ ಬಡವರು ಇರುತ್ತಾರೋ ಅಂಥವರಿಗೆ ನೀರು ನೆರಳನ್ನು ಒದಗಿಸ
ತಕ್ಕಂಥದ್ದು ಸರ್ಕಾರದ ಕರ್ತವ್ಯವಾಗಿರುತ್ತದೆ. ಅಂಥವರಿಗೆ ಯಾವ ತೊಂದರೆಯೂ ಆಗಬಾರದು
ಇದರ ಬಗ್ಗೆ ಇರುವಂಥ ಒಂದು ಕಲಂವನ್ನು ತೆಗೆದುಹಾಕಬೇಕೆಂದು ಮಾನ್ಯ ಗೃಹಸಚಿವರನ್ನು ಕೇಳಿ
ಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು
ಗಳನ್ನು ಮುಗಿಸುತ್ತೇನೆ.

† ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ ಈಗ ಗೂಂಡಾಗಿರಿ, ರೌಡಿಸಮ್
ಜೀವನದ ಒಂದು ಭಾಗವಾದರೆ ಈ ಪ್ರವೃತ್ತಿಗೆ ಅದರ ಹಿನ್ನೆಲೆಯಲ್ಲಿ ಹಲವಾರು ರಾಜಕಾರಣಿಗಳು
ಇರುತ್ತಾರೆ. ಶ್ರೀಮಂತರು ಇರುತ್ತಾರೆ, ಸಿನಿಮಾನಟರೂ ಇರುತ್ತಾರೆ. ಅವರುಗಳು ಈ ಪ್ರವೃತ್ತಿ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸ[illegible]ಾಲಯ

ಯನ್ನು ಪೋಷಿಸಿಕೊಂಡು ಬರುತ್ತಿರತಕ್ಕಂಥ ಪರಿಸ್ಥಿತಿಯನ್ನು ನಾವು ಸಮಾಜದಲ್ಲಿ ಇಂದು ಕಾಣು ತ್ತಿದ್ದೇವೆ. ಈ ಮಸೂದೆಯ ಮೇಲೆ ಮಾತನಾಡುವಾಗ ಸ್ನೇಹಿತರಾದ ಶ್ರೀಮಾನ್ ಭಾರ್ಗವಯವರು ಮತ್ತು ಮಾನ್ಯ ಮೊಯ್ಲಿಯವರು ಮಾತನಾಡಿದರು. ಅವರು ಮಾತನಾಡುತ್ತಾ ಗೂಂಡಾಗಳನ್ನು ರೌಡಿಗಳನ್ನು ಮಟ್ಟಹಾಕಬೇಕೆಂದು ಹೇಳಿದರು. ಅವರನ್ನು ಹತ್ತಿಕ್ಕಬೇಕೆಂದರೆ ಮುಖ್ಯವಾಗಿ ಯಾರು ಅವರ ಪೋಷಕರಿರುತ್ತಾರೋ ಅವರನ್ನು ಮೂಲಭೂತವಾಗಿ ಹಿಡಿಯತಕ್ಕಂಥ ಕೆಲಸ ಪೋಲೀಸ್ ಇಲಾಖೆಯು ಮಾಡುತ್ತಿಲ್ಲ ಪೋಲೀಸ್ ಇಲಾಖೆಯು ಕೆಲಸ ಸ್ಥಗಿತವಾಗಿದೆ. "ಬುಡ ತರಿಯುತ್ತೇ ವೆಂದು ಹೇಳಿ ಕೊನೆಯನ್ನು ತರಿಯತಕ್ಕಂಥ ಕೆಲಸವಾಗಬಾರದು" ಮೂಲಭೂತವಾಗಿ ಯಾರು ಪೋಷಕರು ಇರುತ್ತಾರೋ ಅವರನ್ನು ಹುಡುಕಿ ಅವರಿಗೆ ಶಿಕ್ಷೆಯನ್ನು ಕೊಡತಕ್ಕಂಥ ಕೆಲಸವನ್ನು ಪೋಲೀಸ್ ಇಲಾಖೆಯವರು ಮಾಡಬೇಕೆಂದು ನಾನು ಹೇಳುತ್ತೇನೆ.

೨-೦೦ ಪಿ. ಎಂ.

ಮತ್ತೊಂದು ಮಾತನ್ನು ನನ್ನ ಹಳೆಯ ಸಮಾಜವಾದದ ಸ್ನೇಹಿತರು ಹೇಳಿದರು. ಯಾವನೋ ಒಬ್ಬ ಬಸ್‌ಡ್ರೈವರ್, ಕ್ಲರ್ಕ್ ಮತ್ತು ಕೆಲವರು ಸೇರಿಕೊಂಡು ಸಾಮಾನ್ಯವಾದ ರೀತಿಯಲ್ಲಿ ಒಂದು ಕ್ಲಬ್ ಮಾಡಿಕೊಂಡು ರಿಜಿಸ್ಟರ್ ಮಾಡಿಸಿ ಇಸ್ಪೀಟ್ ಅಥವಾ ಏನಾದರೂ ಆಟ ಆಡಿದರೆ ಅದು ಗ್ಯಾಂಬ್ಲಿಂಗ್ ಆಗುತ್ತದೆ. ಅದೇ ಸೊಗಸಾಗಿ ಟೇಬಲ್ ಮುಂದೆ ಕುಳಿತುಕೊಂಡು ಬೆಳಗ್ಗಿನಿಂದ ಸಂಜೆ ತನಕ ಶ್ರೀಮಂತರು, ಅಧಿಕಾರಿಗಳು ಆಟ ಆಡಿದರೆ ಅದು ಗ್ಯಾಂಬ್ಲಿಂಗ್ ಅಲ್ಲ. ಬಡವ ಸಮಯ ಕಳೆಯಲಿಕ್ಕೆ ಇಸ್ಪೀಟ್ ಆಟ ಆಡಿದರೆ ಅವನ ಮೇಲೆ ಪೋಲೀಸ್ ಅಧಿಕಾರಿಗಳು ರೇಡ್ ಮಾಡುತ್ತಾರೆ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ ಕಾರುಗಳಲ್ಲಿ ಓಡಾಡಿಕೊಂಡು ಬೆಳಗ್ಗಿನಿಂದ ಸಂಜೆತನಕ ಯಾರು ಆಟ ಆಡುತ್ತಾರೆ ಅವರ ಮೇಲೆ ಗ್ಯಾಂಬ್ಲಿಂಗ್ ಎಂದು ಹೇಳಿ ರೇಡ್ ಮಾಡಲಿಕ್ಕೆ ಇದರಲ್ಲಿ ಅವಕಾಶ ಇಲ್ಲ. ಇದನ್ನು ಕೂಡ ಹಾಕಬೇಕು. ಇದಕ್ಕೂ ಅವಕಾಶ ಇರಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಇದ್ದಾಗ, ಅದರ ದುರುಪಯೋಗ ಆಯಿತೆಂದು ನಾವು ಹೋರಾಟ ಮಾಡಿದ್ದೆವು. ಈಗಲೂ ಈ ಮಸೂದೆಯು ದುರುಪಯೋಗವಾಗಬಹುದೆಂದು ಮಾನ್ಯ ಸ್ನೇಹಿತರು ಶಂಕೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. "If Law becomes lawless, disobedience is by duty" ಅಂತಹ ಪರಿಸ್ಥಿತಿ ಬಂದಾಗ ನಾವು ನಿಮ್ಮ ಜೊತೆಯಲ್ಲಿ ನಿಂತು ಹೋರಾಟ ಮಾಡುತ್ತೇವೆ.

ಶ್ರೀ ಬಿ. ಎ. ಉಮರಬ್ಬ.—ನೀವು ಹೋರಾಟ ಪ್ರಾರಂಭ ಮಾಡುವ ಮೊದಲೇ ಅನೇಕ ಜನರ ಪ್ರಾಣ ಹೋಗಿರುತ್ತದೆ.

ಅಧ್ಯಕ್ಷರು.—ಮಾನ್ಯ ಉಮರಬ್ಬನವರೇ ನೀವು ಮಧ್ಯೆ ಈ ರೀತಿ ಮಾತನಾಡುವುದು ಬೇಡ.

SRI VEDANTHA HEMMIGE.— On page 8, there is refer[e]nce to Constitution of Advisory Boards.

> "Constitution of Advisory Boards. (1) The State Government shall, whenever necessary constitute one or more Advisory Boards for the purpose of this Act."

...'shall 'ಎಂದರೆ ಖಂಡಿತವಾಗಿಯೂ' ಇದರಲ್ಲಿ ಇರತಕ್ಕವರು ಯಾರು ? Further it is mentioned.

> "Every such Board shall consist of a Chairman and two other members and the Chairman shall be a serving judge of the High Court of Karnataka and the other members shall be serving or retired judges of any High Court."

ಬೋರ್ಡಿನಲ್ಲಿ ವಿಚಾರಣೆ ಮಾಡುವುದಕ್ಕೆ ಯಾವ ಅಧಿಕಾರಿಗಳನ್ನು ಹಾಕಿದ್ದಾರೆ ? ಹೈಕೋರ್ಟ್ ಜಡ್ಜ್ ನ್ಯಾಯ ಪೀಠದಲ್ಲಿ ಕೆಲಸ ಮಾಡಿರತಕ್ಕಂಥ ಅನುಭವ ಇರತಕ್ಕಂಥವರು ಯಾರು ಇದ್ದಾರೆ ಅಂಥವರನ್ನು ಹಾಕಿರುವುದರಿಂದ ಯಾರಿಗೇ ಆಗಲೀ ಈ ಬೋರ್ಡಿನ ಮುಂದೆ ಹೋದವರಿಗೆ ನ್ಯಾಯ ಸಿಗುತ್ತದೆ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ, ಬೆಂಗಳೂರು

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು



ರಕ್ಷಣೆಯನ್ನು ಕೊಟ್ಟಿದ್ದಾರೆ. ನಂತರ ವೇಜ್
ಇದರಲ್ಲಿ ಅನುಮಾನ ಇಲ್ಲ. ಈ ಕ್ಲಾಸ್‌ನಲ್ಲಿ ಸಾಕಷ್ಟು Further it is mentioned in page 9 Clause 12.
೯ ರಲ್ಲಿ ಹೀಗೆ ಹೇಳಿದೆ

"Action upon report of the Advisory Board. (2) In any case where the Advisory Board has reported that there is, in its opinion, no sufficient cause for the determination of the person concerned, the State Government shall revoke the detention order and cause the person to be released forth with.

ಶ್ರೀ ಬಿ. ಎ. ಉಮರಬ್ಬ.—ಇದರ ಮೂಲಕ ನೀವು ಯಾರಿಗೆ ರಕ್ಷಣೆ ಮಾಡಬೇಕೆಂದು ಬಯಸು
ತ್ತೀರೋ ಅದಕ್ಕೆ ಅವಕಾಶ ಇದೆಯೇ ?

ಶ್ರೀ ವೇದಾಂತ ಹೆಮ್ಮಿಗೆ.—ಆದ್ದರಿಂದ ಈ ಬಿಲ್ಲನ್ನು ಏನು ಸರ್ಕಾರ ತಂದಿದೆ, ಯಾವನೇ ನಾಗರೀಕನಾಗಲೀ ಪಟ್ಟಣವಾಗಲೀ ಎಲ್ಲಿಯಾಗಲೀ ನಿಶ್ಚಿಂತವಾಗಿ ಜೀವನ ಮಾಡುವಂತಹ ಪರಿಸರ ಬರಲು ಅನುಕೂಲವಾಗುತ್ತದೆ. ಈಗ ಹಲವಾರು ವರ್ಷಗಳಿಂದ ಗಾಭರಿಯಾಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇದನ್ನು ಕಟ್ಟುನಿಟ್ಟಾಗಿ ದಯಾದಾಕ್ಷಿಣ್ಯ ಇಲ್ಲದೇ ಜಾರಿಗೆ ತಂದು ಪಟ್ಟಣ ಮತ್ತು ನಗರ ಗಳಲ್ಲಿ ಶಾಂತಿಯನ್ನು ಉಂಟು ಮಾಡಿ ಜನರ ರಕ್ಷಣೆ ಏನಿದೆ, ಹೆಣ್ಣುಮಕ್ಕಳ ರಕ್ಷಣೆ ಏನಿದೆ ಅದನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಇದನ್ನು ಸಾಕಷ್ಟು ಮಟ್ಟಿಗೆ ಚೆನ್ನಾಗಿ ಜಾರಿಮಾಡಿ ಈ ಗೂಂಡಾಗಿರಿ ಎಂದು ಏನು ಹೇಳುತ್ತೇವೆ, ಅದನ್ನು ಪೂರ್ಣವಾಗಿ ನಿವಾರಣೆ ಮಾಡಬೇಕೆಂದು ಹೇಳಿ ಈ ಶಾಸನವನ್ನು ಸಮರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ಏನು ತಂದಿದ್ದಾರೆ ಇದು ಮೂಲ ಭೂತವಾಗಿ ಒಂದು ಸರಿಯಾದ ಬಿಲ್ ಅಲ್ಲ. ಇದನ್ನು ಒಪ್ಪತಕ್ಕಂಥ ಅಂಶ ಇಲ್ಲವೆಂದು ನಾನು ಹೇಳುತ್ತೇನೆ. ಇದನ್ನು ನಾನು ಒಪ್ಪುವುದಿಲ್ಲ. ಒಂದು ಬಿಲ್ಲನ್ನು ತಂದರೆ ಸರ್ಕಾರಕ್ಕೆ ಒಂದು ಉದ್ದೇಶ ಇರಬೇಕು. 'ಗೂಂಡಾ' ಎನ್ನುವುದಕ್ಕೆ ಅರ್ಥವಿವರಣೆಯನ್ನು ಇಲ್ಲಿ ಹೀಗೆ ಕೊಟ್ಟಿದ್ದಾರೆ.

In the Bill, the word "goonda" is defined as under.—

"goonda" means a person who either by himself or as a member of or a leader of a gang, habitually commits or attempts to commit or abets the Commission of offences punishable under Chapter XVI, XVII or Chapter XXII of the Indian Penal Code."

ಐ.ಪಿ.ಸಿ. ೫೦೩, ೫೦೪ ಮತ್ತು ೫೦೬ ಇದಕ್ಕೆ ಅಪ್ಲೈ ಆಗುತ್ತದೆ. In accordance with I.P.C. 506, if a person is proved guilty he can definitely be punished. I quote I P.C. 506, which reads as under,

"Whoever commits offence of criminal intimidation shall be punished with imprisonment or either description for a term which may extend to 2 years of. with fine or with both"

There is no definition for the term "Goonda" in the I. P. C. Your definitions for this in the Bill is vague. ಆಮೇಲೆ 'ಬೂಟ್‌ಲಿಗ್ಗರ್' ಬಗ್ಗೆ ಹೇಳಬೇಕೆಂದರೆ The meaning of the term "bootlegger' according to the Oxford Dictionary is a "person who trades in liquor. Section 32

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು



of the Excise Act is very clear. "If one does commit a mistake as per the Excise act he shall be punished with an imprisonment for three months and shall pay fine of Rs. 100". ದೇಸಾಯಿ ಕಮಿಷನ್ ರಿಪೋರ್ಟ್ ನೋಡಿ ಈ ಮಸೂದೆಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, I quote from Justice Desai Commission report

"At present the enforcement of Excise law is to be done by both Police and Excise Departments. This dual responsibility does not appear to be working satisfactorily with each Department trying to disown the responsibility on several grounds. For a proper and efficient enforcement, it is recommended that a separate enforcement wing under the control of a Deputy Commissioner of Excise with Police Officers of suitable rank trained on O. O. D. should be established in each district.'

And further it is reported, "honest and sincere attempt should be made to exercise the Excise legislation." ಅವರ ಕೈಯಲ್ಲಿ ಈ ಲೆಜಿಸ್ಲೇಷನ್ ಕೊಟ್ಟರೆ ಏನಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೭೧ ರಲ್ಲಿ ಆಲ್ ಇಂಡಿಯಾ ಜನರಲ್ ಸ್ಟ್ರೈಕ್ ಆಯಿತು. ನಮ್ಮನ್ನು ಹಿಡಿದು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿಸಿದ್ದರು ಹನ್ನೆರಡು ಗಂಟೆ ರಾತ್ರಿಯಲ್ಲಿ ಅಬ್ದುಲ್ಲಾ ಎನ್ನುವಾತ ಒಬ್ಬ ಬಾಯಿಬಾಯಿ ಬಡಿದುಕೊಳ್ಳುತ್ತಿದ್ದ. ಏಕೆಂದು ಕೇಳಿದ್ದಕ್ಕೆ ಆತ ರೇಸಸ್ ಮಾಡುತ್ತಿದ್ದನಂತೆ ಅದಕ್ಕೇ ಹಿಡಿದು ತಂದು ಹಾಕಿದ್ದಾರೆ ಎಂದು ತಿಳಿದುಬಂತು. ಮುಂಬಾಗಿಲಿನಲ್ಲಿ ಅಷ್ಟು ಹೊತ್ತಿನಲ್ಲಿ ರೇಸಸ್ ಮಾಡಬೇಕಾದರೆ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಅರ್ಜಿ ಕೊಡಬೇಕು. ಅವರು ಅನುಮತಿ ಕೊಟ್ಟರೆ ನೀನು ರೇಸಸ್ ಮಾಡಬೇಕೆಂದು ನಿನಗೆ ಗೊತ್ತಿಲ್ಲವೇ ಎಂದು ನಾನು ಅಬ್ದುಲ್ಲಾನಿಗೆ ಆಗ ದಬಾಯಿಸಿದೆ, ಇಂತಹ ಅಧಿಕಾರಿಗಳೂ ಸಹ ನಮ್ಮಲ್ಲಿದ್ದಾರೆ. ಆತನ ಫೋಟೋ ತೆಗೆದುಕೊಂಡು ಅವನೊಬ್ಬ ಗೂಂಡಾ ಎಂದು ಇವೊತ್ತಿಗೂ ಸಹ ಅಲ್ಲಿನ ಪೋಲೀಸ್ ಸ್ಟೇಷನ್‌ನಲ್ಲಿ ಹಾಕಿದ್ದಾರೆ. ಇಂತಹ ಅಧಿಕಾರಿಗಳ ಕೈಗೆ ಇಂತಹ ಒಂದು ಆಕ್ಟನ್ನು ಮತ್ತೆ ಕೊಡುತ್ತಿದ್ದೀರಿ. ಆರ್ಟಿಕಲ್ ೨೧ ನ್ನು ತಾವು ಸ್ವಲ್ಪ ಓದಬೇಕು. ಅದರಲ್ಲಿ ಈ ರೀತಿ ಹೇಳಿದೆ.—

"Protection of life and personal liberty.—No person shall be deprived of his life or personal liberty except according to procedure established by law. "Article 22 says". No person who is arrested shall be detained in custody without being informed, as soon as may be, of the grounds for such arrest nor shall he be denied the right to consult, and to be defended by, a legal practitioner of his choice".

ಎಂದು, ಆದ್ದರಿಂದ ಈ ಆಕ್ಟನಲ್ಲಿ ಹೇಳಿರುವಂತಹ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಏನಾದರೂ ಅರೆಸ್ಟ್ ಮಾಡಿದರೆ, ಅಂತಹವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಪ್ರೊಡ್ಯೂಸ್ ಮಾಡಬೇಕೆಂದು ಇದರಲ್ಲಿ ಹೇಳಿಲ್ಲ. ೫ ದಿವಸಗಳೊಳಗಾಗಿ ಈ ಬಗ್ಗೆ ಇಂಟಿಮೇಷನ್ ಕೊಡಬೇಕೆಂದು ಮಾತ್ರ ಇದರಲ್ಲಿದೆ. ಆದರೆ ಇದು ನಮ್ಮ ರಾಜ್ಯಾಂಗಕ್ಕೆ ವಿರುದ್ಧವಾಗಿದೆ. ಈ ಬಗ್ಗೆ ನನ್ನ ಸ್ನೇಹಿತರು ಹೇಳುತ್ತಿದ್ದರು, ಏನೆಂದರೆ ಇದನ್ನು ಜಾರಿಗೆ ತರುವುದು ಬಹಳ ಅಗತ್ಯವಾಗಿದೆ ಇಲ್ಲದಿದ್ದರೆ ಇಂತಹ ಜನರ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವುದಕ್ಕಾಗುವುದಿಲ್ಲ ಎಂದು. ನನ್ನ ಒಂದು ಅನುಭವದಲ್ಲಿ ಹೇಳಬೇಕೆಂದರೆ ಯಾರೇ ಆಗಲಿ. ಅಕ್ರಮ ಮದ್ಯ ಸಾಗಾಣಿಕೆ ಮಾಡುವಂತಹ ದೊಡ್ಡ ದೊಡ್ಡ ಸಂಸ್ಥೆಗಳು, ಶರಾಬ್‌ಗಳು ಪೋಲೀಸರಿಗೆ ಮಾಮೂಲಿ ಕೊಟ್ಟುಕೊಂಡು

ಆಕ್ಟ್ ಏನಾದರೂ ಪಾಸ್ ಆದರೆ ಚಿಕ್ಕದಾಗಿ ಈ ಕಸಬನ್ನು ಚೆನ್ನಾಗಿಯೇ ಇರುತ್ತಾರೆ. ಈ ಆಕ್ಟ್ ಏನಾದರೂ ಪಾಸ್ ಆದರೆ ಅಂತಹವರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿಡುತ್ತಾರೆ. ...ತ್ತಿರುವ ಪುಟ್ಟಸ್ವಾಮಿ, ಮಹಮಂದ್ ಮುಂತಾದವರನ್ನು ಅರೆಸ್ಟ್ ಮಾಡಿ ಹತ್ತು ಸಾವಿರ ಮಾಮೂಲಿ ಕೊಟ್ಟರೆ ಬಿ... ವರೂ ಕೂಡ ತಮ್ಮ ಮನೆಗಳನ್ನು ಮಾರಾಟ ಮಾಡಿ ಹತ್ತು ಸಾವಿರ ... ನಮಗೆ ಸ್ವಾತಂತ್ರ್ಯ ಬಂದ... ಬಿಡುತ್ತಾರೆ. ನಮ್ಮದು ಸಮಾಜವಾದಿ ಸಮಾಜ ಎಂದು ಹೇಳುತ್ತೇವೆ. ನಮಗೆ ಸ್ವಾತಂತ್ರ್ಯ ಬಂದು ೩೮ ವರ್ಷಗಳಾದ ಮೇಲೂ ಸಹ ಎಲ್ಲಾ ಜನರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲು ಸಾಧ್ಯವಾಗಿಲ್ಲ. ಈ ಮೊದಲು ಬಡತನದ ರೇಖೆಯ ಕೆಳಗೆ ಶೇಕಡಾ ೪೮ ರಷ್ಟು ಜನರು ಇದ್ದರೆ ಈಗ ಶೇಕಡಾ ೬೨ ರಷ್ಟು ಜನರಿದ್ದಾರೆ. ಮುಳಬಾಗಲಲ್ಲಿ ಬಡವರಾದಂಥ ಹರಿಜನರು ಮತ್ತು ಮುಸ್ಲೀಮರು ಸರ್ಕಾರದ ಜಮೀನಿನಲ್ಲಿ ಒಂದು ಸಾವಿರ ಗುಡಿಸಲುಗಳನ್ನು ಹಾಕಿದರು. ಒಂದು ದಿನ ಪೋಲೀಸರು ೮ ಪೋಲೀಸ್ ವ್ಯಾನ್ ಗಳಲ್ಲಿ ಬಂದು ಆ ಗುಡಿಸಲುಗಳನ್ನೆಲ್ಲಾ ಕಿತ್ತು ಹಾಕಿ ಬೆಂಕಿ ಇಟ್ಟರು. ಜನತಾ ಪಕ್ಷದ ಸರ್ಕಾರ ಇದ್ದಾಗಲೇ ಇದು ನಡೆದದ್ದು. ಶೇಕಡಾ ೯೯ ರಷ್ಟು ಬಡವರೇ ವಾಸವಾಗಿದ್ದ ಈ ಗುಡಿಸಲುಗಳನ್ನು ಈ ರೀತಿ ಸುಟ್ಟು ಹಾಕಿದರೆ, ಅವರ ಗತಿ ಏನಾಗಬೇಕು ? ಬಡವರಿಗೆ ಸರ್ಕಾರದ ಜಮೀನಿನಲ್ಲಿ ಗುಡಿಸಲು ಹಾಕಿಕೊಳ್ಳಿ ಎಂದು ಹೇಳಿದರೆ ಸಾಕು, ಅಂತಹವರನ್ನು ಈ ಆಕ್ಟ್ ಪ್ರಕಾರ ಅರೆಸ್ಟ್ ಮಾಡಬಹುದು, ಮಾನ್ಯ ಸಚಿವರು ಅಕ್ರಮ ಮದ್ಯ ಸಾಗಾಣಿಕೆದಾರರ ಬಗ್ಗೆ, ಹಾಗೂ ಇನ್ನಿತರರ ಬಗ್ಗೆ ವಿವರಗಳನ್ನು ಕೊಟ್ಟರು.

| | | |
|---|---|---|
| Prostitutes | ... | 855 |
| Pimps | ... | 92 |
| Dens | ... | 22 |

ಇದೆಲ್ಲಾ ಪೋಲೀಸರು ಒದಗಿಸಿರುವಂತಹ ಅಂಕಿಅಂಶಗಳು. ಇದೆಲ್ಲಾ ಸುಳ್ಳು ಅಂಕಿಅಂಶಗಳು. ನನ್ನ ಅಭಿಪ್ರಾಯದಲ್ಲಿ ಇಂತಹವರು ಇದರ ನಾಲ್ಕರಷ್ಟು ಇಲ್ಲವೇ ಐದರಷ್ಟು ಇದ್ದಾರೆ. ಇಲ್ಲಿ ಜೂಜಾಟಗಾರರ ಬಗ್ಗೆ ಹೇಳಿದ್ದೀರಿ. ಇವೊತ್ತು ದೊಡ್ಡ ದೊಡ್ಡ ಶ್ರೀಮಂತರು ಇದ್ದಾರೆ. ಇಂತಹವರೇ ಹೆಚ್ಚಾಗಿ ಜೂಜಾಟದಲ್ಲಿ ತೊಡಗುವುದು. ಇಂತಹವರನ್ನು ತಾವು ಈ ಆಕ್ಟ್ ಪ್ರಕಾರ ಅರೆಸ್ಟ್ ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ದೊಡ್ಡವರನ್ನು ಬಿಟ್ಟುಬಿಡುತ್ತೀರಿ. ನೀವು ಜೂಜಾಟಕ್ಕೆ ಅವಕಾಶ ಕೊಟ್ಟಿರುವುದರಿಂದ ಸಾವಿರಾರು ಸಂಸಾರಗಳು ಹಾಳಾಗುತ್ತಿವೆ. ಇವೊತ್ತಿನದಿವಸ ಸರ್ಕಾರದವರೇ ಲಾಟರಿಯನ್ನು ನಡೆಸುತ್ತಿದ್ದಾರೆ. ಒಂದು ಕೋಟಿ, ಎರಡು ಕೋಟಿ ಹೀಗೆ ಕೋಟಿಗಟ್ಟಲೆ ಬಹುಮಾನಗಳನ್ನು ಕೊಡಲಾಗುತ್ತದೆಂದು ಲಾಟರಿ ಬಗ್ಗೆ ಪ್ರಚಾರ ಮಾಡುತ್ತಿರುವ ಕಾರಣದಿಂದ ಸಂಬಳ ಪಡೆಯುವ ಜನರು ಸಂಬಳ ಬಂದ ಕೂಡಲೇ ಬಹುಮಾನದ ಆಸೆಗೆ ಹತ್ತಿಪ್ಪತ್ತು ರೂಪಾಯಿಗಳಷ್ಟು ಲಾಟರಿ ಟಿಕೆಟ್ ಗಳನ್ನು ಖರೀದಿ ಮಾಡುತ್ತಾರೆ. ಇಂತಹ ಜನರು ಮಕ್ಕಳಿಗೆ ತಿಂಡಿ ತೆಗೆದುಕೊಂಡು ಹೋಗುವುದಕ್ಕೂ ಸಹ ಮನಸ್ಸು ಮಾಡುವುದಿಲ್ಲ. ಇಂತಹ ಒಂದು ರೋಗ ಜನರಲ್ಲಿ ಬಂದಿದೆ. ಇದನ್ನು ತಡೆಗಟ್ಟುವುದಕ್ಕೆ ಬದಲು ನೀವು ಈ ಆಕ್ಟನ್ನು ತಂದಿದ್ದೀರಿ. ಇದರ ಅಗತ್ಯವಾದರೂ ಏನಿತ್ತು ? ಯಾರಾದರೂ ಯಾವುದಾದರೂ ಒಂದು ತಪ್ಪು ಮಾಡಿದರೆ, ಅಂತಹವರಿಗೆ ಯಾವ ರೀತಿ ಶಿಕ್ಷೆ ವಿಧಿಸಬೇಕು ಎಂಬುದನ್ನು ಎವಿಡೆನ್ಸ್ ಆಕ್ಟಿನ ೧೧೦ ನೇ ನಿಯಮದಲ್ಲಿ ಸ್ಪಷ್ಟವಾಗಿ ಹೇಳಿರುವ ಕಾರಣ ಪ್ರತ್ಯೇಕವಾಗಿ ಈ ಆಕ್ಟ್ ಆದರೂ ಏತಕ್ಕೆ ಬೇಕು ? ಇವೊತ್ತು ನೀವು ಅಧಿಕಾರದಲ್ಲಿರಬಹುದು, ನಾಳೆ ಕಾಂಗ್ರೆಸ್ ಪಕ್ಷದವರು ಅಧಿಕಾರಕ್ಕೆ ಬರಬಹುದು. ಆದರೆ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ನಾವು ಮಾತ್ರ ಅಧಿಕಾರಕ್ಕೆ ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಏನಾದರೂ ಬಡವರಿಗೆ ಸರ್ಕಾರದ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಿ ಎಂದರೆ, ಪೋಲೀಸರು ಈ ಆಕ್ಟ್ ಪ್ರಕಾರ ನಮ್ಮನ್ನೇ ಒಳಗೆ ಹಾಕುವುದಕ್ಕೆ ಸಾಧ್ಯವಿದೆ.

ಶ್ರೀ ಧರ್ಮಸಿಂಗ್.—ಕಲ್ಕತ್ತಾದಲ್ಲಿ ಯಾವ ರೀತಿ ಇದೆ ಎಂಬುದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ತಾವು ಅಲ್ಲಿ ಯಾವ ರೀತಿ ಇದೆ ಎಂಬುದನ್ನು ವಿವರಿಸಿ ಹೇಳುತ್ತೀರಾ ?

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿನ ವಿಚಾರ ನನಗೆ ಗೊತ್ತಿಲ್ಲ. ಇನ್ನು ಡೆಫನಿಷನ್ ತೆಗೆದುಕೊಂಡರೂ ಸಹ ಬಹಳ ಅಸ್ಪಷ್ಟವಾಗಿದೆ.

"in the case of a bootlegger, when he is engaged, or is making preparation for engaging, in any of his activities as a bootlegger"

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಎಂ. ಶಶಿಕಾಂತ
ಚರ್ಚೆ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

(34)



"detention order" means an order made under section 3" Clause three says :

"Power to make orders detaining certain persons. (1) The State Government may, if satisfied with respect to any bootlegger or drug offender or gambler or goonda or immoral traffic offender or slumgrabber that with a view to prevent him from acting in any manner prejudicial to the maintenance of public order,...

ಇಲ್ಲಿ ಗೂಂಡಾ ಎಂಬ ಪದವನ್ನು ಉಪಯೋಗ ಮಾಡಿದ್ದೀರಿ. ಗೂಂಡಾ ಎಂಬ ಪದಕ್ಕೆ ಅರ್ಥ
ಏನು ಎಂದು ನಾನು ಎಲ್ಲಾ ಡಿಕ್ಷನರಿಗಳಲ್ಲಿಯೂ ನೋಡಿದೆ. ಆದರೆ ಯಾವುದರಲ್ಲಿಯೂ ಈ ಪದ
ಇಲ್ಲ. ಗೂಂಡಾ ಎಂಬ ಪದವನ್ನು ಹಿಂದಿಯಲ್ಲಿ ಉಪಯೋಗ ಮಾಡುತ್ತಾರೆ. ಅದನ್ನು ನೋಡಿ
ಕೊಂಡು ಇಲ್ಲಿ ಬಳಸಿರಬಹುದೆಂದು ಕಾಣುತ್ತದೆ. ಈ ಪದಕ್ಕೆ ತಾವು ಇದರಲ್ಲಿ ಸರಿಯಾದ ಡೆಫನಿಷನ್
ಸಹ ಕೊಟ್ಟಿಲ್ಲ. ಐ.ಪಿ.ಸಿ.ಯ ೫೦೬ನೇ ಸೆಕ್ಷನನ್ನು ಈ ಬಗ್ಗೆ ನೋಡಿ ಎಂದು ಹೇಳಿದ್ದೀರಿ. ಆದರೆ
ಅದು ಡೆಫನಿಷನ್ ಯಾವ ರೀತಿ ಆಗುತ್ತದೆ ? ಆದ್ದರಿಂದ ಇದು ಅಸ್ಪಷ್ಟವಾಗಿದೆ ಎಂದು ಹೇಳಬಹುದು.
ಈ ರೀತಿ ಅಸ್ಪಷ್ಟವಾಗಿದ್ದರೆ ಇದನ್ನು ಜಾರಿಗೆ ಕೊಡುವುದಾದರೂ ಹೇಗೆ ? ರಾಜಕೀಯದಲ್ಲಿರುವವರು,
ಪ್ರಭಾವಶಾಲಿಗಳಾದವರು ಈ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ ಆದರೆ ಸಾಮಾನ್ಯ ಜನರಿಗೆ ಇದ
ರಿಂದ ಹೆಚ್ಚಿನ ತೊಂದರೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ಇವೊತ್ತಿನ ದೃಷ್ಟಿಯಿಂದ ಯೋಚನೆ ಮಾಡದೆ
ಮುಂದಿನ ದಿನಗಳ ದೃಷ್ಟಿ ಇಟ್ಟುಕೊಂಡು ಯೋಚನೆ ಮಾಡಬೇಕು. ಈ ಮೊದಲು ಕೇಂದ್ರದವರು
ನ್ಯಾಷನಲ್ ಸೆಕ್ಯೂರಿಟಿ ಆಕ್ಟನ್ನು ಜಾರಿಗೆ ತಂದರು. ಅದನ್ನು ಜಾರಿಗೆ ತಂದ ಸಮಯದಲ್ಲಿ ಅನುಮಾನ
ಬಂದ ಕಮ್ಯೂನಿಸ್ಟ್ ಸದಸ್ಯರನ್ನು, ಜನತಾ ಪಕ್ಷದ ಸದಸ್ಯರನ್ನು ಒಳಗಡೆ ಹಾಕಿದರು. ಈಗ ನೀವು
ಅಂತಹದೇ ಮಿನಿ ನ್ಯಾಷನಲ್ ಸೆಕ್ಯೂರಿಟಿ ಆಕ್ಟನ್ನು ಜಾರಿಗೆ ತರುತ್ತಿದ್ದೀರಿ. ನ್ಯಾಷನಲ್ ಸೆಕ್ಯೂರಿಟಿ
ಆಕ್ಟನಲ್ಲಿ "Prejudicial activities towards the country" ಎಂದು ಇದ್ದರೆ ಈಗ
ನೀವು ತಂದಿರುವ ಆಕ್ಟನಲ್ಲಿ "Prejudicial activities towards the society" ಎಂದು
ಇದೆ. ಈ ಒಂದು ಬದಲಾವಣೆಯನ್ನು ಬಿಟ್ಟರೆ ಉಳಿದಂತೆ 'ಎ' ನಿಂದ 'ಜಡ್' ವರೆಗೆ ಅದನ್ನೇ ಕಾಪಿ
ಮಾಡಿದ್ದೀರಿ. ಈಗತಾನೆ ಮಾತನಾಡಿದಂಥ ಸದಸ್ಯರೊಬ್ಬರು ಮೊದಲಿನ ಸಬ್-ಇನ್ಸ್‌ಪೆಕ್ಟರ್ ತರ
ಹವೇ ಮಾತನಾಡಿದರು. ಪೋಲೀಸರಿಗೆ ಏನಾದರೂ ಎರಡು ಮೂರು ಸಾವಿರ ರೂಪಾಯಿಗಳನ್ನು
ಕೊಟ್ಟರೆ ಆಯಿತು. ನಮಗೆ ಆಗದ ಯಾರನ್ನು ಬೇಕಾದರೂ ಅವನು ಗೂಂಡಾ ಎಂದು ಹೇಳಿ ಒಳಗೆ
ಹಾಕಬಹುದು. ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೆ ಶ್ರೀ ಧರ್ಮಸಿಂಗ್ ಅವರನ್ನು ಬೇಕಾದರೆ
ಈ ಆಕ್ಟ ಪ್ರಕಾರ ಪೋಲೀಸರು ಒಳಗೆ ಹಾಕುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಶರೀರ ನೋಡಿ ತಾವು ಆ ರೀತಿ ಹೇಳುತ್ತಿದ್ದೀರಾ?

ಶ್ರೀ ಆರ್. ವೆಂಕಟರಾಮಯ್ಯ.—ಕ್ಷಮಿಸಬೇಕು, ನಾನು ಆ ರೀತಿಯಿಂದ ಹೇಳಲಿಲ್ಲ. ಯಾವ
ಯಾವ ತಪ್ಪುಗಳನು ಮಾಡಿದರೆ ಯಾವ ಯಾವ ರೀತಿ ಶಿಕ್ಷೆ ವಿಧಿಸಬೇಕು, ಎಷ್ಟೆಷ್ಟು ದಂಡ ಹಾಕಬೇಕು
ಎಂಬ ಬಗ್ಗೆ ಈಗಾಗಲೇ ಕೆಲವು ಆಕ್ಟಗಳನ್ನು ಪ್ರತಿ ವಿಭಾಗಕ್ಕೂ ಮಾಡಲಾಗಿದೆ. ಇವುಗಳ ಜಾಗದಲ್ಲಿ
ಮತ್ತೊಂದು ಆಕ್ಟನ್ನು ಜಾರಿಗೆ ತರುವುದು ಸರಿಯೇ ?

ಇಂತಹ ಕಾಲದಲ್ಲಿ ಎಕ್ಸಿಕ್ಯೂಟಿವ್ ಅಧಿಕಾರಿಗಳಿಗೆ ವಿಪರೀತ ಪವರ್ಸ್ ಕೊಡುವುದು ಬಹಳ
ಡೇಂಜರ್ ಆಗುತ್ತದೆ. ಪೋಲೀಸರಿಗೆ ಹೆಚ್ಚು ಅಧಿಕಾರ ಕೊಟ್ಟರೆ, ಯಾವ ಗೂಂಡಾನು ಏನೂ ಮಾಡು
ವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ಮಾಮೂಲು ತೆಗೆದುಕೊಂಡು
ಗೂಂಡಾಗಳನ್ನು ಬಿಟ್ಟುಬಿಡುತ್ತಾರೆ. ಆಗ ಎಷ್ಟು ಅಧಿಕಾರ ಕೊಟ್ಟರೂ ಪ್ರಯೋಜನವಿಲ್ಲದಂತಾಗು
ತ್ತದೆ. ಎಲ್ಲಾ ಪೋಲೀಸರೂ ಮಾಮೂಲು ತೆಗೆದುಕೊಳ್ಳುತ್ತಾರೆಂದು ನಾನು ಹೇಳುವುದಿಲ್ಲ. ೧೦
ಪರ್‌ಸೆಂಟ್ ಮಾತ್ರ ಒಳ್ಳೆಯ ಪೋಲೀಸರು ಇರಬಹುದು. ಇನ್ನು ಉಳಿದ ೯೦ ಪರ್‌ಸೆಂಟ್ ಪೋಲೀಸ
ರಂತೂ ಮಾಮೂಲು ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ, ಇಂತಹವರ ಕೈಯಲ್ಲಿ ಈ ಆಕ್ಟನ್ನು
ಕೊಟ್ಟರೆ, ಅವರು ಸಿಕ್ಕಿದವರನ್ನೆಲ್ಲಾ ಜೈಲಿಗೆ ತಳ್ಳುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಈ ವಿಷಯ

ವನ್ನು ನಾವು ಮೂಲಭೂತವಾಗಿ ಯೋಚನೆ ಮಾಡಬೇಕಾಗುತ್ತದೆ. ಸುಪ್ರೀಂ ಕೋರ್ಟಿನ ಜ...
ಆಗಿದ್ದ ಶ್ರೀ ಕೃಷ್ಣಐಯ್ಯರ್‌ರವರು ಈ ರೀತಿ ಹೇಳಿದ್ದಾರೆ.—

"Priventive sections prevative of freedom, if incautiously proved by indolent judicial processes. may do deeper injury. They will have the effect of detention of one who has not been held guilty of a crime and carry with it the judicial imprimatur, to boot, To call a man dangerous is itself dangerous."

ನಾನು ಹೇಳುವುದು ಇಷ್ಟೇ, ಪೋಲೀಸಿನವರು ಈ ಆಕ್ಟಿನ ಹೆಸರನ್ನು ಹೇಳಿಕೊಂಡು ನಿರಪರಾಧಿ
ಗಳನ್ನೂ ಜೈಲಿಗೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತಾರೆ. ಈಗಾಗಲೇ ಗೂಂಡಾಗಳನ್ನೂ,
ಡಕಾಯಿತಿಗಳನ್ನು ತಪ್ಪಿಸುವುದಕ್ಕೆ ಕಾನೂನುಗಳು ಇಲ್ಲವೆ ? ಈ ಕಾನೂನನ್ನು ತಂದಿರುವುದು ನಿಜವಾಗಿ
ರಾಜಕೀಯ ದುರುದ್ದೇಶದಿಂದ ಕೂಡಿದೆ, ಇದನ್ನು ಮಾಡಿರುವ ಮೂಲ ಉದ್ದೇಶ ಸರಿಯಿಲ್ಲ. ಈ
ಆಕ್ಟಿಗೆ ಆಲ್ಟರ್‌ನೇಟಿವ್ ಕಾನೂನು ಈಗಾಗಲೇ ಇರುವುದರಿಂದ ಈ ಕಾನೂನು ತಂದಿರುವುದನ್ನು
ಕೈಬಿಡಬೇಕೆಂದು ಮಾನ್ಯ ರಾಚಯ್ಯನವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ಕೃಷ್ಣರೆಡ್ಡಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸದನದ ಮುಂದೆ
ತರುವುದಕ್ಕೆ ಬಹಳ ಮುಖ್ಯವಾದ ಕಾರಣಗಳು ಇವೆ. ಸಾರ್ವಜನಿಕ ಜೀವನದಲ್ಲಿ ಗೂಂಡಾಗಿರಿ ನಡೆದಾಗ,
ಕಲಬೆರಕೆ ಔಷಧಗಳು ಮಾರಾಟಕ್ಕೆ ಹೋದಾಗ, ಕಳ್ಳಭಟ್ಟಿ ಸಾರಾಯಿಯನ್ನು ಸಾರ್ವಜನಿಕರು ಕುಡಿದು
ಸತ್ತಾಗ, ಇದೇ ಸದನದ ಸದಸ್ಯರೇ ಇಂತಹ ಅಪರಾಧಗಳಿಗೆ ಅತ್ಯಂತ ಹೆಚ್ಚಿನ ಶಿಕ್ಷೆ ಕೊಡಬೇಕೆಂದು
ಹೇಳಿದ್ದಾರೆ. ಆ ಕಡೆಯವರು, ಈ ಕಡೆಯವರು ಎಂದು ಪ್ರಶ್ನೆಯಲ್ಲ. ನಮ್ಮ ಮಾನ್ಯ ವೀರಪ್ಪ
ಮೊಯಿಲಿಯವರು ಸಹ ಇಂತಹ ಅಕ್ರಮಗಳನ್ನು ತಡೆಯುವುದಕ್ಕೆ ಒಂದು ಸಮಗ್ರವಾದ ಮಸೂದೆ
ಯನ್ನು ಈ ಶಾಸಕಾಂಗ ಸಭೆಯಲ್ಲಿ ಇಡಿ. ಅದಕ್ಕೆ ನಮ್ಮ ಒಪ್ಪಿಗೆ ಇರತ್ತದೆಂದು ಹೇಳಿದ್ದರು. ಈ
ವಿಷಯವನ್ನು ಮಾರ್ಕ್ಸ್‌ವಾದಿ ಮಿತ್ರರೂ ಸಹ ಹೇಳಿದ್ದರು. ವಾಸ್ತವಿಕವಾಗಿ ಇರತಕ್ಕಂತಹ
ಪರಿಸ್ಥಿತಿಯಲ್ಲಿ ಈ ಒಂದು ಮಸೂದೆಯಿಂದ ಗೂಂಡಾಗಿರಿ ನಿಲ್ಲಿಸಬೇಕು, ಕಲಬೆರಕೆ ನಿಲ್ಲಿಸಬೇಕು
ಎಂಬುದೇ ಈ ಸದನದ ಮುಂದೆ ಇರತಕ್ಕ ಮಸೂದೆಯ ಮುಖ್ಯ ಉದ್ದೇಶ. ನನ್ನ ದೃಷ್ಟಿಯಲ್ಲಿ,
ಈ ಗೂಂಡಾ ಪ್ರವೃತ್ತಿ, ಕಲಬೆರಕೆ ಮುಂತಾದ ಅಕ್ರಮಗಳು ಈಗ ಜಾಸ್ತಿಯಾಗಿವೆ. ಇವುಗಳನ್ನು ತಡೆ
ಗಟ್ಟಲು ಒಂದು ಬಿಗಿಯಾದ ಶಾಸನ ಬೇಡವೆ ? ಈಗಾಗಲೇ, ಇಂತಹ ಅಕ್ರಮಗಳನ್ನು ತಡೆಯಲು
ಐ. ಪಿ. ಸಿ.ಯಲ್ಲಿ ಅವಕಾಶವಿದೆ ಆದುದರಿಂದ ಈ ಕಾನೂನನ್ನು ತರುವುದು ಬೇಡವೆಂದು ನಮ್ಮ
ಮಾನ್ಯ ಮಿತ್ರರು ಹೇಳಿದ್ದಾರೆ. ಈ ಐ. ಪಿ. ಸಿ. ಜೊತೆಗೆ ಈ ಒಂದು ಕಾನೂನು ಇರಲಿ, ಇದರಿಂದ
ನಷ್ಟ ಏನು ? ಈಗ ತಂದಿರುವ ಕಾನೂನಿನಲ್ಲಿ ಯಾರು ಗೂಂಡಾಗಿರಿ ಮಾಡುತ್ತಾರೆ, ಯಾರು ಕಳ್ಳ
ಭಟ್ಟಿ ಸಾರಾಯಿ ತಯಾರು ಮಾಡುತ್ತಾರೆ. ಯಾರು ಕಲಬೆರಕೆ ಮಾಡುತ್ತಾರೆ ಎಂಬ ಎಲ್ಲಾ
ಮಾಹಿತಿಯೂ ಸಂಪೂರ್ಣವಾಗಿ ಈ ಕಾನೂನಿನ ನೆರವಿನಿಂದ ಸಿಗುತ್ತದೆ. ಇದರಲ್ಲಿ ಕಾನೂನು ದುರುಪ
ಯೋಗವಾಗುವ ಪ್ರಶ್ನೆಯೇ ಬರುವುದಿಲ್ಲ. ಮಾನ್ಯ ಮಿತ್ರರು ಅಭಿಪ್ರಾಯ ಪಟ್ಟಂತೆ ಇದರಲ್ಲಿ
ಕಾರ್ಮಿಕ ನಾಯಕರ ಹಾಗೂ ರಾಜಕೀಯ ವಿರೋಧಿಗಳ ದಮನ ಈ ಚೌಕಟ್ಟಿನಲ್ಲಿ ಒಳಪಡುವುದಿಲ್ಲ.
ಅಂಥಾದ್ದೇನು ಈ ಕಾನೂನಿನಲ್ಲಿ ಇಲ್ಲ. ಮಾರ್ಕ್ಸ್‌ವಾದಿ ಮಿತ್ರರು ಇದನ್ನು ವಿರೋಧಿಸುತ್ತಾರೆಂದರೆ
ಇದಕ್ಕೆ ಅರ್ಥ ಇಲ್ಲ. ಆದುದರಿಂದ ಮಾರ್ಕ್ಸ್‌ವಾದಿ ಹಾಗೂ ಸಮಾಜವಾದಿ ಮಿತ್ರರುಗಳು ಮತ್ತು
ಎಲ್ಲಾ ಸದಸ್ಯರು ಈ ಮಸೂದೆಯನ್ನು ಒಪ್ಪಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳು
ತ್ತಿದ್ದೇನೆ.

† ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಈಗಿರುವ ವ್ಯವಸ್ಥೆ ಚೌಕಟ್ಟಿನಲ್ಲಿ
ನೂರಾರು ಕಾನೂನುಗಳು ಇದ್ದಾಗ್ಯೂ ಕೂಡ ಮತ್ತೆ ಈ ಒಂದು ಮಸೂದೆಯನ್ನು ತಂದಿದ್ದಾರೆ. ಮಾನ್ಯ
ಲಕ್ಷ್ಮೀಸಾಗರ್‌ರವರು ಈ ಒಂದು ಮಸೂದೆಯು ಸಮಾಜದಲ್ಲಿರತಕ್ಕಂತಹ ಲೋಪದೋಷಗಳನ್ನು
ಸರಿಪಡಿಸುವುದಕ್ಕೆ ತಂದಿರುವುದೆಂದು ಹೇಳಿದರು. ನಮ್ಮ ಮಾನ್ಯ ಸದಸ್ಯರ ವಾದದ ಪ್ರಕಾರ
ಈಗಾಗಲೇ, ಈ ಗೂಂಡಾಗಿರಿಯನ್ನು, ಸಮಾಜಘಾತುಕ ಕೃತ್ಯಗಳನ್ನು ತಡೆಯುವುದಕ್ಕೆ ಕಾನೂನುಗಳು



ಎಂ. ರವಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಇವೆ. ಈಗ ನೀವು ತಂದಿರುವ ಕಾನೂನು, ಹಿಂದೆ ತುರ್ತುಪರಿಸ್ಥಿತಿಯ ಕಾಲದಲ್ಲಿ ತಂದಿದ್ದಂತಹ ರಾಷ್ಟ್ರೀಯ ಭದ್ರತಾ ಕಾನೂನಿನಂತೆ ಇದೆ. ಈ ರಾಷ್ಟ್ರೀಯ ಭದ್ರತಾ ಕಾನೂನು ಬಹಳ ಅಪಾಯಕಾರಿಯೆಂದು, ರಾಷ್ಟ್ರಮಟ್ಟದಲ್ಲಿ ಇದನ್ನು ವಿರೋಧಿಸಲಾಗಿದೆ. ಈಗ ಅದಕ್ಕೆ ಪ್ರತಿರೂಪದಂತಿರುವ ಕಾನೂನನ್ನು ಈ ಸದನದಲ್ಲಿ ತಾವು ಮಂಡಿಸಿದ್ದೀರಿ ರಾಷ್ಟ್ರೀಯ ಭದ್ರತಾ ಕಾನೂನಿನಲ್ಲಿ ಯಾವ ಕಾಯಿದೆ ಇದೆಯೋ ಅದೇ ಕಾಯಿದೆ ಇದರಲ್ಲೂ ಇದೆ. ಶಬ್ದಗಳ ಸರಮಾಲೆ ಬೇರೆ ಇರಬಹುದು ಅಥವಾ ಶಬ್ದಗಳ ಜೋಡನೆ ಬೇರೆ ಇರಬಹುದು ಆದರೆ ಅರ್ಥ ಮಾತ್ರ ವ್ಯತ್ಯಾಸ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಶಬ್ದಗಳ ಜೋಡಣೆಯೂ ಅದೇ ತರಹ ಇದೆ.

ಶ್ರೀ ಯು. ಭೂಪತಿ.—ಮಾನ್ಯ ವೀರಪ್ಪ ಮೊಯಿಲಿಯವರು ಹೇಳುತ್ತಿದ್ದಾರೆ ನಿಮ್ಮ ಕಾನೂನಿನಲ್ಲಿ ರಾಷ್ಟ್ರೀಯ ಭದ್ರತಾ ಕಾನೂನಿನಲ್ಲಿರುವ ಶಬ್ದಗಳ ಜೋಡಣೆಯೇ, ಇಲ್ಲಿಯೂ ಇದೆಯೆಂದು. ಈ ಕಾನೂನು ಬಹಳ ಅಪಾಯಕಾರಿಯಾದುದು ಗೂಂಡಾಗಿರಿಯನ್ನು ತಡೆಯಲು ಈ ಕಾನೂನನ್ನು ಎಕ್ಸಿಕ್ಯೂಟೀವ್ ಅಧಿಕಾರಿಗಳಿಗೆ ಕೊಟ್ಟರೆ, ಯಾರು ಸಮಾಜದ ಸಮಸ್ಯೆಗಳನ್ನು ಕಟ್ಟಿಕೊಂಡು ಹೋರಾಟ ಮಾಡುತ್ತಾರೆ, ಯಾರು ಕಾರ್ಮಿಕರುಗಳನ್ನು ಸಂಘಟನೆ ಮಾಡಿ ಅವರ ಹಕ್ಕುಗಳ ಬಗ್ಗೆ ಚಳುವಳಿ ಮಾಡುತ್ತಾರೆ, ಯಾರು ನ್ಯಾಯಕ್ಕಾಗಿ ಸತ್ಯಾಗ್ರಹಗಳನ್ನು ಮಾಡುತ್ತಾರೆ ಅಂಥವರ ಮೇಲೆ ಮೊದಲು ಈ ಕಾನೂನನ್ನು ಪೋಲೀಸಿನವರು ಪ್ರಯೋಗ ಮಾಡುತ್ತಾರೆ. ಇಂತಹ ಚಳುವಳಿಗಾರರು ಪೋಲೀಸರಿಗೆ ಗೂಂಡಾಗಳ ತರಹ ಕಾಣಿಸುತ್ತಾರೆ. ಇದಕ್ಕೆ ನನ್ನ ಒಂದು ಸ್ವಂತ ಅನುಭವದ ಪ್ರಕಾರ ೧೯೮೨ನೇ ಇಸವಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸಿ ಕೂಲಿಯನ್ನು ಹೆಚ್ಚಿಸಲು ಚಳುವಳಿಯನ್ನು ಮಾಡುತ್ತಿದ್ದೆ. ಆ ಚಳುವಳಿಯನ್ನು ಪ್ರಾರಂಭ ಮಾಡಿದಾಗ ಅಲ್ಲಿನ ಡಿ.ವೈ.ಎಸ್.ಪಿ. ಯವರು ಬಂದು ಎಲ್ಲಿ ಆ ಭೂಪತಿ ಅವನನ್ನು ಹಿಡಿದುಕೊಂಡು ಕೈಕಾಲು ಮುರಿಯಿರಿ ಎಂದು ಹೇಳುತ್ತಿದ್ದರು ಆಗ ನಾನು ಅವರ ಎದುರುಗಡೆಯೇ ಇದ್ದೆ. ಆದರೆ ನಾನೇ ಭೂಪತಿ ಎಂದು ಅವರಿಗೆ ಗೊತ್ತಾಗಲಿಲ್ಲ. ಅವರಿಗೆ ನನ್ನ ಗುರುತು ಸಿಗಲಿಲ್ಲವೆಂದು ನಾನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಾಯಿತು, ಇಲ್ಲದೇ ಹೋಗಿದ್ದರೆ ನನ್ನ ಕೈಕಾಲು ಮುರಿದುಹಾಕಿ ಯಾವ ಜೈಲಿನಲ್ಲಿ ತಳ್ಳುತ್ತಿದ್ದರೋ ನನಗಂತೂ ಗೊತ್ತಿಲ್ಲ. ಜೈಲಿನಲ್ಲೂ ಪೋಲೀಸರು ಅಮಾನುಷವಾಗಿ ವರ್ತಿಸುತ್ತಾರೆ ಎಂಬುದಕ್ಕೆ ಉದಾಹರಣೆ ಹೇಳುವುದಾದರೆ, ನನ್ನನ್ನು ಒಂದು ಸಾರಿ ಜೈಲಿಗೆ ಹಾಕಿದ್ದಾಗ, ಅಲ್ಲಿಗೆ ಮಹಾರಾಷ್ಟ್ರದ ೨೫ ವರ್ಷದ ಯುವಕನನ್ನು ಪ್ರಜ್ಞಾಶೂನ್ಯವಾಗುವವರೆಗೂ ಹೊಡೆದು ಜೈಲಿಗೆ ಹಾಕಿದ್ದರು ಅವನ ಸ್ಥಿತಿ ಶೋಚನೀಯವಾದ ಪರಿಸ್ಥಿತಿಯಾಗಿತ್ತು. ಹೀಗೆ ಅಮಾನುಷವಾಗಿ ವರ್ತಿಸುವ ಜನರ ಕೈಯಲ್ಲಿ ನೀವು ಈ ಕಾನೂನನ್ನು ಕೊಟ್ಟರೆ ಬಹಳ ಜನ ನಿರಪರಾಧಿಗಳನ್ನು ಜೈಲಿಗೆ ತಳ್ಳುವುದರಲ್ಲಿ ಸಂದೇಹವೇ ಇಲ್ಲ ನಮ್ಮ ದೇಶದ ಜೈಲಿನಲ್ಲಿರುವ ಖೈದಿಗಳ ಪೈಕಿ ನೂರಕ್ಕೆ ತೊಂಭತ್ತರಷ್ಟು ಜನ ನಿರಪರಾಧಿಗಳಾಗಿದ್ದಾರೆ. ನಿಜವಾದ ಅಪರಾಧಿಗಳು ಸಮಾಜದೊಳಗೇ ಇರುತ್ತಾರೆ ಅವರನ್ನು ಯಾರೂ ಹಿಡಿಯುವುದಕ್ಕೆ ಹೋಗುವುದಿಲ್ಲ.

ಈಗ ತಂದಿರುವ ಈ ಕಾನೂನಿನ ಸೆಕ್ಷನ್ ೨ (ಜಿ) ಏನು ಇದೆ ಅದಕ್ಕೆ ನಾನು ಒಂದು ಅಮೆಂಡ್‌ಮೆಂಟ್‌ನ್ನು ಕಳುಹಿಸಿದ್ದೇನೆ. ಈ ಎಕ್ಸ್‌ಪ್ಲನೇಷನ್ ಒಳಗೆ ಇನ್ನೂ ಸೇರಬೇಕಾದುದು ಹಲವು ಅಂಶಗಳು ಇವೆ. ಸಮಯ ಬಂದಾಗ ಏನು ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ಈ ಬಿಲ್‌ನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೨-೩೦ ಪಿ. ಎಂ.

† ಶ್ರೀ ಎಚ್. ಕೆ. ಕುಮಾರಸ್ವಾಮಿ.—ಮಾನ್ಯ ಅಧ್ಯಕ್ಷರೇ, ಜನತಾ ಸರಕಾರದ ಪರವಾಗಿ ಮಾನ್ಯ ಗೃಹ ಸಚಿವರು, ಬಹಳ ಧಕ್ಷತೆಯಿಂದ, ಬುದ್ಧಿವಂತಿಕೆಯಿಂದ ಮಾನವೀಯತೆಯ ದೃಷ್ಟಿಯಿಂದ ಕೂಡಿದ ಈ ಮಸೂದೆಯನ್ನು ಸಭೆಯಲ್ಲಿ ಮಂಡಿಸಿದ್ದಾರೆಂದು ನನಗನ್ನಿಸುತ್ತದೆ. ಕಾಲಕಾಲಕ್ಕೆ ಅಪರಾಧಗಳು ಹೆಚ್ಚಾಗಿ, ತೀವ್ರವಾದಾಗ, ವಿಶೇಷವಾದಂತ ಕಾನೂನುಗಳನ್ನು ನಾವು ಜಾರಿಗೆ ತರಬೇಕಾಗುತ್ತದೆ. ಈಗಾಗಲೇ ಇರತಕ್ಕಂತಹ ಸಾಮಾನ್ಯ ಕಾನೂನುಗಳ ಅಡಿಯಲ್ಲಿ ಏನು ಭಾರತೀಯ ದಂಡ ಸಂಹಿತೆ ಎನ್ನುತ್ತೇವೆ, ಪೋಲೀಸ್ ಕಾಯಿದೆ ಎನ್ನುತ್ತೇವೆ, ಕಾಫಿಪೋಸಾ ಎನ್ನುತ್ತೇವೆ, ಎನ್.ಎಸ್.ಎ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

29TH MARCH 1985

ಎನ್ನುತ್ತೇವೆ, ಈ ಎಲ್ಲಾ ಕಾನೂನುಗಳೂ ಮತ್ತು ಇವೇ ಮುಂತಾದ ಕಾನೂನುಗಳ ಅಡಿಯಲ್ಲಿ ಕಾನೂನು ಪ್ರಕಾರವಾಗಿ ಕೆಲವುಸಾರಿ ಪರಿಣಾಮಕಾರಿಯಾಗಿ ನಿರ್ವಹಣೆಯಾಗದಿದ್ದರೆ, ಈ ತರಹದ ಕಾನೂನುಗಳನ್ನು ತರಬೇಕಾಗುತ್ತದೆ. ನಮ್ಮ ಸರಕಾರ ಆ ದಿಸೆಯಲ್ಲಿ ಈ ಕಾನೂನನ್ನು ಮಾಡಿದೆ. ಮೇಲ್ನೋಟಕ್ಕೆ ಮಸೂದೆಯು ಕಠಿಣವೆಂದು ಕಂಡು ಬಂದರೂ ಕೂಡಾ ಮಾನವೀಯತೆಯ ಮೌಲ್ಯಗಳ ಹಿತದೃಷ್ಟಿಯಿಂದ ಹೇಳಬೇಕಾಗುತ್ತದೆ. ಈ ಮಸೂದೆಯ ಸೆಕ್ಷನ್, ೮-೧೨-೧೩-೧೪-೧೫ನ್ನು ಅವಲೋಕಿಸಿದರೆ, ಎಷ್ಟು ಅವಕಾಶಗಳನ್ನು ಒಬ್ಬ ಆರೋಪಿಗೆ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಮೇಲುನೋಟಕ್ಕೆ ತಪ್ಪಿತಸ್ಥರು ಅಲ್ಲ ಎನ್ನುವುದೂ ಕೂಡಾ ತೀರ್ಮಾನ ಮಾಡುವುದಕ್ಕೆ ಅವಕಾಶಗಳು ಇವೆ. ಯಾವ ಒಂದು ಅಪರಾಧಕ್ಕೂ ಜಾಮೀನು ಸಹಿತವಾಗಿ ಬಿಡುಗಡೆ ಮಾಡುವುದಕ್ಕೆ ಅವಕಾಶ ಇದೆ. ನಂತರ ಮಸೂದೆ ಕಠಿಣವಾಗಿ ಕಂಡರೂ ಕೂಡಾ, ಬಹಳ ಅರ್ಥಗರ್ಭಿತವಾಗಿದೆ. ಇಂತಹ ಸಮಯದಲ್ಲಿ ಈ ಮಸೂದೆ ಬಹಳ ಸ್ವಾಗತಾರ್ಹವಾದುದು. ಹಾಗೆಯೇ ಇದನ್ನು ಎಲ್ಲರೂ ಸ್ವಾಗತಿಸಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಈ ಮಸೂದೆ Prevention is better than cure ಎಂಬ ಆಧಾರದ ಮೇಲೆ ಇದೆ. ಮಾನ್ಯ ಮಂತ್ರಿಗಳು ಇದುವರೆಗೆ ಈ ಆಕ್ಟಿನ ಬಗ್ಗೆ ಏನು ಹೇಳಿದರು. ಅಪರಾಧ ಮಾಡಿದ ಮೇಲೆ ಕೊಡತಕ್ಕಂತಹ ಶಿಕ್ಷೆಗಿಂತ ಅಪರಾಧ ಮಾಡುವುದನ್ನು ಈ ಆಕ್ಟಿನ ಮೂಲಕ ತಡೆಹಿಡಿಯುವುದು ಉದ್ದೇಶವಾಗಿದೆ ಇದು ಮೌಲ್ಯಾಧಾರಿತವಾದುದು. ನಮ್ಮ ಸಮಾಜದಲ್ಲಿ ಅಪರಾಧ ಮಾಡುವುದಕ್ಕಿಂತ ಮುಂಚೆ ಅಪರಾಧವನ್ನು ತಡಗಟ್ಟುವುದು ಅವಶ್ಯವಾಗಿದೆ, ಈ ಆಕ್ಟನ್ನು ತಂದಿರುವುದರಿಂದ ಯಾವುದೇ ರೀತಿಯ ತೊಂದರೆಗಳು ಉದ್ಭವಿಸುವುದಲ್ಲ. ಅದು ಅಲ್ಲದೇ ಇದು ಬಹಳ ಗಡುಸಾದುದು ಏನಲ್ಲ, ಬಹಳ ಸರಳವಾಗಿಯೇ ಇದೆ. ಈ ಆಕ್ಟಿನ ಸೆಕ್ಷನ್ ೨೧ ಪ್ರಕಾರ ಏನಿದೆ ಎಂದರೆ,

"When a person is detained in pursuance of a detention order, the authority making the order shall, as soon as may be but not a later than five days.

ಇದರ ಅರ್ಥ ೫ ದಿವಸಗಳ ಮೇಲೆ ಕೊಡಬೇಕೆಂದು ಅಲ್ಲ, ಎಷ್ಟು ಜಾಗ್ರತೆಯೋ ಅಷ್ಟು ಜಾಗ್ರತೆ ಕೊಡಬೇಕೆಂದು ಇದೆ. ಮಾನ್ಯ ಮಂತ್ರಿಗಳು ಸೆಕ್ಷನ್ ೯ರ ವಿವರಣೆಯನ್ನು ಈಗಾಗಲೇ ಹೇಳಿದಾರೆ. ತಾತ್ಕಾಲಿಕವಾಗಿ ಅಪರಾಧಿಗಳನ್ನು ಬಿಡುಗಡೆ ಮಾಡುವುದಕ್ಕೆ ಈ ಕಾನೂನಿನಲ್ಲಿ ಅವಕಾಶವಿದೆ. ಇದು ಬಹಳ ವಿಶಾಲವಾದ ಕಾನೂನು ತಾವು ತಮ್ಮ ತಮ್ಮ ಮೂಗಿನ ನೇರವಾಗಿ ಅರ್ಥಮಾಡಿಕೊಳ್ಳದೇ, ವಿಶಾಲವಾಗಿ ಇದನ್ನು ಯೋಚನೆ ಮಾಡಿ. ಇಲ್ಲದಿದ್ದರೆ ಅದಕ್ಕೆ ಅರ್ಥವಿಲ್ಲದಾಗುತ್ತದೆ. ಇದು ನಿಜವಾಗಿಯೂ ಸಮಾಜದಲ್ಲಿ ನಡೆಯುತಕ್ಕಂತಹ ಅಪರಾಧಗಳನ್ನು ತಡೆಯುತಕ್ಕಂತಹ ನೀತಿ ನಿಯಮ ಈ ಕಾನೂನಿನಲ್ಲಿ ಅಡಗಿದೆ. ಸಮಾಜದಲ್ಲಿ ಇರತಕ್ಕಂತಹ ಜನರಿಗೆ ನ್ಯಾಯ ದೊರಕಿಸಿಕೊಡುವುದು, ಧೈರ್ಯಸ್ಥೈರ್ಯ ಬರುವಂತೆ ಮಾಡುವುದು, ಈ ಕಾನೂನಿನ ಸೃಷ್ಟಿಯಿಂದ ಮಾತ್ರ ಸಾಧ್ಯವಾಗುತ್ತದೆ. ಆದುದರಿಂದ ನಮ್ಮ ಸರ್ಕಾರದವರು ತಂದಿರತಕ್ಕ ಕಾನೂನು ಬಹಳ ಸೂಕ್ತವಾಗಿದೆ ಎಂದು ಹೇಳಿ ನಾನು ಮಸೂದೆಯನ್ನು ಅನುಮೋದನೆ ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಿಲ್ ಸ್ವಾಗತಾರ್ಹವಾದುದು. ಬಂಡವಾಳಶಾಹಿಗಳು ಕೆಳವರ್ಗದ ಜನರಿಗೆ ಉತ್ತೇಜನ ಕೊಟ್ಟು ಗೂಂಡಾಗಳ ಸೃಷ್ಟಿಮಾಡುತ್ತಾರೆ. ಬಡತನ, ನಿರುದ್ಯೋಗದ, ಕಾರಣದಿಂದ ಬಳಲುತ್ತಿರುವ ಜನರನ್ನು ಆಸೆ, ಆಮಿಷಗಳ ಮೂಲಕ ಉಪಯೋಗಿಸಿಕೊಂಡು ಅವರನ್ನು ಗೂಂಡಾಗಳನ್ನಾಗಿ ಪರಿವರ್ತನೆ ಮಾಡುತ್ತಾರೆ. ಹೀಗಾಗಿ ಗೂಂಡಾಗಳ ಸೃಷ್ಟಿಯಾಗುತ್ತದೆ. ದುಶ್ಚಟಗಳಿಗೆ ಬಲಿಯಾದ ಮನುಷ್ಯನಿಗೆ, ಖರ್ಚಿಗೆ ಹಣ ಸಾಕಾಗುವುದಿಲ್ಲ. ಅಂತಹ ಸಮಯದಲ್ಲಿ ಅವರು ದುಡ್ಡಿಗಾಗಿ ಬೇರೆ ದಾರಿಯನ್ನು ಅನಿವಾರ್ಯವಾಗಿ ಹುಡುಕುತ್ತಾರೆ ಕುಡಿಯುವುದರೊಳಗೆ, ಎಂದರೆ ಆ ಚಟದ ಮೂಲಕ ಅರ್ಧಾಂಶದಷ್ಟು ಜನ ಗೂಂಡಾಗಳು ಆಗುವುದೇ ಹೆಚ್ಚು. ಆದ್ದರಿಂದ ಇದರ ಹುಟ್ಟಿಗೆ ಮುಖ್ಯ ಕಾರಣವಾದ ಕುಡಿತವನ್ನು ಬಲಿ ಹಾಕಲು ಪಾನನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಬಹಳ ಸೂಕ್ತವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಹಾಗೂ ಅದನ್ನು ಜಾರಿಗೆ ತರಲು ಸರಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬಂಡವಾಳ ಶಾಹಿಗಳು ಎಂದರೆ ಗೂಂಡಾಗಿರಿಯಲ್ಲಿ ತೊಡಗಿರುವಂತಹವರು,

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

38

ಹಾಗೂ ಗೂಂಡಾಗಳನ್ನು ತಡೆಹಿಡಿಯುವ ಮೊದಲ ಪ್ರಯತ್ನವಾಗಿ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದರೆ. ಗೂಂಡಾಗಿರಿಯನ್ನು ಹೊತ್ತು ಹಾಕಿದಂತಾಗುತ್ತದೆ. ಅದಕ್ಕಾಗಿ, ನಮ್ಮ ಸರಕಾರದವರು ಈ ಪಾನನಿರೋಧವನ್ನು ಜಾರಿಗೆ ತಂದರೆ ಒಂದು ಉತ್ತಮವಾದ ಕಾರ್ಯವನ್ನು ಮಾಡಿದ ಹಾಗೆ ಆಗುತ್ತದೆಂದು ನನ್ನ ಅಭಿಪ್ರಾಯ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಪಾನನಿರೋಧವನ್ನು ಸಂಪೂರ್ಣವಾಗಿ ರದ್ದು ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಜೆ. ಹೆಚ್. ಪಟೇಲ್.—ಪಾನ ನಿರೋಧವನ್ನು ಮೊದಲು ಇಂಡಿಯಾ ದೇಶದಲ್ಲಿ ಜಾರಿಗೆ ತರುವುದಕ್ಕೆ ಕೇಂದ್ರ ಸರ್ಕಾರದವರು ಆಲೋಚನೆ ಮಾಡಿದರೆ ಒಳ್ಳೆಯದು ಆ ಕೆಲಸವನ್ನು ಮಾನ್ಯ ಸದಸ್ಯರು ಮಾಡಿಸಿದರೆ ಒಳ್ಳೆಯದು.

ಶ್ರೀ ಹೆಚ್. ಎ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ರೇಸು ಮತ್ತು ಕ್ಲಬ್‌ಗಳನ್ನು ಸಹ ಇದೇ ರೀತಿಯಾದಂಥ ಒಂದು ಕಾನೂನು ಜಾರಿಗೆ ತಂದು ರದ್ದು ಮಾಡಿದರೆ ಶ್ರೀಸಾಮಾನ್ಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ರೇಸು ಯಾವ ರೀತಿಯಲ್ಲಿ ನಡೆಯುತ್ತದೆ. ಎನ್ನತಕ್ಕಂಥದ್ದು ನಾನು ನೋಡಿಲ್ಲ. ಅದರ ಬಾಗಿಲು ಸಹ ನಾನು ನೋಡಿಲ್ಲ. ಇವತ್ತಿನ ದಿವಸ ಕ್ಲಬ್ ಮತ್ತು ರೇಸಿನಲ್ಲಿ ಸರ್ಕಾರೀ ನೌಕರರು ಸಾಮಾನ್ಯ ವರ್ಗದ ಜನತೆ ಹಾಳಾಗುತ್ತಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಈಗ ಮಾನ್ಯ ಗೃಹಸಚಿವರು ತಂದಿರತಕ್ಕಂತ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇದುವರೆವಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೆಲವು ಸರಿಯಾದಂಥ ಕ್ರಮಗಳನ್ನು ಅನುಸರಿಸುತ್ತಿದೆ ಎನ್ನುವುದಕ್ಕೆ ಈಗ ಮಾನ್ಯ ಗೃಹ ಸಚಿವರು ತಂದಿರತಕ್ಕಂಥ ಮಸೂದೆ ಒಂದು ಉದಾಹರಣೆಯಾಗಿದೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರಾಜಕೀಯ ಪಕ್ಷಗಳಲ್ಲಿ, ಇನ್ನಿತರ ಯಾವುದೇ ಕ್ಷೇತ್ರಗಳಲ್ಲಿ ಆದರೂ ಈ ಒಂದು ಗೂಂಡಾಗಿರಿಯಿಂದ ಸಮಾಜಘಾತಕಶಕ್ತಿಗಳು ಬೆಳೆಯುವುದಕ್ಕೆ ಆಸ್ಪದವನ್ನು ಮಾಡಿಕೊಟ್ಟಿದೆ. ಆದ್ದರಿಂದ ಇಂತಹ ಒಂದು ಸಮಾಜ ಘಾತಕ ಶಕ್ತಿಗಳನ್ನು ಹತ್ತಿಕ್ಕಲು ಇಂಥ ಒಂದು ಮಸೂದೆ ಅಗತ್ಯವಾಗಿ ಬೇಕಾಗಿತ್ತು. ಇಂಥ ಮಸೂದೆಗಳು ಜಾರಿಯಲ್ಲಿರದಿದ್ದರೆ ಶ್ರೀಸಾಮಾನ್ಯನ ರಕ್ಷಣೆ ಮಾಡುವುದು ಬಹಳ ಕಷ್ಟವಾಗುತ್ತದೆ ಆದರೆ ನಾನು ಮಾನ್ಯ ಗೃಹಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವ ಒಂದು ಸಮಾಜ ಘಾತಕಶಕ್ತಿಗಳು ಇರುತ್ತವೆಯೋ ಆ ಸಮಾಜಘಾತಕಶಕ್ತಿಗಳನ್ನು ಸದೆಬಡಿಯಲು ತಮಗೆ ಯಾವುದೇ ರೀತಿಯ ಬೆಂಬಲವನ್ನು ಬೇಕಾದರೂ ಸಹ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ತಾವು ಇದರಲ್ಲಿ ಯಾವುದೇ ರೀತಿಯ ಪಕ್ಷಪಾತವನ್ನು ಅನುಸರಿಸಬಾರದು. ಅಂತಹ ಒಂದು ದಿಟ್ಟ ಹೆಜ್ಜೆಯನ್ನು ತಾವು ಇಟ್ಟರೆ ಒಳ್ಳೆಯದು. ಹಿಂದೆ ಕೇಂದ್ರಸರ್ಕಾರ ಇಂತಹ ಒಂದು ಕಾನೂನು ಮಾಡಿದಾಗ ಇತರೆ ರಾಜಕೀಯ ಪಕ್ಷಗಳು ಆ ಕಾನೂನಿನ ಮೇಲೆ ನಾನಾ ರೀತಿಯ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಟೀಕೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಆದರೆ ಆ ಕಾನೂನಿನಲ್ಲಿರತಕ್ಕಂಥ ಭಾವನೆಯನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ಮಾನವೀಯತೆ ದೃಷ್ಟಿಯಿಂದ ನೋಡುವುದಾದರೆ ಮಹಿಳೆಯರ ಮೇಲೆ ನಡೆಸತಕ್ಕಂಥ ಅತ್ಯಾಚಾರಗಳನ್ನು ತಡೆಗಟ್ಟಬೇಕಾದರೆ ಇಂತಹ ಒಂದು ಮಸೂದೆ ಅಗತ್ಯವಾಗಿ ನಮಗೆ ಬೇಕಾಗಿದೆ. ನಮ್ಮ ಮಾನ್ಯ ಸದಸ್ಯರು ಮಾತನಾಡುವಾಗ ಈ ಮಸೂದೆಯಲ್ಲಿ ಲೋಪದೋಷಗಳಿವೆಯೆಂದು ಹೇಳಿದರು. ಆ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಮಾನ್ಯ ಮಂತ್ರಿಗಳು ಬೇಕಾದರೆ ಈ ಸದನದ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ನೇಮಕ ಮಾಡಿ ಆ ಸಮಿತಿಯಲ್ಲಿ ಇದನ್ನು ಸಂಪೂರ್ಣವಾಗಿ ವಿಮರ್ಶೆ ಮಾಡಿ ನೋಡಬೇಕಾಗಿತ್ತು. ಅವರು ಆ ಕೆಲಸವನ್ನು ಮಾಡದಿದ್ದರೂ ಪರವಾಗಿಲ್ಲ, ನಾನು ಅದಕ್ಕೆ ಒತ್ತಾಯ ಪಡಿಸುವುದಿಲ್ಲ. ಯಾವುದೇ ಒಂದು ಪಕ್ಷ ಅಧಿಕಾರದಲ್ಲಿದ್ದಾಗ ಆ ಸರ್ಕಾರಕ್ಕೆ ಇಂತಹ ಕಾನೂನುಗಳು ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಬೃಹದಾಕಾರವಾಗಿ ಬೆಳೆದಿರುವ ಗೂಂಡಾಗಿರಿಯನ್ನು ಮಟ್ಟಹಾಕಲು ಕಷ್ಟವಾಗುತ್ತದೆ. ಇನ್ನು ರಾಜಕೀಯ ಜೀವನದಲ್ಲಿ ಕೂಡ ಬಹಳ ಕಷ್ಟಗಳನ್ನು ನಾವು ಎದುರಿಸಬೇಕಾಗುತ್ತದೆ. ರಾಜಕೀಯ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಜೀವನದಲ್ಲಿರತಕ್ಕಂಥ ವ್ಯಕ್ತಿಗಳು ತಮ್ಮನ್ನು ರಕ್ಷಣೆ ಮಾಡಿಕೊಳ್ಳಲು ತಮ್ಮ ಮುಂದೆ ಬರುತ್ತಾರೆ. ಆಗ ಮಾನ್ಯ ಮಂತ್ರಿಗಳು ಅಂತಹ ವ್ಯಕ್ತಿಗಳಿಗೆ ರಕ್ಷಣೆಯನ್ನು ಕೊಡದೆ ತಮ್ಮ ಕರ್ತವ್ಯವನ್ನು ತಾವು ಪಾಲನೆ ಮಾಡಂತ್ತೀರಿ ಎನ್ನತಕ್ಕಂಥ ಒಂದು ನಂಬಿಕೆ ಕೂಡ ನನ್ನಲ್ಲಿ ಇದೆ. ತಾವು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವವರು ಎಂದು ಸಹ ನಾನು ಭಾವನೆಯನ್ನಿಟ್ಟುಕೊಂಡಿರುವವನು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ರಾಜಕೀಯವ್ಯಕ್ತಿಗಳು ಇಂತಹ ಗೂಂಡಾಗಿರಿಗೆ ಕುಮ್ಮಕ್ಕು ಕೊಟ್ಟ ಅವರ ಹೆಸರು ಬಯಲಿಗೆ ಬರದಂತೆ ನೋಡಿಕೊಳ್ಳುವವರು ಸಹ ಇದ್ದಾರೆ. ಅಂತಹವರ ಬಗ್ಗೆ ಕೂಡ ತಾವು ಗಮನಹರಿಸ ಬೇಕಾಗುತ್ತದೆ. ಮತ್ತೆ ಕೆಲವರು ಹೆಂಡವನ್ನು ಕುಡಿದು ಗೂಂಡಾಗಿರಿಯನ್ನು ನಡೆಸುತ್ತಾರೆ. ಆದರೆ ಅವರು ಏನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಕುಡಿದಂತಹ ಹೆಂಡ ಅಷ್ಟು ಕೆಲಸ ಮಾಡಿಸುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಕಾನೂನನ್ನು ಜಾರಿಗೆ ತಂದು ಬಡವರ್ಗದ ಜನತೆಗೆ, ದುರ್ಬಲವರ್ಗದ ಜನತೆಗೆ, ಹಿಂದುಳಿದ ವರ್ಗಗಳಿಗೆ ಹಾಗೂ ಹರಿಜನ ಮತ್ತು ಗಿರಿಜನರಿಗೆ ರಕ್ಷಣೆ ಕೊಡಬೇಕೆಂದು ಹೇಳಿ ಈ ಮಸೂದೆಯನ್ನು ನಾನು ಸ್ವಾಗತ ಮಾಡುತ್ತಾ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ. ಈ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಂಥ ಮಾನ್ಯ ಸದಸ್ಯರೆಲ್ಲರಿಗೂ ಕೂಡಾ ನನ್ನ ಹೃದಯ ಪೂರ್ವಕವಾಗಿರತಕ್ಕ ವಂದನೆಗಳನ್ನು ಪ್ರಥಮವಾಗಿ ಸಲ್ಲಿಸುತ್ತೇನೆ. ಬಹುಶಃ ಈ ಕಡೆಯಲ್ಲಾಗಲೀ, ಆ ಕಡೆಯಲ್ಲಾಗಲೀ, ಒಬ್ಬಿಬ್ಬರನ್ನು ಬಿಟ್ಟು, ಎಲ್ಲರೂ ಇಂತಹ ಮಸೂದೆಯ ಆಗತ್ಯ ಇದೆ ಎಂದು ಹೇಳಿ ಅದನ್ನು ಸ್ವಾಗತ ಮಾಡಿದ್ದಾರೆ. ಆದರೆ, ಇಬ್ಬರು ಮಾತ್ರ ಇಂತಹ ಮಸೂದೆಯಿಂದ ಮುಂದೆ ಹೆಚ್ಚು ಅನಾಹುತ ಆಗುತ್ತದೆ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಅದು ಸ್ವಾಭಾವಿಕ. ಇಂತಹ ಒಂದು ಅಸ್ತ್ರವನ್ನು ಸರಕಾರಕ್ಕೆ ಕೊಡತಕ್ಕಂಥ ಕಾಲದಲ್ಲಿ, ಅದು ಪೂರ್ಣವಾಗಿ ದುರುಪಯೋಗ ಆಗುವುದಿಲ್ಲ. ಅದನ್ನು ಸದುಪಯೋಗ ಮಾಡುತ್ತೇವೆ ಎಂದು ಪ್ರಾಮಾಣಿಕವಾಗಿ ಹೇಳುವುದಕ್ಕೆ ಆಗುವುದಿಲ್ಲ. ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಇವೆಲ್ಲಾ ಇವೆ, ಇವೆಲ್ಲಾ ಇದ್ದರೂ ಕೂಡಾ ಇನ್ನೂ ಅಪರಾಧಗಳು ಆಗುತ್ತಿವೆ. ಅಪರಾಧಗಳು ಕೋರ್ಟಿಗೆ ಹೋಗುತ್ತವೆ, ಕೋರ್ಟಿನಲ್ಲಿ ಡಿಸೈಡ್ ಆಗುತ್ತವೆ, ಕೋರ್ಟಿನಲ್ಲಿ ತೀರ್ಮಾನ ಆದಂಥ ರೀತಿಯಲ್ಲಿ ಅದಕ್ಕೆ ತಕ್ಕಂತೆ ಶಿಕ್ಷೆಗಳು ಆಗುತ್ತದೆ. ಶಿಕ್ಷೆ ವಿಧಿಸದೆ ಬಿಡುಗಡೆಯೂ ಆಗುತ್ತದೆ. ಆದರೆ ಕಾನೂನೇ ಬೇಡ ಎಂದು ಹೇಳುವುದಕ್ಕೆ ಆಗುವುದಿಲ್ಲ, ರಾಷ್ಟ್ರೀಯ ಭದ್ರತಾ ಕಾನೂನು ಇರುವಾಗ ಇದರ ಅವಶ್ಯಕತೆ ಏನಿದೆ, 'ಕಾಫಿಪೋಸಾ' ಇದೆ ಅದನ್ನು ಏತಕ್ಕೆ ಉಪಯೋಗಿಸಬಾರದು, ಪೋಲೀಸ್ ಆಕ್ಟ್ ಏನಿದೆ ಇದನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲವೇ ಎಂದು ಮಾನ್ಯ ಮಾಜಿ ವಿರೋಧ ಪಕ್ಷದ ನಾಯಕರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಬಹುಶಃ ನಾನು ಮೊದಲೇ ಹೇಳಿದ ಹಾಗೆ. ಈ ಮಸೂದೆಯನ್ನು ಅವರ ಮಂತ್ರಿಮಂಡಲ ಇದ್ದಾಗಲೇ ತಯಾರಿಸಿದ್ದರು, ಈ ಮಸೂದೆ ಮದ್ರಾಸ್ ಮತ್ತು ಬೊಂಬಾಯಿನಲ್ಲಿ ಬಂದು, ಸುಪ್ರೀಂ ಕೋರ್ಟಿನವರೆಗೂ ಹೋಗಿ ಬಂದು ಈಗ ಈ ಮಸೂದೆ ಅಲ್ಲಿ ಜಾರಿಯಲ್ಲಿದೆ. ಆದುದರಿಂದ ಇದು ನಾನು ಹೊಸದಾಗಿ ತಂದುದೇನೂ ಅಲ್ಲ. ಆ ಮಸೂದೆಗಳ ಅನುಭವದ ಮೇಲೆ ಹಾಗೂ ಅವುಗಳ ಆಧಾರದ ಮೇಲೆ ಇದನ್ನು ತಂದು, ಬಹುಶಃ ಆಗತಕ್ಕಂಥ ಅಪರಾಧಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಪ್ರಿವೆಂಟೀವ್ ಭಾವನೆಯಿಂದ ಇದನ್ನು ತಂದಿರತಕ್ಕದಾಗಿದೆ. ಇದನ್ನು ಬಹಳ ಸೂಕ್ಷ್ಮವಾಗಿ ಉಪಯೋಗಿಬೇಕಾಗಿ ಬರುತ್ತದೆ ಮತ್ತು ಇದನ್ನು ಎಲ್ಲರ ಕೈಯಲ್ಲೂ ಕೊಟ್ಟರೆ ದುರುಪಯೋಗ ಆಗಬಹುದಾದಂಥ ಸಂದರ್ಭಗಳು ಬಂದಂಥ ಕಾಲದಲ್ಲಿ ಸರ್ಕಾರವೇ ಅಧಿಕಾರ ಇಟ್ಟುಕೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ನಾವು ಕಮಿಷನರ್‌ಗಳಿಗೆ ಡೆಪ್ಯುಟಿ ಕಮಿಷನರ್‌ಗಳಿಗೆ ಅಧಿಕಾರವನ್ನು ಕೊಡಬೇಕಾಗುತ್ತದೆ ಎಂದು ಈ ಮಸೂದೆಯಲ್ಲಿ ಹೇಳಲಾಗಿದೆ. ಸ್ವಾಭಾವಿಕವಾಗಿ ಇಂತಹ ಕಾನೂನುಗಳನ್ನು ಮಾಡುವ ಕಾಲದಲ್ಲಿ ಪರಿಪೂರ್ಣವಾಗಿ ಯಾರೂ ಕೂಡಾ ಮಾಡಿಲ್ಲ ಆಗಾಗ್ಗೆ ತಿದ್ದುಪಡಿ ಬರುತ್ತದೆ. ಹಿಂದೆ ತಪ್ಪಾಗಿರುವುದನ್ನು ಸರಿ ಮಾಡಿಕೊಂಡು ಹೋಗುತ್ತೇವೆ. ಈ ಕಾನೂನನ್ನು ಇಷ್ಟು ತೀವ್ರವಾಗಿ ತರಬೇಕಾದಂಥ ಅವಶ್ಯಕತೆ ಏನಿತ್ತು ಎಂದು ಕೊನೆಯಲ್ಲಿ ಮಾತನಾಡಿದಂಥ ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲ್ ರವರು ಕೇಳಿದ್ದಾರೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿತ್ತು, ಅಲ್ಲಿ ಇದು ಪರಿ

ಎಂ. ಶಶಿಕಾಂತ್
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಪೂರ್ಣವಾಗಿ ಬರುತ್ತಿತ್ತು ಎಂದು ಅವರೂ ಹೇಳಿದ್ದಾರೆ ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಬಂದಂಥ ಮಸೂದೆಗಳೂ ಕೂಡಾ ಪರಿಪೂರ್ಣತೆಯನ್ನು ಪಡೆದಿಲ್ಲ. ಕೆಲವು ಕಡೆ ಕೋರ್ಟುಗಳಿಗೆ ಹೋಗಿ ಸ್ಟ್ರೈಕ್ ಆಫ್ ಆಗಿರುವುದನ್ನೂ ನೋಡಿದ್ದೇವೆ. ಇದರಲ್ಲಿ ನ್ಯೂನತೆಗಳು ಏನಿದೆ ಅದನ್ನು ಸರಿಪಡಿಸು ವುದಕ್ಕೋಸ್ಕರ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿತ್ತು ಎಂದು ಕೇಳುತ್ತಿದ್ದೇವೆ ಎಂದು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಯಾರು ಇಂತಹ ಅಪರಾಧಗಳ ಹಿಂದೆ ಇದ್ದಾರೆ ಅವರನ್ನು ಹಿಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ. ಇದರ ಹಿನ್ನೆಲೆ ಯಲ್ಲಿ ಇದನ್ನು ಯಾವರೀತಿ ಕಾರ್ಯಾಚರಣೆ ಮಾಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ಕಾರ್ಯಾಚರಣೆ ಮಾಡತಕ್ಕಂಥ ಕಾಲದಲ್ಲಿ ಯೋಚನೆ ಮಾಡುತ್ತೇವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಸೂದೆ ಯಲ್ಲಿ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲಿ, ಕಾಫೆಪೋಸಾ ಆಕ್ಟ್‌ನಲ್ಲಿ ಯಾವ ಯಾವ ಪ್ರಾವಿಷನ್ ಇವೆ, ಹೆಚ್ಚು ಕಡಿಮೆ ಅದೇ ಪ್ರಾವಿಷನ್‌ಗಳನ್ನು ಹಾಕಿಕೊಂಡಿದ್ದೇವೆ. ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ ಏನೆಂದರೆ, ಈ ಆಕ್ಟ್‌ನಲ್ಲಿ ಸೆಕ್ಷನ್ ೮ ರಲ್ಲಿ ಹೇಳಿರುವ ಹಾಗೆ, ೫ ದಿನಗಳ ಒಳಗಾಗಿ ಯಾರನ್ನು ಡಿಟೆನ್ಯೂ ಎಂದು ಮಾಡಿರುತ್ತೇವೆ ಅವರಿಗೆ ರಾಜ್ಯ ಸರಕಾರಕ್ಕೆ ಮನವಿ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡ ಬೇಕಾಗುತ್ತದೆ ಮತ್ತು ಯಾವ ಕಾರಣಕ್ಕೋಸ್ಕರ ಅವರನ್ನು ಪ್ರಿವೆಂಟೀವ್ ಮೆಷರ್‌ನಲ್ಲಿ ತೆಗೆದು ಕೊಂಡಿದ್ದೇವೆ ಎಂಬುದನ್ನು ಅವರಿಗೆ ತಿಳಿಸಬೇಕಾಗುತ್ತದೆ. ಮತ್ತು ಸೆಕ್ಷನ್ ೯ ರಲ್ಲಿ ಅಡ್ವೈಸರಿ ಬೋರ್ಡ್ ಎಂದು ಏನು ಮಾಡುತ್ತೇವೆ, ಆ ಬೋರ್ಡಿನ ಚೇರ್ಮನ್ ಹೈಕೋರ್ಟ್ ಸಿಟಿಂಗ್ ಜಡ್ಜ್ ಇರುತ್ತಾರೆ, ಬೇರೆ ಸದಸ್ಯರುಗಳೂ ಇರುತ್ತಾರೆ. ಈ ಬೇರೆ ಸದಸ್ಯರುಗಳೂ ಸಹ ನ್ಯಾಯಾಧೀಶರಾಗಿ ರುವುದರಿಂದ, ಅವರ ಮುಂದೆ ಈ ವಿಚಾರ ಹೋಗಬೇಕಾಗುತ್ತದೆ. ಈ ರೀತಿ ಹೋದಾಗ ಬಂಧಿಸಿರ ತಕ್ಕದ್ದು ನ್ಯಾಯವೇ ಅಲ್ಲವೇ ಎಂಬುದನ್ನು ಅವರು ಪರಿಶೀಲಿಸಿ ನೋಡುತ್ತಾರೆ. ಅವರು ನೋಡಿದ ಮೇಲೆ ಕೂಡಾ ಅಂದರೆ ಬೋರ್ಡ್‌ನಲ್ಲಿ ಕೂಡಾ ಡಿಟೈನ್ ಮಾಡಿಕೊಂಡರತಕ್ಕದ್ದು ಸರಿಯಲ್ಲ ಎಂದು ತೀರ್ಮಾನವಾದರೆ ಅಂತಹವರನ್ನು ತಕ್ಷಣ ಬಿಡುಗಡೆ ಮಾಡಲು ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳು ವಂತಹ ಒಂದು ಪ್ರಾವಿಷನ್ ಕೂಡಾ ಇದರಲ್ಲಿ ಮಾಡಿದ್ದೇವೆ. ಹಾಗೇನಾದರೂ ಸ್ವಲ್ಪ ತಡವಾದರೆ ಮಧ್ಯೆ ಪೆರೋಲ್ ಮೇಲೆ ಬಿಡುವುದಕ್ಕೂ ಅವಕಾಶ ಇದೆ. ಆದುದರಿಂದ ಇದೋನೂ ಹೊಸದಾಗಿ ತಂದುದಲ್ಲ ಸಮಾಜದಲ್ಲಿ ನಡೆಯತಕ್ಕ ಕಾರ್ಯಚಟುವಟಿಕೆಗಳು ಏನಿವೆ, ಆ ಕಾರ್ಯ ಚಟುವಟಿಕೆ ಗಳಿಂದ ಸಮಾಜದ ಸಮತೋಲನ ಹದಗೆಡುತ್ತಿದೆ ಜನತೆಯ ನೆಮ್ಮದಿಗೆ ಭಂಗವಾಗುತ್ತಿದೆ ಎನ್ನುವ ಸಂದರ್ಭದಲ್ಲಿ ಶಾಂತಿ ಪಾಲನೆಗೋಸ್ಕರ ಇಂತಹ ಒಂದು ಪ್ರಿವೆಂಟೀವ್ ಮೆಷರ್ಸ್ ಬೇಕಾಗಿದೆ. ಮುಂಜಾಗರೂಕತಾ ಕ್ರಮಕ್ಕೋಸ್ಕರ ಇದು ಬೇಕಾಗಿದೆ. ಆದುದರಿಂದ ಈ ಮಸೂದೆ ಇವೊತ್ತು ಬೇಕು ಎಂದು ಮಾನ್ಯ ವಿರೋಧ ಪಕ್ಷದ ಸದಸ್ಯರನ್ನೂ ಹಾಗೂ ನಮ್ಮ ಪಕ್ಷದ ಸದಸ್ಯರನ್ನು ಹಾಗೂ ಇತರ ಎಲ್ಲರನ್ನೂ ಕೂಡಾ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಗಹನವಾಗಿರತಕ್ಕ ಪ್ರಶ್ನೆಯನ್ನು ಹೇಳಿದರು. ಅದು ಬಹಳ ಮುಖ್ಯವಾದುದು ಈ ಎಲ್ಲಾ ತಪ್ಪುಗಳನ್ನು ಮಾಡುವುದಕ್ಕೆ ಕಾರಣವಾಗಿರತಕ್ಕ ಪಾನ ನಿರೋಧ ಏನಿದೆ, ಅದನ್ನು ಏತಕ್ಕೆ ಸಂಪೂರ್ಣವಾಗಿ ಜಾರಿಗೆ ತರಬಾರದು ಎಂದು ಕೇಳಿದ್ದಾರೆ. ಇದರ ವಿಷಯದಲ್ಲಿ ಹಿಂದೆಲ್ಲಾ ಬಹಳ ಶ್ರಮ ಪಟ್ಟಿದ್ದೇವೆ ಅದು ದೇಶದ ಎಲ್ಲಾ ಭಾಗಗಳಲ್ಲೂ ಜಾರಿಗೆ ಬರಬೇಕು. ಒಂದು ಕಡೆ ತೆಗೆದು ಇನ್ನೊಂದು ಕಡೆ ಹಾಗೆ ಬಿಟ್ಟರೆ ಆದರಿಂದ ಬಹಳ ಕಷ್ಟ ವಾಗುತ್ತದೆ. ಇದು ರಾಷ್ಟ್ರಮಟ್ಟದಲ್ಲಿ ತೀರ್ಮಾನವಾದರೆ ಬಹುಶಃ ಅನುಕೂಲವಾಗಬಹುದು. ರಾಷ್ಟ್ರಮಟ್ಟದಲ್ಲಿ ಮಾಡಿ ಎಂದು ಹೇಳುವುದಕ್ಕೆ ಹೋದರೆ, ಪ್ರಪಂಚದ ಯಾವ ದೇಶದಲ್ಲೂ ಇದನ್ನು ತೆಗೆದಿಲ್ಲ, ನಾವು ತೆಗೆಯುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತಾರೆ. ಒಟ್ಟಿನಲ್ಲಿ ನಮ್ಮ ಈಗಿನ ಒಂದು ಸಂಸ್ಕೃತಿಯನ್ನು ಹೊಸ ಹೊಸ ನಾಗರೀಕತೆಯನ್ನು ನಾವು ಗಮನಕ್ಕೆ ತೆಗೆದುಕೊಂಡಾಗ ಎಷ್ಟರಮಟ್ಟಿಗೆ ಕೆಡುಕನ್ನು ನಾವು ನೋಡುತ್ತಿದ್ದೇವೆ, ಆ ದೃಷ್ಟಿಯಿಂದ ಈಗಿನ ಸಮಾಜದಲ್ಲಿ ಮೂಲಭೂತವಾದಂಥ ಒಂದು ಯೋಜನೆ ಏನಿದೆ ಅದನ್ನು ಬದಲಾವಣೆ ಮಾಡುವುದಕ್ಕೆ ಬಹುಶಃ ಸಮಾಜದಲ್ಲಿರತಕ್ಕಂಥ ಎಲ್ಲರೂ ಪ್ರಯತ್ನ ಪಡಬೇಕೇ ವಿನಹ ಕಾನೂನು ಮುಖಾಂತರ ಬದಲಾವಣೆ ಮಾಡುವುದಕ್ಕೆ ಕಷ್ಟ ಎಂದು ನಾನೂ ಒಪ್ಪಿಕೊಳ್ಳುತ್ತೇನೆ. ಆದೇ ರೀತಿ ಕಾನೂನು ಇಲ್ಲದೆ ಆಡಳಿತ ನಡೆಸುವುದು ಕಷ್ಟವಾಗುತ್ತದೆ. ಈ ಒಂದು ಕಾನೂನನ್ನು. ಇಂತಹ ದುಷ್ಟ ಶಕ್ತಿಗಳು . ಕೆಲವಾರು ಕಾಲ ಕೂಡಾ ಅಪರಾಧಗಳನ್ನು ಎಸಗದೇ ಇರಲಿ ಎನ್ನುವ ಕಾ ರಣ ಕ್ಕೋಸ್ಕರ, ಅವರನ್ನು ಈ ಒಂದು ಕಾನೂನಿನ ಚೌಕಟ್ಟಿನೊಳಗೆ ತೆಗೆದುಕೊಳ್ಳು ವ ದು

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಯಿಂದ ಈ ವಿಷಯದಲ್ಲಿ ಹೆಚ್ಚಾಗಿ ಮಾತನಾಡುವುದಕ್ಕೆ
ಕಲ್ಪಿಸಿಕೊಟ್ಟಿದ್ದೇವೆ. ಆ ಒಂದು ದೃಷ್ಟಿಯಿಂದ ಈ ವಿಷಯದಲ್ಲಿ ಹೇಳುತ್ತೇನೆ. ಇವೊತ್ತು ಪತ್ರಿಕರ್ತರೊಬ್ಬರು
ಪಡುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಕಾರಣಕ್ಕಾಗಿ ಅವರು ಪೇಪರನ್ನು ಹೊರಡಿಸಕೂಡದು
ಅವರು ಪೇಪರ್‌ನಲ್ಲಿ ಏನೋ ಬರೆದಿದ್ದಾರೆ ಎಂಬ ಕಾರಣಕ್ಕಾಗಿ ನಾನು ಅದನ್ನು ತರಿಸಿಕೊಂಡು
ಎಂದು ಅಧಿಕಾರಿಗಳೊಬ್ಬರು ಆಜ್ಞೆ ಮಾಡಿದ್ದಾರೆ ಎಂದು ಹೇಳಿದರು. ಕಾನೂನು ದುರುಪಯೋಗವಾಗುತ್ತಿದೆ
ನೋಡಿ ಆ ಆಜ್ಞೆಯನ್ನು ರದ್ದು ಮಾಡಿದ್ದೇನೆ. ಎಲ್ಲಲ್ಲಿ ಕಾನೂನು ಒಬ್ಬ ವ್ಯಕ್ತಿ ಪೊಲೀಸ್ ಲಾಕ್
ಎಂದು ಕಂಡು ಬಂದಂಥ ಕಾಲದಲ್ಲಿ ಅದನ್ನು ರದ್ದು ಮಾಡಿದ್ದೇನೆ. ಪೊಲೀಸ್ ಅಧಿಕಾರಿಗಳು
ಅಪ್‌ನಲ್ಲಿ ಸತ್ತುಹೋದಂಥ ಕಾಲದಲ್ಲಿ, ಅದರ ಬಗ್ಗೆ ವಿಚಾರಣೆ ನಡೆಸಿ, ಆರ್ಡರ್ ಮಾಡಿ
ತಪ್ಪಿತಸ್ಥರೆಂದು ಕಂಡು ಬಂದ ಕಾರಣ ಅವರ ಮೇಲೆ ಚಾರ್ಜ್‌ಶೀಟ್ ಹಾಕಿ ಎಂದು ಕಾಲದಲ್ಲಿ ಅದು ನ್ಯಾಯವೇ
ದ್ದೇನೆ. ಈ ದೃಷ್ಟಿಯಿಂದ ಈ ಕಾನೂನನ್ನು ಜಾರಿಗೆ ಕೊಡತಕ್ಕಂಥ ಮನಸ್ಸಿಗೆ ಒಪ್ಪಬೇಕು, ಆ ರೀತಿ
ಅಥವಾ ಅನ್ಯಾಯವೇ ಎಂಬುದನ್ನು ವಿಮರ್ಶೆ ಮಾಡಿ; ಅದು ಆಜ್ಞೆಗಳು ವಿದ್ಯಾರ್ಥಿಗಳನ್ನು
ಇದನ್ನು ಜಾರಿಗೆ ತರಬೇಕು. ಈ ದೃಷ್ಟಿಯಲ್ಲಿ ಹೇಳುವುದಾದರೆ ಇಂತಹ ಎಂಬ ಮಾತಿಗೆ ಬಹುಶಃ
ರಾಜಕಾರಣಿಗಳನ್ನು ಅವರ ಬೆಂಬಲಿಗರನ್ನು ಹತ್ತಿಕ್ಕುವುದಕ್ಕೆ ತಂದಿರತಕ್ಕದ್ದು ಆ ರೀತಿ ಯಾವುದನ್ನೂ
ಹಿಂದೆ ಪುಷ್ಟಿ ಇರಬಹುದು, ಆದರೆ ಈಗ ಅದಕ್ಕೆ ಪುಷ್ಟಿ ಇರಬಾರದು. ನಾನು ಒಪ್ಪಿಕೊಳ್ಳುತ್ತಾರೆ, ಮಾನ್ಯ
ಮಾಡಿಕೊಂಡಿಲ್ಲ ಎಂದು ಹೇಳಿದರೆ ಮಾನ್ಯ ಕೆ. ಹೆಚ್. ಪಾಟೀಲರೂ ನ್ಯಾಯ ಎಂದು. ಕಂಡು
ಮೊಯಿಲಿಯವರೂ ಒಪ್ಪಿಕೊಳ್ಳುತ್ತಾರೆ ಎಂದು ಹೇಳುತ್ತೇನೆ. ಯಾವುದು ಇದ್ದಾರೆ ಅವರೆಲ್ಲರ
ಬರುತ್ತದೆ ಅದನ್ನು ಮಾಡುತ್ತೇನೆ. ವಿವಿಧ ಹಂತಗಳಲ್ಲಿ ಅಧಿಕಾರಿಗಳು ಏನು ಹೇಳುತ್ತೇನೆ. ಆ ದೃಷ್ಟಿ
ದೃಷ್ಟಿಯಲ್ಲಿ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆ ಎಂದು ಗಮನಕ್ಕೆ ಬಂದ ಕಾಲದಲ್ಲಿ
ಯಿಂದ ನಾನು ಹೇಳುತ್ತಿದ್ದೇನೆ. ಯಾವುದು ನ್ಯಾಯಅಲ್ಲ ಎಂದು ಸರಕಾರದ ಸಂದರ್ಭದಲ್ಲಿ ತಮ್ಮ
ಅದು ನ್ಯಾಯ ಅಲ್ಲ ಎಂದು ಹೇಳುವುದಕ್ಕೆ ಸಿದ್ಧನಾಗಿದ್ದೇನೆ. ಎಂದು ಈ
ಮುಖಾಂತರ ನಿವೇದಿಸಿಕೊಳ್ಳುತ್ತೇನೆ.

೩-೦೦ ಪಿ.ಎಂ.

ದೊಡ್ಡವರು ಮಾಡಿದಂಥ
ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಕ್ಲಬ್‌ಗಳು ಮತ್ತು ಈ ಕಾನೂನು ಚೌಕಟ್ಟಿ
ಅಪರಾಧಗಳನ್ನು ತಪ್ಪಿಸುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದರು. ಆದರೆ ದೊಡ್ಡವರು ತಪ್ಪಿಸಿ
ನಲ್ಲಿ ಅಧಿಕಾರಿಗಳು ಸ್ವಾಭಾವಿಕವಾಗಿ ಅದರೊಳಗೆ ಕೆಲಸ ಮಾಡುತ್ತಾರೆ. ರಕ್ಷಣೆ ಮಾಡಿಕೊಡತಕ್ಕಂಥದ್ದು,
ಕೊಳ್ಳುವುದು ಹಿಂದಿನ ಕಾಲದಿಂದ ಕೂಡ ಬಂದಿದೆ. ಆಸ್ತಿ ಇದ್ದವರಿಗೆ ಬದಲಾವಣೆ ಮಾಡುವ
ಅವರ ಜೀವಕ್ಕೆ ರಕ್ಷಣೆ ಮಾಡತಕ್ಕಂಥದ್ದು ನಡೆಯುತ್ತಾ ಬಂದಿದೆ. ಇದನ್ನು ಅವರನ್ನು ಅನು
ಸಮಾಜ ಸೃಷ್ಟಿಯಾಗಬೇಕಾಗಿದೆ. ಬಡವರು ಯಾರು ರಕ್ಷಣೆಗೋಸ್ಕರ ಬರುತ್ತಾರೆ ಯಾರೇ ಆಗಲೀ
ಕಂಪದಿಂದ ನೋಡುವುದು ನನ್ನ ಗುರಿಯಾಗಿದೆ. ಅವರಿಗೂ ಮರ್ಯಾದೆ ಇರಬೇಕು. ಆ ರೀತಿ ಸಂಪತ್ತು ನೇ
ತಪ್ಪು ಮಾಡುವವರನ್ನು ಕಂಡು ಅವರಿಗೆ ಪ್ರೋತ್ಸಾಹ ಕೊಡುವುದಕ್ಕಾಗುವುದಿಲ್ಲ. ದುಷ್ಟ ಚಟಗಳು ಏನಿವೆ
ಇರುವುದು ಸಮಾಜಕ್ಕೆ ಮಾಡುವ ತಪ್ಪಾಗುತ್ತದೆ. ಸಮಾಜದಲ್ಲಿ ಆಗುವ ಮಾಡುತ್ತಿದ್ದೇವೆ.
ಅವುಗಳನ್ನು ತಪ್ಪಿಸುವುದಕ್ಕೋಸ್ಕರ ನಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನು ಕಾಯಿದೆಯನ್ನು
ಒಳ್ಳೆಯ ರಾಮ ರಾಜ್ಯವನ್ನು ನಾವು ಕಾಣಬೇಕು. ಈ ಸಂದರ್ಭದಲ್ಲಿ ಈ ಒಂದು ಏನಿವೆ. ಆ
ಪ್ರಾಮಾಣಿಕ ದೃಷ್ಟಿಯಿಂದ ತರುತ್ತಿದ್ದೇವೆ. ಸಮಾಜದಲ್ಲಿ ಇಂತಹ ಘಾತುಕ ಶಕ್ತಿಗಳು
ದುಷ್ಟ ಚಟಗಳಿಗೆ ಬಲಿಯಾಗದೇ ಇರುವ ರೀತಿಯಲ್ಲಿ ಸ್ವಲ್ಪವಾದರೂ ರಕ್ಷಣೆ ಇರಲಿ ಎಂದು ಈ ಮಸೂದೆ
ಯನ್ನು ತಂದಿದ್ದೇವೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ನಿವೇದಿಸಿ
ಕೊಳ್ಳುತ್ತೇನೆ.

ಅಧ್ಯಕ್ಷರು.—೧೯೮೫ನೇ ಇಸವಿಯ ಕರ್ನಾಟಕ ಅಕ್ರಮ ಮಧ್ಯ ಸಾಗಾಣಿಕೆದಾರರ ಔಷಧ ನಿಯಮ
ಉಲ್ಲಂಘನೆಕಾರರ, ಜೂಜಾಟಗಾರರ, ಗೂಂಡಾಗಳ, ಅನೈತಿಕ ವ್ಯವಹಾರದಲ್ಲಿ ತೊಡಗಿರುವವರ ಹಾಗೂ
ಕೊಳಚೆ ಪ್ರದೇಶಗಳನ್ನು ಬಲವಂತದಿಂದ ಸ್ವಾಧೀನಪಡಿಸಿಕೊಳ್ಳುವಂತಹ ವಿಧ್ವಂಸಕ ಚಟುವಟಿಕೆಗಳನ್ನು
ತಡೆಗಟ್ಟುವುದಕ್ಕೆ ಸಂಬಂಧಿಸಿದ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ
ಸಭೆಯ ಮುಂದೆ ಇದೆ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

## ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

## ಖಂಡ ಖಂಡಗಳ ಪರ್ಯಾಲೋಚನೆ

## ೨ನೆಯ ಖಂಡ

ಅಧ್ಯಕ್ಷರು.—ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀ ಆರ್. ಭೂಪತಿಯವರು ಎರಡನೆಯ ಖಂಡಕ್ಕೆ ತಿದ್ದುಪಡಿಯ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸುವುದು.

ಶ್ರೀ ಆರ್. ವೆಂಕಟ್ಟರಾಮಯ್ಯ.—ನಾನು ಈ ಕೆಳಕಂಡ ತಿದ್ದುಪಡಿಯನ್ನು ಎರಡನೇ ಖಂಡಕ್ಕೆ ಸೂಚಿಸಬಯಸುತ್ತೇನೆ.

"That in Sub-Clause (a) item (iv) shall be deleted.
Sub-Clause (g) shall be deleted"

ಅಧ್ಯಕ್ಷರು.—ಶ್ರೀ ಆರ್. ವೆಂಕಟರಾಮಯ್ಯನವರು ಮಂಡಿಸಿದ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ನಮ್ಮ ಮುಂದಿರುವ ವಿಷಯ ಏನೆಂದರೆ,

"That in Sub-Clause (a) item (iv) shall be deleted.
Sub-clause (g) shall be deleted.

(ತಿದ್ದುಪಡಿಯು ತಿರಸ್ಕೃತವಾಯಿತು)

ಅಧ್ಯಕ್ಷರು.—ಈಗ ಎರಡನೇ ಖಂಡವನ್ನು ಮತಕ್ಕೆ ಹಾಕುತ್ತೇನೆ. ಎರಡನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವವು ಅಂಗೀಕೃತವಾಯಿತು

ಎರಡನೇ ಖಂಡವು ವಿಧೇಯಕ ಅಂಗವಾಗಿದೆ

## ಖಂಡ–೩

ಅಧ್ಯಕ್ಷರು.—ಖಂಡ ೩ಕ್ಕೆ ಶ್ರೀ ವೆಂಕಟರಾಮಯ್ಯನವರು ತಿದ್ದುಪಡಿಯ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸುವುದು.

ಶ್ರೀ ವೆಂಕಟರಾಮಯ್ಯ.—ನಾನು ಈ ಕೆಳಕಂಡ ತಿದ್ದುಪಡಿಯನ್ನು ಖಂಡ–೩ಕ್ಕೆ ಸೂಚಿಸಬಯಸುತ್ತೇನೆ. ಏನೆಂದರೆ,

"That the following proviso shall be added after sub-clause (3) "Provided the detention can be effected only after issue of due notice and hearing the party concerned by the District Magistrate or Commissioner of Police"

ಅಧ್ಯಕ್ಷರು.—ಖಂಡ ೩ಕ್ಕೆ ಶ್ರೀ ವೆಂಕಟರಾಮಯ್ಯನವರು ಮಂಡಿಸಿದ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಅದೇನೆಂದರೆ,

"That the following proviso shall be added after Sub-clause (e).

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

Provided the detenion can be effected only after issue of due notice and hearing the party concerned by the Dt. Magistrate or Commissioner of Police''.

ತಿದ್ದುಪಡಿಯು ತಿರಸ್ಕೃತವಾಯಿತು

ಅಧ್ಯಕ್ಷರು.—ಈಗ ಖಂಡ ೩ನ್ನು ಮತಕ್ಕೆ ಹಾಕುತ್ತೇನೆ. ಮೂರನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವವು ಅಂಗೀಕೃತವಾಯಿತು

೩ನೇ ಖಂಡವು ವಿಧೇಯಕದ ಅಂಗವಾಗಿದೆ.

೪ ರಿಂದ ೧೮ನೇ ಖಂಡಗಳು (ಎರಡೂ ಸೇರಿ)

ಅಧ್ಯಕ್ಷರು.—ಈಗ ಸಭೆಯ ಮುಂದಿರುವ ಪ್ರಶ್ನೆ ಏನೆಂದರೆ ''೪ ರಿಂದ ೧೮ನೇ ಖಂಡಗಳು (ಎರಡೂ ಸೇರಿ) ವಿಧೇಯಕದ ಅಂಗವಾಗಿರುವುದು''

ಪ್ರಸ್ತಾವವು ಅಂಗೀಕೃತವಾಯಿತು

(೪ ರಿಂದ ೧೮ನೇ ಖಂಡಗಳೂ (ಎರಡೂ ಸೇರಿ) ವಿಧೇಯಕದ ಅಂಗವಾಗಿದೆ)

ಮೊದಲನೆಯ ಖಂಡ

ಅಧ್ಯಕ್ಷರು.—ಶ್ರೀ ಆರ್. ವೆಂಕಟರಾಮಯ್ಯನವರು ಮೊದಲನೇ ಖಂಡಕ್ಕೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಈ ಕೆಳಕಂಡ ತಿದ್ದುಪಡಿಯನ್ನು ಮೊದಲನೇ ಖಂಡಕ್ಕೆ ಮಂಡಿಸುತ್ತೇನೆ. ಏನೆಂದರೆ,

''That in the Title of the Bill ''goondas'' and the worde 'Goondas' wherever occur in the Bill be omitted''

ಅಧ್ಯಕ್ಷರು.—ಶ್ರೀ ಆರ್. ವೆಂಕಟರಾಮಯ್ಯನವರು ಮಂಡಿಸಿದ ಮೊದಲನೇ ಖಂಡದ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಸಭೆಯ ಮುಂದಿರುವ ವಿಷಯ ಏನೆಂದರೆ,

''That in the Title of the Bill ''Goondas'' and words ''Goondas'' wherever occur in the Bill be omitted''.

ತಿದ್ದುಪಡಿ ತಿರಸ್ಕೃತವಾಯಿತು

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—''ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ''.

ಪ್ರಸ್ತಾವವು ಅಂಗೀಕೃತವಾಯಿತು

ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಅನುಮೋದನಾ ಪ್ರಸ್ತಾವ

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).— ಸಭಾಧ್ಯಕ್ಷರೇ, ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸುತ್ತೇನೆ. ಏನೆಂದರೆ,



ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

೧೯೮೫ನೇ ಇಸವಿಯ ಕರ್ನಾಟಕ ಅಕ್ರಮ ಮದ್ಯ ಸಾಗಾಣಿಕೆದಾರರ, ಔಷಧ ನಿಯಮ ಉಲ್ಲಂಘನೆಕಾರರ ಜೂಜಾಟಗಾರರ, ಗೂಂಡಾಗಳ ಅನೈತಿಕ ವ್ಯವಹಾರದಲ್ಲಿ ತೊಡಗಿರುವವರ ಹಾಗೂ ಕೊಳಚೆಪ್ರದೇಶಗಳನ್ನು ಬಲವಂತದಿಂದ ಸ್ವಾಧೀನಪಡಿಸಿಕೊಳ್ಳುವಂತಹ ವಿಧ್ವಂಸಕ ಚಟುವಟಿಕೆಗಳನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದ ವಿಧೇಯಕವನ್ನು ಅಂಗೀಕರಿಸುವುದು.

ಅಧ್ಯಕ್ಷರು.— ೧೯೮೫ನೇ ಇಸವಿಯ ಕರ್ನಾಟಕ ಅಕ್ರಮ ಮದ್ಯ ಸಾಗಾಣಿಕೆದಾರರ, ಔಷಧನಿಯಮ ಉಲ್ಲಂಘನೆಕಾರರ ಜೂಜಾಟಗಾರರ, ಗೂಂಡಾಗಳ. ಅನೈತಿಕ ವ್ಯವಹಾರದಲ್ಲಿ ತೊಡಗಿರುವವರ ಹಾಗೂ ಕೊಳಚೆ ಪ್ರದೇಶಗಳನ್ನು ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳುವಂತಹ ವಿಧ್ವಂಸಕ ಚಟುವಟಿಕೆಗಳನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದ ವಿಧೇಯಕವನ್ನು ಅಂಗೀಕರಿಸುವುದು

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು.

(ಪ್ರಕಟಣೆ)

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ನನಗೆ ತಲುಪಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡುವಳಿಕೆಯ ೧೧೪ನೇ ನಿಯಮದ ಮೇರೆಗೆ ದಿನಾಂಕ ೨೯-೩-೧೯೮೫ನೇ ಇಸವಿಯ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರವೇಶ ಶುಲ್ಕ ರದ್ಧತಿ) (ತಿದ್ದುಪಡಿ) ವಿಧೇಯಕವು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಯಿಲ್ಲದೇ ಅಂಗೀಕಾರವಾಗಿದೆ."

## ಮಂತ್ರಿಗಳ ಹೇಳಿಕೆ

## ವಿದ್ಯುತ್ ಕಡಿತದ ಬಗ್ಗೆ

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕೈಗಾರಿಕಾ ಮಂತ್ರಿಗಳಾದ ಶ್ರೀಮಾನ್ ಜೆ. ಎಚ್. ಪಟೇಲರು ಒಂದು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾವ ವಿಷಯದ ಬಗ್ಗೆ ಎನ್ನುವುದನ್ನು ಹೇಳಲಿಲ್ಲ.

ಅಧ್ಯಕ್ಷರು.—ಈಗ ಹೇಳುತ್ತಾರೆ, ದಯವಿಟ್ಟು ಕೇಳಿ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ರಾಜ್ಯವು ವಿದ್ಯುಚ್ಛಕ್ತಿ ಅಭಾವವನ್ನು ಎದುರಿಸುತ್ತಿರುವ ಬಗ್ಗೆ, ಹಾಗೂ ವಿದ್ಯುತ್ ಕಡಿತ ಉಂಟಾಗಿರುವ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತೇನೆ. ಈ ರೀತಿ ಇದೆ.—

ಕಳೆದ ಕೆಲವು ವರ್ಷಗಳಿಂದ ರಾಜ್ಯವು ವಿದ್ಯುಚ್ಛಕ್ತಿ ಅಭಾವಎದುರಿಸುತ್ತಿರುವ ವಿಚಾರ ಮಾನ್ಯಸದಸ್ಯಗಳಿಗೆ ತಿಳಿದಿರುವ ವಿಚಾರವೇ ಆಗಿದೆ. ವಿವಿಧ ವರ್ಗದ ಬಳಕೆದಾರರಿಗೆ ೧೯೭೯—೮೦ ರಿಂದ ವಿಧಿಸಲಾದ ವಿದ್ಯುತ್ ಕಡಿತವು ಕೆಳಕಂಡಂತಿದೆ.

| ವರ್ಷ | | ವಿದ್ಯುತ್ ಕಡಿತ (ಶೇಕಡಾವಾರು) |
|---|---|---|
| ೧೯೭೯-೮೦ | — | ೧೦-೧೦೦ |
| ೧೯೮೦-೮೧ | — | ೧೦-೩೩½ |
| ೧೯೮೧-೮೨ | — | ೧೦-೪೫ |
| ೧೯೮೨-೮೩ | — | ೧೦-೬೦ |
| ೧೯೮೩-೮೪ | — | ೨೫-೭೫ |

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

## ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ೧೯೮೭.

### ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಸಚಿವರು, ಶ್ರೀ ರಾಮಕೃಷ್ಣ ಹೆಗಡೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ೧೯೮೭ ವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ೧೯೮೭ ಅನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಹಾಗೂ ಆಹಾರ ಸಚಿವರು) ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು ಅವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅವ್ಯವಹಾರದ ಅಪರಾಧಿಗಳು ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಯಕಾರಿ ಚಟುಪಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ೧೯೮೭ ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

## ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕ ೧೯೮೭

### ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಶ್ರೀ ಅಬ್ದುಲ್ ನಜೀರ್‌ಸಾಬ್(ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ. ಕರ್ನಾಟಕ ಜಿಲ್ಲಾ ಪರಿಷತ್ತುಗಳಲ್ಲಿ ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯಿತಿಗಳು ಹಾಗೂ ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ ೧೯೮೭ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತಿಗಳ (ತಿದ್ದುಪಡಿ) ೧೯೮೭ ಅನ್ನು ಮಂಡಿಸಲು ಅನುಮತಿ ನೀಡುವುದು''

* ANNEXURE

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಶ್ರೀ ಕೆ. ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕ ಏನು ಇದೆ ಇದು ನಮ್ಮ ರಾಜ್ಯದ ಬೊಕ್ಕಸದ ಹಿತವನ್ನು ಕಾಪಾಡಬೇಕೆನ್ನುವ ಹಿತದೃಷ್ಟಿಯಿಂದ ಕೂಡಿದ್ದಾಗಿ ರುವುದರಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪಬ್ಲಿಕ್ ಸೇಫ್ಟಿ ಹೆಲ್ತ್, ಪ್ಲಾನಿಂಗ್ ಇಂಪ್ರೂಮೆಂಟ್ ಈ ದೃಷ್ಟಿ ಯಿಂದ ನಾವು ಕೆಲವು ರಿಸ್ಟ್ರಿಕ್ಷನ್ ಹಾಕಿದ್ದೇವೆ. ಅದನ್ನು ಚಾಲೇಂಜ್ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ವಿಷಯ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹಿಂದೆ ಬೇರೆ ಬೇರೆ ಕಾಯಿದೆಗಳ ಪ್ರಕಾರ ಬೇರೆ ಬೇರೆ ನಿಯ ಮಾವಳಿಗಳು ಏನು ಇತ್ತು ಅದನ್ನು ಸರಿಯಾಗಿ ಜಾರಿಗೆ ತರದೇ ಅದನ್ನು ಸರಿಯಾಗಿ ಪರಿಗಣನೆಗೆ ತೆಗೆದುಕೊಳ್ಳದೆ ನಮ್ಮ ಆಸ್ತಿಯನ್ನು ಪರಭಾರೆ ಮಾಡತಕ್ಕಂಥಾದ್ದು ಇತ್ತು. ಬಹುಶ; ಇವೆಲ್ಲಾ ನಡೆಯ ಬೇಕಾದರೆ ಈ ವಿವರಗಳನ್ನು ಕೇಳದೆ ಇದ್ದಂಥ ಕಾಲದಲ್ಲಿ ಆ ರೀತಿ ಇತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಆವಾಗ ಕೇಂದ್ರ ಸರ್ಕಾರದವರು ಇದನ್ನು ಗಮನಿಸಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸಚಿವರು ಹೇಳಿದ ಹಾಗೆ ಹಿಂದೆ ಇದನ್ನು ಅಷ್ಟಾಗಿ ಗಮನಿಸಲಿಲ್ಲ, ಇದನ್ನು ಗಮನಿಸದೇ ಇದ್ದುದರಿಂದ ಈಗಾಗಲೇ ಬರತಕ್ಕಂಥ ಆದಾಯವನ್ನು ನಾವು ಸಾಕಷ್ಟು ಕಳೆದುಕೊಂಡಿದ್ದೇವೆ. ಮೊದಲೇ ಗಮನಿಸಿದ್ದರೆ ನಮ್ಮ ರಾಜ್ಯಕ್ಕೆ ಎಷ್ಟೋ ಆದಾಯ ಬರುತ್ತಿತ್ತು. ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರಿಂದ ಎಷ್ಟು ಹಣ ವರ್ಷಕ್ಕೆ ಲಾಸ್ಸು ಆಗುತ್ತಿತ್ತು ಎನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದರೆ ಇದನ್ನು ಸರ್ಕಾರ ಯಾವ ಉದ್ದೇಶದಿಂದ ತಂದಿದೆಯೋ ಅದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಆದರೆ ಇದರಲ್ಲಿ ನಾವು ಪ್ರಶ್ನೆ ಮಾಡುವಂಥಾದ್ದು ಏನೂ ಇಲ್ಲ. ತಡವಾಗಿಯಾದರೂ ಈ ಒಂದು ತಿದ್ದುಪಡಿಯನ್ನು ಗಮನಿಸಿ ಸರ್ಕಾರದ ಬೊಕ್ಕಸದ ಹಿತದೃಷ್ಟಿಯಿಂದ ಇದನ್ನು ತಂದಿರುವುದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಏನಾದರೂ ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ವಿವರಿಸಿ ಹೇಳಿದ್ದೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ '' ೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕ ವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—ಖಂಡ ೨ ಮತ್ತು ೩ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ;—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)



ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕ ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ದಿನದ ಕಾರ್ಯಕಲಾಪ ಮುಗಿಯಲು ಇನ್ನೂ ಮುಕ್ಕಾಲು ಗಂಟೆ ಸಮಯವಿರುವುದರಿಂದ ಈ ದಿನದ ಕಾರ್ಯಕಲಾಪದ ಪಟ್ಟಿಯಲ್ಲಿರುವ ಎರಡನೇ ತಿದ್ದುಪಡಿ ವಿಧೇಯಕವನ್ನು ಈ ಪರ್ಯಾಲೋಚಿಸಬಹುದೇದು ಸೂಚಿಸುತ್ತೇನೆ. ಹಾಗೂ ಇದನ್ನು ಹೆಚ್ಚಿನ ಚರ್ಚೆ ಇಲ್ಲದೆ ಪಾಸ್ ಮಾಡಿಕೊಡಬೇಕೆಂದು ಮಾನ್ಯ ಶ್ರೀನಿವಾಸ ಅವರಲ್ಲಿ ಹಾಗೂ ಮಾನ್ಯ ಮಾದೇಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಪ್ರಸ್ತಾವವನ್ನು ಮಂಡನೆ ಮಾಡಬಹುದು.

೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾ ಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯ ಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮಾನ್ಯ ಗೃಹಮಂತ್ರಿಗಳ ಪರವಾಗಿ ಕೋರು ತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹೋದವರ್ಷ ನಾವು ಈ ಬಗ್ಗೆ ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದೆವು. ಅದರ ಪ್ರಕಾರ ವಿಚಾರಣೆಯಿಲ್ಲದೆ ೧೨ ತಿಂಗಳ ಕಾಲ ಈ ಕಾನೂ ನಿನಲ್ಲಿ ಬರುವಂತಹವರನ್ನು ಜೈಲಿನಲ್ಲಿಡಬಹುದು. ಈ ಕಾನೂನಿನ ಪ್ರಕಾರ ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಂಡು ಕೆಲವರನ್ನು ಜೈಲಿನಲ್ಲಿಟ್ಟಾಗ, ಅವರುಗಳು ಇದನ್ನು ಪ್ರಶ್ನೆ ಮಾಡಿ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿದರು. ನಂತರ ಹೈಕೋರ್ಟಿನವರು ಈ ಕಾನೂನಿನಲ್ಲಿ ರುವಂತಹ ಕೆಲವು ದೋಷಗಳನ್ನು ಎತ್ತಿ ತೋರಿಸಿ ಸ್ಥಾನಬದ್ಧತೆಯಲ್ಲಿದ್ದವರನ್ನು ರಿಲೀಜ್ ಮಾಡಿದರು ಈಗ ನಾವು ಹೈಕೋರ್ಟಿನವರು ತೋರಿಸಿರುವಂತಹ ದೋಷಗಳನ್ನು ಸರಿಪಡಿಸಿ, ಈ ದೋಷಗಳು ಮತ್ತೆ ಬರಬಾರದೆಂದು ಕಾರಣಕೋಸ್ಕರ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಈ ಸಭೆ ಮತ್ತು ಮೇಲ್ಮನೆಯವರು ಒಪ್ಪಿದ ಮೇಲೆ ಕೇಂದ್ರಸರ್ಕಾರದ ಒಪ್ಪಿಗೆ ಕೊಡ ಬೇಕಾಗುತ್ತದೆ. ೨ನೇ ಪೇಜಿನಲ್ಲಿ ಈ ರೀತಿ ಇದೆ:

''6A. Grounds of detention verable.-Where a person has been detained in pursuance of an order of detention under sub-section (1) or sub-section (2) of section 3, which has been made on two or more grounds, such order of detention shall be deemed to have been made separately on each of such grounds, and accordingly.—

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

(a) such order shall not be deemed to be invalid or inoperative merely because one or some of the grounds is or are,—

(i) vague;

(ii) non-existent;

(iii) not-relevant;

(iv) not connected or not proximately connected with such person ; or

(v) invalid for any other reason whatsoever; and it is not, therefore, possible to hold that the Government or the officer making such order would have been satisfied as provided in sub-section (1) of section 3 with reference to the remaining ground or grounds."

ಬಹಳ ಮುಖ್ಯವಾದುದು ಇದರಲ್ಲಿ ನಾವು ತಂದಿರತಕ್ಕಂಥ ತಿದ್ದುಪಡಿ. ಆಮೇಲೆ ಎರಡನೆಯದು, ಹೊಸದಾಗಿ ಸೇರಿಸಿರುವುದನ್ನು ಇದರಲ್ಲಿ ಸೇರಿಸಿಕೊಳ್ಳಬೇಕು.

Amendment of section 14. In section 14 of the principal Act, for sub-section (2) the following sub-section shall be substituted, namely—

"(2) The revocation on or expiry of a detention order (hereinafter in this sub-section referred to as the earlier detention order) shall not, whether such earlier detention order has been made before or after the commencement of the Karnataka Prevention of Dangerous activities of Boot-Leggers, Drug-Offenders, Goondas, Immoral Traffic Offenders and Slum-Grabbers (amendment) act, 1987, bar the making of another detention order (hereinafter in this sub-section referred to as the subsequent order) under section 3 against the same person."

ಹಿಂದಿನ ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ಏನು ಕ್ರಮ ತೆಗೆದುಕೊಂಡಿದ್ದರು ಅನು ಅನೂರ್ಜಿತವಾಗತಕ್ಕಂಥದ್ದಲ್ಲ ಎನ್ನುವುದು ತಿದ್ದುಪಡಿ. ಯಾವ ಉದ್ದೇಶಕ್ಕೋಸ್ಕರ ಮೂಲ ಕಾನೂನನ್ನು ತಂದೆವೋ ಹೈಕೋರ್ಟಿನವರು ಈ ದೋಷ ಇರುವುದರಿಂದ ಅದನ್ನು ಅನೂರ್ಜಿತಗೊಳಿಸಿದರು. ಆ ದೋಷವನ್ನು ಸರಿಪಡಿಸಿ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದವರ ಮೇಲೆ ಪೂರ್ಣ ನಿಯಂತ್ರಣ ಹಾಕಿ ಸಮಾಜ ವಿರೋಧಿ ಶಕ್ತಿಗಳನ್ನು, ಜನರನ್ನು ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಳ್ಳತಕ್ಕಂಥ ಕಾರ್ಯಕ್ರಮ ಇದು. ಇದು ಬೊಂಬಾಯಿಯಲ್ಲಿದೆ, ಮಧ್ಯ ಪ್ರದೇಶದಲ್ಲಿದೆ, ಎಲ್ಲಾ ಇದೆ ಆದುದರಿಂದ ಮಾನ್ಯ ಸದಸ್ಯರು ಇದಕ್ಕೆ ತಮ್ಮ ಒಪ್ಪಿಗೆ ಕೊಡಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು, ಕೊಳೆಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕ್ಕಾಗಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ಏನಿದೆ ಇದನ್ನು ನಾನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಅದರ ಅರ್ಥ ನಾನು ಇದರಲ್ಲಿ ನಮೂದಿಸಿರುವ ಜನಗಳ ಪರವಾಗಿದ್ದೇನೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.



ಎಂದು ಅಲ್ಲ. ಈ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು, ಕೊಳೆಗೇರಿಗಳನ್ನು ವಶಪಡಿಸಿಕೊಳ್ಳುವವರು, ಇವರ ಪರವಾಗಿ ನಾನು ವಕಾಲತ್ತು ವಹಿಸುತ್ತಾ ಇಲ್ಲ. ಆದರೆ ತಾತ್ವಿಕವಾಗಿಯೂ ಕೂಡ ಅಲ್ಲ. ನಾನು ಇಂತಹ ವಿಚಾರಗಳಲ್ಲಿ ಕಾನೂನು ಸ್ವಲ್ಪ ಬಿಗಿಯಾಗಿರಬೇಕು. ಒಂದು ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ವಿಧೇಯಕದ ಸ್ವಾತಂತ್ರ್ಯಕ್ಕೆ ಬಾಧಕವಾಗಿದ್ದರೂ ಕೂಡ ಇಡೀ ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಇಂತಹ ಕಾನೂನುಗಳು ಅಗತ್ಯವಾಗುತ್ತವೆ ಎನ್ನುವ ವಿಷಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಿಜ ಹೇಳಬೇಕೆಂದರೆ ವಿರೋಧ ಇದ್ದವರು ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್ ಮತ್ತು ಅವರ ಸ್ನೇಹಿತರುಗಳೇ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಇಂಥ ವ್ಯಕ್ತಿಗಳನ್ನು ನಿಯಂತ್ರಿಸುವುದಕ್ಕೆ ಕಾನೂನು ತಂದಾಗ, ಇಡೀ ನಮ್ಮ ಆರ್ಥಿಕ ವ್ಯವಸ್ಥೆಗೆ ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನುಂಟು ಮಾಡಿದ್ದಂಥವರನ್ನು ನಿಯಂತ್ರಣ ಮಾಡುವುದಕ್ಕೆ ಹೊರಟಾಗ.. ... ..

೪-೩೦ ಪಿ.ಎಂ.

Goondas are more stronger than the legislators or the municipal councillors or the newly elected mandal panchayat and zilla parishat members. They have access to the police and the police also don't listen to the legislators. They listen to the words of goondas. There is a vicious circle which is committed to connivance with the police. Unless there is connivance of the poitce, there will be no offence at all because in matters of droug offedeers and slum-grabbers, the police are assisting these goonda persons. The first step that should be taken by the government is to see that there is no link between goondas, and bootleggers and police officials. There should be deterrent action and accordingly law should be framed. Unless this circious vcisicle is broken no amount of legislation will be useful and it will not rescue the innocent citizens from being harassed. so, the legislation, which is going to be introduced, in my opinion, will be harmful to the society and harmful to the innocent citizens, because the stronger one will escape from the cluthees of the police officers or the government. Only innocent persons will be victimised, oppressed and harassed. If such a overriding provisions are provided in the legislation, there will be greater harm than greater benefit to the society. so, I totaly oppose this new amendment and urge that it should be dropped. If at all any amendment to the Act is going to be made, it should have clarity of mind, clarity of words and clarity of provisions. Unless that is done, this Bill cannot be passed in this House. with these, I thank the hon. Dy. Speaker for giving me an opportunity to speak.



† ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದವರು ತಂದಿರುವ ಈ ತಿದ್ದುಪಡಿ ಸೂಕ್ತವಾದುದ್ದು ಮತ್ತು ಸಮಂಜಸವಾದುದ್ದು. ಕಾನೂನಿನಿಂದ ತಪ್ಪಿಸಿಕೊಳ್ಳದ ರೀತಿಯಲ್ಲಿ ಅಂತಹ ಮನುಷ್ಯನನ್ನು ಡಿಟೆನ್ಯು ಮಾಡಬೇಕು ಎನ್ನುವ ಉದ್ದೇಶದಿಂದ ತಂದಿರುವ ತಿದ್ದುಪಡಿಯನ್ನು ನಾನು ಅನುಮೋದನೆ ಮಾಡುತ್ತೇನೆ. ಈಗ ಮಾತನಾಡಿದ ಸನ್ಮಾನ್ಯ ಸದಸ್ಯರು ನಮ್ಮ ಈ ಸಿವಿಲೈಸ್ಡ್ ಸೊಸೈಟಿಯವಾಗಿರುವುದರಿಂದ ಈ ತಿದ್ದುಪಡಿ ತರಬಾರದು ಎನ್ನುವ ರೀತಿಯಲ್ಲಿ ಮಾತನಾಡಿದರು. ಸಿವಿಲೈಸ್ಡ್ ಸೊಸೈಟಿ ಎನ್ನುವ ಅರ್ಥ ಬಹಳ ಮಟ್ಟಿಗೆ, ಈ ಕೆಲವು ಕೇಸ್‌ಗಳಿಗೆ ಅನ್ವಯವಾಗಲಾರದು. ಉದಾಹರಣೆಗೆ ಒಬ್ಬ ರಿಜಿಸ್ಟರಾದವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕಪಾಳಕ್ಕೆ ಹೊಡೆಯುವುದು, ರಸ್ತೆಯಲ್ಲಿ ಹೋಗುವ ಹೆಣ್ಣುಮಕ್ಕಳನ್ನು ಎಳೆದು ಕಾರಿನಲ್ಲಿ ಹಾಕಿಕೊಂಡು ಹೋಗಿ ಕಾನೂನು ಬಾಹಿರ ಕೃತ್ಯಗಳನ್ನು ನಾವು ಮಾಡುತ್ತೇವೆ. ನಾವು ಮಾಡುವುದೇ ಕಾನೂನು ಬದ್ಧ ಎಂದು ತಿಳಿದುಕೊಳ್ಳಬೇಕು ಎಂದು ಹೇಳುವಂಥ ಈ ಜನ ಸಿವಿಲೈಸ್ಡ್ ಸೊಸೈಟಿಯಲ್ಲಿದ್ದವರು ಎಂದು ಹೇಳಬಹುದೇ ? ಸಮಾಜದಲ್ಲಿ ಒಳ್ಳೆಯ ಸೊಸೈಟಿ ನಿರ್ಮಾಣ ಮಾಡಬೇಕಾದರೆ ಆ ಸೊಸೈಟಿಯನ್ನು ತಿದ್ದತಕ್ಕ ಜನ ಒಂದು ಕಡೆ, ಅದನ್ನು ಹಾಳು ಮಾಡತಕ್ಕ ಜನ ಇನ್ನೊಂದು ಕಡೆ. ಸರ್ಕಾರದವರು ಈ ತಿದ್ದುಪಡಿಯನ್ನು ತಂದಿರುವುದು, ಯಾರಾದರೂ ಸಮಾಜದಲ್ಲಿ ದ್ರೋಹ ಕೆಲಸ ಮಾಡಿದರೆ ಅವರನ್ನು ಡಿಟೆನ್ಯು ಮಾಡಿ ಇಟ್ಟು ಸಮಾಜದಲ್ಲಿ ಸಭ್ಯತೆಯಿಂದ, ಶಾಂತಿಯಿಂದ ಬಾಳತಕ್ಕ ಜನಗಳಿಗೆ ರಕ್ಷಣೆ ಕೊಡತಕ್ಕ ಈ ಕ್ರಮವನ್ನು ದುರುದ್ದೇಶದಿಂದ ಅಲ್ಲ ಸದುದ್ದೇಶದಿಂದ ತಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಸತ್ಯವನ್ನು ಹೇಳಿದರು, ಅದಕ್ಕಾಗಿ ಅಭಿನಂದಿಸುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ನಾಲಿಗೆ ಸ್ವಲ್ಪ ವ್ಯತ್ಯಾಸವಾಗುತ್ತದೆ. ಅದಕ್ಕೆ ತಮಗೆ ಉತ್ತರ ಹೇಳುತ್ತೇನೆ.

ದುರುದ್ದೇಶದಿಂದ ತಂದಿಲ್ಲ ಸದುದ್ದೇಶದಿಂದ ಸರ್ಕಾರದವರು ತಂದಿದ್ದಾರೆನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಸರ್ಕಾರ ಒಬ್ಬ ವ್ಯಕ್ತಿಯನ್ನು ಅನೇಕ ಕಾರಣಗಳಿಂದ ಜೈಲಿಗೆ ಹಾಕಿದಾಗ, ಆತ ಕೋರ್ಟ್ ಮುಂದೆ ಹೋದಾಗ, ಯಾವುದೇ ತಾರೀಖು ಇಲ್ಲ, ಮಾಹಿತಿ ಇಲ್ಲ ಎಂದು ಕೋರ್ಟಿನವರು ಬಿಡುಗಡೆ ಮಾಡಿದರೆ. ಆತ ಮತ್ತೆ ಮೀಸೆ ತಿರುಗಿಸಿಕೊಂಡು, ಹೆಚ್ಚು ದೌರ್ಜನ್ಯ ಮಾಡುವಂಥ ಪ್ರವೃತ್ತಿಯ ಮನುಷ್ಯನಾಗುತ್ತಾನೆ. ಈ ಎಲ್ಲಾ ಕಾರಣಗಳನ್ನು ಮನಗಂಡು, ಸಮಾಜದ್ರೋಹಿಗಳನ್ನು ಬಿಡುಗಡೆ ಮಾಡಬಾರದೆಂದೂ, ಅಂತಹವರನ್ನು ಬಿಡುಗಡೆ ಮಾಡಿದರೆ, ಇನ್ನೂ ಹೆಚ್ಚಿನ ದ್ರೋಹಿಗಳಾಗುತ್ತಾರೆಂದೂ ಈ ಒಂದು ತಿದ್ದುಪಡಿಯನ್ನು ತಂದು ಆ ಮೂಲಕ ಅವರನ್ನು ಒಳಗೆ ಹಾಕತಕ್ಕ ಕೆಲಸ ಮಾಡಲಾಗಿದೆ. ಇದರಿಂದ ಏನು ತೊಂದರೆಯಾಗುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ, ಸಮಾಜದ್ರೋಹಿಗಳನ್ನು ಬೆಳೆಸಬೇಕೆಂದು ವಿರೋಧ ಪಕ್ಷದವರ ಇಚ್ಛೆ ಇದೆಯೋ ಹೈಕೋರ್ಟಿನವರು ತಿರಸ್ಕಾರ ಮಾಡಿದರೆ. ಇಂಥವರನ್ನು ಬೆಳೆಸಬೇಕೆಂಬ ಪ್ರವೃತ್ತಿ ಯಾವುದಾದರೂ ಇದ್ದು ಅದಕ್ಕಾಗಿ ವಿರೋಧ ಮಾಡುತ್ತಿದ್ದಾರೆಂದು ಭಾವಿಸುವುದೇ ? ಒಂದು ಕಡೆ ಸಮಾಜ ಚೆನ್ನಾಗಿರಬೇಕು ಪರಿಪೂರ್ಣವಾಗಿ ಸಮಾಜವನ್ನು ಬೆಳೆಸಬೇಕು. ತಿದ್ದಬೇಕು, ಸ್ವಲ್ಪ ಮಟ್ಟಿಗೆ ತಹಬಂದಿಗೆ ತರಬೇಕೆಂದು ತಿದ್ದುಪಡಿ ತಂದರೆ, ಅದಕ್ಕೆ ವಿರೋಧ ಮಾಡುವುದು ಸೌಜನ್ಯವಲ್ಲ. ಇದರಿಂದ ಶಾಸಕರುಗಳಿಗಾಗಲಿ ಎಂ. ಪಿ. ಗಳಿಗಾಗಲಿ, ತೊಂದರೆಯಾಗಿದ್ದರೆ ಹೇಳಲಿ. ಒಬ್ಬ ಮನುಷ್ಯನನ್ನು ಸ್ಥಾನ ಬಲದ ಮೇಲೆ ಒಳ್ಳೆಯ ಮನುಷ್ಯ ಎಂದು ಹೇಳುವುದಕ್ಕೆ ಬರುವುದಿಲ್ಲ. ದುರ್ಗುಣ ಇರತಕ್ಕ ವ್ಯಕ್ತಿಗಳನ್ನು ಯಾವ ಜಾತಿ ಮತ್ತು ಮಟ್ಟವನ್ನು ನೋಡದೆ, ಸರಿಯಾದ ರೀತಿಯಲ್ಲಿಡುವುದಕ್ಕೆ ಕಾನೂನು ಬದ್ಧವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಸರ್ಕಾರ ಹೊರಟಿರುವಾಗ ಸಾಮಾನ್ಯವಾಗಿ ಒಪ್ಪತಕ್ಕ ಸೌಜನ್ಯ ಬರಬೇಕು. ಸಮಾಜಕ್ಕೆ ಕಂಟಕರಾದಂಥ ವ್ಯಕ್ತಿಗಳನ್ನು ಒಳಗೆ ಹಾಕುವುದರಿಂದ ಸಮಾಜದಲ್ಲಿ ಒಳ್ಳೆ ಜನ ಶಾಂತರೀತಿಯಿಂದ ಬಾಳಲಿಕ್ಕೆ ಅವಕಾಶ ಮಾಡಿದಂತಾಗುತ್ತದೆ, ಇದರ ಬಗ್ಗೆ ಶಹಬಾಸ್‌ಗಿರಿ ಕೊಡತಕ್ಕಂಥ ಪ್ರವೃತ್ತಿ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಹೋದ ಸಲ ಮಾನ್ಯ ಮಂತ್ರಿಗಳ ಕೊಟ್ಟಂತಹ ಅಂಕಿಸಂಖ್ಯೆ ಪ್ರಕಾರ ೨೭ ಜನರನ್ನು ಈ ಕಾನೂನು ಪ್ರಕಾರ ಡಿಟೈನ್ ಮಾಡಿದ್ದರು. ೨೭ ಜನರಲ್ಲಿ ೧೫ ಜನರನ್ನು ಸರ್ಕಾರದವರೇ ಬಿಡುಗಡೆ ಮಾಡಿದ್ದಾರೆ. ೪ ಜನರನ್ನು ಸಲಹಾ ಮಂಡಲಿಯವರು ಬಿಡುಗಡೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದ್ದಾರೆ. ೪ ಜನರನ್ನು ಸಲಹಾ ಮಂಡಲಿಯವರು ಬಿಡುಗಡೆ ಮಾಡಿದ್ದಾರೆ. ಉಳಿದ ಎರಡು ಜನರನ್ನು ಹೈಕೋರ್ಟಿನವರು ಬಿಡುಗಡೆ ಮಾಡಿದ್ದಾರೆ. ಇನ್ನಿಬ್ಬರನ್ನು ಬಿಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ೧೯ ಜನರಿಗೆ ನೀವೇ ಬಿಡುಗಡೆ ಮಾಡಿ, ಪುನಃ ಈ ಕಾನೂನು ತರತಕ್ಕಂಥ ಅವಶ್ಯಕತೆ ಇತ್ತೆ? ಗೂಂಡಾಗಳು ನಿಮ್ಮ ಪರವಾಗಿ, ನಿಮಗೆ ಸಪೋರ್ಟ್ ಮಾಡುವವರು ಇದ್ದಾರೋ ಏನೋ ಈ ಕಾನೂನು ತಂದಾಗ ನಮ್ಮ ಕೈ ಭದ್ರಪಡಿಸಿ ಎಂದು ಹೇಳಿದಮೇಲೆ ನಾವು ಒಮ್ಮತದಿಂದ ಒಪ್ಪಿಗೆ ಕೊಟ್ಟು, ಕಾನೂನು ನಿಮ್ಮ ಕೈಗೆ ಕೊಟ್ಟೆವು. ಪುನಃ ನಮ್ಮ ಕೈ ಭದ್ರಪಡಿಸಿ ಎಂದು ತಿದ್ದುಪಡಿ ತಂದಿದ್ದೀರಿ.

ಶ್ರೀ ಎಂ. ರಾಮಪ್ಪ.—ಅವರಿಗೆ ಬೇಕಾಗಿರುವಂತಹ ಕಾನೂನು ತಂದು ಎಂ.ಎಲ್.ಎ. ಅವರನ್ನು ಒಳಗೆ ಹಾಕಲಿಕ್ಕೆ ನೋಡುತ್ತಿದ್ದಾರೆ. ಕೆಲವರಿಗೆ ಸ್ಲಮ್ ಲಾರ್ಡ್ ಎಂದು ಮಾಡಿದ್ದರು, ೨೦ ಸಾವಿರ ರೂಪಾಯಿ ಕೊಡಿ, ಇಲ್ಲದೇ ಇದ್ದರೆ ಡಿಸ್ಟ್ರಿಕ್ಟ್‌ನಿಂದ ಹೊರಗಡೆ ಹಾಕುತ್ತೇವೆಂದು ಹೇಳುತ್ತಿದ್ದರು. ಜನತಾ ಪಕ್ಷದವರು ಎಷ್ಟೋ ಗುಡಿಸಲು ಹಾಕಿದ್ದಾರೆ, ಅವರುಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇವರ ಕೈಯಲ್ಲಿ ಏತಕ್ಕೆ ಅಧಿಕಾರ ಕೊಡಬೇಕು? ಇವರ ಕೈಯಲ್ಲಿ ಏನೂ ಆಗುವುದಿಲ್ಲ ಎಂದು ನಿರ್ಣಯ ಮಾಡಿಕೊಂಡಿದ್ದೇವೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಸರ್ಕಾರ ನ್ಯಾಯಬದ್ಧವಾಗಿ ಮಾಡುತ್ತದೆ. ಸನ್ಮಾನ್ಯ ಸದಸ್ಯರು ಬಿಡುಗಡೆ ವಿಷಯ ಹೇಳಿದರು, ಸೌಜನ್ಯ ರೀತಿಯಿಂದ ನೋಡಿದರೆ ಸರ್ಕಾರ ಎಷ್ಟು ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ತಿಳಿದುಕೊಳ್ಳಬೇಕು. ಹೈಕೋರ್ಟಿನಲ್ಲಿ ಯಾವುದು ತಪ್ಪು ಎಂದು ಹೇಳಿದ್ದಾರೆ ಅದರ ಪ್ರಕಾರ ಬಿಡುಗಡೆ ಮಾಡುವ ಸೌಜನ್ಯತೆ ಈ ಸರ್ಕಾರಕ್ಕೆ ಇದೆ. ಕೋರ್ಟಿನ ವಿಚಾರಕ್ಕೆ ಮನ್ನಣೆ ಕೊಡತಕ್ಕ ಸರ್ಕಾರ ಇದೆ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಒಂದಲ್ಲ ಒಂದು ರೀತಿಯಿಂದ ಬಿಡುಗಡೆ ಮಾಡಿದರೂ ಪುನಃ ಡಿಟೆನ್ಯೂ ಮಾಡಲಿಕ್ಕೆ ತಿದ್ದುಪಡಿ ತಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ—ನೀವು ಬಿಡುಗಡೆ ಮಾಡಿದರೆ ಒಳ್ಳೆಯವನಾಗುತ್ತಾನೆ ಅಲ್ಲವೇ? ಒಳಗಡೆ ಇದ್ದರೆ ಅವನು ಕೆಟ್ಟವನಾಗಿರುತ್ತಾನೆ ಅಲ್ಲವೇ?

ಶ್ರೀ ಬಿ.ಜಿ. ಕೊಟ್ರಪ್ಪ.—ಅದರ ಬಗ್ಗೆ ಎಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದಾರೆ. Provided that in a case where no fresh facts have arisen after the revocation or expiry of the earlier detention order made against such person, the maximum period for which such person may be detained in pursuance of the subsequent detention order shall in no case, extend beyond the expiry of a period of twelve months from the date of detention under the earlier detention order.'' ಆದ್ದರಿಂದ ಮಹಾರಾಜರ ಕಾಲದಲ್ಲಿ ಇದ್ದ ಹಾಗೆ ಎಷ್ಟು ವರ್ಷ ಆದರೂ ಇಟ್ಟುಕೊಳ್ಳುವ ಭಾವನೆ ನಮ್ಮಲ್ಲಿ ಇಲ್ಲ. ಪ್ರಜೆಗಳ ಕ್ಷೇಮ ನೋಡತಕ್ಕ ಸರ್ಕಾರ ಸರ್ವರೂ ಶಾಂತಿಯಿಂದ ಬಾಳಬೇಕೆಂದು ಮಾಡಿರತಕ್ಕ ಸರ್ಕಾರ ಇದರಲ್ಲಿ ಭಯ ಪಡಬೇಕಾದುದು ಇಲ್ಲ. ನ್ಯಾಯವಾಗಿ ಬಾಳತಕ್ಕ ವ್ಯವಸ್ಥೆ ಮಾಡತಕ್ಕಂತಾದ್ದು ಇದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಕೊಟ್ರಪ್ಪನವರು ಮಂತ್ರಿಗಳು ಆಗುತ್ತಾರೆಂದು ಕಾಣುತ್ತದೆ.

ಶ್ರೀ ಎಂ. ರಾಮಪ್ಪ.—ನಮ್ಮ ಮೇಲೆ ಸುಳ್ಳು ಕೇಸ್ ಹಾಕಿದ್ದರು.

ಶ್ರೀ ಬಿ.ಜಿ. ಕೊಟ್ರಪ್ಪ.—ಈ ತಿದ್ದುಪಡಿಯನು ಒಂದು ಟೆಕ್ನಿಕಲ್ ಡಿಫೆಕ್ಟ್ಸ್‌ನಿಂದ ತರಲಾಗಿದೆ. ಇನ್ ಆರ್ಡರ್ ಟು ಕ್ಯೂರ್ ದಿ ಟೆಕ್ನಿಕಲ್ ಲಕೂನ. ಹೊಸದಾಗಿ ಏನೂ ಮಾಡಲಿಕ್ಕೆ ಹೋಗಿಲ್ಲ. ಅನೇಕ ತಪ್ಪುಗಳನ್ನು ಎತ್ತಿ ತೋರಿಸುವಾಗ ಅದನ್ನು ತಿದ್ದುಪಡಿ ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಮಾನ್ಯ ರಾಚಯ್ಯನವರು ಬಹಳಷ್ಟು ಜಾಗ್ರತೆಯಿಂದ ಕೋರ್ಟಿನ ತೀರ್ಪಿಗೆ ಮನ್ನಣೆ ಕೊಟ್ಟು ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿ ಮಾಡುವುದರಿಂದ ಭಯ ನಮ್ಮಲ್ಲಿ ಬರುತ್ತದೆ ಎಂದು ಹೇಳುವುದು ಔಚಿತ್ಯ ಅಲ್ಲ. ಈ ತಿದ್ದುಪಡಿ ಮಾಡುವುದರಿಂದ ಸಮಾಜದಲ್ಲಿ ಶೋಷಣೆ ಮಾಡತಕ್ಕ, ದೌರ್ಜನ್ಯ ಮಾಡತಕ್ಕ ಜನರನು ಬಲಿ ಹಾಕಿ ಒಳಗೆ ಇಟ್ಟು ಸಮಾಜದಲ್ಲಿ ಶಾಂತಿ, ಸೌಜನ್ಯದಿಂದ ಬಾಳತಕ್ಕದ್ದು ನಿರ್ಮಾಣ ಮಾಡಲಿಕ್ಕೆ ಆಗುತ್ತದೆ. ಆದುದರಿಂದ ಸರ್ಕಾರ ತಂದಿರತಕ್ಕ ತಿದ್ದುಪಡಿಯನ್ನು ನಾನು ಅನುಮೋದನೆ ಮಾಡುತ್ತೇನೆ.



† ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಉಪಾಧ್ಯಕ್ಷರೆ, ... ರಾದ ರಾಚಯ್ಯನವರು ಗೂಂಡಾ ಆ್ಯಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ ... ಉಚಿತವಾದ ತಿದ್ದುಪಡಿಯಾಗಿದೆ. ಈಗ ... ಸ್ವಾಗತಿಸುತ್ತೇನೆ. ಇದೊಂದು ಬಹಳ ... ಅನೇಕ ದಿವಸಗಳಿಂದ ನಾನು ನೋಡುತ್ತಿರುವಂತೆ ... ದಲ್ಲಿ ಅನೇಕ ದೃಷ್ಟಿಯಿಂದ, ಅನೇಕ ಸಮಾಜ ದ್ರೋಹಿಗಳು ... ಅನೇಕ ಕಾನೂನುಗಳಿದ್ದರೂ ಸಹಿತ ಗೂಂಡಾಗಳು, ... ನಮ್ಮ ಸರ್ಕಾರ ತಿಳಿದುಕೊಂಡು ... ವಿಚ್ಛಿದ್ರಕಾರಕ ಶಕ್ತಿಗಳು ಬೆಳೆದು ಬಂದಿವೆ ಎಂಬುದನ್ನು ... ಸಮಾಜದ ಹಿತವನ್ನು ಕಾಪಾಡುವ ... ಗಳನ್ನು ಮಟ್ಟ ಹಾಕಬೇಕೆಂಬ ಸಲುವಾಗಿ, ... ಕಾರ್ಯಗತ ಮಾಡಿದ ಮೇಲೆ ಅನೇಕ ಜನ ಗೂಂಡಾ... ಕಾನೂನನ್ನು ತಂದಿದೆ. ಈ ಕಾನೂನನ್ನು ... ಕಾರಣಗಳಿಂದ ಹೊರಗೆ ಬರುತ್ತಿದ್ದಾರೆ. ... ಈ ಕಾನೂನು ಪರಿಮಿತಿಯೊಳಗೆ ಸಿಕ್ಕಿ ಸಣ್ಣ ಪುಟ್ಟ ... ಉದ್ದೇಶದಿಂದ ಈ ಕಾನೂನನ್ನು ತಂದಿದೆ ... ನೋಡಿ ನಮ್ಮ ಸಮಾಜದ ಹಿತವನ್ನು ಕಾಯಬೇಕೆಂಬ ... ಸಮಾಜದ ಸ್ವಾಸ್ಥ್ಯವನ್ನು ಇನ್ನೂ ಕೆಡಿಸುವುದಕ್ಕೆ ಹೆಚ್ಚಿನ ... ಇದನ್ನು ತರದಿದ್ದರೆ ಗೂಂಡಾಗಳು ... ಸಮಾಜದ ಹಿತವನ್ನು ಸರಿಯಾಗಿ ಕಾಯದೇ ... ಅವಕಾಶಗಳಿದ್ದವು. ಸರ್ಕಾರೀ ಅಧಿಕಾರಿಗಳು ನಮ್ಮ ಸಮಾಜ ಘಾತುಕ ಶಕ್ತಿಗಳು ಬೆಳೆಯುತ್ತಿವೆಯೆಂದು ಸ್ಪಷ್ಟವಾಗಿ ಇರುವುದರಿಂದ ಹೆಚ್ಚು ಹೆಚ್ಚು ... ಕಾನೂನುಗಳನ್ನು ಸರ್ಕಾರೀ ಅಧಿಕಾರಿಗಳು ಸರಿಯಾಗಿ ಕಂಡು ಬರುತ್ತಿದೆ. ಆದ್ದರಿಂದ ಈಗಿರತಕ್ಕ ... ಕ್ರಮ ತೆಗೆದುಕೊಂಡರೆ ಜನರಿಗೆ ಒಳ್ಳೆಯದಾಗು... ಅರ್ಥ ಮಾಡಿಕೊಂಡು ಸಮಾಜದ ಹಿತದೃಷ್ಟಿಯಿಂದ ... ಏನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸುತ್ತದೆ. ಇವತ್ತು ಈ ತಿದ್ದುಪಡಿಯನ್ನು ಸರ್ಕಾರದವರು ... ನನ್ನ ಮಾತನ್ನು ಮುಗಿಸುತ್ತೇನೆ. ಇದರಿಂದ ನಮ್ಮ ಸಮಾಜಕ್ಕೆ ಒಳ್ಳೆಯದಾಗುತ್ತದೆಂದು ಆಶಿಸಿ ...

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಗೂಂಡಾ ಕಾಯಿದೆ ಒರಿಜಿನಲ್ ಆಗಿ ಸದನದ ಮುಂದೆ ಬಂದಾಗ ನಾನು ಇದರ ಬಗ್ಗೆ ಕಳೆದ ಸಾರಿಯೇ ಒಂದು ತಿದ್ದುಪಡಿಯನ್ನು ತಮಗೆ ಕಳುಹಿಸಿಕೊಟ್ಟಿದೆ. ಆದರೆ ಅದನ್ನು ತಾವು ತಿರಸ್ಕಾರ ಮಾಡಿದಿರಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ಸಮಾಜದಲ್ಲಿ ಎಲ್ಲಿಯವರೆಗೆ ಈ ಗೂಂಡಾಗಳನ್ನು ಸಾಕುವವರು ಇರುತ್ತಾರೋ ಅಲ್ಲಿಯವರೆಗೂ ಇಂಥ ಗೂಂಡಾ ಕಾಯಿದೆಗಳನ್ನು ಎಷ್ಟು ಮಾಡಿದರೂ ಯಾವುದೇ ಪ್ರಯೋಜನವೂ ಆಗುವುದಿಲ್ಲ.

ಇನ್ನೊಂದು ವಿಚಾರ ಎಂದರೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಬಂದಿರತಕ್ಕ ಹಲವಾರು ಕಾಯಿದೆಗಳನ್ನು ನೋಡಿದರೆ, ನಮ್ಮ ದೇಶಕ್ಕೆ ಎಂಥ ಕಾನೂನುಗಳು ಬೇಕೆಂದು ನಿಜವಾದ ಅರ್ಥದಲ್ಲಿ ಯೋಚನೆ ಮಾಡಿದರೆ ಪೋಲೀಸರಿಗೆ ಅಥವಾ ಅಧಿಕಾರ ವರ್ಗಕ್ಕೆ ಎಷ್ಟು ಅಧಿಕಾರ ಇದೆಯೋ ಇದಕ್ಕಿಂತ ಹೆಚ್ಚಿಗೆ ಅಧಿಕಾರವನ್ನು ಕೊಡತಕ್ಕ ಕಾನೂನುಗಳಿವೆ. ಉದಾಹರಣೆಗೆ ಹೇಳುವುದಾದರೆ ನ್ಯಾಷನಲ್ ಸೆಕ್ಯುರಿಟಿ ಆಕ್ಟ್ ಮುಂತಾದ ದೊಡ್ಡ ದೊಡ್ಡ ಕಾಯಿದೆಗಳನ್ನು ಇಟ್ಟುಕೊಂಡು, ಅತ್ಯುತ್ತಮವಾದ ಅಸ್ತ್ರಗಳನ್ನು ಪೋಲೀಸರು ತಮ್ಮ ಕೈಯಲ್ಲಿಟ್ಟುಕೊಂಡಿದ್ದರೂ ಕೂಡ ಈ ಸರ್ಕಾರ ಸರಿಯಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಗ್ರೌಂಡ್ಸ್ ಆಫ್ ಡಿಟೆನ್‌ಷನ್‌ನ್ನು ಯಾವ ರೀತಿ ಪರ್ಸ್ಯೂ ಮಾಡುತ್ತಿದ್ದಾರೆ

" Where a person has been detained in pursuance of an order of detention under sub-section (1) or sub-section (2) of section 3, which has been made on two or more grounds, such order of detention shall be deemed to have been made separtely on each of such grounds. accordingly,

(a) such order shall not be deemed to be invalid or inoperative merely because one or some of the grounds is or are,

(i) vague ;
(ii) non-existent ;
(iii) not relevant ;

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನಸಭೆ ಸಚಿವಾಲಯ ವಿಧಾನಸೌಧ, ಬೆಂಗಳೂರು

(iv) not connected or not proximately connected with such person ; or

(v) invalid for any other reason whatsoever ; and it is not, therefore, possible to hold that the Government or the officer making such order would have been satisfied as provided in sub-section (1) of section 3 with reference to the remaining ground or grounds and made the order of detention."

ಮಾನ್ಯ ಅಧ್ಯಕ್ಷರೇ ಇದರಲ್ಲಿ ಇವರು ಕೊಟ್ಟಿರತಕ್ಕಂಥ ರೀತಿಯನ್ನು ನೋಡಿದರೆ ಹೆಚ್ಚು ಕಡಿಮೆ ಹೈಕೋರ್ಟಿನಲ್ಲೂ ಇರತಕ್ಕಂಥ ಆಕ್ಟನ್ನು ಕಡಿಮೆ ಮಾಡುವ ರೀತಿಯಲ್ಲಿ ಇದೆ. ವೇಗ್ ಆಗಿ ಆಕ್ಟಿನಲ್ಲಿ ಯಾರೇ ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡಬೇಕೆಂದರೆ ನೋಟೀಸ್ ಇಶ್ಯೂ ಮಾಡಬೇಕು. ರೀಸನ್ ಆಫ್ ಡಿಟೆನ್‌ಷನ್ ಕೇಳಬೇಕು, ಅದನ್ನು ಯಾವುದನ್ನು ಮಾಡದೆ ಏನಾದರೂ ಅಮೆಂಡ್‌ಮೆಂಟ್‌ನ್ನು ಕೊಟ್ಟರೆ ತಮಗೆ ಇಷ್ಟ ಬಂದ ರೀತಿಯಲ್ಲಿ ಯಾರನ್ನು ಬೇಕಾದರೂ ಅರೆಸ್ಟ್ ಮಾಡಬಹುದು. ಅರೆಸ್ಟ್ ಮಾಡುತ್ತೇವೆಂದು ಈಗಾಗಲೇ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟಿರುವ ಪ್ರಕಾರ ಮಾನ್ಯ ಖಾರ್ಗೆಯವರು ಸುಮಾರು ೧೫ ಜನರನ್ನು ಅರೆಸ್ಟ್ ಮಾಡಿ ಬಿಡುಗಡೆ ಮಾಡಿದ್ದಾರೆಂದು ಹೇಳಿದರು. ಆ ರೀತಿಯಲ್ಲಿ ಇರತಕ್ಕಂಥ ಕಾಯಿದೆಯನ್ನು ಉಪಯೋಗಿಸುವ ಸರಿಯಾದ ರೀತಿಯಲ್ಲಿ ಉಪಯೋಗಿಸದೆ ಇರುವುದರಿಂದ ಈವತ್ತಿನ ದಿವಸ ಮತ್ತೆ ಅಮೆಂಡ್‌ಮೆಂಟ್ ಮೇಲೆ ಅಮೆಂಡ್‌ಮೆಂಟ್ ತರುತ್ತಿದ್ದಾರೆ. ಒರಿಜಿನಲ್ ಆಕ್ಟ್‌ನಲ್ಲಿಯೇ ಬೇಕಾದಷ್ಟು ಅಧಿಕಾರವಿದೆ. ಪೋಲೀಸ್‌ನವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಾನು ೧೯೭೮ನೇ ಇಸವಿಯಲ್ಲಿ ಶಾಸಕನಾಗಿ ಬಂದಾಗಿನಿಂದಲೂ ನೋಡುತ್ತಿದ್ದೇನೆ. ಇಲಿಸಿಟ್ ಲಿಕ್ಕರ್ ನಮ್ಮ ಏರಿಯಾದಲ್ಲಿ ಸರಾಯಿ ಅಂಗಡಿಗಳಲ್ಲಿ ಮಾತ್ರ ಬರುತ್ತಿತ್ತು. ಈವತ್ತು ಓಣಿಗಳಲ್ಲಿ ಮನೆ ಮನೆಗಳಲ್ಲಿ ಬಟ್ಟಿ ಸಾರಾಯಿ ವಾಸನೆ ಬರುತ್ತಿರುತ್ತದೆ. ಇವರು ಬಂದಮೇಲೆ ಹೆಂಡದ ಅಂಗಡಿಗಳಿಗೆ, ಸಾರಾಯಿ ಅಂಗಡಿಗಳಿಗೆ ಸಾವಿರಗಟ್ಟಲೆ ಲೈಸೆನ್ಸ್‌ಗಳನ್ನು ಕೊಡುತ್ತಲೇ ಇರುತ್ತಾರೆ. ಇವರು ಬಂದಮೇಲೆ ಇಂಥ ಪರಿಸ್ಥಿತಿ ಬಂದಿದೆ.

ಶ್ರೀ ಡಿ.ಟಿ. ಜಯಕುಮಾರ್.—ಅದಕ್ಕೆ ತಮ್ಮ ಸಹಕಾರ ಬೇಕು, ಎಲ್ಲಿ ವಾಸನೆ ಕಂಡುಬರುತ್ತದೆ ಅದನ್ನು ಪೋಲೀಸ್ ಅಧಿಕಾರಿಗಳಿಗೆ ತಿಳಿಸಬೇಕು. ನಿಮಗೂ ಅಧಿಕಾರ ಇರುತ್ತದೆ.

ಶ್ರೀ ಎಂ. ಭೂಪತಿ.—ನಮಗೆ ಗೊತ್ತಿದೆ, ಪೋಲೀಸ್‌ನವರು ಏನು ಕೆಲಸ ಮಾಡುತ್ತಾರೆಂಧು. ಹೀಗಿರುವುದರಿಂದ ಇದನ್ನು ಕಂಟ್ರೋಲ್ ಮಾಡಬೇಕಾದರೆ ಇಲಾಖೆ ಸರಿಯಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡದೆಹೋದರೆ ಯಾವ ಕಾನೂನನ್ನು ತೆಗೆದುಕೊಂಡು ಬಂದರೂ ಏನೂ ಪ್ರಯೋಜನವಾಗುವುದಿಲ್ಲ. ಪದೇ ಪದೇ ತಿದ್ದುಪಡಿಗಳನ್ನು ತಂದು ಏನೇನೂ ಸಾಧನೆ ಮಾಡಿಕೊಳ್ಳುತ್ತೇವೆಂದು ಹೇಳಿದರೂ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈಗಾಗಲೇ ಸಾಕಷ್ಟು ಕಾಯಿದೆಗಳು ಇರುತ್ತವೆ. ಇದನ್ನು ಅಷ್ಟಕ್ಕೆ ನಿಲ್ಲಿಸಿ, ಮತ್ತೆ ಅಮೆಂಡ್‌ಮೆಂಟ್‌ಗಳನ್ನು ತರುವುದು ಬೇಡವೆಂದು ಒತ್ತಾಯ ಮಾಡುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—ಮಾನ್ಯ ಉಪಸಭಾಪತಿಯವರೇ ಈ ತಿದ್ದುಪಡಿ ಮಸೂದೆಯ ಮೇಲೆ ನಿನ್ನೆಯಿಂದ ಈವತ್ತಿನವರೆಗೆ ಅನೇಕ ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅದಕ್ಕೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಈವತ್ತು ಪ್ರಾರಂಭ ಮಾಡಿದಂಥ ಮಾನ್ಯ ಕೋಳಿವಾಡ್‌ರವರು, ನಿನ್ನೆ ಮಾತನಾಡಿದಂಥ ಮಾನ್ಯ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಮತ್ತು ಮಾನ್ಯ ಖಾರ್ಗೆಯವರು ಆರಂಭಿಸುತ್ತಾ ಬಹುಶಃ ಡ್ರೆಕೋನಿಯನ್ ರೀತಿಯ ಕಾನೂನನ್ನು ಕೈಗೆ ಕೊಟ್ಟರೂ ಕೂಡ. ಅಂಥ ಕಾನೂನು ಯಶಸ್ವಿಯಾಗಿ ಜಾರಿಗೆ ಕೊಡುವುದಕ್ಕಾಗಲಿಲ್ಲ, ಮತ್ತೆ ಏತಕ್ಕೆ ಇವರಿಗೆ ಅಧಿಕಾರವನ್ನು ಕೊಡಬೇಕೆಂದು ಕೇಳಿದ್ದಾರೆ. ಬಹುಶಃ ಕಾನೂನನ್ನು ತಂದ ಕಾಲದಲ್ಲಿ ಇದನ್ನು ತರಬೇಕಾಗಿತ್ತು. ಇದು ಫಲನಿಷ್ಠವಾಗಿರತಕ್ಕಂಥ ಕಾಯಿದೆಯಾಗಿದೆ. ಸಾಮಾನ್ಯವಾಗಿ ಮನುಷ್ಯರಿಗೆ ಕೊಡತಕ್ಕಂಥ ಈ ಒಂದು ವಿಚಾರಣೆ ಇಲ್ಲದೆ ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳತಕ್ಕಂಥದ್ದು ನಾಗರೀಕ ಪ್ರಪಂಚಕ್ಕೆ ಒಪ್ಪತಕ್ಕಂಥದಲ್ಲವೆಂದು ಹೇಳಿದ್ದಾರೆ. ಈ ಕಾನೂನನ್ನು ಕೊಡತಕ್ಕಂಥ ಕಾಲದಲ್ಲಿ ಅನೇಕ ರೀತಿಯಾದ ಸಮಸ್ಯೆಗಳನ್ನು ವ್ಯಕ್ತಪಡಿಸಿದರು. ಆದರೂ ಸಂಪೂರ್ಣವಾಗಿ ನಂಬಿಕೆಯನ್ನು ಇಟ್ಟುಕೊಂಡು ಸಮಾಜದಲ್ಲಿರತಕ್ಕಂಥ ಸಮಾಜ ಘಾತುಕ ಶಕ್ತಿಗಳು ಈ ಕ್ಯಾಟಗರಿಯಲ್ಲಿ ಯಾರು ಬರುತ್ತಾರೆ ಅವರ ವಿಷಯದಲ್ಲಿ ಸಮಾಜದಲ್ಲಿ ನೆಮ್ಮದಿ, ಶಾಂತಿಯನ್ನು ತರುವುದಕ್ಕೆ ಪ್ರಯತ್ನ ಮಾಡಲು ವಿಶ್ವಾಸವನ್ನು ಇಟ್ಟು ಈ ಕಾನೂನನ್ನು ಕೈಗೆ ಕೊಟ್ಟರು. ಬಹುಶಃ ಕಾಯಿದೆ ಪ್ರಕಾರ ವಿಚಾರಣೆ ಇಲ್ಲದೆ ಕೆಲವು ಸಮಾಜ ಘಾತುಕ ಶಕ್ತಿಗಳನ್ನು ಒಂದು ತಿಂಗಳವರೆಗೆ ಪೋಲೀಸ್ ಕಸ್ಟಡಿಯಲ್ಲಿ ಇಟ್ಟುಕೊಂಡು ಸಮಾಜದಲ್ಲಿ ಆಗತಕ್ಕಂಥ ಅನೇಕ ಆಘಾತಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಇದರಲ್ಲಿ ಬಹುಶಃ ಒಂದು ವರ್ಷ ಕಸ್ಟಡಿಯಲ್ಲಿ ಮುಂದುವರಿಸಿಕೊಂಡು ಹೋಗತಕ್ಕಂಥ ಅಧಿಕಾರ ಇರುತ್ತದೆ. ಕಾಯಿದೆ ಪ್ರಕಾರ ಕೇವಲ ಸಬ್‌ಇನ್ಸ್‌ಪೆಕ್ಟರವರಿಗೆ ಅಧಿಕಾರವನ್ನು ಕೊಟ್ಟಿಲ್ಲ. ಬಹುಶಃ ಜಿಲ್ಲಾ ಮ್ಯಾಜಿಸ್ಟ್ರೇರಿಗೂ ಕೂಡ ಅಧಿಕಾರವನ್ನು ಕೊಟ್ಟಿರುವುದರಿಂದ ಅವರು ಡಿಟೆನ್‌ಷನ್ ಆರ್ಡರ್ ಮಾಡಿ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡುತ್ತಾರೆ. ಅನುಮೋದನೆಗೆ ಕಳುಹಿಸತಕ್ಕ ಸಂದರ್ಭದಲ್ಲಿ ಸೆಕ್ಷನ್ ೧-೨-೩ರಲ್ಲಿ ಏನು ನಿಯಮಾವಳಿಗಳಿವೆ ಅದರ ಪ್ರಕಾರ ಮಾಡಬೇಕೆಂದು ಈ ಕಾಯಿದೆ ಪ್ರಕಾರ ಅವರಿಗೆ ಅವಕಾಶ ಕಲ್ಪಿಸಿದ್ದೇವೆ. ಅಲ್ಲಿ ಒಂದೆರಡು ತಪ್ಪುಗಳನ್ನು ಮಾಡಿದರೆ ಅಥವಾ ಕೆಲವು ಕಾರಣಗಳಿಂದ ಸಕಾರಣಗಳನ್ನು ಕೊಡದೆ ಇದ್ದರೆ ಅಡ್ವೈಸರಿ ಬೋರ್ಡಿಗೆ ಕಳುಹಿಸಬೇಕಾಗುತ್ತದೆ. ಅಡ್ವೈಸರಿ ಬೋರ್ಡಿನಲ್ಲಿ ಹೈಕೋರ್ಟಿನ ಜಡ್ಜ್ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರು ಇರುತ್ತಾರೆ. ಅವರು ಕಾಯಿದೆಯನ್ನು ಜಾರಿಗೆ ತರತಕ್ಕ ಕಾಲದಲ್ಲಿ ಡಿಟೆನ್‌ಷನ್ ಆರ್ಡರ್ ಕಾಯಿದೆಗನುಗುಣವಾಗಿದೆಯೇ ಇಲ್ಲವೇ ಎಂಬುದನ್ನು ನೋಡಿ, ಅದಕ್ಕನುಗುಣವಾಗದಿದ್ದರೆ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡುತ್ತಾರೆ. ವಜಾ ಮಾಡಿದ ತಕ್ಷಣ ಬಿಡಬೇಕು. ಅದು ತಪ್ಪಿ ಹೈಕೋರ್ಟಿಗೆ ಹೋದ ಸಂದರ್ಭದಲ್ಲಿ ಅವರು ಒಂದಲ್ಲ ನಾಲ್ಕು ಕಾರಣಗಳನ್ನು ಹಾಕಿ ಯಾವುದಾದರೂ ಒಂದು ಕಾರಣ ತಪ್ಪಾಗಿದ್ದರೆ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡತಕ್ಕದ್ದು. ಅನೇಕ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿರತಕ್ಕವರೆಂದು ೨೩ ಜನರನ್ನು ತೆಗೆದುಕೊಂಡ ಪೈಕಿ ಬೇರೆ ಬೇರೆ ಕಾರಣಗಳಿಗೋಸ್ಕರ ಅವರನ್ನು ಬಿಡುಗಡೆ ಮಾಡಬೇಕಾಗಿ ಬಂತು. ಹೈಕೋರ್ಟಿನ ಕೆಲವು ಆದೇಶದ ಪ್ರಕಾರ ಯಾವ ಕಾರಣಕ್ಕೋಸ್ಕರ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡಿದ್ದಾರೆಂಬುದನ್ನು ತಿಳಿದುಕೊಂಡು, ಮತ್ತೆ ಹೈಕೋರ್ಟಿನಲ್ಲಿ ಅದೇ ತಪ್ಪನ್ನು ಮಾಡಿದರೆ ತಪ್ಪಾಗುತ್ತದೆಂದು ಅಲ್ಲೆ ತೀರ್ಮಾನ ಮಾಡಿ ಕೆಲವರನ್ನು ಬಿಡುಗಡೆ ಮಾಡಿದ್ದೇವೆ.



ಶ್ರೀ ಮಲ್ಲಿಕಾರ್ಜುನ ಖರ್ಗೆ.— ಹೈಕೋರ್ಟಿನ ತೀರ್ಮಾನ ಬಂದಮೇಲೆ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ? ಅದು ಬರುವುದಕ್ಕೆ ಮೊದಲು ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—೪೨ ಜನರ ಪೈಕಿ detention order approved by the government 19, the detention order has not been approved by the government 23. ಇಂಥ ಕಾಲದಲ್ಲಿ ಅಪ್ರೂವ್ ಮಾಡಿದರೆ ತಪ್ಪಾಗುತ್ತದೆಂದು ಒಪ್ಪಿಗೆ ಕೊಡಲಿಲ್ಲ. ೧೨ ಜನರನ್ನು ಹೈಕೋರ್ಟ್ ಆದೇಶದ ಮೇಲೆ, ಸರ್ಕಾರದ ಅಡ್ವೈಸರಿ ಬೋರ್ಡಿನ ತೀರ್ಮಾನದ ಮೇಲೆ ೬ ಜನರನ್ನು ಬಿಡುಗಡೆ ಮಾಡಿದ್ದೇವೆ. ಈ ದೃಷ್ಟಿಯಲ್ಲಿ ನೋಡುವುದಾದರೆ ೨೯ ಜನ ಗೂಂಡಾಗಳು, ಇಬ್ಬರು ಬೂಟ್ ಲೆಗ್ಗರ್ಸ್, ೭ ಮಂದಿ ಗ್ಯಾಂಬ್ಲರ್ಸ್, ಇಬ್ಬರು ಸ್ಲಂ ಗ್ಯಾಂಬ್ಲರ್ಸ್, ಇಬ್ಬರು ಕಳ್ಳಬಟ್ಟಿಗೆ ಪ್ರೋತ್ಸಾಹಿಸಿದವರು ಹೀಗೆ ಒಟ್ಟು ೪೨ ಜನರನ್ನು ಅರೆಸ್ಟ್ ಮಾಡಲಾಗಿತ್ತು. ಹೈಕೋರ್ಟ್ ಆದೇಶ ಆದಮೇಲೆ ಎಷ್ಟು ಜನರನ್ನು ಮಾಡಿದ್ದೀರಿ ಮತ್ತು ಹೈಕೋರ್ಟ್ ಆರ್ಡರ್ ಬರುವುದಕ್ಕೆ ಮುಂಚೆ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದಾರೆ. ಆ ವಿವರವನ್ನು ತರಿಸಿ ಕೊಡುತ್ತೇನೆ. ಒಂದಲ್ಲ ಒಂದು ಕಾರಣಕ್ಕೋಸ್ಕರ ಸಮಾಜಘಾತುಕ ಕೆಲಸ ಮಾಡತಕ್ಕವರು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ತಕ್ಕಂತೆ ಒಳ್ಳೆಯ ವಕೀಲರು ಇರುತ್ತಾರೆ. ಮನುಷ್ಯ ತಪ್ಪು ಮಾಡಿದ್ದರೂ ತಪ್ಪು ಮಾಡಿಲ್ಲವೆಂದು ವಾದ ಮಾಡುತ್ತಾನೆ. ಆದ್ದರಿಂದ ಸಮಾಜದಲ್ಲಿ ಜಿಲ್ಲಾ ರೀತಿಯ ಗೂಂಡಾಗಳನ್ನು ಪ್ರೋತ್ಸಾಹಿಸತಕ್ಕ ಜನ ಬರೀ ಪೊಲೀಸರು ಅಥವಾ ಸರ್ಕಾರ ಅಲ್ಲ. ಸ್ವಲ್ಪಮಟ್ಟಿಗೆ ಸಮಾಜದಲ್ಲಿ ಯಾವ ರೀತಿ ಜನ ಇದ್ದಾರೆ ಆ ರೀತಿ ಇಲ್ಲಿಯೂ ಹುಟ್ಟಿಕೊಳ್ಳುತ್ತಾರೆ. ಈ ಕಾಯಿದೆ ಮಾಡುವುದರ ಮೂಲಕ ಜನರಿಗೆ ಏನು ಅನಾನುಕೂಲವಾಗುತ್ತಿದೆ ಅದನ್ನು ತಪ್ಪಿಸಿ ಅವರಿಗೆ ನ್ಯಾಯವನ್ನು, ಶಾಂತಿ ಸಮಾಧಾನವನ್ನು ತಂದು ಜನಜೀವನ ತೃಪ್ತಿಯಿಂದ ನಡೆಯಲ್ಲಿ ಎಂದು ತಂದಿದ್ದೇವೆ. ಇದನ್ನು ತರುವುದರ ಮೂಲಕ ಪಕ್ಷದಲ್ಲಿ ವಿರೋಧವಾಗಿರತಕ್ಕವರಿಗೆ ಗೂಂಡಾಗಿರಿ ಕಾಯಿದೆಯಲ್ಲಿ ಹಾಕಬೇಕೆಂದು ಅಲ್ಲ. ಹಾಗಿದ್ದರೆ ಪ್ರತಿನಿತ್ಯ ಒಬ್ಬೊಬ್ಬರನ್ನು ತೆಗೆದುಕೊಂಡು ಹೋಗಿ

67



ಈ ಕಾಯಿದೆ ಪ್ರಕಾರ ಶಿಕ್ಷೆ ಮಾಡಬಹುದಾಗಿತ್ತು, ತೊಂದರೆಗೆ ಈಡುಮಾಡಬಹುದಾಗಿತ್ತು. ಆದರೆ ಆ ಕೆಲಸವನ್ನು ನಾನು ಮಾಡಿಲ್ಲವೆಂಬುದು ಅಂಕಿಅಂಶಗಳಿಂದ ಅರ್ಥವಾಗುತ್ತದೆ. ಈ ಕಾಯಿದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಾರೆಂಬ ಭಯ ಕೂಡ ಇಲ್ಲವೆಂಬುದು ಅಂಕಿಅಂಶಗಳಿಂದ ಅರ್ಥವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಮಾಡಿರಲಿಕ್ಕೆ ಇಲ್ಲ. ಕಾನೂನು ಇದ್ದರೆ ಆ ಮೇಲೆ ಯಾರಾದರೂ ಮಾಡಬಹುದಲ್ಲ.

ಶ್ರೀ ಬಿ. ರಾಚಯ್ಯ.—ನಾನು ಇರುವವರೆಗೆ ಅಸಮಾಧಾನಗೊಳ್ಳಬೇಕಾಗಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಿಮ್ಮೊಬ್ಬರ ಪ್ರಶ್ನೆ ಅಲ್ಲ. ಕಾನೂನು ಮಾಡಿದರೆ ಅದು ಶಾಶ್ವತವಾಗಿ ಇರತಕ್ಕದ್ದು. ನಾವು ಎಲ್ಲಿಯವರೆಗೆ ಒಪ್ಪಿಕೊಳ್ಳುತ್ತೇವೆ ಅಲ್ಲಿಯವರೆಗೆ ಇರತಕ್ಕದ್ದು. ಕಾನೂನು ಎಷ್ಟೇ ಒಳ್ಳೆಯದಿದ್ದರೂ ಅದು ಉಪಯೋಗ ಮಾಡುವವರ ಕೈಯಲ್ಲಿದೆ. ಕೆಟ್ಟ ರೀತಿಯಿಂದ ಮಾಡಿದರೆ ಕೆಟ್ಟದಾಗುತ್ತದೆ, ಒಳ್ಳೆಯ ರೀತಿಯಿಂದ ಮಾಡಿದರೆ ಒಳ್ಳೆಯದಾಗುತ್ತದೆ.

೩-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟಿನಲ್ಲಿ ಈ ತರಹ ಸಮಸ್ಯೆ ಬಂದಾಗ ನೆಹರೂ ಅವರು ಏನು ಹೇಳಿದರು ಎಂದರೆ, ಈ ತರಹ ಆಕ್ಟ್ ತರುವುದಕ್ಕೆ ಪ್ರಯತ್ನಪಟ್ಟಾಗ, ನಾನಿರುವವರೆಗೂ ಸರಿಯಾಗಿರುತ್ತದೆ ಎಂದು ಅವರು ಹೇಳಿದರು. ನೀವು ಹೋದಮೇಲೆ ಏನಾಗುತ್ತದೋ ಗೊತ್ತಿಲ್ಲ ಎಂದು ಎಲ್ಲರೂ ಅಭಿಪ್ರಾಯಪಟ್ಟಾಗ ನಾವು ಯಾವಾಗಲೂ ದೂರದೃಷ್ಟಿ ಇಟ್ಟುಕೊಂಡು ಕಾನೂನುಗಳನ್ನು ಮಾಡಬೇಕು, ಈ ಕಾನೂನನ್ನು ಮಾಡುವುದು ಬೇಡ ಎಂದು ತಿದ್ದುಪಡಿಯನ್ನು ತರದೆ ನಿಲ್ಲಿಸಿದರು. ಪರ್ಟಿಕ್ಯುಲರ್ ಆಗಿ ಗೂಂಡಾಗಳ ಬಗ್ಗೆ ಹೇಳುತ್ತಾ, ಈಗಿರುವ ಕಾನೂನನ್ನು ಸರಿಯಾಗಿ ಉಪಯೋಗಿಸಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂದು ಅವರು ಹೇಳಿದರು. ಮಾನ್ಯ ಮಂತ್ರಿಗಳು ಹೇಳುವುದು ದೊಡ್ಡ ಮಾತು. ಒಳ್ಳೆಯದು. ಆದರೆ ದುರುಪಯೋಗ ಪಡಿಸಿಕೊಳ್ಳುತ್ತಾರಲ್ಲ ಏನು ಮಾಡುವುದು ಆಗ?

ಶ್ರೀ ಬಿ. ರಾಚಯ್ಯ.—ನಾನಿರುವವರೆಗಾದರೂ ಸಂಪೂರ್ಣವಾಗಿ ಈ ಕಾನೂನನ್ನು ಜಾರಿಗೆ ಕೊಡಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ನಿಮಗೆ ಬೇರೆ ಪೋರ್ಟ್‌ಫೋಲಿಯೊ ಬಂದರೆ ಏನು ಮಾಡುವುದು? ಏನಾಗುತ್ತದೋ ಯಾರಿಗೆ ಗೊತ್ತು? ಮುಂದಿನ ದಿನವೇ ಅಮೆಂಡ್‌ಮೆಂಟ್ ತರುವುದಕ್ಕೆ ಸಾಧ್ಯವೆ?

ಶ್ರೀ ಬಿ. ರಾಚಯ್ಯ.—ಶ್ರೀನಿವಾಸ್ ಅವರು ಶಿಖಂಡಿ ಕೈಯಲ್ಲಿ ಕಾಯಿದೆ ಕೊಟ್ಟಿದ್ದೀರಿ, ಅದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಸಮಾಜದಲ್ಲಿ ಬಹಳ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು ಎಂದು ಕಾನೂನಿನಲ್ಲಿ ಏನೇನು ಅಡ್ಡಿಗಳಿವೆ ಅವನ್ನು ತಪ್ಪಿಸಿ ಒಳ್ಳೆಯದು ಮಾಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಈ ಕಾನೂನು ಹೊಸದಾಗಿ ತಂದಿಲ್ಲ. ಕಾಫಿ ಪೋಸಾ ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲೇ ಇದೆ. ಕಾಯಿದೆ ಮುಖಾಂತರ ಹೈಕೋರ್ಟಿಗೆ ತೆಗೆದುಕೊಂಡು ಹೋದಾಗ ಹೈಕೋರ್ಟಿನಲ್ಲಿ ಹೆಚ್ಚಿಗೆ ಒಪ್ಪಿಗೆಯಾದರೂ ಒಂದೆರಡು ಲೋಪದೋಷಗಳಿಂದ ವಜಾ ಮಾಡುವ ಸನ್ನಿವೇಶ ಬರುವ ಬದಲು ತಪ್ಪುಗಳನ್ನು ಸರಿಪಡಿಸಿ ಸಮಾಜಘಾತುಕರಿಗೆ ಕಾಯಿದೆ ಪ್ರಕಾರ ಶಿಕ್ಷೆ ವಿಧಿಸುವುದಕ್ಕೆ ಅಜ್ಞೆ ಮಾಡಲಿ ಎಂದು ತಂದಿದ್ದೇವೆ. ಈ ಕಾಯಿದೆ ಮುಖಾಂತರ ವಿರೋಧಪಕ್ಷದಲ್ಲಿರತಕ್ಕವರನ್ನು ಮತ್ತು ಅವರ ಸ್ನೇಹಿತರಾಗಿರತಕ್ಕವರನ್ನು ಹಿಡಿದು ಬಂಧನದಲ್ಲಿಡಬೇಕು, ತೊಂದರೆ ಕೊಡಬೇಕು ಎಂಬ ದುರುದ್ದೇಶ ನಿಜವಾಗಿ ಇಲ್ಲ. ಈ ತರಹ ಮಾಡಬೇಕೆಂದಿದ್ದರೆ ಅನೇಕ ಜನರನ್ನು ಒಳಗಡೆ ಹಾಕಬಹುದಾಗಿತ್ತು.

ಶ್ರೀ ಆರ್. ಎಸ್. ನಾಯಕ್.—ಹೇಗೆ ಹಾಕುತ್ತೀರಿ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ಯಾರೂ ಚರ್ಚೆಯ ಕಾಲದಲ್ಲಿ ವೈಯಕ್ತಿಕವಾಗಿ ನಮಗೆ ತೊಂದರೆ ಕೊಡುವುದಕ್ಕೋಸ್ಕರ ಈ ಕಾನೂನು ತಂದಿದ್ದೀರಿ ಎಂದು ಹೇಳಲೇ ಇಲ್ಲ. ಸಾಧ್ಯಾಸಾಧ್ಯತೆಯ ಬಗ್ಗೆ ಮಾತನಾಡಬೇಕಾದರೆ ಇಂಥ ಒಂದು ಕಾನೂನನ್ನು ಅನಾಮತ್ತಾಗಿ ಇಟ್ಟರೆ ಯಾರಾದರೂ ಹೇಗೆ ದುರುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಹೇಳಿದ್ದೇವೆಯೇ ವಿನಃ

ಕರ್ನಾಟಕ ವಿಧಾನಸಭೆ ಸಚಿವಾಲಯ ವಿಧಾನಸೌಧ, ಬೆಂಗಳೂರು



ನಮಗೆ ತೊಂದರೆ ಕೊಡುವುದಕ್ಕೆ ನೀವು ತಂದಿದ್ದೀರಿ ಎಂದು ಹೇಳಿಲ್ಲ. [illegible] ಆಪಾದನೆ ಏನು ಎಂದರೆ ನಿಮಗೆ ಯಾವ ಖಾತೆ ಕೊಟ್ಟರೂ ಏನೂ [illegible] ಈ ಕಾನೂನನ್ನು ಇಟ್ಟುಕೊಂಡೂ ಏನೇನೂ ನೀವು ಮಾಡಿಲ್ಲ. [illegible] ಮಾಡಿದ್ದು ಮೂರು ನಾಲ್ಕು ಜನರನ್ನು. ಇನ್ನು ೧೫–೨೦ ಜನರನ್ನು [illegible] ದ್ದೀರಿ. ಇಡೀ ರಾಜ್ಯದಲ್ಲಿ ನಿಮಗೆ ಸಿಕ್ಕಿದ್ದೇ ೨೫ ಗೂಂಡಾಗಳು ಎಂದರೆ, [illegible] ಇದ್ದ ಮೇಲೆ ನಿಮಗೆ ಕಾನೂನು ಏತಕ್ಕೆ ಎಂದು ಕೇಳಿದ್ದೇವೆ. ನಮ್ಮನ್ನು [illegible] ಹಾಕಿದ್ದರೂ ಏನೋ ಕೆಲಸ ಮಾಡಿದ್ದೀರಿ ಎಂದುಕೊಳ್ಳುತ್ತಿದ್ದೆವು. [illegible] ಹಿಡಿಯುವುದು ಮರೆತುಹೋಯಿತು. ತಪ್ಪಾಯಿತು ಎಂದು ಹೇಳ[illegible] ಯಾರನ್ನೂ ಹಿಡಿದು ಒಳಗೆ ಹಾಕುವುದಿಲ್ಲ. ಅಂದಮೇಲೆ ನಿಮಗೆ ಕಾನೂನು [illegible] "ಏವಾರಿಕೆ ಗರ್ವವೂ ಇಲ್ಲ, ವಿದ್ಯೆಯೂ ಇಲ್ಲ" ಎಂದು ಹೇಳಿದಹಾಗೆ [illegible] ಮಾಡುತ್ತಿಲ್ಲ, ಜನರಿಗೆ ನ್ಯಾಯವನ್ನೂ ಮಾಡುತ್ತಿಲ್ಲ. ೧೦೦೦ ಜನ ಗೂಂಡಾಗಳನ್ನು ಹಿಡಿದು [illegible] ಹಾಕಿ ೧೦–೧೫ ಜನರನ್ನು ಸಂಭಾವಿತರು ಎಂದು ಬಿಟ್ಟಿದ್ದರೂ ಪರವಾಗಿರಲಿಲ್ಲ. ಗೂಂಡಾಗಳನ್ನು ಹಿಡಿದು ಒಳಗೆ ಹಾಕುತ್ತಿಲ್ಲ. ಹಾಗಿದ್ದರೆ ನಿಮಗೆ ಕಾನೂನು ಏತಕ್ಕೆ ಬೇಕು?

ಶ್ರೀ ಬಿ. ರಾಚಯ್ಯ.—ಒಂದಲ್ಲ ಒಂದು ಕಾರಣಕ್ಕೆ ಅವರನ್ನು ಈಚೆಗೆ ಬಿಟ್ಟಿದ್ದಾರೆ. ಹೈಕೋರ್ಟಿನಲ್ಲಿ ಎಲ್ಲ ಕಾರಣಗಳು ಸರಿಯಾಗಿದ್ದರೆ ಮಾತ್ರ ಅಪ್ರೂವ್ ಮಾಡುತ್ತೇವೆಂದು ಹೇಳಿದ್ದರಿಂದ ಒಂದಲ್ಲ ಒಂದು ಕಾರಣದಿಂದ ಅವರು ಕೇಸುಗಳನ್ನು ವಜಾ ಮಾಡುತ್ತಾ ಇದ್ದುದರಿಂದ ಸ್ವಲ್ಪ ಅಧೈರ್ಯ ಬಂತು. ಕಾನೂನು ಜಾರಿ ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಈ ಕಾಫಿಪೋಸಾದಲ್ಲಿ ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲಿ ಇರತಕ್ಕ ಪ್ರಾವಿಷನ್ ಅನ್ನೇ ಇದರಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ. ಈ ರೀತಿ ಮಾಡುವುದರಿಂದ ಸ್ವಲ್ಪಮಟ್ಟಿಗೆ ಕ್ರಮ ತೆಗೆದುಕೊಳ್ಳಲು ಧೈರ್ಯ ಬರುತ್ತದೆ, ಹೆಚ್ಚಾಗಿ ಕ್ರಮ ತೆಗೆದುಕೊಳ್ಳಲು ಅವಕಾಶವಾಗುತ್ತದೆ ಎಂದು ಮಾಡಿದ್ದೇವೆ. ಇದನ್ನು ಒಬ್ಬ ಸಬ್-ಇನ್ಸ್‌ಪೆಕ್ಟರ್ ಕೈಯಲ್ಲಾಗಲೀ ಅಥವಾ ಇನ್ಸ್‌ಪೆಕ್ಟರ್ ಕೈಯಲ್ಲಾಗಲೀ ಕೊಡುವುದಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್ ಕೈಯಲ್ಲಿ ಕೊಡುತ್ತಿದ್ದೇವೆ. ಮತ್ತು ಬೆಂಗಳೂರು ನಗರದ ಕಮೀಷನರ್ ಅವರ ಕೈಯಲ್ಲಿ ಕೊಡುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಕ್ರೈಮ್‌ಗಳು ಹೆಚ್ಚಾಗುತ್ತಿವೆ ಎಂದು ಶ್ರೀನಿವಾಸ್ ಅವರು ಉಲ್ಲೇಖಿಸಿದರು. ಅದು ನಿಜ. ಇವರೆಲ್ಲರೂ ಹೊರಗಡೆ ಇದ್ದಾಗ ಸ್ವಾಭಾವಿಕವಾಗಿ ಆಗಿಯೇ ಆಗುತ್ತದೆ.

ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಇದು ಒಂದು ಕಾರಣವಾಗಬಹುದು. ಆದರೆ ಕ್ರಿಮಿನಲ್ ಸೆಕ್ಷನ್ ೧೫೧ರ ಪ್ರಕಾರ ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಬಹುದು. ೨೪ ಗಂಟೆಗಳವರೆಗೆ ಇಟ್ಟುಕೊಂಡು ಮುಂದಿನ ದಿವಸ ಅವರನ್ನು ಮ್ಯಾಜಿಸ್ಟ್ರೇಟರ್ ಮುಂದೆ ಹಾಜರುಪಡಿಸಿ ಜ್ಯುಡಿಷಿಯಲ್ ಕಸ್ಟಡಿಗೆ ಒಪ್ಪಿಸಬಹುದು. ಅದನ್ನು ಬಿಟ್ಟರೆ ೧೦೭,೧೦೯ ಹಾಗೂ ೧೧೦ನೇ ಸೆಕ್ಷನ್ ಪ್ರಕಾರ ಕೂಡ ಇಂತಹ ಸಾಹಸಗಾರರನ್ನು ಕಸ್ಟಡಿಗೆ ತೆಗೆದುಕೊಂಡು ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು. ಈ ರೀತಿಯ ಕಾಯಿದೆಗಳೂ ಇವೆ. ಹೊಸ ಹೊಸದಾಗಿ ತಪ್ಪುಗಳನ್ನು ಮಾಡುತ್ತಿದ್ದಾರೆ. ಅದಕ್ಕನುಗುಣವಾಗಿ ನಾವೂ ಕೂಡ ಯೋಚನೆ ಮಾಡದಿದ್ದರೆ ಮತ್ತು ಇಂತಹ ಕಾಯಿದೆಗಳನ್ನು ಜಾರಿಗೆ ತರದಿದ್ದರೆ ತೊಂದರೆಯಾಗುತ್ತದೆ. ಆದ್ದರಿಂದಲೇ ಇಂತಹ ಕಾನೂನುಗಳನ್ನು ಜಾರಿಗೆ ತಂದು ಇಂತಹ ದುಷ್ಟ ಜನಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡರೆ ಒಳಿತು. ಯಾವುದೇ ಒಂದೇ ಒಂದು ಕಾರಣಕ್ಕೋಸ್ಕರ ವಜಾ ಮಾಡುತ್ತಿದ್ದರು. ಆದರೆ ಒಂದೇ ಕಾರಣ ಇದ್ದರೂ ಅಂತಹವರನ್ನು ಬಿಡುಗಡೆ ಮಾಡಬಾರದು ಎಂಬುವಂತಹ ತಿದ್ದುಪಡಿಯನ್ನು ಇದರಲ್ಲಿ ತಂದಿದ್ದೇವೆ. ಇರುವಂತಹ ಎಲ್ಲಾ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ಇಂತಹ ಸಮಾಜಘಾತುಕ ಶಕ್ತಿಗಳನ್ನು ದಮನಮಾಡುವುದಕ್ಕೆ ಏನೇನು ಅವಶ್ಯಕವಾಗಿ ಮಾಡಬೇಕೋ ಆ ರೀತಿ ಎಲ್ಲ ಕಾನೂನುಗಳನ್ನು ತರುತ್ತಿದ್ದೇವೆ. ಆದ್ದರಿಂದ ಇದಕ್ಕೆ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವುದೇ ಒಂದು ಕಾರಣ ಇದ್ದರೂ ಅದನ್ನು ಒಪ್ಪಬೇಕು ಅಂತ ಹೇಳುವುದರಿಂದ ತಮ್ಮ ಉದ್ದೇಶ ಸಾಧನೆಯಾಗುವುದಿಲ್ಲ. ಕಾರಣ ಕೂಡ ಬಹಳಷ್ಟು ಬೇಗ ಆಗಿದೆ. ಪುಟ ೬ರಲ್ಲಿ ೬(ಎ)ಗೆ ತಿದ್ದುಪಡಿಯನ್ನು ತರುತ್ತಿದ್ದೀರಿ. ಅದು ಕಾರಣ ಇಲ್ಲದಿದ್ದರೂ ಕಾರಣ ಅಂತ ಪರಿಗಣಿಸಬೇಕು, ಆ ತರಹದ ಕಾನೂನು ಇದೆ. Non cognisance ರೀಸನ್ ಇದ್ದರೂ non-existent ರೀಸನ್ ಎಂಬುದಾಗಿ ತಿಳಿದುಕೊಳ್ಳಬೇಕು ಎಂಬ ಅರ್ಥ ಬರುತ್ತದೆ.

ಅವರ ಪ್ರೊಟೆಕ್ಷನನ್ನು ತಾವು ತೆಗೆದುಕೊಂಡಿದ್ದೀರಿ. ವೇಗ್ ಆಗಿ ಇದ್ದರೂ ವೇಗ್ ಅಲ್ಲ ಅಂತ ತಿಳಿದು ಕೊಳ್ಳಬೇಕು, ನಾಟ್ ರಿಲೆವೆಂಟ್ ಆಗಿದ್ದರೂ ಇಟ್ ಈಸ್ ರಿಲೆವೆಂಟ್ ಅಂತ ತಿಳಿದುಕೊಳ್ಳಬೇಕು, ಮನುಷ್ಯನಿಗೆ ಸಂಬಂಧಪಟ್ಟ ಒಂದು ಆಪಾದನೆ ಇಲ್ಲದಿದ್ದರೂ ಆ ಮನುಷ್ಯನಿಗೆ ಸಂಬಂಧಪಟ್ಟ ಆಪಾದನೆ ಅಂತ ತಿಳಿದುಕೊಳ್ಳಬೇಕು ಅಂತ ಅರ್ಥ ಬರುತ್ತದೆ. ಇದು ನನಗೆ ಅರ್ಥವಾಗಲಿಲ್ಲ. ಮೊದಲ ಕ್ಲಾಸ್ ಏನಿದೆ ಅದನ್ನು ಇಟ್ಟುಕೊಳ್ಳಿ.

You have said :—"Such order shall not be deemed to be invalid or inoperative merely because one or some of the grounds is or are,-

(i) Vague;

(ii) non-existent;

(iii) non-relevant;

(iv) not connected or not proximately connected with such person, (v) invalid for any other reason what soever;"

ಏನು ಸಂಬಂಧ ಇಲ್ಲದಿದ್ದರೂ, ಯಾವುದೇ ಆಪಾದನೆ ಇಲ್ಲದಿದ್ದರೂ, ಕೂಡ ಅದನ್ನು ಸಂಬಂಧ ಇದೆ, ಆಪಾದನೆಯನ್ನು ಒಪ್ಪಿಕೊಳ್ಳಬೇಕು ಇದರ ಪ್ರಕಾರ. ಇದರಿಂದ ದೊಡ್ಡ ಅನಾಹುತಕ್ಕೆ ಕಾರಣವಾಗ ಬಹುದು. ತಿದ್ದುಪಡಿಯನ್ನು ಮಾಡತಕ್ಕಂತಹ ಆಲೋಚನೆ ಮಾಡಿರತಕ್ಕಂತಹದ್ದು ಒಳ್ಳೆಯದು. ಸೆಕ್ಷನ್ ೬ ಏನಿದೆ ಅದು ಸರಿಯಾಗಿದೆ. ಆದರೆ ಸೆಕ್ಷನ್ ೬(ಎ) ಏನಿದೆ ಅದರಿಂದ ಬಹಳ ಅನಾಹುತವಾಗ ಬಹುದು. ಪ್ರಕರಣಕ್ಕೆ ಕಾರಣಕರ್ತರಾಗಿಲ್ಲದಿದ್ದರೂ ಅಂತಹವರನ್ನು ಬಂಧಿಸಬಹುದು. ಇಟ್ ಕ್ರಿಯೇಟ್ಸ್ ಲಾಟ್ ಆಫ್ ಪ್ರಾಬ್ಲಂ. ಅದನ್ನು ಆಲೋಚನೆ ಮಾಡಿ. ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಬೇಕಾದರೂ ಪೋಲೀಸ್‌ನವರ ಮೇಲೆ ಮೊದಲು ವರದಿ ಬರಬೇಕು They can book in a create lot of problems; ಪೋಲೀಸಿನವರ ವರದಿ ಇಲ್ಲದಿದ್ದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಯಾವ ಉಕ್ಕುಂನ್ನು ಮಾಡುತ್ತಾನೆ? ಸಾರಾಸಗಟು ಇದನ್ನು ದುರುಪಯೋಗ ಪಡಿಸತಕ್ಕಂತಹ ಒಂದು ಅಸ್ತ್ರವನ್ನು ಪೋಲೀಸ್ ನವರ ಕೈಗೆ ಕೊಡುತ್ತಿದ್ದೀರಿ. ಇದನ್ನು ಯಾವ ಜಿಲ್ಲಾಧಿಕಾರಿ ಹಾಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಟ್ಟುಕೊಳ್ಳುವುದಿಲ್ಲ. ಸೆಕ್ಷನ್ ೬(೧)(ಎ) ೧ ರಿಂದ ೪ರವರೆಗೆ ಏನು ಇದೆ, ಅದನ್ನು ತಿದ್ದುಪಡಿ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಇದು ಬಹಳ ಅನಾಹುತಕ್ಕೆ ಕಾರಣವಾಗುತ್ತದೆ. ಅಥವಾ ಅದನ್ನು ತಾವೂ ಸ್ಪಷ್ಟೀಕರಣಗೊಳಿಸಬೇಕು. ಮೋರ್‌ದೆನ್ ಒಂದು ಗ್ರೌಂಡ್ಸ್ ಅಂತ ಇರುವುದು ಒಳ್ಳೆಯದು. ಇನ್ನಿತರ ೨-೩ ಗ್ರೌಂಡ್ಸ್ ವೇಗ್ ಆಗಿದ್ದರೂ ಪರವಾಯಿಲ್ಲ.

If any one of the grounds is proved, it is valid. If it is like that, then only it is save, otherwise, it is not fool-proof.

ಶ್ರೀ ಬಿ. ರಾಚಯ್ಯ.—ಅವರು ಹೇಳಿದಮೇಲೆ ನನಗೂ ಡೌಟ್ ಬಂದಿದೆ. ಆದರೆ ಕಾಫಿ ಪೋಸಾ ಆಕ್ಟ್‌ನಲ್ಲಿ ಹೇಗೆ ಇದೆಯೋ ಅದನ್ನು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮದು ಸದುದ್ದೇಶ ಇದೆ. ಇದು ಮೊದಲೇ ಬರಬೇಕಾ ಗಿತ್ತು. ಯಾರು ಹೊರಗಡೆ ಬಂದರು ಅವರೇ ಹೆಚ್ಚು ಸತ್ತರು. ಗೂಂಡಾಗ್ ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ಸತ್ತರು. ಇದು ಮೊದಲೇ ಬಂದಿದ್ದರೆ ಅವರನ್ನು ನೀವು ಸೇವ್ ಮಾಡಬಹು ದಾಗಿತ್ತು. ತಮ್ಮ ಉದ್ದೇಶ ಇವತ್ತು ಸಫಲವಾಗಬೇಕು. ಇವತ್ತು ೬(ಎ) ಸಬ್‌ಕ್ಲಾಸ್ (೧) ಏನಿದೆ ಅದರಿಂದ ಸಫಲವಾಗುತ್ತದೆ. ಸಮಾಜದ ದೃಷ್ಟಿಯಿಂದ ವ್ಯಾಪಕವಾದ, ಸಮಗ್ರವಾದ ಕಾನೂನು ಮಾಡಿದರೆ ಅದು ಸಾಧ್ಯವಾಗುತ್ತದೆ. ತಾವು ಈಗ ಏನು ಮಾಡಬಹುದು ಎಂದರೆ even the third or fourth ground etc. they are not irrelevent. If this one charge is proved that is adequate. ಕಾಫಿ ಪೋಸಾಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. That has got a national objective. It has got a localised objective. ಮತ್ತೆ ಯಾವುದೇ ಉದ್ದೇಶದಿಂದ ಮಾಡಿದ್ದೀರೋ ಅದು ಸಫಲವಾಗು



ವುದಿಲ್ಲ. ಯಾವ ಕಾಂಟೆಸ್ಟ್‌ನಲ್ಲೂ ಅದನ್ನು ಸೇರಿಸುವುದಕ್ಕಾಗುವುದಿಲ್ಲ. Even the amendment may be struck down by the High Court and this may be grossly misused by the implementing authorities. ಇದನ್ನು ತಾವು ಪುನಃ ಆಲೋಚನೆ ಮಾಡಬೇಕು. ಇದನ್ನು ನಾಳೆ ತನ್ನಿ. By merely reproducing what was contained in the COFEPOSA will not adequately arm you to deal with the situation. It has got to arm you with certain weapons which weapons will have to be properly used. ಅಷ್ಟು ಸಾಧನೆ ಇಲ್ಲದೇ ಇದ್ದರೆ, ಬೈ ಮಿಯರ್ಲಿ ಇದನ್ನು ಹಾಕುವುದರಿಂದ ಸಂಪೂರ್ಣ ತೀಕ್ಷ್ಣತೆ ಏನು ಬರಬೇಕೋ ಅದು ಹೋಗಿಬಿಟ್ಟರೆ ಏನಾಗುತ್ತದೆಂದು ಆಲೋಚನೆ ಮಾಡಿ.

ಶ್ರೀ ಬಿ. ರಾಚಯ್ಯ.—ನ್ಯಾಷನಲ್ ಸೆಕ್ಯುರಿಟಿ ಆಕ್ಟ್‌ನಲ್ಲಿ ಈ ಒಂದು ಕ್ಲಾಸ್ ಇದೆ. COFEPOSA ದಲ್ಲೂ ಕೂಡಾ ಇದು ಇದೆ. ಆದುದರಿಂದ ಇದು omnipotent ಆಗಿರುವುದ ರಿಂದ ಯಾವುದಾದರೂ ಒಂದು ಗ್ರೌಂಡ್‌ನಲ್ಲಿ ಹೋದರೂ ಕೂಡಾ ಈ ಕಾಯ್ದೆಯಲ್ಲಿ ತಪ್ಪಿಸಿಕೊಳ್ಳು ವುದಕ್ಕೆ ಅವಕಾಶ ಇಲ್ಲದೆ ಇರಲಿ ಎಂದು ಇದನ್ನು ತಂದಿದ್ದೇವೆ. ಈ ಕಾಯ್ದೆ ಮುಂದೆ ಮಿಸ್‌ಯೂಸ್ ಆಗುವುದು ಕಂಡುಬಂದರೆ ಮುಂದೆ ತಿದ್ದುಪಡಿಯನ್ನು ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜು ಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ಎರಡರಿಂದ ನಾಲ್ಕರವರೆಗೆ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ—"ಖಂಡ ಎರಡರಿಂದ ನಾಲ್ಕನೇ ಖಂಡಗಳು—ವಿಧೇಯಕದ ಅಂಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(೨ರಿಂದ ೪ರವರೆಗಿನ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ......

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ 'ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಪ್ರಸ್ತಾವವನ್ನು ಅಂಗೀಕರಿಸುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಳು ವಿಧೇಯಕದ ಅಂಗವಾದುವು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ರಾಚಯ್ಯ.—೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು ಔಷಧ ಅಪರಾಧಿಗಳು ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೭ ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇದ) ವಿಧೇಯಕ.

## ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇದ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗಾಗಲೇ ನಮ್ಮ ಕೇಂದ್ರ ಸರ್ಕಾರ ಪಕ್ಷಾಂತರ ನಿಷೇದ ಮಸೂದೆಯನ್ನು ಜಾರಿಗೆ ತಂದು ಅದು ಈಗಾಗಲೇ ಜಾರಿಯಲ್ಲಿದೆ. ಆ ಮಸೂದೆ ಲೋಕಸಭಾ ಸದಸ್ಯರುಗಳಿಗೆ ಹಾಗೂ ಶಾಸಕರುಗಳಿಗೆ ಅನ್ವಯವಾಗುತ್ತದೆ. ಆ ದಿಕ್ಕಿನಲ್ಲಿಯೇ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಗಳು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸದಸ್ಯರುಗಳು ಪಕ್ಷಾಂತರ ಮಾಡಬಾರದು ಎನ್ನುವ ಉದ್ದೇಶದಿಂದ ಆಧ್ಯಾದೇಶವನ್ನು ಹೊರಡಿಸಲಾಗಿದೆ. ಅದನ್ನು ಈಗ ಮಸೂದೆಯ ರೂಪದಲ್ಲಿ ಇಟ್ಟಿದ್ದೇವೆ. ಲೋಕಸಭಾ ಸದಸ್ಯರುಗಳಿಗೆ ಅನ್ವಯವಾಗುವ ರೀತಿಯಲ್ಲಿಯೇ ಹೆಚ್ಚು ಕಡಿಮೆ ಎಲ್ಲಾ ನಿಯಮಗಳನ್ನು ಅಳವಡಿಸಲಾಗಿದೆ. ಒಂದು ಪಕ್ಷದ ಸದಸ್ಯರು ಮೂರನೇ ಒಂದು ಭಾಗದಷ್ಟು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ ಅದು ಆ ಪಕ್ಷದ ಒಂದು ಭಾಗವಾಗುತ್ತದೆನ್ನುವುದು ಸಂಸತ್ತಿನ ವಿಧೇಯಕದಲ್ಲಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳು ಇರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಹೆಚ್ಚು ಸದಸ್ಯರುಗಳು ಇರುವುದಿಲ್ಲ. ಆದ್ದರಿಂದ ಶೇಕಡ ೫೦ರಷ್ಟು ಸದಸ್ಯರು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ. ಆ ಪಕ್ಷದ ಒಂದು ಭಾಗವಾಗುತ್ತದೆ. ಅಷ್ಟನ್ನು ಮಾತ್ರ ಇಲ್ಲಿ ಅಳವಡಿಲಸಾಗಿದೆ. ಸ್ವತಂತ್ರವಾಗಿ ಚುನಾಯಿತನಾದ ಒಬ್ಬ ಸದಸ್ಯನಿಗೂ ಸಹ ಪಕ್ಷಾಂತರ ನಿಷೇದ ಮಸೂದೆ ಅನ್ವಯವಾಗುತ್ತದೆ. ನಾಮ /ನಿರ್ದೇಶನ ಹೊಂದಿದವರಾಗಲೀ ಪಕ್ಷೇತರ ಅಭ್ಯರ್ಥಿಗಳಾಗಲೀ ಯಾವುದೇ ಒಂದು ಪಕ್ಷಕ್ಕೆ ಸೇರಿಕೊಳ್ಳಲು ಆರು ತಿಂಗಳುಗಳ ಕಾಲ ಕಾಲಾವಕಾಶ ಇರುತ್ತದೆ. ಆರು ತಿಂಗಳು ಆದಮೇಲೆ ಪಕ್ಷಾಂತರ ಮಾಡಿದರೆ ಆತ ಅನರ್ಹನಾಗುತ್ತಾನೆ ಎನ್ನುವ ಅಂಶಗಳನ್ನು ಅಳವಡಿಸಿ ಮಸೂದೆಯನ್ನು ತರಲಾಗಿದೆ. ಪಕ್ಷೇತರರು ಆದರೂ ಕೂಡ ಅವರು ಇಷ್ಟಬಂದ ಹಾಗೆ ಪಕ್ಷಗಳನ್ನು ಬದಲಾಯಿಸುವ ಹಾಗೆ ಇಲ್ಲ. ಯಾವುದೇ ಪಕ್ಷಕ್ಕೆ ಸೇರಬೇಕಾದರೆ ಆರು ತಿಂಗಳೊಳಗೆ ಸೇರಿಕೊಳ್ಳಬಹುದು. ಸ್ವತಂತ್ರವಾಗಿರುವುದು ಅಭಿಪ್ರಾಯ ಪಟ್ಟರೆ ಆರು ತಿಂಗಳಲ್ಲಿ ಒಪ್ಪಿಗೆ ಕೊಡಬೇಕೆಂದು ಇದೆ. ಇಷ್ಟು ಇದರಲ್ಲಿ ಇದೆ. ಇದಕ್ಕೆ ಸಭೆಯ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಎಲ್ಲಾ ಹೋಲ್‌ಸೇಲ್ ಆಗಿ ಆಗಬೇಕು. ರಿಟೈಲ್ ಆಗಿ ಅಲ್ಲ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಒಂದು ಕಾನೂನನ್ನು ಮಾಡಬೇಕೆಂಬ ಉದ್ದೇಶದಿಂದ ಪಕ್ಷಾಂತರ ನಿಷೇಧ–ಈ ಒಂದು ಕಾನೂನು ಅನ್ವಯವಾಗತಕ್ಕಂಥಾದ್ದು. ಇಲ್ಲಿ ಮುನಿಸಿಪಾಲಿಟಿ, ಪುರಸಭೆಗಳಲ್ಲಿ ಇರತಕ್ಕಂಥ ಸದಸ್ಯರಿಗೆ ಸಂಬಂಧ ಬರುತ್ತದೆ. ಆಮೇಲೆ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅದು ಮತ್ತು ಮುನಿಸಿಪಾಲಿಟಿಗಳ ಅಧಿನಿಯಮಗಳ ಪ್ರಕಾರ ಬರತಕ್ಕದ್ದು ಹಾಗೂ ಚುನಾಯಿತರಾದಂಥ ಅಥವಾ ನಾಮನಿರ್ದೇಶಿತ ಸದಸ್ಯರಿಗೆ ಸಂಬಂಧಪಟ್ಟಹಾಗೆ ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತು. ಇದೊಂದು ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ಸಂಬಂಧಪಟ್ಟಿರತಕ್ಕಂಥ ಒಂದು ಕಾನೂನು. ಇದರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.





ಮೂಲಭೂತವಾದ ನೀತಿ ಏನಿದೆ, ಇದನ್ನು ನಾವು ಎಲ್ಲರೂ ಒಪ್ಪಿಕೊಳ್ಳಬೇಕು. ನಾನು ಇದನ್ನು ಸ್ವಾಗತ ಮಾಡುತ್ತೇನೆ. ನಾವು ಇಲ್ಲಿ ಮೊದಲಬಾರಿಗೆ ಮಾಡುತ್ತಿಲ್ಲ. ಈ ಒಂದು ವಿಷಯದ ಬಗ್ಗೆ ಚರ್ಚೆ ಈ ಸದನದಲ್ಲಿ ಮತ್ತೊಂದು ಬಹಳ ಶೀಘ್ರವಾಗಿ ಈ ಒಂದು ಕಾನೂನನ್ನು ತರತಕ್ಕ ಒಂದು ಪ್ರಯತ್ನವನ್ನು ನಿಮ್ಮ ಮಾಡಿದ್ದರು. ಶಾಸನಸಭಾ ಸದಸ್ಯರಿಗೆ, ಅಥವಾ ವಿಧಾನ ಪರಿಷತ್ತು ಹಾಗೂ ಸದಸ್ಯರುಗಳಿಗೆ ಸಂಬಂಧಪಟ್ಟಂತೆ ಕಾನೂನು ತರತಕ್ಕಂಥ ಒಂದು ತರಾತುರಿಯ ಪ್ರಯತ್ನ ಸಭೆಯಲ್ಲಿ ನಡೆದಿತ್ತು. ಆಗ ನಾವು ಒಂದು ಅಭಿಪ್ರಾಯವನ್ನು ಕೊಟ್ಟಿದ್ದೆವು. ಈ ಮಾಡತಕ್ಕಂಥ ಹಕ್ಕು, ಶಕ್ತಿ ಕಾನೂನು ಪ್ರಕಾರ ಅದು ಸಂಸತ್ತಿಗೆ ಇದೆಯೇ ವಿನಹ ನಿಮಗೆ ಆ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೆವು. ಆದರೆ ಈ ಪ್ರಶ್ನೆ ಈಗ ನಮ್ಮ ಇಲ್ಲ. ಕೇಂದ್ರ ಸರ್ಕಾರದವರು ಈ ವಿಚಾರ ಮಾಡಿ, ಪೂರ್ವ ಪೀಠಿಕೆಯಲ್ಲಿ ಹೇಳಿದ ಹಾಗೆ ಕಾನೂನನ್ನು ತಂದಿದ್ದಾರೆ. ಅದು ರಾಷ್ಟ್ರಾದ್ಯಂತ ಜಾರಿಯಲ್ಲಿದೆ. ಸಂಸತ್ ಸದಸ್ಯರಿಗೆ ಸಂಬಂಧಪಟ್ಟ ಹಾಗೆ ಮತ್ತು ಶಾಸನ ಸಭೆಗಳಿಗೆ ಸಂಬಂಧಪಟ್ಟಹಾಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಸೇರಿದಹಾಗೆ ಈಗಾಗಲೇ ಈ ಕಾನೂನು ನಮ್ಮ ರಾಷ್ಟ್ರದಲ್ಲಿ ಜಾರಿಯಲ್ಲಿದೆ. ಈ ಮಸೂದೆ ಕೂಡ ಆ ದಿಸೆಯಲ್ಲಿ ನಡೆದಿದೆ. ಇಲ್ಲಿ ನೀವು ಕೆಲವು ಮಸೂದೆಗಳ ಜೊತೆಯಲ್ಲೇ ಈ ಸದನದ ಒಪ್ಪಿಗೆಗೆ ತಂದಿರತಕ್ಕಂಥ ಒಂದು ಮಸೂದೆ. ಈ ನೀತಿಯನ್ನು ನಾವು ಏತಕ್ಕೆ ಒಪ್ಪುತ್ತೇವೆ ? ಮಾನ್ಯ ಮತದಾರರು ತಮಗೆ ಇರತಕ್ಕಂಥ ಹಕ್ಕನ್ನು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಒಬ್ಬ ವ್ಯಕ್ತಿಗೆ ಅಥವಾ ಪಕ್ಷಕ್ಕೆ ಅಧಿಕಾರವನ್ನು ಕೊಡುತ್ತಾರೆ, ಅದರ ಬಗ್ಗೆ ಒಂದು ವ್ಯವಸ್ಥೆಯನ್ನು ನಾವು ಇಟ್ಟಿರಬೇಕು ಎನ್ನುವಂತಾದ್ದು ಇಲ್ಲಿಯ ಉದ್ದೇಶ. ಅವರು ಕೊಡತಕ್ಕಂಥ ಮತ ಅದು ಬಹುಮತವಾಗುತ್ತದೋ ಅಥವಾ ಅಲ್ಪಮತ ಆಗುತ್ತದೆಯೋ ಅಥವಾ ಪಕ್ಷೇತರರು ಅಂದರೆ ಪಕ್ಷಗಳಿಗೆ ಸಂಬಂಧಪಡದೇ ಇರತಕ್ಕಂಥ ವ್ಯಕ್ತಿಗಳಿಗೋ ಎನ್ನುವಂಥಾದ್ದು ಎಲ್ಲಾ ವಿಚಾರಗಳು ಇಲ್ಲಿ ಒಳಗೊಂಡಿರುತ್ತವೆ. ನಮ್ಮ ರಾಜ್ಯಾಂಗದ ಹಾಗೂ ರೆಪ್ರೆಸೆಂಟೇಶನ್ ಆಫ್ ಪೀಪಲ್ಸ್ ಆ್ಯಕ್ಟ್ ಪ್ರಕಾರ. ಪಕ್ಷ ರಹಿತವಾಗಿ ಇರತಕ್ಕಂಥ ವ್ಯವಸ್ಥೆಯನ್ನು ನಾವು ಇಟ್ಟಿದ್ದೇವೆ. ಇಲ್ಲದೇ ಹೋದರೆ, ಸ್ವತಂತ್ರ ವ್ಯಕ್ತಿಗಳು, ಪಾರ್ಲಿಮೆಂಟಿಗೆ, ವಿಧಾನಸಭೆಗೆ, ಮಂಡಲ್ ಪಂಚಾಯಿತಿಗೆ, ಜಿಲ್ಲಾಪರಿಷತ್ತಿಗೆ ನಾವು ವಿಚಾರ ಮಾಡತಕ್ಕಂಥ ಪ್ರಮೇಯ ಬರುತ್ತಲೇ ಇರಲಿಲ್ಲ. ೧೯೭೭ಕ್ಕಿಂತ ಮುಂಚೆ ಕಾಂಗ್ರೇಸ್ ಪಕ್ಷಕ್ಕೆ ಪಾರ್ಲಿಮೆಂಟ್‌ನಲ್ಲಿ ಬಹುಮತ ಬಂತು. ೧೯೭೭ರಲ್ಲಿ ಜನತಾ ಪಕ್ಷಕ್ಕೆ ಬಹುಮತ, ಬಂತು ಕಾಂಗ್ರೆಸ್ ಪಕ್ಷ ಜನತಾ ಪಕ್ಷ, ಬಿ.ಜೆ.ಪಿ. ಮತ್ತು ಕಮ್ಯೂನಿಸ್ಟ್ ಪಕ್ಷ ಹೀಗೆ ನೂರೆಂಟು ಪಕ್ಷಗಳು ಇವೆ. ಒಂದು ವೇಳೆ ಪಾರ್ಲಿಮೆಂಟ್ ಅಥವಾ ಶಾಸನಸಭೆಗಳಿಗೆ ಬಹುಮತ ಯಾವುದೇ ರಾಜಕೀಯ ಪಕ್ಷಗಳಿಗೆ ಬರದೇ ಸ್ವತಂತ್ರ ಅಭ್ಯರ್ಥಿಗಳೇ ಬಂದರೇ ? ಇವತ್ತು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಬಂದಿಲ್ಲ ಹಾಗೆಯೇ ಕೆಲವು ಮಂಡಲ್ ಪಂಚಾಯತ್‌ಗಳಲ್ಲೂ ಪಕ್ಷಗಳಿಗೆ ಬಹುಮತ ಬಂದಿಲ್ಲ. ನಾವು ಯಾವುದೇ ಗುರುತು ಹಾಕಿಕೊಂಡು ಪ್ರಚಾರ ನಡೆಸಿದರೂ ಬಂದಿಲ್ಲ. ರೈತನ ಗುರುತು ಹಸ್ತದ ಗುರುತು ಹೂವಿನ ಗುರುತು ಹೀಗೆ ಯಾವುದೇ ಚಿಹ್ನೆ ಹಾಕಿಕೊಂಡರೂ ಕೆಲವು ಮಂಡಲ್ ಪಂಚಾಯತ್‌ಗಳಲ್ಲಿ ಬಹುಮತ ಬಂದಿಲ್ಲ. ಸ್ವತಂತ್ರರಾಗಿ ಗೆದ್ದಿರತಕ್ಕ ಪಕ್ಷೇತರ ಅಭ್ಯರ್ಥಿಗಳು ಗೆದ್ದು ಬಂದಿದ್ದಾರೆ, ಅವರು ಇವತ್ತು ಸದಸ್ಯರಾಗಿದ್ದಾರೆ. ಬಹುಮತ ಅಲ್ಲಿ ಯಾವುದೇ ರಾಜಕೀಯ ಪಕ್ಷಗಳಿಗೆ ಇಲ್ಲ, ಸ್ವತಂತ್ರವಾಗಿ ಗೆದ್ದಿರತಕ್ಕ ಅಭ್ಯರ್ಥಿಗಳ ಬಹುಮತ ಕೆಲವು ಕಡೆ ಇದೆ. ಈ ಒಂದು ವ್ಯವಸ್ಥೆ ಪ್ರಣ್ಯಕ್ಕೆ ಪಾರ್ಲಿಮೆಂಟ್‌ಗೆ ಬಂದಿಲ್ಲ ಶಾಸನಸಭೆಗಳಿಗೆ ಬಂದಿಲ್ಲ ಜನತೆ ಮತವನ್ನು ಚಲಾವಣೆ ಮಾಡಬೇಕಾದರೆ. ಪಕ್ಷದ ಮೂಲಭೂತ ನೀತಿ ಸಿದ್ಧಾಂತಗಳು ಕಾರ್ಯಕ್ರಮಗಳು ಇವುಗಳಿಗೆ ಗಮನ ಕೊಟ್ಟು ಮತವನ್ನು ಕೊಡುತ್ತಾರೆಂಬುದು ನಮ್ಮ ನಂಬಿಕೆ ಮತ್ತು ಮತವನ್ನು ಕೊಟ್ಟಿದ್ದಾರೆ. ಸುಮಾರಾಗಿ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ನಾವು ನೋಡಿದ್ದೇವೆ. ಸಮಾಜದಲ್ಲಿರತಕ್ಕ ಬಡವರು ಹಸ್ತದ ಗುರುತಿಗೆ ಏಕೆ ಮತವನ್ನು ಕೊಡುತ್ತಾರೆ ಎಂದರೆ, ಜನತಾ ಮನೆಗಳನ್ನು ಕಟ್ಟಿಸಿ ಕೊಡುತ್ತಾರೆ ಅದಕ್ಕೋಸ್ಕರ ನಾವು ಮತವನ್ನು ಕೊಡುತ್ತೇವೆ ಎಂಬ ಅಭಿಪ್ರಾಯ. ಹೀಗೆ ಒಂದು ನೀತಿಯನ್ನು, ನಾಗರೀಕ, ಮಾನ್ಯ ಮತದಾರರು ಇಟ್ಟುಕೊಂಡು, ಮತವನ್ನು ಚಲಾವಣೆ ಮಾಡತಕ್ಕಂತ ಒಂದು ವಿಚಾರಧಾರೆ. ಇವತ್ತು ಪಕ್ಷಗಳು ಇರತಕ್ಕಂಥ ವ್ಯವಸ್ಥೆಯನ್ನು ನಾವು ಒಪ್ಪಿದ್ದೇವೆ. ಪಕ್ಷವನ್ನು ಬಿಟ್ಟು ಕೂಡ ಮತದಾನವನ್ನೂ ಪಡೆಯುವ ವ್ಯವಸ್ಥೆ ನಮ್ಮ ಸಮಾಜದಲ್ಲಿ ಇದೆ. ಈ ಒಂದು ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಇನು ಬಹಳ ಗೊಂದಲ ಮಯ. ಇದರಿಂದ ಮಾನ್ಯ ಮತದಾರನಿಗೆ ಇರತಕ್ಕಂಥ ಪರಿಸ್ಥಿತಿಯನ್ನು ವಿಚಾರಮಾಡಬೇಕಾಗುತ್ತದೆ ನಾವು ಪಕ್ಷದ ಮುಖಾಂತರ ಅಭ್ಯರ್ಥಿಗಳನ್ನು ನಿಲ್ಲಿಸಿ ಮಾನ್ಯ ಮತದಾರನಿಗೆ. ಪಕ್ಷದ ನೀತಿ ಮುಂದಿಟ್ಟು ಪ್ರಜಾಪ್ರಭುತ್ವದ ನೀತಿಗನುಸಾರವಾಗಿ ದಯಮಾಡಿ ತಮ್ಮ ಮತವನ್ನು ಚಲಾವಣೆ ಮಾಡಿ ಎಂದು

ಅಧ್ಯಕ್ಷರು : x ವಿಧೇಯಕವನ್ನು ಮಂಡಿಸಲಾಗಿದೆ. x

**II ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2000**

**ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ಮಾರಾಟ ತೆರಿಗೆ ಎರಡನೇ (ತಿದ್ದುಪಡಿ) ವಿಧೇಯಕ, 2000ವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 2000 ವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು : x ವಿಧೇಯಕವನ್ನು ಮಂಡಿಸಲಾಗಿದೆ. x

**III ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000.**

**ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000. ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ 2000 ವನ್ನು ಮಂಡಿಸ ನೀಡುವುದು"

X ಅನುಬಂಧ I, X ಅನುಬಂಧ II,

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು)**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗ (ತಿದ್ದುಪಡಿ) ವಿಧೇಯಕ, 2000 ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : x ವಿಧೇಯಕವನ್ನು ಮಂಡಿಸಲಾಗಿದೆ.x

**IV ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2000**

**ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, (ಕರ್ನಾಟಕ ತಿದ್ದುಪಡಿ) ವಿಧೇಯಕ 2000ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2000ವನ್ನು ಮಂಡಿಸಲು ನೀಡುವುದು"

**(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು)**

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, (ಕರ್ನಾಟಕ ತಿದ್ದುಪಡಿ) ವಿಧೇಯಕ, 2000ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : xವಿಧೇಯಕವನ್ನು ಮಂಡಿಸಲಾಗಿದೆx

**V ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯ**

**ಮಂಡನೆಗೆ ಅನುಮತಿ ಕೋರಿಕೆ**

X ಅನುಬಂಧ III, X ಅನುಬಂಧ IV, X ಅನುಬಂಧ V

## ಅನುಬಂಧ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25) ಉದ್ಧೃತ ಭಾಗಗಳು.

xxx xxx xxx

**5ಎ. ಕೈಗಾರಿಕಾ ಒಳವರಿಗಳ (ಇನ್‌ಫ್ಯುಟ್ಸ್) ಮೇಲೆ ತೆರಿಗೆ ವಿಧಿಸುವುದು.-**

(4) "ಬಳಕೆ ವಸ್ತುಗಳು" ಎಂಬ ಪದವು ಕುಲುಮೆ ಎಣ್ಣೆ ಮತ್ತು ಟ್ರಾನ್ಸ್‌ಫಾರ್ಮರ್ ಎಣ್ಣೆಯು ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳನ್ನು ಒಳಗೊಳ್ಳುವುದಿಲ್ಲ.

xxx xxx xxx

**ಎರಡನೆ ಅನುಸೂಚಿ**

xxx xxx xxx

**ಭಾಗ ಎಂ**

4. ಮಾರ್ಬಲ್ ಸ್ಲಾಬ್‌ಗಳು ಮತ್ತು
ಮಾರ್ಬಲಿನಿಂದ ಮಾಡಿದ ವಸ್ತುಗಳು............................ ಶೇಕಡಾ ಹದಿನೈದು

xxx xxx xxx

**ಭಾಗ ಓ**

xxx xxx xxx

2. ಅಫೀಮು, ಗಾಂಜಾ ಮತ್ತು ಭಂಗಿ........ ಶೇಕಡಾ ಇಪ್ಪತ್ತು

xxx xxx xxx

**ಐದನೇ ಅನುಸೂಚಿ**

xxx xxx xxx

| ಕ್ರಮಸಂಖ್ಯೆ | ಸರಕುಗಳ ವಿವರಣೆ | |
|---|---|---|
| xxx | xxx | xxx |

42.ಬಿ. ಕಚ್ಚಾ ರೇಷ್ಮೆನೂಲು ಮತ್ತು ಹುರಿ ಮಾಡಿದ ರೇಷ್ಮೆ ನೂಲು ಅಥವಾ ಕಳಪೆ ರೇಷ್ಮೆ ನೂಲು, ಸ್ಪನ್ ರೇಷ್ಮೆ ನೂಲು ಮತ್ತು ದೇಶದ ಹೊರಗಿನಿಂದ ಆಮದು ಮಾಡಿಕೊಂಡವುಗಳನ್ನು ಹೊರತುಪಡಿಸಿದ ಇತರ ನೊಯಲ್ ರೇಷ್ಮೆನೂಲು ಸೇರಿದಂತೆ ಕಚ್ಚಾ ರೇಷ್ಮೆ;

xxx xxx xxx



ವಿಧಾನಸಭೆ ನಡವಳಿಗಳು (71)

## ಅನುಬಂಧ - III

**ಕರ್ನಾಟಕ ವಿಧಾನಸಭೆ**
**ಹನ್ನೊಂದನೆಯ ವಿಧಾನಸಭೆ**

ಎರಡನೆಯ ಅಧಿವೇಶನ
(ಮುಂದುವರೆದ ಉಪವೇಶನಗಳು)

**ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000**

(2000ದ ವಿಧಾನಸಭೆಯ ವಿಧೇಯಕ ಸಂಖ್ಯೆ 24)

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ 1985, (1985ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ .-** (1) ಈ ಅಧಿನಿಯಮವನ್ನು ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

ಎಂ. ಶಶಿಕಾಂತ
ಜೆರ್ನಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ಬೆಂಗಳೂರು

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ** .- ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ (1985ರ ಕರ್ನಾಟಕ ಅಧಿನಿಯಮ 12) 2ನೇ ಪ್ರಕರಣದ (ಜಿ) ಖಂಡದಲ್ಲಿ "ಅಧ್ಯಾಯ XVIರ ಅಡಿಯಲ್ಲಿ" ಎಂಬ ಪದಗಳು ಮತ್ತು ಅಂಕಿಗಳಿಗೆ "ಅಧ್ಯಾಯ VIII, ಅಧ್ಯಾಯ XV ಅಧ್ಯಾಯ XVI ರ ಅಡಿಯಲ್ಲಿ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.



## ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಭಾರತದ ದಂಡ ಸಂಹಿತೆ 1860ರ ಅಧ್ಯಾಯ VIIIರಲ್ಲಿ ಹೇಳಿರುವ ಸಾರ್ವಜನಿಕ ನೆ... ಭಂಗ ತರುವಂಥ ಅಪರಾಧಗಳನ್ನು ಮತ್ತು ಅಧ್ಯಾಯ XVರಲ್ಲಿ ಹೇಳಿರುವ ಮತ ಸಂಬ... ಅಪರಾಧಗಳನ್ನು ಮಾಡುವುದರಲ್ಲಿ ಅಥವಾ ಮಾಡಲು ಪ್ರೇರೇಪಿಸುವುದರಲ್ಲಿ ತೊಡಗಿರುವ ವ್ಯಕ್ತಿಗಳನ್ನು ಬಂಧನದಲ್ಲಿಡುವುದಕ್ಕೆ ಉಪಬಂಧ ಕಲ್ಪಿಸಲು, ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚ... ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಲಾಗಿದೆ.

ಆದ್ದರಿಂದ ಈ ವಿಧೇಯಕ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವ ಹೆಚ್ಚಿನ ವೆಚ್ಚವೂ ಉಂಟಾಗುವುದಿಲ್ಲ.

ಎಂ. ಮಲ್ಲಿಕಾರ್ಜುನ ಖರ್ಗೆ,
ಗೃಹ ಸಚಿವರು

ಯಾಕೂಬ್ ಪರೀಫ್,
ಕಾರ್ಯದರ್ಶಿ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು



## ಅನುಬಂಧ

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985.

(1985ರ ಕರ್ನಾಟಕ ಅಧಿನಿಯಮ, 12)

ಉದ್ಧೃತ ಭಾಗ

2. **ಪರಿಭಾಷೆಗಳು** .- ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು.-

XXX XXX XXX

(ಜ) "ಗೂಂಡಾ" ಎಂದರೆ ಭಾರತ ದಂಡ ಸಂಹಿತೆಯ (1860 ಕೇಂದ್ರ ಅಧಿನಿಯಮ XIV) ಅಧ್ಯಾಯ XVI, ಅಧ್ಯಾಯ XVII, ಅಥವಾ ಅಧ್ಯಾಯ XXIIರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ತಾನಾಗಿಯೇ ಆಗಲಿ ಅಥವಾ ಒಂದು ಗ್ಯಾಂಗಿನ ಸದಸ್ಯನಾಗಿಯಾಗಲಿ ಅಥವಾ ಮುಖ್ಯಸ್ಥನಾಗಿಯಾಗಲಿ ರೂಢಿಗತವಾಗಿ ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ದುಷ್ಪ್ರೇರಿಸುವ ಒಬ್ಬ ವ್ಯಕ್ತಿ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಕ್ರಮದಿಂದಾಗಿ ಯಾವ ಹೆಚ್ಚಿನ ವೆಚ್ಚವೂ ಉಂಟಾಗುವುದಿಲ್ಲ.

ಎಂ. ಮಲ್ಲಿಕಾರ್ಜುನ ಖರ್ಗೆ,
ಗೃಹ ಸಚಿವರು

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ಬೆಂಗಳೂರು



**ಅನುಬಂಧ**

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋ[ರರ], ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸು[ವವರ] ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985.

(1985ರ ಕರ್ನಾಟಕ ಅಧಿನಿಯಮ, 12)

ಉದ್ಧೃತ ಭಾಗ

2. **ಪರಿಭಾಷೆಗಳು** .- ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊ[ರತು]

xxx xxx xxx

(ಜಿ) "ಗೂಂಡಾ" ಎಂದರೆ ಭಾರತ ದಂಡ ಸಂಹಿತೆಯ (1860 ಕೇಂದ್ರ ಅಧಿನಿ[ಯಮ] XIV) ಅಧ್ಯಾಯ XVI, ಅಧ್ಯಾಯ XVII, ಅಥವಾ ಅಧ್ಯಾಯ XXIIರ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ತಾನಾಗಿಯೇ ಆಗಲಿ ಅಥವಾ ಒಂದು ಗ್ಯಾಂಗಿನ ಸದಸ್ಯನಾಗಿಯಾಗಲಿ ಅ[ಥವಾ] ಮುಖ್ಯಸ್ಥನಾಗಿಯಾಗಲಿ ರೂಢಿಗತವಾಗಿ ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅ[ಥವಾ] ದುಷ್ಪ್ರೇರಿಸುವ ಒಬ್ಬ ವ್ಯಕ್ತಿ.

**ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

ಅಧ್ಯಕ್ಷರು : ನಿನ್ನೆ ದಿವಸ ಏನು ಬೆಲೆ ಕುಸಿತದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು ಅದನ್ನೆ ಈಗ ಮುಂದುವರೆಸೋಣ. ಅದು ಮುಗಿದ ಮೇಲೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವ ಬಗ್ಗೆ ತೆಗೆದುಕೊಳ್ಳೋಣ. ನಾಳೆ ದಿವಸಕ್ಕೆ ಆ ಎರಡನ್ನು ಸಹ ಚರ್ಚೆಗೆ ಹಾಕಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ಹಾಗೆ ಒಂದು ಸಣ್ಣ ಬಿಲ್ ಇದೆ. ಅದನ್ನು ಈಗ ತೆಗೆದುಕೊಳ್ಳೋಣ.

**ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ವಿಧೇಯಕದಲ್ಲಿ ಒಂದು ಚಿಕ್ಕ ತಿದ್ದುಪಡಿ ಮಾಡಬೇಕು. ಈಗಿರುವ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಇರತಕ್ಕಂಥ ಚಾಪ್ಟರ್ 8 ಮತ್ತು 15 ಇದನ್ನು ಕೂಡ ಇದರಲ್ಲಿ ಸೇರಿಸಬೇಕು. ಹಿಂದೆ ಯಾವರೀತಿಯಾಗಿ ಈ ಆ್ಯಕ್ಟ್‌ನಲ್ಲಿ ಚಾಪ್ಟರ್ 16, 17 ಮತ್ತು 22 ಇಂಡಿಯನ್ ಪೀನಲ್ ಕೋಡ್ ಕಾನೂನಿನ ಅಂಗವಾಗಿತ್ತು. ಈ ಕಾನೂನು ಚಾಪ್ಟರ್ 7 ಮತ್ತು 15 ಕೂಡ ಇದರಲ್ಲಿ ಅಳವಡಿಸಬೇಕು ಮತ್ತು ಆ ಕೆಳಗಡೆ ಬರತಕ್ಕಂಥ ಯಾವುದು ಅಫೆನ್ಸೆಸ್ ಇದೆ ಅವೆಲ್ಲವೂ ಕೂಡ ಕಾನೂನು ಅಡಿಯಲ್ಲಿ ಬರಬೇಕು ಎನ್ನುವುದು ಒಂದು ಸಣ್ಣ ತಿದ್ದುಪಡಿ. ಇದು ಮೊದಲೆ ಅಪ್ರೂವ್ ಆಗಿತ್ತು, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಸಚಿವರು ಮಂಡಿಸಿರತಕ್ಕಂಥ ಈ ವಿಧೇಯಕವನ್ನು ನಾನು ಸ್ವಾಗತ ಮಾಡಿ ಒಂದೆರಡು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಒಂದು ವಿಧೇಯಕವನ್ನು ನಮ್ಮ ಸರ್ಕಾರ ಇದಂತಹ ಸಂದರ್ಭದಲ್ಲಿ ಇದನ್ನು ಮಾಡಬೇಕು, ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಇರತಕ್ಕಂಥ ಈ ರೀತಿಯ ವ್ಯವಹಾರಗಳು ಏನಿವೆ ಅದರ [illegible]



ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತರುತ್ತಿದ್ದೇವೆ. ಆದರೆ ಇದಕ್ಕೆ ಒಂದು ವಾಕ್ಯ ಮಾತ್ರ ತಿದ್ದುಪಡಿ ಇರತಕ್ಕಂಥಾದ್ದು. ಇದು already existing law. ಅದಕ್ಕೆ ಈ ಚಾಪ್ಟರ್ ಅನ್ನು ಸೇರಿಸುತ್ತಿದ್ದೇವೆ. ಈಗ ಇರತಕ್ಕಂಥಾದ್ದು ಏನೆಂದರೆ, ಇಂಡಿಯನ್ ಪೀನಲ್ ಕೋಡ್‌ನ ಚಾಪ್ಟರ್ 16,17 ಮತ್ತು 22 ಈ ಅಫೆನ್ಸೆಸ್ ಅನ್ನು ನಮ್ಮ "The Karnataka Prevention of Dangerous Activities of Bootleggers, Drug-Offenders, Gamblers, Goondas, Immora Traffic Offenders and Slum Grabbers. ಆ್ಯಕ್ಟ್‌ನಲ್ಲಿ 85ರಲ್ಲಿ ಇದೆ. ಅದಕ್ಕೆ ಈ ಎರಡ ಚಾಪ್ಟರ್‌ಗಳನ್ನು ಸೇರಿಸುತ್ತಿದ್ದೇವೆ. ಅದಕ್ಕೆ ಹಿಂದೆ ಕೂಡ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆಯಾಗಿ ಬಿಲ್ ರೆ ಇದೆ. ಈಗ ಇದನ್ನಷ್ಟೆ ಸೇರಿಸುತ್ತಿದ್ದೇವೆ. ತಾವೇನು ಹೇಳುತ್ತಿದ್ದೀರಿ ಅದೂ ಈ ಬಿಲ್‌ನಲ್ಲಿ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದನ್ನು ಸಹ ತಾವು ಮಾಡಬೇಕಾಗುತ್ತದೆ. ನನ್ನ ಅಭಿಪ್ರಾಯದ ಪೊಲೀಸ್ ಇಲಾಖೆಗೆ ಮತ್ತು ಗೃಹ ಇಲಾಖೆಗೆ ವಿಶೇಷವಾಗಿ ಈ ರೀತಿಯ ಕಾನೂನನ್ನು ಮಾಡಿ ನಾ ಶಕ್ತಿಯನ್ನು ತುಂಬತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಆದರೆ ಒಂದು ಎಚ್ಚರಿಕೆಯ ಕ್ರಮವನ್ನು ಸಂದರ್ಭದಲ್ಲಿ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಎಚ್ಚರಿಕೆ ತೆಗೆದುಕೊಳ್ಳದೆ ಹೋದರೆ ಕೆಳಹಂತದ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ ಅವರಿಗೆ ಸರಿಯಾದ ನಿಯಂತ್ರಣವನ್ನು ಇಟ್ಟುಕೊಳ್ಳದೆ ಹೋದರ ಅದರಿಂದ ಆಗತಕ್ಕಂಥ ಅನಾಹುತಗಳು ಏನಿವೆ, ಅದನ್ನು ಊಹಿಸಿಕೊಳ್ಳುವುದಕ್ಕೂ ಆಗದೇ ಇರತಕ್ಕಂ ಪರಿಸ್ಥಿತಿ ಉದ್ಭವವಾಗುತ್ತದೆ. ಈಗ ನಾನು ಏನು ಹೇಳಿದ್ದೇವೆ, ಇದರಲ್ಲಿ ಅಪರಾಧಗಳನ್ನು ಮಾಡುವುದರ ಅಥವಾ ಮಾಡಲು ಪ್ರೇರಿಪಿಸುವಲ್ಲಿ ತೊಡಗಿರುವ ವ್ಯಕ್ತಿಗಳು ಎಂದು ಹೇಳಿದ್ದೇವೆ.

5.40 ಪಿ.ಎಂ

ಈ ಬಿಲ್‌ನಲ್ಲಿ 'ಜೂಜುಕೋರರು' ಎನ್ನುವ ಪದ ಬಂದಿದೆ. ನನಗೆ ಗೊತ್ತಿರುವ ಹ ಗೋಕಾಕ್ ತಾಲ್ಲೂಕಿನಲ್ಲಿ ರಾಜಕೀಯವಾಗಿ, ವೈಷಮ್ಯವಾಗಿ ಕುಳಿತಿರುವ ಒಂದು ತಾಲ್ಲೂಕು ಇ ತಮಗೂ ಗೊತ್ತಿರಬಹುದು. ಶ್ರೀಮಾನ್ ಕರ್ಸಿಂಗ್ ಅವರು ಮತ್ತು ಶ್ರೀಮಾನ್ ಜಾರಕಿಹೊಳೆ ಅ ಮಧ್ಯೆ ಅಲ್ಲಿರತಕ್ಕಂಥ ಎರಡು ಗುಂಪುಗಳ ಘರ್ಷಣೆ ಯಾವ ಮಟ್ಟಕ್ಕೆ ಹೋಗಿತ್ತು ಎಂದರೆ ಹಾಡುಹಗಲ ಬೆಳಿಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಒಂದು ಗುಂಪಿನ ಜನರು ಮತ್ತೊಂದು ಗುಂಪಿನ ಮನೆಗ ನುಗ್ಗಿ ರುಂಡುಮಂಡ, ಕೈಕಾಲುಗಳೆಲ್ಲವನ್ನು ಕತ್ತರಿಸಿ ರಸ್ತೆಗಳಲ್ಲಿ ಸುಮಾರು ಎರಡು ಕಿ.ಮೀ. ದ ಚೆಲ್ಲಾಡಿರತಕ್ಕಂಥ ಘಟನೆಯನ್ನು ಸ್ವತಃ ನಾನು ನೋಡಿದ್ದೇನೆ. ಆ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗ ಶ್ರೀಮಾನ್ ಜೆ.ಹೆಚ್. ಪಟೇಲರು ಇದ್ದರು. ನಾವು ಮತ್ತು ನಮ್ಮ ಪೊಲೀಸ್ ಅಧಿಕಾರಿಗಳು ಅ ಹೋಗಿದ್ದೆವು. ಆ ವಾತಾವರಣ ಬಹಲ ಭಯಂಕರವಾಗಿತ್ತು. ಅದೇ ಪರಿಸ್ಥಿತಿ ಗೋಕಾಕ್ ತಾಲ್ಲೂಕಿ ಈಗಲೂ ಮುಂದುವರಿದಿದೆ. ಗೋಕಾಕ್ ತಾಲ್ಲೂಕಿನಲ್ಲಿ ನಮ್ಮ ಮಾಜಿ ಶಾಸಕರಾದ ಶ್ರೀಮಾ ಚಂದ್ರಶೇಖರ ನಾಯಕ್ ಅವರು ಇದ್ದಾರೆ. ಅವರು ಬಹಳ ಸಜ್ಜನರು ಮತ್ತು ಹಿಂದೆ ಉಪಾಧ್ಯಾ ರಾಗಿದ್ದವರು. ಅವರು ಜೂಜು ಆಡುತ್ತಿದ್ದಾರೆಂದು ಯಾರೋ ಬಂದು ಹೇಳಿದರೆಂದು ಅವರನ್ನು ಜೈ ಹಾಕತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗ ತ್ರೀ ಕಾರ್ಡ್ ಇಸ್ಪೀಟ್ ಆಟ ಆಡಿದರೆ ಅದು ಜೂ

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ನಿನ್ನೆ ದಿವಸ ಏನು ಬೆಲೆ ಕುಸಿತದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು ಅದನ್ನೆ ಈಗ ಮುಂದುವರೆಸೋಣ. ಅದು ಮುಗಿದ ಮೇಲೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವ ಬಗ್ಗೆ ತೆಗೆದುಕೊಳ್ಳೋಣ. ನಾಳೆ ದಿವಸಕ್ಕೆ ಆ ಎರಡನ್ನು ಸಹ ಚರ್ಚೆಗೆ ಹಾಕಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ಹಾಗೆ ಒಂದು ಸಣ್ಣ ಬಿಲ್ ಇದೆ. ಅದನ್ನು ಈಗ ತೆಗೆದುಕೊಳ್ಳೋಣ.

**ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ವಿಧೇಯಕದಲ್ಲಿ ಒಂದು ಚಿಕ್ಕ ತಿದ್ದುಪಡಿ ಮಾಡಬೇಕು. ಈಗಿರುವ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಇರತಕ್ಕಂಥ ಚಾಪ್ಟರ್ 8 ಮತ್ತು 15 ಇದನ್ನು ಕೂಡ ಇದರಲ್ಲಿ ಸೇರಿಸಬೇಕು. ಹಿಂದೆ ಯಾವರೀತಿಯಾಗಿ ಈ ಆ್ಯಕ್ಟ್‌ನಲ್ಲಿ ಚಾಪ್ಟರ್ 16, 17 ಮತ್ತು 22 ಇಂಡಿಯನ್ ಪೀನಲ್ ಕೋಡ್ ಕಾನೂನಿನ ಅಂಗವಾಗಿತ್ತು. ಈ ಕಾನೂನು ಚಾಪ್ಟರ್ 7 ಮತ್ತು 15 ಕೂಡ ಇದರಲ್ಲಿ ಅಳವಡಿಸಬೇಕು ಮತ್ತು ಆ ಕೆಳಗಡೆ ಬರತಕ್ಕಂಥ ಯಾವುದು ಅಫೆನ್ಸಸ್ ಇದೆ ಅವುಗಳನ್ನೂ ಕೂಡ ಕಾನೂನು ಅಡಿಯಲ್ಲಿ ಬರಬೇಕು ಎನ್ನುವುದು ಒಂದು ಸಣ್ಣ ತಿದ್ದುಪಡಿ. ಇದು ಕ್ಯಾಬಿನೆಟ್ ಅಪ್ರೂವ್ ಆಗಿತ್ತು, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಸಚಿವರು ತರತಕ್ಕಂಥ ಈ ವಿಧೇಯಕವನ್ನು ನಾನು ಸ್ವಾಗತ ಮಾಡಿ ಒಂದೆರಡು ವಿಚಾರಗಳನ್ನು ನಾನು ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಒಂದು ವಿಧೇಯಕವನ್ನು ನಮ್ಮ ಈ ಸಂದರ್ಭದಲ್ಲಿ ಇದನ್ನು ಮಾಡಬೇಕು, ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಈ ರೀತಿಯ ವ್ಯವಹಾರಗಳು ಏನಿವೆ ಅದರ ಮಾದರಿಯಲ್ಲೇ ಮಾಡಬೇಕೆಂದು ಇದ್ದೆವು.



ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತರುತ್ತಿದ್ದೇವೆ. ಆದರೆ ಇದಕ್ಕೆ ಒಂದು ಮಾತ್ರ ತಿದ್ದುಪಡಿ ಇರತಕ್ಕಂಥಾದ್ದು. ಇದು already existing law. ಅದಕ್ಕೆ ಈ ಚಾಪ್ಟರ್ ಸೇರಿಸುತ್ತಿದ್ದೇವೆ. ಈಗ ಇರತಕ್ಕಂಥಾದ್ದು ಏನೆಂದರೆ, ಇಂಡಿಯನ್ ಪೀನಲ್ ಕೋಡ್‌ನ ಚಾ 16,17 ಮತ್ತು 22 ಈ ಅಫೆನ್ಸಸ್ ಅನ್ನು ನಮ್ಮ "The Karnataka Prevention of Dange Activities of Bootleggers, Drug-Offenders, Gamblers, Goondas, Imm Traffic Offenders and Slum Grabbers. ಆ್ಯಕ್ಟ್‌ನಲ್ಲಿ 85ರಲ್ಲಿ ಇದೆ. ಅದಕ್ಕೆ ಈ ಎ ಚಾಪ್ಟರ್‌ಗಳನ್ನು ಸೇರಿಸುತ್ತಿದ್ದೇವೆ. ಅದಕ್ಕೆ ಹಿಂದೆ ಕೂಡ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆಯಾಗಿ ಬಿಲ್ ಇದೆ. ಈಗ ಇದನ್ನಷ್ಟೆ ಸೇರಿಸುತ್ತಿದ್ದೇವೆ. ತಾವೇನು ಹೇಳುತ್ತಿದ್ದೀರಿ ಅದೂ ಈ ಬಿಲ್‌ನಲ್ಲಿ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದನ್ನು ಸಹ ತಾವು ಮಾಡಬೇಕಾಗುತ್ತದೆ. ನನ್ನ ಅಭಿಪ್ರಾಯ ಪೊಲೀಸ್ ಇಲಾಖೆಗೆ ಮತ್ತು ಗೃಹ ಇಲಾಖೆಗೆ ವಿಶೇಷವಾಗಿ ಈ ರೀತಿಯ ಕಾನೂನನ್ನು ಮಾಡಿ ಶಕ್ತಿಯನ್ನು ತುಂಬತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಆದರೆ ಒಂದು ಎಚ್ಚರಿಕೆಯ ಕ್ರಮವನ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಎಚ್ಚರಿಕೆ ತೆಗೆದುಕೊಳ್ಳದೆ ಹೋದರೆ ಕೆಳಹಂ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ ಅವರಿಗೆ ಸರಿಯಾದ ನಿಯಂತ್ರಣವನ್ನು ಇಟ್ಟುಕೊಳ್ಳದೆ ಹೋ ಅದರಿಂದ ಆಗತಕ್ಕಂಥ ಅನಾಹುತಗಳು ಏನಿವೆ, ಅದನ್ನು ಊಹಿಸಿಕೊಳ್ಳುವುದಕ್ಕೂ ಆಗದೇ ಇರತ ಪರಿಸ್ಥಿತಿ ಉದ್ಭವವಾಗುತ್ತದೆ. ಈಗ ನಾನು ಏನು ಹೇಳಿದ್ದೇವೆ, ಇದರಲ್ಲಿ ಅಪರಾಧಗಳನ್ನು ಮಾಡುವು ಅಥವಾ ಮಾಡಲು ಪ್ರೇರಿಪಿಸುವಲ್ಲಿ ತೊಡಗಿರುವ ವ್ಯಕ್ತಿಗಳು ಎಂದು ಹೇಳಿದ್ದೇವೆ.

5.40 ಪಿ.ಎಂ

ಈ ಬಿಲ್‌ನಲ್ಲಿ 'ಜೂಜುಕೋರರು' ಎನ್ನುವ ಪದ ಬಂದಿದೆ. ನನಗೆ ಗೊತ್ತಿರುವ ಗೋಕಾಕ್ ತಾಲ್ಲೂಕಿನಲ್ಲಿ ರಾಜಕೀಯವಾಗಿ, ವೈಷಮ್ಯವಾಗಿ ಕುಳಿತಿರುವ ಒಂದು ತಾಲ್ಲೂಕು ತಮಗೂ ಗೊತ್ತಿರಬಹುದು. ಶ್ರೀಮಾನ್ ಕರ್ನಿಂಗ್ ಅವರು ಮತ್ತು ಶ್ರೀಮಾನ್ ಜಾರಕಿಹೊಳಿ ಮಧ್ಯೆ ಅಲ್ಲಿರತಕ್ಕಂಥ ಎರಡು ಗುಂಪುಗಳ ಘರ್ಷಣೆ ಯಾವ ಮಟ್ಟಕ್ಕೆ ಹೋಗಿತ್ತು ಎಂದರೆ ಹಾಡುಹಗ ಬೆಳಿಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಒಂದು ಗುಂಪಿನ ಜನರು ಮತ್ತೊಂದು ಗುಂಪಿನ ಮನ ನುಗ್ಗಿ ರುಂಡುಮಂಡ, ಕೈಕಾಲುಗಳೆಲ್ಲವನ್ನು ಕತ್ತರಿಸಿ ರಸ್ತೆಗಳಲ್ಲಿ ಸುಮಾರು ಎರಡು ಕಿ.ಮೀ. ಚೆಲ್ಲಾಡಿರತಕ್ಕಂಥ ಘಟನೆಯನ್ನು ಸ್ವತಃ ನಾನು ನೋಡಿದ್ದೇನೆ. ಆ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಶ್ರೀಮಾನ್ ಜೆ.ಹೆಚ್. ಪಟೇಲರು ಇದ್ದರು. ನಾವು ಮತ್ತು ನಮ್ಮ ಪೊಲೀಸ್ ಅಧಿಕಾರಿಗಳು ಹೋಗಿದ್ದೆವು. ಆ ವಾತಾವರಣ ಬಹಳ ಭಯಂಕರವಾಗಿತ್ತು. ಅದೇ ಪರಿಸ್ಥಿತಿ ಗೋಕಾಕ್ ತಾಲ್ಲೂ ಈಗಲೂ ಮುಂದುವರಿದಿದೆ. ಗೋಕಾಕ್ ತಾಲ್ಲೂಕಿನಲ್ಲಿ ನಮ್ಮ ಮಾಜಿ ಶಾಸಕರಾದ ಶ್ರೀ ಚಂದ್ರಶೇಖರ ನಾಯಕ್ ಅವರು ಇದ್ದಾರೆ. ಅವರು ಬಹಳ ಸಜ್ಜನರು ಮತ್ತು ಹಿಂದೆ ಉಪಾಧ ರಾಗಿದ್ದವರು. ಅವರು ಜೂಜು ಆಡುತ್ತಿದ್ದಾರೆಂದು ಯಾರೋ ಬಂದು ಹೇಳಿದರೆಂದು ಅವರನ್ನು ಹಾಕತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗ ತ್ರೀ ಕಾರ್ಡ್ ಇಸ್ಪೀಟ್ ಆಟ ಆಡಿದರೆ ಅದು

ಇನ್ನು 13 ಕಾರ್ಡಿನ ಆಟವನ್ನು ಬಹಳಷ್ಟು ಜನ ಟೈಮ್ ಕಳೆಯುವುದಕ್ಕೆ ಆಟ ಆಡುತ್ತಾರೆ. ಅಲ್ಲಿ ಹಣ ಕಟ್ಟಿ ಆಡಿದರೆ ಇದು ಕೂಡ ಜೂಜು ಆಟ ಆಗುತ್ತದೆ. ತಮಗೆ ಗೊತ್ತಿರುವ ಹಾಗೆ ತಮ್ಮ ...ಯಲ್ಲಿ ಇರತಕ್ಕಂಥ ಪ್ರದೇಶದಲ್ಲಿ ಏನೇನು ಆಗುತ್ತದೆ ಎನ್ನುವುದು ಸಹಿತ ತಮಗೆ ಗೊತ್ತಿದೆ. ಆದರೆ ಶ್ರೀ ಚಂದ್ರಶೇಖರ ನಾಯಕ್ ಅವರನ್ನು ಅನ್ಯಾಯವಾಗಿ ಶುಕ್ರವಾರ ಅರೆಸ್ಟ್ ಮಾಡಿ ಶನಿವಾರ, ಭಾನುವಾರ ಜೈಲಿನಲ್ಲಿ ಕೊಳೆಯುವ ಹಾಗೆ ಮಾಡಿದ್ದಾರೆ. ಅವರಿಗೆ ಕಾರ್ಡ್ಸ್ ಆಟ ಆಡುವುದೇ ಗೊತ್ತಿಲ್ಲಾ. ಅಂದರೆ 13 ಎಲೆಯ ರಮ್ಮಿ ಆಟ ಅಥವಾ 3 ಎಲೆಯ ಪರೇಲ್ ಆಟ ಆಗಲಿ ಅವರಿಗೆ ಗೊತ್ತೇ ಇಲ್ಲಾ. ಅಂತಹವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕತಕ್ಕಂಥ ಪ್ರಯತ್ನ ನಡೆದಿದೆ. ಇದನ್ನು ನಾವು ಖಂಡಿಸಬೇಕೋ ಅಥವಾ ಬಿಡಬೇಕೋ ಎನ್ನುವುದನ್ನು ದಯವಿಟ್ಟು ತಾವು ಹೇಳಿ. ಈ ವಿಚಾರವನ್ನು ಬೇರೆ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗುವುದು ಕಷ್ಟ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದು ಎಷ್ಟೊಂದು ಖಂಡನೀಯವಾದ ವಿಚಾರವೆಂದರೆ ಈ ರೀತಿಯಾಗಿ ರಾಜಕೀಯ ವೈಷಮ್ಯ ಇರತಕ್ಕಂಥ ಅನೇಕ ಸ್ಥಳಗಳು, ತಾಲ್ಲೂಕುಗಳು ಇವತ್ತು ಉದ್ಭವ ಆಗುತ್ತಿವೆ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಈ ಸದನದ ಮೂಲಕ ಗೊತ್ತಾಗಬೇಕು. ಇನ್ನು ಭಟ್ಕಳದಲ್ಲಿ ಈಗ ಪರಿಸ್ಥಿತಿ ಶಾಂತವಾಗಿದೆ. ನಾನು ಅವತ್ತಿನಿಂದ ಇವತ್ತಿನವರೆಗೆ ಅಲ್ಲಿ ಕೆಲಸ ಮಾಡಿರತಕ್ಕಂಥ ಅಧಿಕಾರಿಗಳನ್ನು ಅಭಿನಂದಿಸುತ್ತೇನೆ. ಶ್ರೀಮಾನ್ ವೀರಪ್ಪ ಮೊಯಿಲಿ ಅವರ ಕಾಲದಿಂದ ಇವತ್ತಿನ ಮುಖ್ಯಮಂತ್ರಿಗಳವರೆಗೆ ದಕ್ಷವಾಗಿರುವ ಒಳ್ಳೆಯ ಉತ್ತಮವಾದ ಪೊಲೀಸ್ ಅಧಿಕಾರಿಗಳು ಭಟ್ಕಳಕ್ಕೆ ಹೋಗಿರುವುದರಿಂದಾಗಿ ಅಲ್ಲಿ ಇವತ್ತು ಪರಿಸ್ಥಿತಿ ಶಾಂತವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಏನಾಗುತ್ತಿದೆ ಎಂದರೆ, ನಮ್ಮ ಸರ್ಕಾರ ಇದ್ದಾಗಲೂ ಸ್ವಲ್ಪ ಅದೇ ಮಾಡಿದ್ದೇವೆ, ನಿಮ್ಮ ಸರ್ಕಾರ ಏನಾದರೂ ಮಾಡುತ್ತದೆಯೇ, ಏಕೆಂದರೆ ಈಗ ಇದು ಕಂಪ್ಯೂಟರ್ ಯುಗದ ಸರ್ಕಾರ, ಮಾಹಿತಿ ತಂತ್ರಜ್ಞಾನದ ಸರ್ಕಾರ, ಎಲ್ಲವೂ ಕಂಪ್ಯೂಟರೀಕರಣ ಆಗಬಹುದು, ದಕ್ಷವಾದ, ಸ್ವಚ್ಛವಾದ, ಪಾರದರ್ಶಕ ಆಡಳಿತವನ್ನು ಈ ಸರ್ಕಾರ ನಡೆಸಬಹುದೆಂದು ನಾನು ಅಂದುಕೊಂಡು ಹೇಳುತ್ತಿದ್ದೇನೆ. ನನ್ನ ಕೈಯಲ್ಲಂತು ಮಾಡಲಿಕ್ಕೆ ಆಗಲಿಲ್ಲ. ಆದರೆ ನನಗೆ ಬಹಳ ಎಕ್ಸ್‌ಪೆಕ್ಟೇಷನ್ಸ್ ಇತ್ತು. I don't say fully you have failed. But, partially, you have also failed. ಈ ಸಂದರ್ಭದಲ್ಲಿ ನಾನು ಬಹಳ ನೋವಿನಿಂದ ಹೇಳುವುದಕ್ಕೆ ಬಯಸುತ್ತೇನೆ. ಏನೆಂದರೆ ಸರ್ಕಲ್ ಇನ್ಸ್‌ಪೆಕ್ಟರುಗಳು, ಡಿ.ಒ.ಎಸ್.ಪಿಗಳನ್ನು ಟ್ರಾನ್ಸ್‌ಫರ್ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಅಧಿಕಾರಿಗಳನ್ನು ಬಹಳ ಬಹಳ ಮುಖ್ಯವಾದ ಜಾಗಕ್ಕೆ ವರ್ಗಾವಣೆ ಮಾಡಿಬಿಡುತ್ತೀರಿ. ಅವರು ನಾವು ಅಧಿಕಾರದಲ್ಲಿದ್ದಾಗ ನಮಗೆ ಸೆಲ್ಯೂಟ್ ಹೊಡೆಯುತ್ತಾರೆ, ನೀವು ಅಧಿಕಾರದಲ್ಲಿದ್ದಾಗ ನಿಮಗೆ ಸೆಲ್ಯೂಟ್ ಹೊಡೆಯುತ್ತಾರೆ. ಅದು ಹೇಗೋ ಅವರೆಲ್ಲ ಅದೇ ಜಾಗದಲ್ಲಿ ಆವರಿಸಿಕೊಂಡು ಕುಳಿತುಕೊಂಡು ಇರುತ್ತಾರೆ. ಇದಕ್ಕೆ ಮಾನ್ಯ ಖರ್ಗೆಯವರು ಅಥವಾ ಮಾನ್ಯ ಕೃಷ್ಣ ಅವರು ಕಾರಣ ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ವ್ಯವಸ್ಥೆಯೇ ಆ ರೀತಿ ಇದೆ. ನಮ್ಮ ವ್ಯವಸ್ಥೆಯಲ್ಲಿ ಆಡಳಿತ ಪಕ್ಷದ ಶಾಸಕರು ಅಧಿಕಾರಕ್ಕೆ ಬಂದ ತಕ್ಷಣವೇ ಅವರು ಬಂದು, ನಾವು ಕಷ್ಟದಲ್ಲಿದ್ದಾಗ ಬಹಳ ಏನೋ ಸಹಾಯ ಮಾಡಿಬಿಟ್ಟ ಹಾಗೆ, ಚುನಾವಣೆಗಳಲ್ಲಿ ಅಲ್ಲಿಯೇ ಗೆಲ್ಲಿಸಿದ ಹಾಗೆ, ಅವರೇ ಎಲ್ಲ ಹಂಚಿಸಿದ ಹಾಗೆ, ಬೆತ್ತಲೆ ಸೇವೆ ಬಿಟ್ಟು ಇನ್ನೆಲ್ಲಾ ಸೇವೆಯನ್ನು ಮಾಡಿದ್ದೇವೆ



ಎನ್ನುವ ರೀತಿಯಲ್ಲಿ ಕೆಳಹಂತದಲ್ಲಿ ಇರತಕ್ಕಂಥವರು ಬಂದು ಹೇಳುತ್ತಾರೆ. ಕೆಲವು ನಮ್ಮ ಐ.ಪಿ.ಎಸ್. ಅಧಿಕಾರಿಗಳು ಅಪರೂಪಕ್ಕೆ ಅಲ್ಲಿ ಇಲ್ಲಿ ತಪ್ಪುಗಳನ್ನು ಮಾಡಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಅವರಲ್ಲಿ ಕೆಲವರು ಸೋಮಾರಿತನದಿಂದ ಇಲ್ಲಿ ಇರಬಹುದು. ಆದರೆ ಬಹುತೇಕ ಅಧಿಕಾರಿಗಳಿಗೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಹೆಸರು ಇದೆ. ಆದರೆ ಕೆಳ ಹಂತದ ಅಧಿಕಾರಿಗಳ ಪೋಸ್ಟಿಂಗ್ಸ್‌ನಲ್ಲಿ ನಿಮಗೆ ಇವತ್ತು ಸಹ ಕಂಟ್ರೋಲ್ ಇಲ್ಲ. ಆ ಕಂಟ್ರೋಲ್ ಯಾವ ರೀತಿ ಎಂದರೆ ಜಾತಿ ಆಧಾರದ ಮೇಲೆ, ಗುಂಪಿನ ಆಧಾರದ ಮೇಲೆ ಅಥವಾ ಪಕ್ಷದ ಆಧಾರದ ಮೇಲೆ, ಈ ರೀತಿಯ ವ್ಯವಸ್ಥೆ ನಮ್ಮಲ್ಲಿ ಬೆಳೆದು ಬಂದು ಬಿಟ್ಟಿದೆ. ಇವತ್ತು ಶ್ರೀಮಾನ್ ಘೋರ್ಪಡೆ ಅವರು ಸದನಕ್ಕೆ ಬರಲಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಪ್ರಶ್ನೆ ಇತ್ತು. ಮಾನ್ಯ ಅಧ್ಯಕ್ಷರ ಪರವಾನಿಗೆ ತೆಗೆದುಕೊಂಡು ಅವರು ಸಂಡೂರಿಗೆ ಹೋಗಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಇವತ್ತು ಸದನದಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಗ್ರಾಮಸಭೆ ಮಾಡಬೇಕೆಂದು ನಾವು ಹೇಳುತ್ತೇವೆ. ಈಗ ನನಗೆ ಭಯ ಬಂದಿರತಕ್ಕಂಥದ್ದು ಏನೆಂದರೆ, ಯಾವ ಮಟ್ಟಕ್ಕೆ ನಮ್ಮ ಪೊಲಿಟಿಕಲ್ ರೈವಲ್ರಿ ಹೋಗಿದೆಯೆಂದರೆ, ನಾನು ಆಶ್ರಯ ಸಮಿತಿ ಅಧ್ಯಕ್ಷನಾಗಿದ್ದೇನೆ. ನನ್ನ ಕ್ಷೇತ್ರಕ್ಕೆ ಮಾನ್ಯ ಮಂತ್ರಿಗಳು ಬಹಳ ದೊಡ್ಡ ಮನಸ್ಸು ಮಾಡಿ 715 ಮನೆಗಳನ್ನು ಈ ವರ್ಷ ಹಂಚಿಕೆ ಮಾಡಬೇಕೆಂದು ನನಗೆ ದಯಪಾಲಿಸಿದ್ದಾರೆ. ಬೇರೆಯವರಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಅಲ್ಲಿ ನಾಲ್ಕು ಜನ ಕಾಂಗ್ರೆಸ್ಸಿನ ಸದಸ್ಯರು ಇದ್ದಾರೆ. ಪೊಲಿಟಿಕಲ್ ರೈವಲ್ರಿ ಯಾವ ರೀತಿಯಾಗಿ ಬರುತ್ತದೆಯೆಂದರೆ ನಾನು ಪ್ರಾಮಾಣಿಕವಾಗಿ ಅದನ್ನು ಗ್ರಾಮಸಭೆಯಲ್ಲಿ ಮಾಡೋಣ, ಯಾರಿಗೆ ಅರ್ಹತೆ ಇದೆ ಅವರಿಗೆ ಕೊಡೋಣ ಎಂದರೆ ಅದು ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮ ಸ್ಥಾನದಿಂದ ಹಿಡಿದು ಎಲ್ಲಾ ಕಡೆಯೂ ಸಹಿತ ಇವತ್ತು ಪೊಲಿಟಿಕಲ್ ರೈವಲ್ರಿಗಳಿಂದ ನಮ್ಮ ಮೇಲೆ ಪರಸ್ಪರ ಕೆಸರುಗಳನ್ನು ಹಾಕಿಕೊಳ್ಳತಕ್ಕಂಥದ್ದು, ಮತ್ತು ಯಾವುದನ್ನೂ ಸಹಿತ ಪಕ್ಷಾತೀತವಾಗಿ ಮಾಡತಕ್ಕಂಥಾದ್ದು ಸುಳ್ಳು. ಅದು ಆಗುವುದಿಲ್ಲ. ಪಕ್ಷಾತೀತವಾಗಿ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಯಾರು ಕ್ಲಿಯರ್ ಆಗಿ ಇರತಕ್ಕಂಥ ಅಧಿಕಾರಿಗಳಿಗೆ ನಾವು ಪೋಸ್ಟಿಂಗ್ಸನ್ನು ಕೊಡಲಿಕ್ಕೆ ಆಗುವುದಿಲ್ಲ. ಯಾರು ನಮಗೆ ಫೇವರಬಲ್ ಆಗಿರುತ್ತಾರೆ ಅವರಿಗೆ ಮಾತ್ರ ಕೊಡತಕ್ಕಂಥ ಒಂದು ಪರಿಸ್ಥಿತಿ ಇವತ್ತು ದೇಶದಲ್ಲಿ ಉದ್ಭವವಾಗಿದೆ. ಕೇಂದ್ರ ಸರ್ಕಾರದಲ್ಲಿ ಕೂಡ ಅಧಿಕಾರಿಗಳನ್ನು ನಿಯೋಜನೆ ಮಾಡತಕ್ಕಂಥ ಸಂದರ್ಭದಲ್ಲಿ ಸಹಿತ ಇದೇ ರೀತಿಯ ಕೆಲಸ ಆಗುತ್ತಿದೆ. ರಾಜ್ಯದಲ್ಲೂ ಸಹಿತ ಅದೇ ಪರಿಸ್ಥಿತಿ ಆಗುತ್ತಿದೆ. ರಾಜ್ಯದಲ್ಲಿ ಸಣ್ಣ ಪ್ರಮಾಣದಲ್ಲಿ ಆದರೆ ಕೇಂದ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಹೀಗಾಗಿ ಈ ಕೆಳಹಂತದ ಅಧಿಕಾರಿಗಳ ಮೇಲೆ ನಮಗೆ ನಿಯಂತ್ರಣ ಇರಬೇಕು. ಅದಕ್ಕೆ ನಾನು ಒಂದು ಸಲಹೆಯನ್ನು ಮಾನ್ಯ ಗೃಹಮಂತ್ರಿಗಳಿಗೆ ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಅದು ಬಹಳ ಕಷ್ಟದ ಕೆಲಸ. ಆದರೆ ತಾವು ಅದನ್ನು ಮಾಡಿದರೆ ನಿಜವಾಗಿಯೂ ಕರ್ನಾಟಕ ಸರ್ಕಾರಕ್ಕೆ ಒಂದು ದೊಡ್ಡ ಉಪಕಾರ ಮಾಡಿದ ಹಾಗೆ ಆಗುತ್ತದೆ. ಏಕೆಂದರೆ ಈ ನಿಮ್ಮ ವಿಧೇಯಕದ ಉದ್ದೇಶ- ಜೂಜನ್ನು ತಪ್ಪಿಸತಕ್ಕಂಥದ್ದು, ಅನೈತಿಕ ವ್ಯವಹಾರಗಳನ್ನು ಕಳ್ಳಭಟ್ಟಿಯನ್ನು ತಪ್ಪಿಸತಕ್ಕಂಥದ್ದು, ಮಾದಕ ಮತ್ತು ಅಪರಾಧಿಗಳನ್ನು ಕಂಟ್ರೋಲ್‌ನಲ್ಲಿ ಇಡತಕ್ಕಂಥದ್ದು ಎಂದು ಹೇಳುತ್ತಿದ್ದೀರಿ. ಈಗ ಬಾಂಬೆಯಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದಂಥ ಅಪರಾಧಿಗಳು ಬೆಳಗಾಂನಲ್ಲಿ ಸವದತ್ತಿಯಲ್ಲಿ ಸಿಗುತ್ತಾರೆ. ಯಾವ ರೀತಿಯಲ್ಲಿ ಬಾಂಬೆಯಲ್ಲಿ

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ಬೆಂಗಳೂರು

ಇರತಕ್ಕಂಥ ಭೂಗತ ದೊರೆಗಳು ಬೆಂಗಳೂರು, ಮಂಗಳೂರು ಮುಂತಾದ ಕಡೆಗೆ ಬರುತ್ತಾರೆ ಎನ್ನುವುದು ಮಾನ್ಯ ಗೃಹಮಂತ್ರಿಗಳಿಗೆ ಚೆನ್ನಾಗಿ ಗೊತ್ತಿರುತ್ತದೆ. ಮತ್ತು ಇದೇ ಸಂದರ್ಭದಲ್ಲಿ ನಮ್ಮ ರಾಜ್ಯದ ಸಿ.ಓ.ಡಿ. ಪೊಲೀಸ್ ಅಧಿಕಾರಿಗಳು ಬಾಂಬ್ ಬ್ಲಾಸ್ಟನ್ನು ಮಾಡಿರತಕ್ಕಂಥ ಅಪರಾಧಿಗಳನ್ನು ಪತ್ತೆ ಮಾಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಕೀರ್ತಿ ಸರ್ಕಾರಕ್ಕೂ ಸಹ ಭಾಗಶಃ ಹೋಗಬೇಕು ಇಮಿಡಿಯೆಟ್ ಆಗಿ ಬಹುಶಃ ನಿಮಗೆ ಒಂದು ಮೊಬೈಲ್ ಫೋನ್ ಸಿಗದೇ ಹೋಗಿದ್ದಿದ್ದರೆ ಆ ಬಾಂಬ್ ಬ್ಲಾಸ್ಟನ್ನು ಯಾರು ಯಾರು ಮಾಡಿದರು ಎಂಬುದನ್ನು ಪತ್ತೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಬಹಳ ಒಳ್ಳೆಯ ಕೆಲಸವನ್ನು ನಮ್ಮ ಪೊಲೀಸ್‌ನವರು ಸಾರ್ವಜನಿಕರು ಭಯಭೀತರಾಗಿದ್ದಂಥ ಸಂದರ್ಭದಲ್ಲಿ ಮಾಡಿದ್ದಾರೆ. ಆದರೆ ಈ ಬಿಲ್ ತರುವುದರಿಂದ ಅದರ ದುರುಪಯೋಗ ಆಗಬಾರದು. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ - ಈಗ ಸಬ್ ಇನ್ಸ್‌ಪೆಕ್ಟರ್, ಹೆಡ್ ಕಾನ್ಸ್‌ಟೇಬಲ್, ಕಾನ್ಸ್‌ಟೇಬಲ್ಸ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ಸ್ ಹೀಗೆ ಎಲ್ಲವನ್ನೂ ಮಾಡುವುದಕ್ಕೆ ಆಗದಿರಬಹುದು. At least up to the level of Dy. S.P., ಕಮಿಷನ್ ಮಾಡಲಿಕ್ಕೆ ಆಗುತ್ತದೆಯೇ ಎಂಬುದನ್ನು ನೋಡಿ. ಒಂದು ಕಮಿಷನ್ ಎಂದರೆ ಅದರಲ್ಲಿ ಒಬ್ಬ ರಿಟೈರ್ಡ್ ಜಡ್ಜ್, ಗೃಹಮಂತ್ರಿಗಳಾದ ತಾವು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಕಾರ್ಯದರ್ಶಿ ಈ ರೀತಿಯಾಗಿ 4 ಜನ ಕುಳಿತುಕೊಂಡು ಮಾಡತಕ್ಕಂಥದ್ದು. ಅದು ಆಗುವುದಿಲ್ಲ ಎಂದು ಹೇಳಿದಾದ್ದಲ್ಲಿ ನೀವೇ ಕುಳಿತು ಒಂದು ಎಕ್ಸಿಕ್ಯೂಟೀವ್ ಪೋಸ್ಟ್ ಒಂದು ಕಡೆ 2 ವರ್ಷ ಅಥವಾ 3 ವರ್ಷ ಇರಬೇಕು ಎಂದು ನಿಯಮಾವಳಿಗೆ ತಿದ್ದುಪಡಿ ಮಾಡಿ, ಹಾಗೆ ಮಾಡದೇ ಹೋದರೆ ಬಹುಶಃ ಇದು ಹುಲಿ ಮೇಲೆ ಸವಾರಿ ಮಾಡಿದ ಹಾಗೆ ಆಗುತ್ತದೆ ಏನೋ ಎಂದು ನನಗೆ ಅನಿಸುತ್ತದೆ. ಇದನ್ನು ನನ್ನ ಅನುಭವದಿಂದ ಹೇಳುತ್ತಿರತಕ್ಕಂಥ ಮಾತಾಗಿದೆ. ಇದು ಬಹಳ ಕಷ್ಟವಾದ ಕೆಲಸ. ನಾವು ಕಾನೂನುಗಳನ್ನು ಮಾಡಿಕೊಳ್ಳುತ್ತೇವೆ, ಕಾನೂನುಗಳಿಗೆ ಎಷ್ಟೊಂದು ಶಕ್ತಿ ಬೇಕೋ ಆ ಶಕ್ತಿಯನ್ನು ಕೊಟ್ಟುಬಿಡುತ್ತೇವೆ, ಒಂದು ಸಾರಿ ಇದು ಆದಮೇಲೆ ನಾವೆಲ್ಲ ಅದಕ್ಕೆ ಹೋಗಿ ಸಿಕ್ಕಿಹಾಕಿಕೊಳ್ಳುತ್ತೇವೆ. ಮತ್ತು ಇದನ್ನು ವಾಪಾಸ್ಸು ತೆಗೆಯತಕ್ಕಂಥದ್ದು ಬಹಳ ಕಷ್ಟ ಆಗುತ್ತದೆ. ಮತ್ತು ನಮ್ಮ ಸಾಮಾಜಿಕ ಸಂಘರ್ಷ ಜಾತಿ ವೈಷಮ್ಯಗಳು ಎಷ್ಟು ಹೆಚ್ಚಾಗುತ್ತಿವೆ ಎಂಬುದನ್ನು ನೋಡುತ್ತಿದ್ದೇವೆ. ಆದರಿಂದಾಗಿ ಈ ಇಲಾಖೆಯ ಮೇಲೆ ಹಿಡಿತವನ್ನು ಇಟ್ಟುಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ನಾನು ಬಹಳ ವಿವರವಾಗಿ ಈ ಪೊಲೀಸ್ ಇಲಾಖೆ ಬೇಡಿಕೆ ಬಗ್ಗೆ ಮಾರ್ಚ್‌ನಲ್ಲಿ ಮಾತನಾಡುವಾಗ ಮಾತನಾಡುತ್ತೇನೆ. ನನ್ನ ಕೆಲವು ಸಲಹೆಗಳು ಇವೆ. ಆದರೆ ಸದ್ಯಕ್ಕೆ ಸದರಿ ವಿಧೇಯಕದಲ್ಲಿ ಇವೆರಡು ಕಾನೂನು ಏನಿದೆ, ಅದರಿಂದ ಕೆಳಹಂತದಲ್ಲಿ ಇರತಕ್ಕಂಥ ಅಧಿಕಾರಿಗಳ ಮೇಲೆ ಸರ್ಕಾರದಿಂದ ನಿಯಂತ್ರಣ ತಪ್ಪುತ್ತಿದೆ. ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ತಾವು ಯೋಚನೆ ಮಾಡಬೇಕು. ಏಕೆಂದರೆ. ಅಧಿಕಾರದಲ್ಲಿದ್ದಾಗ ಅವರೆಲ್ಲರೂ ಬಂದು ಹೇಳುತ್ತಾರೆ. ಅಧಿಕಾರ ಹೋದ ತಕ್ಷಣವೇ ನಿಮಗೆ ಆಗಿರುವ ಅನುಭವ ನಮಗೂ ಸಹ ಆಗಿದೆ, ನಮಗೆ ಆಗಿರುವ ಅನುಭವ ಮತ್ತೆ ನಿಮಗೂ ಸಹ ಮುಂದೆ ಆಗುತ್ತದೆ. ಆದ್ದರಿಂದ, ಇದಕ್ಕೆ ಎಲ್ಲಾದರು ಒಂದು ಕೊನೆಗಾಣಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಈ ವಿಧೇಯಕದ ಜೊತೆಗೆ ತಾವು ಮತ್ತೊಂದು ವಿಧೇಯಕವನ್ನು ತಯಾರು ಮಾಡಿದ್ದೆವು. ಆದರೆ ಅದನ್ನು ಈ ವಿಧಾನಸಭೆಯಲ್ಲಿ ಮಂಡಿಸಲಿಕ್ಕೆ ಆಗಿರಲಿಲ್ಲ.

ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು



ಆದ್ದರಿಂದ, ಅದನ್ನು ಆ ಅಧಿವೇಶನದಲ್ಲಿಯೇ ಸಾಧ್ಯವಾದ ಪಕ್ಷದಲ್ಲಿ ಮಂಡಿಸಿದ್ದರೆ, ಅದಕ್ಕೆ ನಾವೆಲ್ಲರೂ ಸರ್ವಾನುಮತದಿಂದ ಸಹಕಾರ ಕೊಡುತ್ತೇವೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನನ್ನದೊಂದು ಸಣ್ಣ ಕ್ಲಾರಿಫಿಕೇಷನ್ ಇದೆ. ಅದೇನೆಂದರೆ, ಸನ್ಮಾನ್ಯ ಸಿಂಧ್ಯರವರು ಹಿಂದೆ ಗೃಹ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಅವರಿಗೆ ಆಗಿರತಕ್ಕಂಥ ಅನುಭವದ ಹಿನ್ನಲೆಯಲ್ಲಿ ಇವತ್ತು ಮಾತನಾಡಿದ್ದಾರೆ. ನಾವೆಲ್ಲರೂ ಹೊಸಬರಾಗಿರುವುದರಿಂದ, ನಿಮ್ಮ ಇಲಾಖೆ ಯಾವರೀತಿ ನಡೆಯುತ್ತಿದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ನನ್ನ ಕ್ಲಾರಿಫಿಕೇಷನ್‌ಗೆ ತಾವು ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನನ್ನ ಕ್ಲಾರಿಫಿಕೇಶನ್ ಏನೆಂದರೆ, ಈಗ ಇರತಕ್ಕಂಥ ಕಾನೂನು ಅಡಿಯಲ್ಲಿ ಈಗ ನಡೆಯುತ್ತಿರುವ ಅಪರಾಧಗಳನ್ನು ಮಟ್ಟ ಹಾಕುವುದಕ್ಕೆ ಏಕೆ ಆಗಲಿಲ್ಲ? ಈ ಒಂದು ಸಣ್ಣ ಶಬ್ಧವನ್ನು ಸೇರಿಸಿದ ಕೂಡಲೇ ಅನೈತಿಕ ವ್ಯವಹಾರಗಳು, ಗೂಂಡಾ ಚಟುವಟಿಕೆಗಳೆಲ್ಲವೂ ಕೂಡ ಯಾವ ರೀತಿ ರದ್ದಾಗುತ್ತದೆ ಎನ್ನತಕ್ಕಂಥದ್ದು ನಮಗೆ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಒಂದೊಂದು ಕಾನೂನನ್ನು ಬಿಗಿಗೊಳಿಸಿದಷ್ಟು ಕೆಲವು ಅಧಿಕಾರಿಗಳಿಗೆ ಇದರಿಂದ ಸಾಕಷ್ಟು ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ಎಲ್ಲಾ ಅಧಿಕಾರಿಗಳು ಅಪ್ರಾಮಾಣಿಕರೆಂದು ಹೇಳುವುದಿಲ್ಲ. ಕೆಲವು ಅಧಿಕಾರಿಗಳು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಯಾವರೀತಿ ಎಂದರೆ, ಈ ಕಾನೂನು ಏನು ಹೇಳುತ್ತದೆ ನೋಡೆಂದು, ಕಾನೂನು ಪುಸ್ತಕವನ್ನು ತೋರಿಸಿ ಇವತ್ತಿನದಿವಸ ಸಾಕಷ್ಟು ಕಮಾಯಿ ಮಾಡತಕ್ಕಂಥ ಅಧಿಕಾರಿಗಳು ಇರುವಾಗ, ನೀವು ಯಾವುದೇ ಕಾನೂನಿನ ಅಸ್ತ್ರವನ್ನು ಅವರ ಕೈಗೆ ಕೊಟ್ಟರು ಸಹ ಅದು ಉಪಯೋಗವಾಗದೇ ಇದ್ದರೆ ಬಹುಶಃ ಇಂಥ ಕಾನೂನುಗಳನ್ನು ಇಲ್ಲಿ ನಾವೆಲ್ಲರು ಕುಳಿತುಕೊಂಡು ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಮಾನ್ಯ ಸಿಂಧ್ಯರವರು ಬಾಂಬ್ ಬ್ಲಾಸ್ಟ್ ಆಗಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಮೊನ್ನೆದಿವಸ ಬೆಂಗಳೂರಿನಲ್ಲಿ ಹೋಗುತ್ತಿರುವಾಗ ಕೆಲವು ಹುಡುಗರು ನಿಂತು ಮಾತನಾಡುತ್ತಿದ್ದರು. ಅದೇನೆಂದರೆ, ಇಲ್ಲಿರತಕ್ಕಂಥ ಹಂಪ್‌ಗೆ ಪೂಜೆ ಮಾಡಿಸಬೇಕು, ತಾವು ಏನಾದರೂ ಸಹಾಯ ಮಾಡಬೇಕೆಂದು ಕೇಳಿದರು. ಹಂಪ್‌ಗೆ ಏಕೆ ಪೂಜೆ ಮಾಡಿಸಬೇಕೆಂದು ನಾನು ಕೇಳಿದೆ. ಹಂಪ್ ಇಲ್ಲದೇ ಇದ್ದರೆ ಬಾಂಬ್ ಬ್ಲಾಸ್ಟ್ ಜನ ಸಿಕ್ಕುತ್ತಿರಲಿಲ್ಲವೆಂದು ಅಲ್ಲಿದ್ದಂಥ ಹುಡುಗರು ಹೇಳಿದರು. ಅಂದರೆ ನಮ್ಮ ಪೊಲೀಸ್‌ನವರಿಗೆ ಗೊತ್ತಾಗದೇ ಇರುವುದನ್ನು ರಸ್ತೆಯಲ್ಲಿರತಕ್ಕಂಥ ಹಂಪ್ ಪತ್ತೆ ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸಿಟ್ಟು ಮಾಡಿಕೊಳ್ಳದಿದ್ದರೆ ನಾನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಘಟನೆ ನಡೆದಂಥ ಸ್ಥಳದಲ್ಲಿರತಕ್ಕಂಥ ಹಂಪ್‌ಗೆ ತಾವೇನು ಪೂಜೆ ಮಾಡಬೇಕೆಂದು ಹೇಳಿದ್ದೀರಲ್ಲಾ, ಅಲ್ಲಿಯೇ ಐ.ಎ.ಎಫ್‌ನಲ್ಲಿಯೇ ಕೆಲಸ ಮಾಡುವವರು ಇದ್ದರು, ಅವರೇಕೆ ಹಿಡಿಯುವುದಕ್ಕೆ ಆಗಲಿಲ್ಲ? ಇವತ್ತಿನದಿವಸ ನಮ್ಮ ಸಿ.ಓ.ಡಿ.ಯವರು ಹಿಡಿದುಕೊಂಡು ಬಂದಿರುವವನು ಇಂಡಿಯನ್ ಏರ್‌ಫೋರ್ಸ್‌ನ ಸ್ಟೋರ್ ಕೀಪರ್ ಆಗಿ ಕೆಲಸ ಮಾಡುತ್ತಿದ್ದ. ಈತನನ್ನು ಮೊದಲ ಏಕೆ ಹಿಡಿಯಲಿಕ್ಕೆ ಆಗಲಿಲ್ಲ? ನೆನ್ನೆದಿವಸ ಹಿಡಿದಿರತಕ್ಕಂಥ ಶೇಕ್‌ಹುಸೇನ್....

ಅರಗ ಜ್ಞಾನೇಂದ್ರ : ಸ್ವಲ್ಪ ಕ್ಲೂ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಹಿಡಿದರೆ ಆ ನಂತರ ಕ್ಲೂ ಸಿಗುತ್ತದೆ. ಕ್ಲೂ ...ಂಡ ಎಲ್ಲಾ ಕಡೆ ಹೋಗಬೇಕು. ಇನ್‌ವೆಸ್ಟಿಗೇಶನ್‌ನನ್ನು ಇನ್ಯಾವ ರೀತಿಯಲ್ಲಿ ಮಾಡಬೇಕು? ...ಮಾಹಿತಿಗಳನ್ನು ಮನೆತನಕ ತಂದು ಕೊಡುತ್ತಾರೆಯೇ?

ಶ್ರೀ ಅರಗ ಜ್ಞಾನೇಂದ್ರ : ಅಲ್ಲಿ ಇರತಕ್ಕಂಥವರು ಒಳ್ಳೆಯವರು, ಇಲ್ಲಿರತಕ್ಕಂಥವರು ಕೆಟ್ಟವರೆಂದು ನಾನು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ವೇಳೆ ಇದರಲ್ಲಿ ಎಲ್ಲಿ ತಪ್ಪಾಗಿದೆ ಎಂಬುದಾದರು ಹೇಳಿ. ಏಕೆಂದರೆ ತಪ್ಪು ಮಾಡಿದಲ್ಲಿ ನಾವು ಟೀಕೆಗೆ ಒಳಗಾಗೋಣ. ಆದರೆ ಸರಿಯಾಗಿ ಮಾಡಿರುವುದಕ್ಕೂ ನೀವು ಸರಿಯಿಲ್ಲವೆಂದು ಹೇಳುವುದಾದರೆ ನಾವೇನು ಮಾಡುವುದು? ನಮ್ಮ ಅಧಿಕಾರಿಗಳು ಮೂರ್‍ನಾಲ್ಕು ತಿಂಗಳಿಂದ ಸತತವಾಗಿ ಪ್ರಯತ್ನ ಮಾಡಿ ಈ ಒಂದು ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಒಂದು ಕಾರ್ಯದಲ್ಲಿ ಯಶ್ವಸಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಒಂದು ಕಾರ್ಯದಲ್ಲಿ ಯಶ್ವಸಿಯಾಗಿರುವುದಕ್ಕೆ ಶಹಭಾಷ್‌ಗಿರಿಯನ್ನು ಕೊಟ್ಟು, ಇದಕ್ಕೆ ಹೆಚ್ಚಿನ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಮಾನ್ಯ ಸದಸ್ಯರು ಹಂಪ್‌ಗೆ ಶಹಭಾಷ್‌ಗಿರಿಯನ್ನು ಕೊಡುತ್ತಾರಂತೆ.

ಶ್ರೀ ಅರಗ ಜ್ಞಾನೇಂದ : ನಾನು ಈಗಾಗಲೇ ಹೇಳಿದಂತೆ, ಅಲ್ಲಿಯವರು ಒಳ್ಳೆಯವರು, ಇಲ್ಲಿಯವರು ಕೆಟ್ಟವರೆಂದು ನಾನು ಹೇಳುತ್ತಿಲ್ಲ ಮತ್ತು ನಾನು ಟೀಕೆಯನ್ನು ಸಹ ಮಾಡುವುದಕ್ಕೆ ಹೋಗುತ್ತಿಲ್ಲ. ಹಾಗೆಯೆ ನಿಮ್ಮ ಮೇಲೂ ಸಹ ನಮಗೆ ಅಗೌರವ ಇಲ್ಲ. ಹಾಗೆಯೇ ಇಲಾಖೆಯ ಮೇಲೂ ಸಹ ನನಗೆ ಹೆಮ್ಮೆ ಇದೆ. ಇನ್ನು ಜುಗಾರಿ ಬಗ್ಗೆ ಹೇಳುವುದಾದರೆ, ನಮ್ಮ ಪೊಲೀಸ್ ಇಲಾಖೆಗೆ ಗೊತ್ತಿಲ್ಲದೇ ಎಲ್ಲಾದರು ಜುಗಾರಿ ನಡೆಯುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ಈಗಾಗಲೇ ಇರತಕ್ಕಂಥ ಆ್ಯಕ್ಟ್. ಇದಕ್ಕೆ 1985ರಲ್ಲಿ ಮಾನ್ಯ ಸಿಂಧ್ಯರವರ ಸರ್ಕಾರ ಇದ್ದಾಗ ಇದರ ಒರಿಜಿನಲ್ ಆ್ಯಕ್ಟ್ ಪಾಸ್ ಆಗಿತ್ತು. ಇದಕ್ಕೆ ಶ್ರೀಮಾನ್ ಸಿಂಧ್ಯರವರೇ ಪುನಃ ತಿದ್ದುಪಡಿಯನ್ನು ತಂದಿದ್ದರು. ಆದರೆ ಇದನ್ನು ಈ ಸಭೆಯಲ್ಲಿ ಅವರಿಗೆ ಮಂಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ, ನಾನು ಇವತ್ತಿನ ಸಭೆಯಲ್ಲಿ ಮಂಡಿಸುತ್ತಿದ್ದೇನೆ. ಇದೇನು ಹೊಸ ಆಕ್ಟ್ ಅಲ್ಲ ಮತ್ತು ಇದರಲ್ಲಿ ಹೊಸ ಹೆಸರುಗಳೇನು ಇಲ್ಲ. We are extending the same thing to two chapters of IPC. It is only extension of this Act.

ಶ್ರೀ ಅಗರಜ್ಞಾನೇಂದ್ರ : ಪ್ರತಿಬಂಧಕ 1985 ಅಧಿನಿಯಮ 12ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ಸದರಿ ವಿಧೇಯಕವನ್ನು ತಂದಿದ್ದೇವೆಂದು ತಾವು ಹೇಳುತ್ತಿದ್ದೀರಿ. ಈ ಒಂದು ಇಲಾಖೆಯನ್ನು ನೀವು ಎಷ್ಟಾದರು ಬಲಪಡಿಸಿ ನಾವೇನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ಈ ವಿಧೇಯಕ ಬಂದ ತಕ್ಷಣ ಏನೋ ಪರಿವರ್ತನೆ ಅಥವಾ



ಮಾಯಾಜಾಲ ಆಗುತ್ತದೆ ಎನ್ನತಕ್ಕಂಥ ಭ್ರಮೆ ನಮಗ್ಯಾರಿಗೂ ಸಹ ಇಲ್ಲ. ತಾವು, ನಿಮ್ಮ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ, ಸಿಬ್ಬಂದಿ ವರ್ಗದವರ ಹೃದಯದಲ್ಲಿ ಇದನ್ನೆಲ್ಲಾ ತೊಡೆದು ಹಾಕಿ ಪೊಲೀಸ್ ಇಲಾಖೆಯಲ್ಲಿ ಏನಾದರೂ ಒಂದು ಪರಿವರ್ತನೆ ಮಾಡುವುದಕ್ಕೋಸ್ಕರ ತಿದ್ದುಪಡಿ ತರುವುದಕ್ಕೆ ನಿಮಗೆ ಸಾಧ್ಯವಾದರೆ ಮಾಡಿ. ಆಗ ಇವೆಲ್ಲಾ ಸರಿಯಾಗುತ್ತದೆ. ಇವತ್ತಿನದಿವಸ ವರ್ಗಾವಣೆ ಮಾಡಿಸಿಕೊಳ್ಳಲು ಒಂದು ರೇಟ್ ಫಿಕ್ಸ್ ಆಗಿದೆ. ಒಂದೊಂದು ಪೊಲೀಸ್ ಸ್ಟೇಷನ್‌ಗೆ ವರ್ಗಾವಣೆ ಮಾಡಿಸಿಕೊಳ್ಳಲು ಲಕ್ಷಾಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಉದಾಹರಣೆ ಹೇಳುವುದಾದರೆ, ಬೆಂಗಳೂರಿನಲ್ಲಿರತಕ್ಕಂಥ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ಗೆ ಹೋಗುವುದಕ್ಕೆ ನಮಗೂ, ನಿಮಗೂ ಏಕೆ ಒತ್ತಡ ತರುತ್ತಾರೆ? ಕಾರಣ ಏನೆಂದರೆ, ಇವತ್ತಿನ ದಿವಸ ಅಲ್ಲಿ ಆಗುತ್ತಿರುವ ಅನೈತಿಕ ವ್ಯವಹಾರಗಳಿಂದ ಬರತಕ್ಕಂಥ ಆದಾಯದಿಂದ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಕಮಾಯಿ ಆಗುತ್ತಿದೆ. ಇವತ್ತು ಈ ರೀತಿಯಾದ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಾದರೆ ಈ ಎಲ್ಲಾ ನಿಯಮಾವಳಿಗಳಿಗೆ ಬಲ ಮತ್ತು ಬೆಲೆ ಬರುತ್ತದೆ. ಹಾಗೆಯೇ ನಾವೆಲ್ಲಾ ಕುಳಿತು ಚರ್ಚೆ ಮಾಡಿದಕ್ಕೂ ಸಹ ಗೌರವ ಇರುತ್ತದೆ. ಇವತ್ತಿನದಿವಸ ಸಾಮಾನ್ಯ ಜನ ಅಲ್ಲಿಗೆ ಹೋಗಬಾರದು ಮತ್ತು ಇದರ ಬಗ್ಗೆ ಅವರಿಗೆ ಎಚ್ಚರಿಕೆ ಬರಬೇಕು ಎನ್ನತಕ್ಕಂಥ ಕಳಕಳಿ ಇದ್ದರೆ, ಮೊದಲು ನಮ್ಮ ಪೊಲೀಸ್ ಇಲಾಖೆಯನ್ನು ಪರಿವರ್ತನೆ ಮಾಡತಕ್ಕಂಥ ಪ್ರಯತ್ನ ನಮ್ಮೆಲ್ಲರ ಕಡೆಯಿಂದ ಆಗಬೇಕು. ಮಾನ್ಯ ಸಚಿವರು ಈ ಒಂದು ಇಲಾಖೆಯ ಅಧಿಕಾರ ವಹಿಸಿಕೊಂಡಂಥ ಸಂದರ್ಭದಲ್ಲಿ ತಮ್ಮ ಇಲಾಖೆ ಬಗ್ಗೆ ಏನಾದರು ಒಂದು ಪರಿವರ್ತನೆ ಮಾಡತಕ್ಕಂಥ ಕೆಲಸ ತಮ್ಮ ಕಡೆಯಿಂದ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ಈಗ ತಂದಿರತಕ್ಕಂಥ ತಿದ್ದುಪಡಿ ಬಗ್ಗೆ ನಾನೇನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ವಿಧೇಯಕದ ಮೇಲೆ ಸನ್ಮಾನ್ಯ ಸಿಂಧ್ಯರವರು ಮತ್ತು ಸನ್ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ ಪ್ರಕಾರ ಎಲ್ಲಾದರು ಮಿಸ್‌ಯೂಜ್ ಆಗಬಹುದೇನೋ ಎನ್ನತಕ್ಕಂಥ ಚಿಂತೆ ನನಗೂ ಕೂಡ ಕಾಡುತ್ತಿದೆ. ಈಗಾಗಲೇ ಸನ್ಮಾನ್ಯ ಸಿಂಧ್ಯರವರು ಹೇಳಿದಂತೆ, ಗೋಕಾಕ್‌ನಲ್ಲಿ ನಾಯಕರ ಪ್ರತಿಸ್ಪರ್ಧಿಯವರ ಜೊತೆ ಹೊಡೆದಾಟವಾದಂಥ ಸಂದರ್ಭದಲ್ಲಿ ಅನೇಕ ಆತಂಕಗಳು ಉಂಟಾದವು. ನಾನು ಈ ಸಂದರ್ಭದಲ್ಲಿ ಇಸ್ಪೀಟ್ ಆಟದ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಜೂಜ್ ಎನ್ನತಕ್ಕಂಥದು ನಮ್ಮ ಪ್ರತಿಬಂಧಕ ಕಾಯಿದೆಗಳಲ್ಲಿ ಮತ್ತು ಐ.ಪಿ.ಸಿ.ಯಲ್ಲಿಯೂ ಕೂಡ ಮಿಸ್‌ಯೂಸ್ ಆಗುವಂಥದನ್ನು ನಾವು ನೋಡುತ್ತಾ ಬಂದಿದ್ದೇವೆ. ಪ್ರಿವೆಂಟೀವ್ ಮೆಜರ್ ತರುವುದಕ್ಕೋಸ್ಕರ. ಸಿಆರ್‌ಪಿಸಿ ಕಲಂ 107ರ ಅಡಿಯಲ್ಲಿ ಇದನ್ನು ತರಲಾಗಿದೆ. ಯಾವುದೋ ಒಂದು ಕಾರಣಕ್ಕಾಗಿ ಎರಡು ತಂಡಗಳ ನಡುವೆ ಹೊಡೆದಾಟ, ವೈಷಮ್ಯ ಉದ್ಭವವಾಗುವಂಥ ಸಂದರ್ಭದಲ್ಲಿ ಮತ್ತು ಶಾಂತಿ ಸುವ್ಯವಸ್ಥೆಗೆ ಭಂಗ ತರುವಂಥ ಒಂದು ಆತಂಕ ಉಂಟಾದಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡಿ, ಆ ತಂಡಗಳ ಮುಖ್ಯಸ್ಥರನ್ನು ಕರೆಸಿ ಬಾಂಡ್ ತೆಗೆದುಕೊಳ್ಳತಕ್ಕಂಥ ಒಂದು ವ್ಯವಸ್ಥೆ ಇದೆ. ಅದೇ ರೀತಿ ಚಾರ್ಜ್ ಶೀಟ್ ಹಾಕುವಂತಹ ಸಂದರ್ಭದಲ್ಲಿ 161 ಮತ್ತು 162 ಸ್ಟೇಟ್‌ಮೆಂಟ್ ಬರೆದುಕೊಳ್ಳುವಾಗ ನಿರಪರಾಧಿಯಾಗಿರತಕ್ಕಂಥ ವ್ಯಕ್ತಿಯನ್ನು ಸೇರಿಸುವಂತಹ ಒಂದು ದೌರ್ಭಾಗ್ಯದ ಸಂದರ್ಭಗಳನ್ನು

ಶ್ರೀ ಅರಗ ಜ್ಞಾನೇಂದ್ರ : ಸ್ವಲ್ಪ ಕ್ಲೂ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಹಿಡಿದರೆ ಆ ನಂತರ ಕ್ಲೂ ಸಿಗುತ್ತದೆ. ಕ್ಲೂ ತೆಗೆದುಕೊಂಡೆ ಎಲ್ಲಾ ಕಡೆ ಹೋಗಬೇಕು. ಇನ್‌ವೆಸ್ಟಿಗೇಶನ್‌ನನ್ನು ಇನ್ಯಾವ ರೀತಿಯಲ್ಲಿ ಮಾಡಬೇಕು? ಎಲ್ಲಾ ಮಾಹಿತಿಗಳನ್ನು ಮನೆತನಕ ತಂದು ಕೊಡುತ್ತಾರೆಯೇ?

ಶ್ರೀ ಅರಗ ಜ್ಞಾನೇಂದ್ರ : ಅಲ್ಲಿ ಇರತಕ್ಕಂಥವರು ಒಳ್ಳೆಯವರು, ಇಲ್ಲಿರತಕ್ಕಂಥವರು ಕೆಟ್ಟವರೆಂದು ನಾನು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ವೇಳೆ ಇದರಲ್ಲಿ ಎಲ್ಲಿ ತಪ್ಪಾಗಿದೆ ಎಂಬುದಾದರು ಹೇಳಿ. ಏಕೆಂದರೆ ತಪ್ಪು ಮಾಡಿದಲ್ಲಿ ನಾವು ಟೀಕೆಗೆ ಒಳಗಾಗೋಣ. ಆದರೆ ಸರಿಯಾಗಿ ಮಾಡಿರುವುದಕ್ಕೂ ನೀವು ಸರಿಯಿಲ್ಲವೆಂದು ಹೇಳುವುದಾದರೆ ನಾವೇನು ಮಾಡುವುದು? ನಮ್ಮ ಅಧಿಕಾರಿಗಳು ಮೂರ್ನಾಲ್ಕು ತಿಂಗಳಿಂದ ಸತತವಾಗಿ ಪ್ರಯತ್ನ ಮಾಡಿ ಈ ಒಂದು ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಒಂದು ಕಾರ್ಯದಲ್ಲಿ ಯಶ್ವಸಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಒಂದು ಕಾರ್ಯದಲ್ಲಿ ಯಶ್ವಸಿಯಾಗಿರುವುದಕ್ಕೆ ಶಹಭಾಷ್‌ಗಿರಿಯನ್ನು ಕೊಟ್ಟು, ಇದಕ್ಕೆ ಹೆಚ್ಚಿನ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಮಾನ್ಯ ಸದಸ್ಯರು ಹಂಪ್‌ಗೆ ಶಹಭಾಷ್‌ಗಿರಿಯನ್ನು ಕೊಡುತ್ತಾರಂತೆ.

ಶ್ರೀ ಅರಗ ಜ್ಞಾನೇಂದ : ನಾನು ಈಗಾಗಲೇ ಹೇಳಿದಂತೆ, ಅಲ್ಲಿಯವರು ಒಳ್ಳೆಯವರು, ಇಲ್ಲಿಯವರು ಕೆಟ್ಟವರೆಂದು ನಾನು ಹೇಳುತ್ತಿಲ್ಲ ಮತ್ತು ನಾನು ಟೀಕೆಯನ್ನು ಸಹ ಮಾಡುವುದಕ್ಕೆ ಹೋಗುತ್ತಿಲ್ಲ. ಹಾಗೆಯೆ ನಿಮ್ಮ ಮೇಲೂ ಸಹ ನಮಗೆ ಅಗೌರವ ಇಲ್ಲ. ಹಾಗೆಯೇ ಇಲಾಖೆಯ ಮೇಲೂ ಸಹ ನನಗೆ ಹೆಮ್ಮೆ ಇದೆ. ಇನ್ನು ಜುಗಾರಿ ಬಗ್ಗೆ ಹೇಳುವುದಾದರೆ, ನಮ್ಮ ಪೊಲೀಸ್ ಇಲಾಖೆಗೆ ಗೊತ್ತಿಲ್ಲದೇ ಎಲ್ಲಾದರು ಜುಗಾರಿ ನಡೆಯುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ಈಗಾಗಲೇ ಇರತಕ್ಕಂಥ ಆ್ಯಕ್ಟ್. 1985ರಲ್ಲಿ ಮಾನ್ಯ ಸಿಂಧ್ಯರವರ ಸರ್ಕಾರ ಇದ್ದಾಗ ಇದರ ಒರಿಜಿನಲ್ ಆ್ಯಕ್ಟ್ ಪಾಸ್ ಆಗಿತ್ತು. ಇದಕ್ಕೆ ಶ್ರೀಮಾನ್ ಸಿಂಧ್ಯರವರೇ ಪುನಃ ತಿದ್ದುಪಡಿಯನ್ನು ತಂದಿದ್ದರು. ಆದರೆ ಇದನ್ನು ಈ ಸಭೆಯಲ್ಲಿ ಅವರಿಗೆ ಮಂಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ, ನಾನು ಇವತ್ತಿನ ಸಭೆಯಲ್ಲಿ ಮಂಡಿಸುತ್ತಿದ್ದೇನೆ. ಇದೇನು ಹೊಸ ಆಕ್ಟ್ ಅಲ್ಲ ಮತ್ತು ಇದರಲ್ಲಿ ಹೊಸ ಹೆಸರುಗಳೇನು ಇಲ್ಲ. We are extending the same thing to two chapters of IPC. It is only extension of this Act.

ಶ್ರೀ ಅಗರಜ್ಞಾನೇಂದ್ರ : ಪ್ರತಿಬಂಧಕ 1985 ಅಧಿನಿಯಮ 12ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ಸದರಿ ವಿಧೇಯಕವನ್ನು ತಂದಿದ್ದೇವೆಂದು ತಾವು ಹೇಳುತ್ತಿದ್ದೀರಿ. ಈ ಒಂದು ಇಲಾಖೆಯನ್ನು ನೀವು ಎಷ್ಟಾದರು ಬಲಪಡಿಸಿ ನಾವೇನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ಈ ವಿಧೇಯಕ ಬಂದ ತಕ್ಷಣ ಏನೋ ಪರಿವರ್ತನೆ ಅಥವಾ



ಮಾಯಾಜಾಲ ಆಗುತ್ತದೆ ಎನ್ನತಕ್ಕಂಥ ಭ್ರಮೆ ನಮಗ್ಯಾರಿಗೂ ಸಹ ಇಲ್ಲ. ತಾವು, ನಿ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ, ಸಿಬ್ಬಂದಿ ವರ್ಗದವರ ಹೃದಯದಲ್ಲಿ ಇದನ್ನೆಲ್ಲಾ ತೊಡ ಹಾಕಿ ಪೊಲೀಸ್ ಇಲಾಖೆಯಲ್ಲಿ ಏನಾದರೂ ಒಂದು ಪರಿವರ್ತನೆ ಮಾಡುವುದಕ್ಕೋಸ್ಕರ ತಿದ್ದುಪ ತರುವುದಕ್ಕೆ ನಿಮಗೆ ಸಾಧ್ಯವಾದರೆ ಮಾಡಿ. ಆಗ ಇವೆಲ್ಲಾ ಸರಿಯಾಗುತ್ತದೆ. ಇವತ್ತಿನದಿವಸ ವರ್ಗಾವ ಮಾಡಿಸಿಕೊಳ್ಳಲು ಒಂದು ರೇಟ್ ಫಿಕ್ಸ್ ಆಗಿದೆ. ಒಂದೊಂದು ಪೊಲೀಸ್ ಸ್ಟೇಷನ್‌ಗೆ ವರ್ಗಾವ ಮಾಡಿಸಿಕೊಳ್ಳಲು ಲಕ್ಷಾಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಉದಾಹರಣೆ ಹೇಳುವುದಾದ ಬೆಂಗಳೂರಿನಲ್ಲಿರತಕ್ಕಂಥ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ಗೆ ಹೋಗುವುದಕ್ಕೆ ನಮಗೂ, ನಿಮಗ ಏಕೆ ಒತ್ತಡ ತರುತ್ತಾರೆ? ಕಾರಣ ಏನೆಂದರೆ, ಇವತ್ತಿನ ದಿವಸ ಅಲ್ಲಿ ಆಗುತ್ತಿರುವ ಅನೈತಿಕ ವ್ಯವಹಾರಗಳಿಂ ಬರತಕ್ಕಂಥ ಆದಾಯದಿಂದ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಕಮಾಯಿ ಆಗುತ್ತಿದೆ. ಇವತ್ತು ಈ ರೀತಿಯಾ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಾದರೆ ಈ ಎಲ್ಲಾ ನಿಯಮಾವಳಿಗಳಿಗೆ ಬಲ ಮ ಬೆಲೆ ಬರುತ್ತದೆ. ಹಾಗೆಯೇ ನಾವೆಲ್ಲಾ ಕುಳಿತು ಚರ್ಚೆ ಮಾಡಿದಕ್ಕೂ ಸಹ ಗೌರವ ಇರುತ್ತದೆ. ಇವತ್ತಿನದಿವ ಸಾಮಾನ್ಯ ಜನ ಅಲ್ಲಿಗೆ ಹೋಗಬಾರದು ಮತ್ತು ಇದರ ಬಗ್ಗೆ ಅವರಿಗೆ ಎಚ್ಚರಿಕೆ ಬರಬೇಕು ಎನ್ನತಕ್ಕಂ ಕಳಕಳಿ ಇದ್ದರೆ, ಮೊದಲು ನಮ್ಮ ಪೊಲೀಸ್ ಇಲಾಖೆಯನ್ನು ಪರಿವರ್ತನೆ ಮಾಡತಕ್ಕಂಥ ಪ್ರಯ ನಮ್ಮೆಲ್ಲರ ಕಡೆಯಿಂದ ಆಗಬೇಕು. ಮಾನ್ಯ ಸಚಿವರು ಈ ಒಂದು ಇಲಾಖೆಯ ಅಧಿಕಾರ ವಹಿಸಿಕೊಂಡಂ ಸಂದರ್ಭದಲ್ಲಿ ತಮ್ಮ ಇಲಾಖೆ ಬಗ್ಗೆ ಏನಾದರು ಒಂದು ಪರಿವರ್ತನೆ ಮಾಡತಕ್ಕಂಥ ಕೆಲಸ ತವ ಕಡೆಯಿಂದ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ಈಗ ತಂದಿರತಕ್ಕಂ ತಿದ್ದುಪಡಿ ಬಗ್ಗೆ ನಾನೇನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ವಿಧೇಯಕದ ಮೇ ಸನ್ಮಾನ್ಯ ಸಿಂಧ್ಯರವರು ಮತ್ತು ಸನ್ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ ಪ್ರಕಾರ ಎಲ್ಲಾದ ಮಿಸ್‌ಯೂಜ್ ಆಗಬಹುದೇನೋ ಎನ್ನತಕ್ಕಂಥ ಚಿಂತೆ ನನಗೂ ಕೂಡ ಕಾಡುತ್ತಿದೆ. ಈಗಾಗ ಸನ್ಮಾನ್ಯ ಸಿಂಧ್ಯರವರು ಹೇಳಿದಂತೆ, ಗೋಕಾಕ್‌ನಲ್ಲಿ ನಾಯಕರ ಪ್ರತಿಸ್ಪರ್ಧಿಯವರ ಜೊ ಹೊಡೆದಾಟವಾದಂಥ ಸಂದರ್ಭದಲ್ಲಿ ಅನೇಕ ಆತಂಕಗಳು ಉಂಟಾದವು. ನಾನು ಈ ಸಂದರ್ಭದ ಇಸ್ಪೀಟ್ ಆಟದ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಜೂಜ್ ಎನ್ನತಕ್ಕಂಥ ನಮ್ಮ ಪ್ರತಿಬಂಧಕ ಕಾಯಿದೆಗಳಲ್ಲಿ ಮತ್ತು ಐ.ಪಿ.ಸಿ.ಯಲ್ಲಿಯೂ ಕೂಡ ಮಿಸ್‌ಯೂಸ್ ಆಗುವಂಥದ ನಾವು ನೋಡುತ್ತಾ ಬಂದಿದ್ದೇವೆ. ಪ್ರಿವೆಂಟೀವ್ ಮೆಜರ್ ತರುವುದಕ್ಕೋಸ್ಕರ. ಸಿಆರ್‌ಪಿಸಿ ಕ 107ರ ಅಡಿಯಲ್ಲಿ ಇದನ್ನು ತರಲಾಗಿದೆ. ಯಾವುದೋ ಒಂದು ಕಾರಣಕ್ಕಾಗಿ ಎರಡು ತಂಡ ನಡುವೆ ಹೊಡೆದಾಟ, ವೈಷಮ್ಯ ಉದ್ಭವವಾಗುವಂಥ ಸಂದರ್ಭದಲ್ಲಿ ಮತ್ತು ಶಾಂತಿ ಸುವ್ಯವ ಭಂಗ ತರುವಂಥ ಒಂದು ಆತಂಕ ಉಂಟಾದಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡಿ, ತಂಡಗಳ ಮುಖ್ಯಸ್ಥರನ್ನು ಕರೆಸಿ ಬಾಂಡ್ ತೆಗೆದುಕೊಳ್ಳತಕ್ಕಂಥ ಒಂದು ವ್ಯವಸ್ಥೆ ಇದೆ. ಅದೇ ರಿ ಚಾರ್ಜ್ ಶೀಟ್ ಹಾಕುವಂತಹ ಸಂದರ್ಭದಲ್ಲಿ 161 ಮತ್ತು 162 ಸ್ಟೇಟ್‌ಮೆಂಟ್ ಬರೆದುಕೊಳ್ಳುವ ನಿರಪರಾಧಿಯಾಗಿರತಕ್ಕಂಥ ವ್ಯಕ್ತಿಯನ್ನು ಸೇರಿಸುವಂತಹ ಒಂದು ದೌರ್ಭಾಗ್ಯದ ಸಂದರ್ಭಗಳ

[illegible] ನಾವೆಲ್ಲರೂ ಅನುಭವಿಸಿದ್ದೇವೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ [illegible]ಳುವುದೇನೆಂದರೆ, ಸಾಧ್ಯವಾದ ಮಟ್ಟಿಗೆ ಕೆಳ ಹಂತದಲ್ಲಿರತಕ್ಕಂಥ ಪೊಲೀಸ್ ಅಧಿಕಾರಿಗಳಿಗೆ [illegible]ೀ ರೀತಿಯ ಮಿಸ್‌ಯೂಸ್ ಮಾಡಲಿಕ್ಕೆ ಅವಕಾಶ ನೀಡಲಾರದಂಥ ಒಂದು ತಿದ್ದುಪಡಿ ಇದು [illegible]ಗಬೇಕಾಗಿದೆ. ಹಾಗೆಯೇ, ಇದರಲ್ಲಿ ವಿಶೇಷವಾಗಿ ಜೂಜುಕೋರರು ಎಂದು ಏನು ನಮೂದು ಮಾಡಲಾಗಿದೆ, ಇದರ ಬಗ್ಗೆ ಸಂಪೂರ್ಣವಾದಂಥ ವಿವರಣೆಯನ್ನು ಕೊಡಬೇಕು. ಹಾಗೆಯೇ ಇದರ ಬಗ್ಗೆ ಸ್ಪೆಸಿಫಿಕ್ ಆದ ಒಂದು ಡೆಫ್ನೇಶನನ್ನು ಕ್ಲಿಯರ್ ಮಾಡಿದರೆ ಈ ತಿದ್ದುಪಡಿಗೆ ಒಳ್ಳೆಯದೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಗೃಹ ಸಚಿವರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಪ್ರಕಾರ ಈ ವಿಧೇಯಕ 1985ನೇ ಇಸವಿಯಲ್ಲಿಯೇ ಜಾರಿಗೆ ಬಂದಿತ್ತು. ಈಗ ಸದರಿ ವಿಧೇಯಕಕ್ಕೆ ಎರಡು ತಿದ್ದುಪಡಿಗಳನ್ನು ಕೇಳುತ್ತಿದ್ದಾರೆ. ಐ.ಪಿ.ಸಿ.ಯಲ್ಲಿರತಕ್ಕಂಥ ಎರಡು ಚಾಪ್ಟರ್‌ಗಳನ್ನು ಈ ವಿಧೇಯಕಕ್ಕೆ ಸೇರಿಸಬೇಕು ಎನ್ನತಕ್ಕಂಥ ಉದ್ದೇಶ ಇಟ್ಟುಕೊಂಡು ಈ ಸದನದಲ್ಲಿ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದಾರೆ. ಶಾಸನ ರಚನೆ ಮಾಡತಕ್ಕಂಥ ಈ ಸಭೆಯಲ್ಲಿ ಸದರಿ ವಿಧೇಯಕವನ್ನು ಮೊದಲು 1985ರಲ್ಲಿ ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ ಏನಾದರೂ ಎಡರುತೊಡರುಗಳಿತ್ತೆ? ಹಾಗೆಯೇ ಯಾವ ಕಾರಣಕ್ಕಾಗಿ ಈ ಎರಡು ಚಾಪ್ಟರ್‌ಗಳನ್ನು ಈಗ ಸೇರಿಸಬೇಕು ಎನ್ನತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳ ಮೂಲಕ ನಮಗೆ ವಿವರಣೆ ಬೇಕು. ನಮಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮೇಲೆ ನಂಬಿಕೆ ಇದೆ. ಆದರೆ, ಪೊಲೀಸ್‌ನವರಿಗೆ ಅಧಿಕಾರ ಕೊಡತಕ್ಕಂಥ ಸಂದರ್ಭದಲ್ಲಿ ನಾವು ಹತ್ತಾರು ಸಾರಿ ಯೋಚನೆ ಮಾಡತಕ್ಕಂಥದ್ದು ಬಹಳ ಸೂಕ್ತವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಹಾಲಿ ಇರತಕ್ಕಂತ ವಿಧೇಯಕಕ್ಕೆ ಈ ಎರಡು ಚಾಪ್ಟರ್‌ಗಳನ್ನು ಸೇರಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದು, ಈಗ ಇದಕ್ಕೆ ಇರತಕ್ಕಂಥ ಎಡರುತೊಡರುಗಳ ಬಗ್ಗೆ ಮೊದಲು ವಿವರಣೆ ಕೊಡಿ. ಯಾವುದೇ ಒಂದು ಕಾಯಿದೆಗೆ ತಿದ್ದುಪಡಿತರತಕ್ಕಂಥದ್ದು ಸಹಜ. ಆದರೆ ಇದನ್ನು ಜಾರಿಗೊಳಿಸುವಂಥ ಸಂದರ್ಭದಲ್ಲಿ ಏನು ತೊಡಗು ಆಗುತ್ತದೆ ಎನ್ನತಕ್ಕಂಥದು ನಮ್ಮ ಅನುಭವಕ್ಕೆ ಬರುತ್ತದೆ. ನಾನು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ನೀವು ಮೊದಲು ವಿವರಣೆ ಕೊಡುವುದು ಸೂಕ್ತ. ಈ ಮಸೂದೆಗೆ ಒಪ್ಪಿಗೆ ಕೊಡುವುದರಲ್ಲಿ ನಮ್ಮದೇನು ಅಭ್ಯಂತರವಿಲ್ಲ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

+ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ಗುಪ್ತಚಾರ ಇಲಾಖೆಗೆ ಸಂಬಂಧಪಟ್ಟಂತೆ ಮೊನ್ನೆ ದಿವಸ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದೃಷ್ಟವಶಾತ್ ಇದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಲ್ಲಿ ಸೇರಿದ್ದು, ನನಗೆ ಈಗ ಲಿಖಿತದ ಮೂಲಕ ಉತ್ತರ ಒದಗಿಸಿಕೊಟ್ಟಿದ್ದಾರೆ. ಗುಪ್ತಚಾರ ಇಲಾಖೆಗೆ ಸಂಬಂಧಪಟ್ಟಂತೆ ಮುಂದೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈಗಾಗಲೇ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ತಾವು ನನಗೆ ಅವಕಾಶ ಮಾಡಿಕೊಡಬೇಕು. ಈ ಇಲಾಖೆಯಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಎಂಬುದನ್ನು



ಮತ್ತು ಇನ್ನು ಅನೇಕ ಮಾಹಿತಿಗಳನ್ನು ಕೊಡಬೇಕೆಂದು ಪ್ರಶ್ನೆಯನ್ನು ಕೇಳಿದ್ದೆ. ಆದರೆ ನಾನು ಕೇಳಿರತಕ್ಕಂಥ ಪ್ರಶ್ನೆಗೆಲ್ಲಾ ಹಾರಿಕೆ ಉತ್ತರಗಳನ್ನು ಕೊಟ್ಟಿದ್ದಾರೆ ವಿನಃ ಸ್ಪಷ್ಟವಾದ ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ನೀಡಬೇಕೆಂದು ಈ ಮೂಲಕ ನಾನು ಕೇಳಲಿಚ್ಚಿಸುತ್ತೇನೆ. ಎಲ್ಲಿಯವರೆಗೆ ಗುಪ್ತಚಾರ ಇಲಾಖೆ ಶಸಕ್ತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ರೀತಿಯಲ್ಲಿ ಇದನ್ನು ನಿಯಂತ್ರಣ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂಬೈಗೆ ಹತ್ತಿರವಿರುವ ನನ್ನ ಮಂಗಳೂರು ಕ್ಷೇತ್ರದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ತುಂಬಾ ವೇಗವಾಗಿ ಬೆಳೆಯುತ್ತಿರುವ ನನ್ನ ಕ್ಷೇತ್ರದಲ್ಲಿ ಗುಂಡಾಗಿರಿ ಹಾಗೂ ಇನ್ನಿತರ ಚಟುವಟಿಕೆಗಳು ಹೆಚ್ಚುತ್ತಿರುವುದು ಬಹಳ ಆತಂಕಕಾರಿಯಾದ ವಿಷಯವೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿರುವ ಕೆಲವು ಘಟನೆಗಳನ್ನು ಮಾತ್ರ ಇಲ್ಲಿ ಹೇಳಲಿಚ್ಛಿಸುತ್ತೇನೆ. ಹೋಟೆಲ್‌ಗಳಲ್ಲಿ ಅನೈತಿಕ ವ್ಯವಹಾರ ನಡೆಯುತ್ತಿದೆಂದು ನಮ್ಮ ಗಮನಕ್ಕೆ ಬಂದಾಗ ನಾವು ನೇರವಾಗಿ ಇಲಾಖಾಧಿಕಾರಿಗಳ ಗಮನಕ್ಕೆ ತಂದಾಗ ತಕ್ಷಣವೇ ಆ ಹೋಟೆಲನ್ನು ರೈಡ್ ಮಾಡುತ್ತಾರೆ ಆ ಸಂದರ್ಭದಲ್ಲಿ ಅಲ್ಲಿ ಯಾರು ಸಿಕ್ಕುವುದಿಲ್ಲ. ಆದರೆ ಅಲ್ಲಿರುವ ಸಾರ್ವಜನಿಕರು, ಇದು ನಿರಂತರವಾಗಿ ನಡೆಯುತ್ತದೆ ಇಲ್ಲಿಗೆ ಪೊಲೀಸ್‌ನವರು ತಿಳಿಸಿ ಬರುತ್ತಾರೆನ್ನುವ ಅಭಿಪ್ರಾಯ ವ್ಯಕ್ತ ಮಾಡುತ್ತಾರೆ. ಅಂದರೆ ಇಂತ ದಂಧೆ ನಡೆಯುವಂಥ ಹೋಟೆಲ್ ವ್ಯಾಪ್ತಿಯಲ್ಲಿ ಬರುವ ಠಾಣೆಗಳಲ್ಲಿರುವ ಪೋಲೀಸ್‌ಗಳವರ ಜೊತೆಯಲ್ಲಿ ಸಂಪರ್ಕ ಇದೆ ಎನ್ನುವಂಥ ಅಭಿಪ್ರಾಯಗಳನ್ನು ಜನ ಸಾಮಾನ್ಯರು ವ್ಯಕ್ತ ಮಾಡುತ್ತಾರೆ. ಅಂದರೆ ಇವತ್ತು ಪೋಲೀಸ್ ಸರ್ವೀಸ್ ಆಗಿ ಉಳಿಯದೇ ಪೋಲಿಸ್ ಬಿಸಿನೆಸ್ ಆಗಿ ಉಳಿದಿದೆ. ಒಬ್ಬೊಬ್ಬ ಅಧಿಕಾರಿಯು ಇಂಥ ಆಯಾಕಟ್ಟಿನ ಸ್ಥಳಗಳಲ್ಲಿ ಸುಮಾರು 8-10 ವರ್ಷಗಳಿಂದ ಠಿಕಾಣಿ ಹೂಡಿ ಸಾಕಷ್ಟು ಆದಾಯ ಬರುವುದರಿಂದ ಇಂಥ ಜಾಗಗಳಿಗೆ ಲಕ್ಷಗಟ್ಟಲೆ ಹಣ ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಬಿಡುತ್ತಾರೆ. ಬಹುಶಃ ಈ ವಿಷಯ ಯಾರ್‍ಯಾರು ಏನು ಏನು ಮಾಡುತ್ತಾರೆ ಎಂಬ ವಿಷಯ ಪತ್ರಿಕೆಗಳಲ್ಲಿ ಬಂದಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಇದಕ್ಕೆ ನಾವು ಒಂದು ಪರಿವರ್ತನೆಯ ಮಾರ್ಗವನ್ನು ಕಂಡು ಹಿಡಿಯಬೇಕಾಗಿದೆ, ಕನಿಷ್ಠ ಮೂರು ವರ್ಷಗಳ ನಂತರ ಯಾವುದೇ ಅಧಿಕಾರಿಯನ್ನು ಸದರಿ ಜಾಗದಲ್ಲಿ ಉಳಿಸುವುದಿಲ್ಲ ಎನ್ನುವ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇದರ ಜೊತೆಗೆ ಗುಪ್ತಚಾರ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ನೇರವಾದ ಮಾಹಿತಿಯನ್ನು ಪಡೆಯುವುದಕ್ಕೆ ಎಲ್ಲಿಯವರೆಗೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಇದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಜೂಜು ಕಟ್ಟೆಗಳು ಎಲ್ಲೆಲ್ಲಿ ನಡೆಯುತ್ತದೆ ಅಲ್ಲಿನ ಠಾಣೆಗಳಿಗೆ ಸುಮಾರು ಲಕ್ಷಗಟ್ಟಲೆ ಸಂಪಾದನೆ ಅಥವಾ ಮಾಮೂಲು ಬರುವಂಥ ಸ್ಥಿತಿ ಇದೆ ಎನ್ನುವ ಮಾತು ಕೂಡ ನಾವಿಂದು ಕೇಳುತ್ತಿದ್ದೇವೆ. ನಮಗೆ ಗೊತ್ತಿದ್ದು ಗೊತ್ತಿಲ್ಲದ ರೀತಿಯಲ್ಲಿ ಬಹುಶಃ ನಮ್ಮ ಸರ್ಕಾ[illegible] ಕೂಡ ಅಲ್ಲಿ ವರ್ತಿಸುತ್ತದೆ ಎಂದು ನಾನು ಬಹಳ ದುಃಖದಿಂದ ಹೇಳಬಯಸುತ್ತೇನೆ. ಆದ್ದರಿಂದ ಕೇವಲ ತಿದ್ದುಪಡಿಗಳನ್ನು ತರುವುದರ ಮೂಲಕ ಹೊಸ ಪರಿವರ್ತನೆ ತರುತ್ತೇವೆ ಎನ್ನುವ ವಿಶ್ವಾ[illegible] ನನಗಿಲ್ಲ, ತಾವು ಈ ತಿದ್ದುಪಡಿ ತರುವುದರಲ್ಲಿ ನನ್ನ ಯಾವುದೂ ವಿರೋಧ ಕೂಡ ಇಲ್ಲ, ಆದರೆ ಈ[illegible] ಬಗ್ಗೆ ಪರಿವರ್ತನೆ ಯಾವ ಹಂತದಲ್ಲಿ ಆಗಬೇಕು ಆ ಹಂತದಲ್ಲಿ ಈ ಪರಿವರ್ತನೆ ತರುವ ಮೂಲ[illegible]

would have offered them mercineries for dinner. ಆ ತರಹ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಸದಸ್ಯರು ಮಾತನಾಡಿ ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧ ಇರದಿದ್ದರೂ ಕೂಡ ಆಡಳಿತ ಸುಧಾರಣೆಗಾಗಿ ಮತ್ತು ಪೋಲಿಸ್ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಆಡಳಿತವನ್ನು ಚುರುಕುಗೊಳಿಸಬೇಕು ಎನ್ನುವುದರ ಬಗ್ಗೆ ಕೆಲವು ಕಿವಿ ಮಾತುಗಳನ್ನು ಹೇಳಿದ್ದಾರೆ. ಆಡಳಿತ ಸುಧಾರಣೆಗಾಗಿ ನಾನು ಈ ಕಿವಿ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಮಾನ್ಯ ಸಿಂಧ್ಯಾರವರು ಮಾರ್ಚಿ ತಿಂಗಳಲ್ಲಿ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆಂದು ಹೇಳಿದರು, ಅವರಲ್ಲಿ ನನ್ನ ಮನವಿ ಏನೆಂದರೆ, ಮಾರ್ಚ್ ಅಂದರೆ ಇನ್ನು ಎರಡು-ಮೂರು ತಿಂಗಳು ತಡವಾಗುವುದರಿಂದ ಹಾಗೂ ಅವರ ಸಲಹೆಯಿಂದ ನಮ್ಮ ಇಲಾಖೆ ಬೇಗನೆ ಸುಧಾರಣೆಯಾಗುತ್ತದೆಂದರೆ, ನೀವೇ ತಕ್ಷಣ ನನಗೆ ನಿಮ್ಮ ಸೂಚನೆಯನ್ನು ಬರೆದುಕೊಡಿ ಇಲ್ಲಾಂದ್ರೆ ನಾನೇ ನಿಮ್ಮಲ್ಲಿಗೆ ಬರುತ್ತೇನೆ ಇಬ್ಬರೂ ಕೂಡಿ ಚರ್ಚೆ ಮಾಡೋಣ ಏಕೆಂದರೆ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬರುವುದಿಲ್ಲ ಅಥವಾ ಬಂದರೂ ಕೂಡ ನಾವು ಸರಿಯೆಂದು ತಿಳಿದುಕೊಳ್ಳಬಹುದು. ಅದಕ್ಕೆ ತಾವು ಕೊಡುವ ಸಲಹೆಗಳನ್ನು ಬರವಣಿಗೆಯ ಮೂಲಕ ಕೊಟ್ಟರೂ ಸರಿ ಇಲ್ಲಾಂದ್ರೆ ಇಬ್ಬರೂ ಕೂಡಿ ಚರ್ಚೆ ಮಾಡೋಣ ಎಂದರೂ ಸರಿ ತಾವು ಯಾವ ರೀತಿ ಹೇಳುತ್ತೀರೋ ಆ ರೀತಿ ಮಾಡೋಣ. ಏಕೆಂದರೆ ಆದಷ್ಟು ಬೇಗನೇ ಎಲ್ಲೆಲ್ಲಿ ಅದನ್ನು ಸರಿಪಡಿಸುವ ವ್ಯವಸ್ಥೆ ಇದ್ದರೆ ಅಥವಾ ನಾವು ತಿದ್ದಿಕೊಳ್ಳತಕ್ಕಂಥ ಸಾಧ್ಯತೆ ಇದ್ದರೆ ಖಂಡಿತವಾಗಲೂ ಅದನ್ನು ಮಾಡೋಣ. ಇನ್ನೂ ಟ್ರಾನ್ಸ್‌ಫರ್ ಪೋಸ್ಟಿಂಗ್ಸ್ ವಿಷಯ ನಿಮಗೂ ಸಹ ಗೊತ್ತಿದೆ. ನಮ್ಮ ಕಡೆಯೂ ಕೊಡುತ್ತಾರೆ. ಹಾಗೆಯೇ ನಿಮ್ಮ ಕಡೆಯೂ ಸಹ ಕೊಡುತ್ತಾರೆ. ಇದು ಎಲ್ಲರಿಗೂ ಅನ್ವಯಿಸುತ್ತದೆ. ಆದ್ದರಿಂದ ಇದರ ಬಗ್ಗೆ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾವು ಈ ಸಲದ ವರ್ಗಾವಣೆಯಲ್ಲಿ ಆದಷ್ಟು ಬಿಗಿ ಮಾಡಿದ್ದೇವೆ. ಇದರ ಬಗ್ಗೆ ಬಹಳ ಜನರು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಒಂದು ಸಾರಿ ನಾವು 500 ಟ್ರಾನ್ಸ್‌ಫರ್‌ಗಳನ್ನು ಮಾಡಿದ್ದರೆ ಅದರಲ್ಲಿ 10 ಟ್ರಾನ್ಸ್‌ಫರ್‌ಗಳು ಕ್ಯಾನ್ಸಲೇಷನ್ ಆಗಿದೆ. ಮತ್ತೆ ಒಂದೆರಡು ಆಗದೆ ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ವರ್ಗಾವಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದರಿಂದ ಅನೇಕ ಜನರು ನನಗೆ ಇವರು ಅರೋಗಂಟ್ ಎಂದು ಬೈಯ್ದುಕೊಂಡು, ಇವರು ನಮ್ಮ ಮಾತನ್ನು ಕೇಳುವುದಿಲ್ಲ ಹಾಗೆಯೇ ಇವರಷ್ಟು ಯಾರು ಇಲ್ಲವೆಂದು ಹೇಳಿಕೊಂಡು ಹೋಗಿದ್ದಾರೆ. ಆದರೂ ಸಹ ನಾನು ಅದರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಯಾವುದೇ ರೀತಿಯಿಂದಲಾದರೂ ಸಹ ಸ್ವಲ್ಪ ಬಿಗಿಯಿರಬೇಕೆನ್ನುವ ದೃಷ್ಟಿಯಿಂದ ನಾನು ಟ್ರಾನ್ಸ್‌ಫರ್ಸ್ ಮಾಡಿಕೊಂಡು ಬಂದಿದ್ದೇನೆ. ಇದರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕೂಡ ಆಗಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಈ ವರ್ಗಾವಣೆಯ ನೀತಿಯಲ್ಲಿ 99 ಪರ್ಸೆಂಟ್ ಬಿಗಿಯನ್ನು ತರತಕ್ಕಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ವಿಷಯವನ್ನು ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಗ್ಯಾಂಬ್ಲರ್ಸ್, ಬೂಟ್‌ಲೆಗ್ಗರ್‌ಗೆ ಸಂಬಂಧಪಟ್ಟಂಥ ಈ ಕಾನೂನು ಈಗಾಗಲೇ 1985ರಲ್ಲಿಯೇ ತರಲಾಗಿತ್ತು. ಇದಕ್ಕೆ ನಾವು ಕೆಲವು ತಿದ್ದುಪಡಿಯನ್ನು ತರುತ್ತಿದ್ದೇವಷ್ಟೆ. ಕೇವಲ ಎರಡು



ಚಾಪ್ಟರ್‌ಗಳಿಗೆ ಸಂಬಂಧಪಟ್ಟಂತೆ ಎಕ್ಸ್‌ಟೆಂಡ್ ಮಾಡಿ ರೈಟಿಂಗ್, ರಿಲೀಸಸ್ ಅಫೆನ್ಸಸ್ ಇದರಲ್ಲಿ ಇನ್‌ವಾಲ್ವ್ ಆಗಬೇಕೆನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೇವೆ. ಈ ಬಿಲ್ಲನ್ನು ತಂದಿರುವ ಉದ್ದೇಶವೇನು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಎಲ್ಲಾ ಘನ ಉದ್ದೇಶಗಳನ್ನು ಯೋಚನೆ ಮಾಡಿ ಹಿಂದಿನ ಸರ್ಕಾರ ಇದನ್ನು ಇಟ್ಟಿದ್ದರು. ಬಹುಶಃ ಇದನ್ನು ಮಾನ್ಯ ಜಯಪ್ರಕಾಶ್ ಹೆಗಡೆಯವರು ನೋಡಿಕೊಂಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ಇರತಕ್ಕಂಥ ಕಾನೂನಿನ ಜೊತೆಗೆ ಈ ತಿದ್ದುಪಡಿಯಿಂದ ಅಪೆನ್ಸ್‌ಸ್‌ಗೆ ಸಂಬಂಧಪಟ್ಟ ಕೆಲವು ಚಾಪ್ಟರ್‌ಗಳು ಅಡಕವಾಗುತ್ತದೆ. 15ನೇ ಚಾಪ್ಟರ್ ಮತ್ತು 8ನೇ ಚಾಪ್ಟರ್‌ಗಳಲ್ಲಿ ಬರತಕ್ಕಂಥ ಅಫೆನ್ಸ್‌ಸ್‌ನ್ನು ಕೂಡ ಎಕ್ಸ್‌ಟೆಂಡ್ ಆಗುತ್ತದೆ. ಇದರಿಂದಾಗಿ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಮಾತ್ರ ಈ ಬಿಲ್ಲನ್ನು ತಂದಿದ್ದೇವೆ. ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಸಿಗುತ್ತದೆ ಎಂದು ನನ್ನ ಭಾವನೆಯಾಗಿದೆ. ಇದರ ಬಗ್ಗೆ ಎಲ್ಲರೂ ಕೂಡ ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "2000ರ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

...ಣಿಕವಾಗಿ ಪ್ರಯತ್ನ ಮಾಡಬೇಕಾಗಿದೆ. ವಿಶೇಷವಾಗಿ ವರ್ಗಾವಣೆ ನೀತಿಯಲ್ಲಿ ವ್ಯಾಪಕ ... ತರುವ ಪ್ರಯತ್ನ ಆಗಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕಕ್ಕೆ ನಾನು ವಿರೋಧ ಮಾಡುವುದಿಲ್ಲ. ಇದರಲ್ಲಿ ಜೂಜುಕೋರರು ಎಂದರೆ ಯಾವ ರೀತಿ ಎಂಬುದನ್ನು ...ಬೇಕು, ಏಕೆಂದರೆ, ಕ್ಲಬ್ ರೈಡ್ ಮಾಡುವುದಿಲ್ಲ ಮನೆಗಳಲ್ಲಿ ಅಪರೂಪಕ್ಕೆ ಇಸ್ಪಿಟ್ ಆಡಿದರೆ ...ಡ್ ಮಾಡುತ್ತಾರೆ. ಬೆಂಗಳೂರಿನಲ್ಲಿ ನಡೆಯುವ ಕುದುರೆ ರೇಸ್ ಇದು ಜೂಜು ಅಲ್ಲವೆ? ಏಕೆಂದರೆ ಕ್ರಿಕೆಟ್‌ನಲ್ಲಿ ಯಾವ ರೀತಿ ಮ್ಯಾಚ್ ಫಿಕ್ಸಿಂಗ್ ಆಗುತ್ತದೆಯೋ ಅದೇ ರೀತಿ ರೇಸ್‌ನಲ್ಲಿ ಬಹಳವಾಗಿ ರೇಸ್ ಫಿಕ್ಸಿಂಗ್ ನಡೆಯುತ್ತಿದೆ. ಇದರ ಬಗ್ಗೆನೂ ಕೂಡ ಸರ್ಕಾರ ಸ್ವಲ್ಪ ಗಮನಿಸಬೇಕು. ಏಕೆಂದರೆ, ಮನೆ-ಮಾರು ಕಳೆದುಕೊಳ್ಳುವಂಥ ಜೂಜು ಈ ರೇಸ್. ಇದನ್ನು ಬ್ಯಾನ್ ಮಾಡದೇ ಮನೆಯಲ್ಲಿ ಇಸ್ಪಿಟ್ ಆಡುವವರನ್ನು ಹಿಡಿದರೆ ಏನು ಅರ್ಥವಿಲ್ಲವೆಂದು ನನ್ನ ಭಾವನೆ. ಇದರ ಜೊತೆಗೆ ಕಳ್ಳಭಟ್ಟಿ ಬಗ್ಗೆ ಹೇಳುವುದಾದರೆ, ಎಷ್ಟು ಲಾರಿ ಸ್ಪಿರೀಟ್ ಯಾವ್ಯಾವ ಕಡೆ ಹೋಗುತ್ತದೆ ಎಂಬುದರ ಬಗ್ಗೆ ಅಧಿಕಾರಿಗಳಿಗೆ ಗೊತ್ತಿರುತ್ತದೆ, ಸರ್ಕಾರದಿಂದ ಈ ಶರಾಬನ್ನು ತೆಗೆದು ಮಾರಾಟ ಮಾಡುವುದಕ್ಕಿಂತ ಸ್ಪಿರೀಟ್ ಅನ್ನು ಮಿಕ್ಸ್ ಮಾಡಿ ಸ್ಯಾಚೆಟನ್ನು ಮಾರುವಂಥದ್ದು ಬಹಳ ಜಾಸ್ತಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಇದೊಂದು ರೀತಿಯಲ್ಲಿ ಕಾಟೇಜ್ ಇಂಡಸ್ಟ್ರೀಸ್ ಆಗಿದೆ. ಪೊಲೀಸ್ ಇಲಾಖೆ ಮತ್ತು ಅಬಕಾರಿ ಇಲಾಖೆ ಇದ್ದರೂ ಇದು ಎಲ್ಲಿ ಉತ್ಪನ್ನವಾಗುತ್ತದೆ ಎಲ್ಲಿಗೆ ಹೋಗುತ್ತದೆ ಎಲ್ಲಿ ಮಾರಾಟವಾಗುತ್ತದೆಂದು ಅಧಿಕಾರಿಗಳಿಗೆ ಗೊತ್ತಿದ್ದರು ಇವರನ್ನು ಏಕೆ ಹಿಡಿಯುವುದಿಲ್ಲ. ಇದು ಎಷ್ಟರ ಮಟ್ಟಿಗೆ ಇದೆ ಎಂದರೆ ಸರ್ಕಾರದ ಶರಾಬು ಕಡಿಮೆ ಹೋಗುತ್ತಿದೆ ಕಳ್ಳಭಟ್ಟಿ ಪ್ಯಾಕೆಟ್‌ಗಳು ಜಾಸ್ತಿ ಹೋಗುತ್ತಿದೆ. ಆದ್ದರಿಂದ, ಇದನ್ನು ಪ್ರಥಮವಾಗಿ ನಿಯಂತ್ರಣ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಈ ಕಾನೂನು ಇಲ್ಲಿ ತಂದು ಪಾಸ್ ಮಾಡಿಕೊಂಡು ಹೋದರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಇದರ ಜೊತೆಗೆ ನನ್ನ ವೈಯಕ್ತಿಕ ತೊಂದರೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ. ನನ್ನ ಮನೆಯ ಎದುರುಗಡೆ ಒಂದು ಬಾರ್ ಅಂಡ್ ರಸ್ಟೋರೆಂಟ್ ಇದೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ನಾನು ಆ ಕೆಲವು ಕಾರಣಗಳನ್ನು ನೀಡಿ ಅದನ್ನು ಮುಚ್ಚಿಸಿದ್ದೆ. ಒಂದೂವರೆ ವರ್ಷಗಳ ಕಾಲ ಮುಚ್ಚಿದ್ದ ಈ ಬಾರ್ ಪುನಃ ಪ್ರಾರಂಭಿಸಿದ್ದಾರೆ. ನಾನು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಅಬಕಾರಿ ಸಚಿವರಿಗೂ ಪತ್ರ ಮುಖೇನ ತಿಳಿಸಿದ್ದೇನೆ. ಈ ಸಂಬಂಧವಾಗಿ ಮಾನ್ಯ ಮುಖ್ಯಮಂತ್ರಿಗಳು ಅಬಕಾರಿ ಇಲಾಖೆಯವರಿಗೆ, "ತಮ್ಮ ಪತ್ರ ತಲುಪಿದೆ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಅಧಿಕಾರಿಗಳಿಗೆ ನಾನು ಆದೇಶಿಸಿದ್ದೇನೆ" ಎಂದು ಸೂಚಿಸಿದ್ದರು. ಆದರೆ ಮತ್ತೊಬ್ಬ ಸಚಿವರಾದ ಮಾನ್ಯ ಕೃಷ್ಣಪ್ಪನವರು ಅಬಕಾರಿ ಆಯುಕ್ತರಿಗೆ ಒಂದು ಪತ್ರ ಕೊಟ್ಟಿದ್ದಾರೆ ಅದನ್ನು ಒಂದು ನಿಮಿಷದಲ್ಲಿ ಓದಿಬಿಡುತ್ತೇನೆ.

ಅಧ್ಯಕ್ಷರು : ಬಾರ್ ಲೈಸನ್ಸ್‌ಗೂ ಸಭೆಯ ಮುಂದೆ ಇರುವ ವಿಧೇಯಕಕ್ಕೂ ಸಂಬಂಧವೇ ಇಲ್ಲವಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಇಲ್ಲಿ ಜಾಸ್ತಿ ಸೆಕೆಂಡ್ಸ್ ವ್ಯಾಪಾರ ನಡೆಯುತ್ತಿದೆ. ಇದು ಒಂದಕ್ಕೊಂದು ಸಂಬಂಧವಿರುವಂಥದು...



(83)

ಅಧ್ಯಕ್ಷರು : ಇದರ ಬಗ್ಗೆ ಇರುವ ಪರ್ಟಿಕ್ಯುಲರ್ ಸೆಂಟೆನ್ಸ್ ಬಗ್ಗೆ ಮಾತ್ರ ಹೇಳಿ. ಆ ಪತ್ರ ಪೂರ್ತಿ ಓದುವುದು ಬೇಡಾ ಸಾರಾಂಶ ಮಾತ್ರ ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಾನು ಏನು ಹೇಳುತ್ತಿದ್ದೇನೆಂದರೆ, ಈ ಮಾಫಿಯಾ ಎಷ್ಟು ಪವರ್ ಫುಲ್ ಇದೆ ಎಂದು ತೋರಿಸಲಿಕ್ಕೆ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಆಯುಕ್ತರವರಿಗೆ ಬರೆದ ಪತ್ರದಲ್ಲಿ "ಈ ಬಾರ್ ಅನ್ನು ತೆರೆಯಲಿಕ್ಕೆ ಯಾರ ವಿರೋಧ ಇರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಬರೆಯುತ್ತಾರೆ ನಾನು ಮಿಲ್ಕ್ ಬಾರ್‌ಗೆ ವಿರೋಧ ಮಾಡಲಿಲ್ಲಾ, ಲಿಕ್ಕರ್ ಬಾರ್‌ಗೆ ವಿರೋಧಿಸಿದ್ದೆ, ಲಿಕ್ಕರ್ ಬಾರ್ ತೆರೆಯಲಿಕ್ಕೆ ವಿರೋಧಿಸಿ ಬಡಾವಣೆಯ ಎಲ್ಲರೂ ಪತ್ರ ಬರೆದಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳಿಗೂ ಈ ಪತ್ರ ಹೋಗಿದೆ. ಏಕೆಂದರೆ, ಲೈಸನ್ಸ್ ಇರುವುದು ಒಬ್ಬರ ಹೆಸರಿನಲ್ಲಿ, ಮಾನ್ಯ ಸಚಿವರು ರೆಕಮಂಡ್ ಮಾಡುವುದು ಮತ್ತೊಬ್ಬರ ಹೆಸರಿನಲ್ಲಿ, ಲೈಸನ್ಸ್ ಇರುವಾತ ಬಾರನ್ನು ನಡೆಸದೇ ಲೈಸನ್ಸ್ ಇಲ್ಲದಿರುವಾತ ಬಾರನ್ನು ನಡೆಸುತ್ತಿದ್ದಾನೆ. ಇಂಥವುಗಳನ್ನು ಸರ್ಕಾರ ನಿಯಂತ್ರಿಸಬೇಕಾಗುತ್ತದೆ. ಮಾನ್ಯ ಅಬಕಾರಿ ಸಚಿವರಿಗೆ ಪರವಾನಿಗೆ ಪಡೆಯದಿರುವ ಅಂಗಡಿಗಳು ಎಷ್ಟಿವೆ ಎಂದು ಒಂದು ಪ್ರಶ್ನೆ ಕೇಳಿದ್ದೆ.

ಅಧ್ಯಕ್ಷರು : ನೀವು ವಿಷಯಾಂತರಿಸುತ್ತಿದ್ದೀರಿ. ಜೂಜು ಕೋರುತನಕ್ಕೂ ಇದಕ್ಕೂ ಏನೂ ಸಂಬಂಧವಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಹಾಗಾದರೆ ನಮ್ಮ ವಿಷಯ ಇಲ್ಲಿ ಹೇಳಲಿಕ್ಕೆ ಅವಕಾಶ ಇಲ್ಲವೆಂದರೆ ನಾನು ಎಲ್ಲಿ ಹೋಗಿ ಹೇಳಲಿ? ರಸ್ತೆಯಲ್ಲಿ ನಿಂತು ಈ ವಿಷಯ ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ದರೋಡೆ, ಜೂಜು, ಇವುಗಳ ಬಗ್ಗೆ ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕಳ್ಳಭಟ್ಟಿ ಪರವಾನಿಗೆ ಪಡೆಯದೆ ಅಂಗಡಿಗಳು, ಇವು ಎಲ್ಲಾ ನನ್ನ ಕ್ಷೇತ್ರದಲ್ಲಿ ಅಲ್ಲದೆ ಎಲ್ಲಾ ಭಾಗದಲ್ಲಿ ನಡೆಯುತ್ತಿರುತ್ತವೆ. ಈ ಸಂಬಂಧವಾಗಿ ನಾನು ಸದನದಲ್ಲಿ ಪ್ರಶ್ನೆ ಮಾಡಿದ್ದಕ್ಕೆ ಮಾನ್ಯ ಸಚಿವರು ಪರವಾನಿಗೆ ಪಡೆಯದಿರುವ ಅಂಗಡಿಗಳು ಇಲ್ಲವೆಂದು ಉತ್ತರಿಸುತ್ತಾರೆ, ಮುಂದುವರಿದು ಅವರು ಎಲ್ಲೆಲ್ಲಿ ಕುಡು ಬರುತ್ತದೆ ಅದನ್ನು ಮುಚ್ಚಿಸುತ್ತೇವೆಂದು ಉತ್ತರಿಸುತ್ತಾರೆ. ಹಾಗಾದರೆ ಅವುಗಳು ಇವೆ ಎಂದು ಅರ್ಥವಾಗಿತಲ್ಲವೆ? ಅವರೇ ಈ ರೀತಿಯ ಎರಡು ಉತ್ತರವನ್ನು ಕೊಡುತ್ತಾರೆ. ಅದಕ್ಕಾಗಿ ನಾನು ಅವರಿಗೆ ವಿಡಿಯೋ ರೆಕಾರ್ಡ್ ಮಾಡಿ ನಿಮಗೆ ಸಲ್ಲಿಸುತ್ತೇನೆಂದು ಹೇಳಿದ್ದೇನೆ. ಆದ್ದರಿಂದ, ಇಂಥವುಗಳನ್ನು ನಿಯಂತ್ರಿಸದೆ ಕೇವಲ ಕಾನೂನು ತಂದು ಇಲ್ಲಿ ಪಾಸ್ ಮಾಡಿಕೊಂಡು ಹೋದರೆ ಅದಕ್ಕೇನು ಅರ್ಥ ಬರುತ್ತದೆ. ಆದ್ದರಿಂದ, ಇವು ಎಲ್ಲವನ್ನೂ ನಿಯಂತ್ರಣ ಮಾಡಲಿಕ್ಕೆ ಸಾಧ್ಯವಾದರೆ ಮಾತ್ರ ಇಂಥ ಕಾನೂನು ತರಬೇಕು. ಕೊನೆಯದಾಗಿ ಒಂದು ಮಾತನ್ನು ನಾನು ಏನು ಹೇಳುತ್ತೇನೆಂದರೆ, ನಮ್ಮ ಆಪ್ತರು ಏನೇನು ಮಾಡುತ್ತಾರೆ ಅದಕ್ಕೆಲ್ಲಾ ನಾವು ಸಹಕಾರ ಕೊಡುತ್ತೇವೆ, ಕಳ್ಳಭಟ್ಟಿಗೂ, ಕ್ಲಬ್‌ಗೂ ಸಹಕಾರ ಕೊಡುತ್ತೇವೆ. ಏಕೆಂದರೆ, ಅಮೇರಿಕಾದಲ್ಲಿ ಒಂದು ಶಬ್ದ ಹೇಳುತ್ತಾರೆ, ಏನೆಂದರೆ, ನಮ್ಮ ಆಪ್ತರು if they were to be cannibals we

ಎಂ. ಶಶಿಕಾಂತ
ಪ್ರಧಾನ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು

vould have offered them mercineries for dinner. ಆ ತರಹ ಪರಿಸ್ಥಿತಿ ನಿರ್ಮಾಣ ಾಗಬಾರದು ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಸದಸ್ಯರು ಮಾತನಾಡಿ ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧ ಇರದಿದ್ದರೂ ಕೂಡ ಆಡಳಿತ ಸುಧಾರಣೆಗಾಗಿ ಮತ್ತು ಪೋಲಿಸ್ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಆಡಳಿತವನ್ನು ಚುರುಕುಗೊಳಿಸಬೇಕು ಎನ್ನುವುದರ ಬಗ್ಗೆ ಕೆಲವು ಕಿವಿ ಮಾತುಗಳನ್ನು ಹೇಳಿದ್ದಾರೆ. ಆಡಳಿತ ಸುಧಾರಣೆಗಾಗಿ ನಾನು ಈ ಕಿವಿ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಮಾನ್ಯ ಸಿಂಧ್ಯಾರವರು ಮಾರ್ಚಿ ತಿಂಗಳಲ್ಲಿ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆಂದು ಹೇಳಿದರು, ಅವರಲ್ಲಿ ನನ್ನ ಮನವಿ ಏನೆಂದರೆ, ಮಾರ್ಚ್ ಅಂದರೆ ಇನ್ನು ಎರಡು-ಮೂರು ತಿಂಗಳು ತಡವಾಗುವುದರಿಂದ ಹಾಗೂ ಅವರ ಸಲಹೆಯಿಂದ ನಮ್ಮ ಇಲಾಖೆ ಬೇಗನೆ ಸುಧಾರಣೆಯಾಗುತ್ತದೆಂದರೆ, ನೀವೇ ತಕ್ಷಣ ನನಗೆ ನಿಮ್ಮ ಸೂಚನೆಯನ್ನು ಬರೆದುಕೊಡಿ ಇಲ್ಲಾಂದ್ರೆ ನಾನೇ ನಿಮ್ಮಲ್ಲಿಗೆ ಬರುತ್ತೇನೆ ಇಬ್ಬರೂ ಕೂಡಿ ಚರ್ಚೆ ಮಾಡೋಣ ಏಕೆಂದರೆ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬರುವುದಿಲ್ಲ ಅಥವಾ ಬಂದರೂ ಕೂಡ ನಾವು ಸರಿಯೆಂದು ತಿಳಿದುಕೊಳ್ಳಬಹುದು. ಅದಕ್ಕೆ ತಾವು ಕೊಡುವ ಸಲಹೆಗಳನ್ನು ಬರವಣಿಗೆಯ ಮೂಲಕ ಕೊಟ್ಟರೂ ಸರಿ ಇಲ್ಲಾಂದ್ರೆ ಇಬ್ಬರೂ ಕೂಡಿ ಚರ್ಚೆ ಮಾಡೋಣ ಎಂದರೂ ಸರಿ ತಾವು ಯಾವ ರೀತಿ ಹೇಳುತ್ತೀರೋ ಆ ರೀತಿ ಮಾಡೋಣ. ಏಕೆಂದರೆ ಆದಷ್ಟು ಬೇಗನೇ ಎಲ್ಲೆಲ್ಲಿ ಅದನ್ನು ಸರಿಪಡಿಸುವ ವ್ಯವಸ್ಥೆ ಇದ್ದರೆ ಅಥವಾ ನಾವು ತಿದ್ದಿಕೊಳ್ಳತಕ್ಕಂಥ ಸಾಧ್ಯತೆ ಇದ್ದರೆ ಖಂಡಿತವಾಗಲೂ ಅದನ್ನು ಮಾಡೋಣ. ಇನ್ನೂ ಟ್ರಾನ್ಸ್‌ಫರ್ ಪೋಸ್ಟಿಂಗ್ಸ್ ವಿಷಯ ನಿಮಗೂ ಸಹ ಗೊತ್ತಿದೆ. ನಮ್ಮ ಕಡೆಯೂ ಕೊಡುತ್ತಾರೆ. ಹಾಗೆಯೇ ನಿಮ್ಮ ಕಡೆಯೂ ಸಹ ಕೊಡುತ್ತಾರೆ. ಇದು ಎಲ್ಲರಿಗೂ ಅನ್ವಯಿಸುತ್ತದೆ. ಆದ್ದರಿಂದ ಇದರ ಬಗ್ಗೆ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾವು ಈ ಸಲದ ವರ್ಗಾವಣೆಯಲ್ಲಿ ಆದಷ್ಟು ಬಿಗಿ ಮಾಡಿದ್ದೇವೆ. ಇದರ ಬಗ್ಗೆ ಬಹಳ ಜನರು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಒಂದು ಸಾರಿ ನಾವು 500 ಟ್ರಾನ್ಸ್‌ಫರ್‌ಗಳನ್ನು ಮಾಡಿದ್ದರೆ ಅದರಲ್ಲಿ 10 ಟ್ರಾನ್ಸ್‌ಫರ್‌ಗಳು ಕ್ಯಾನ್ಸಲೇಷನ್ ಆಗಿದೆ. ಮತ್ತೆ ಒಂದೆರಡು ಆಗದೆ ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ವರ್ಗಾವಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದರಿಂದ ಅನೇಕ ಜನರು ನನಗೆ ಇವರು ಅರೋಗಂಟ್ ಎಂದು ಬೈಯ್ದುಕೊಂಡು, ಇವರು ನಮ್ಮ ಮಾತನ್ನು ಕೇಳುವುದಿಲ್ಲ ಹಾಗೆಯೇ ಇವರಷ್ಟು ಯಾರು ಇಲ್ಲವೆಂದು ಹೇಳಿಕೊಂಡು ಹೋಗಿದ್ದಾರೆ. ಆದರೂ ಸಹ ನಾನು ಅದರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಯಾವುದೇ ರೀತಿಯಿಂದಲಾದರೂ ಸಹ ಸ್ವಲ್ಪ ಬಿಗಿಯಿರಬೇಕೆನ್ನುವ ದೃಷ್ಟಿಯಿಂದ ನಾನು ಟ್ರಾನ್ಸ್‌ಫರ್ಸ್ ಮಾಡಿಕೊಂಡು ಬಂದಿದ್ದೇನೆ. ಇದರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕೂಡ ಆಗಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಈ ವರ್ಗಾವಣೆಯ ನೀತಿಯಲ್ಲಿ 99 ಪರ್ಸೆಂಟ್ ಬಿಗಿಯನ್ನು ತರತಕ್ಕಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ವಿಷಯವನ್ನು ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಗ್ಯಾಂಬ್ಲರ್ಸ್, ಬೂಟ್‌ಲೆಗ್ಗರ್‌ಗೆ ಸಂಬಂಧಪಟ್ಟಂಥ ಈ ಕಾನೂನು ಈಗಾಗಲೇ 1985ರಲ್ಲಿಯೇ ತರಲಾಗಿತ್ತು. ಇದಕ್ಕೆ ನಾವು ಕೆಲವು ತಿದ್ದುಪಡಿಯನ್ನು ತರುತ್ತಿದ್ದೇವಷ್ಟೆ. ಕೇವಲ ಎರಡು



ಚಾಪ್ಟರ್‌ಗಳಿಗೆ ಸಂಬಂಧಪಟ್ಟಂತೆ ಎಕ್ಸ್‌ಟೆಂಡ್ ಮಾಡಿ ರೈಟಿಂಗ್, ರಿಲೀಸಸ್ ಅಫೆನ್ಸಸ್ ಇದರಲ್ಲಿ ಇನ್‌ವಾಲ್ವ್ ಆಗಬೇಕೆನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೇವೆ. ಈ ಬಿಲ್ಲನ್ನು ತಂದಿರುವ ಉದ್ದೇಶವೇನು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಎಲ್ಲಾ ಘನ ಉದ್ದೇಶಗಳನ್ನು ಯೋಚನೆ ಮಾಡಿ ಹಿಂದಿನ ಸರ್ಕಾರ ಇದನ್ನು ಇಟ್ಟಿದ್ದರು. ಬಹುಶಃ ಇದನ್ನು ಮಾನ್ಯ ಜಯಪ್ರಕಾಶ್ ಹೆಗಡೆಯವರು ನೋಡಿಕೊಂಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ಇರತಕ್ಕಂಥ ಕಾನೂನಿನ ಜೊತೆಗೆ ಈ ತಿದ್ದುಪಡಿಯಿಂದ ಅಪೆನ್ಸ್‌ಸ್‌ಗೆ ಸಂಬಂಧಪಟ್ಟ ಕೆಲವು ಚಾಪ್ಟರ್‌ಗಳು ಅಡಕವಾಗುತ್ತದೆ. 15ನೇ ಚಾಪ್ಟರ್ ಮತ್ತು 8ನೇ ಚಾಪ್ಟರ್‌ಗಳಲ್ಲಿ ಬರತಕ್ಕಂಥ ಅಫೆನ್ಸ್‌ಸ್‌ನ್ನು ಕೂಡ ಎಕ್ಸ್‌ಟೆಂಡ್ ಆಗುತ್ತದೆ. ಇದರಿಂದಾಗಿ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಮಾತ್ರ ಈ ಬಿಲ್ಲನ್ನು ತಂದಿದ್ದೇವೆ. ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಸಿಗುತ್ತದೆ ಎಂದು ನನ್ನ ಭಾವನೆಯಾಗಿದೆ. ಇದರ ಬಗ್ಗೆ ಎಲ್ಲರೂ ಕೂಡ ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "2000ರ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

## ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

**ಖಂಡ 2**

ಅಧ್ಯಕ್ಷರು.: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಎಂ. ಶಶಿಕಾಂತ
ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ
ವಿಧಾನಸೌಧ,

**ಖಂಡ 1 ಇತ್ಯಾದಿ**

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

### ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, "2000 ರ ...ಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ...ನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2000ರ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ಮಾಡಿರುವಂತೆ ಅಂಗೀಕರಿಸುವುದು"

**"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು"**

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11-00 ಗಂಟೆಗೆ ಮತ್ತೆ ಸೇರುವುದು.

---

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 9ನೇ ನವೆಂಬರ್ ಮಾಹೆ 2000ರ ಗುರುವಾರ ದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

ಚರ್ಚಾ ಸಂಪಾದಕ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು



85

## ಅನುಬಂಧ - I

### ಕರ್ನಾಟಕ ವಿಧಾನಸಭೆ

ಹನ್ನೊಂದನೇ ವಿಧಾನಸಭೆ

ಎರಡನೆಯ ಅಧಿವೇಶನ
(ಮುಂದುವರೆದ ಉಪವೇಶನಗಳು)

### ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2000

(2000ದ ವಿಧಾನ ಸಭೆಯ ವಿಧೇಯಕ ಸಂಖ್ಯೆ 23)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 28)(ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (5)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ನೋಂದಾಯಿತ ಪದವೀಧರ" ಎಂದರೆ,-

(i) ಬೆಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯದ ಉದ್ದೇಶಕ್ಕಾಗಿ, ವೈದ್ಯಕೀಯ ಮತ್ತು ಕೃಷಿ ವಿಜ್ಞಾನಗಳ ಪದವೀಧರನ ಹೊರತಾಗಿ,

(ii) ಇತರ ವಿಶ್ವವಿದ್ಯಾನಿಲಯಗಳ ಉದ್ದೇಶಕ್ಕಾಗಿ, ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಕೃಷಿ ವಿಜ್ಞಾನಗಳ ಪದವೀಧರನ ಹೊರತಾಗಿ,